ಶುಕ್ರವಾರ, ಮೇ 24, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 144 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಅಮೆಜಾನ್ ಪ್ರೈಂ ತನ್ನ 'ಪೇ ಪರ್ ವ್ಯೂ' ಯೋಜನೆಯಡಿ ಸಿನಿಮಾಗಳನ್ನು ಪ್ರಸಾರ ಮಾಡುವುದನ್ನು ನಿಲ್ಲಿಸಲಿದೆ ಎಂಬ ಚರ್ಚೆಯ ಸುತ್ತ ಒಂದು ನೋಟ...

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ 11
ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ ಎರಡನೇ ಆವೃತ್ತಿಯ ನಾಮನಿರ್ದೇಶಿತರ ವಿವರ

ಸ್ನೇಹಿತನಿಂದಲೇ ಅನಾರ್ ಹತ್ಯೆ: ಸಿಐಡಿ 9
ಕಳಪೆ ಕಲ್ಲಿದ್ದಲು ಪೂರೈಕೆ: ಆರೋಪ 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
75,418	22,967	₹75,250 (ಬೆಂಗಳೂರು)	₹92,600 (ಬೆಂಗಳೂರು)	83.32

ಮೀಸಲಾತಿ ನಿಗದಿಗೆ ಸರ್ಕಾರದ ವಿಳಂಬ • ತೂಗುತ್ತಲಿದೆ ನ್ಯಾಯಾಂಗ ನಿಂದನೆಯ ತೂಗುಗತ್ತಿ

ಪಂಚಾಯಿತಿ ಜಗಳ ಕೋರ್ಟ್‌ಗೆ?

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಮಾಡದೇ ವಿಳಂಬ ಧೋರಣೆ ಅನುಸರಿಸಿರುವ ರಾಜ್ಯ ಸರ್ಕಾರದ ವಿರುದ್ಧ 'ನ್ಯಾಯ'ದ ಮೊರೆಹೋಗಲು ರಾಜ್ಯ ಚುನಾವಣಾ ಆಯೋಗ ತಯಾರಿ ನಡೆಸಿದೆ.

ವಿಳಂಬಕ್ಕಾಗಿ ಒಂದು ಬಾರಿ ದಂಡ ತೆತ್ತಿದ್ದ ಸರ್ಕಾರದ ವಿರುದ್ಧ ಆಯೋಗವು ಮತ್ತೆ ಹೈಕೋರ್ಟ್‌ಗೆ ಹೋಗಲು ಅಣಿಯಾಗಿರುವುದರಿಂದ ಆಯೋಗ–ಸರ್ಕಾರದ ಮಧ್ಯೆ 'ಕಾನೂನು ಸಂಘರ್ಷ'ಕ್ಕೆ ದಾರಿಯಾಗಲಿದೆ.

ಕ್ಷೇತ್ರಗಳ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಪ್ರಕ್ರಿಯೆಯನ್ನು ಒಂದು ತಿಂಗಳಲ್ಲಿ ಪೂರ್ಣಗೊಳಿಸುವುದಾಗಿ ಕಳೆದ ಡಿಸೆಂಬರ್‌ನಲ್ಲೇ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿತ್ತು. ಆದರೆ, ಅದನ್ನು ಈಡೇರಿಸದೇ ಇರುವುದಕ್ಕೆ ಆಯೋಗ ಆಕ್ಷೇಪ ಎತ್ತಿದೆ.

ಜಿಲ್ಲೆ ಹಾಗೂ ತಾಲ್ಲೂಕು ಪಂಚಾಯಿತಿ ಸದಸ್ಯರ ಅವಧಿ 2021ರ ಏಪ್ರಿಲ್ 27ರಂದು ಮುಕ್ತಾಯವಾಗಿತ್ತು. ಅದಾಗಿ ಮೂರು ವರ್ಷಗಳೇ ಕಳೆದಿವೆ.

9ನೇ ಪುಟ ನೋಡಿ

1,116	3,621	33% ನೀಡಬೇಕಿರುವ	50% ಸ್ಥಳೀಯ
ಜಿಲ್ಲಾ ಪಂಚಾಯಿತಿ ಸ್ಥಾನಗಳು	ತಾಲ್ಲೂಕು ಪಂಚಾಯಿತಿ ಸ್ಥಾನಗಳು	ಪ್ರವರ್ಗವಾರು ಮೀಸಲಾತಿ	ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ

ವಿಳಂಬಕ್ಕೆ ದಂಡ ಕಟ್ಟಿದ್ದ ಸರ್ಕಾರ

ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸಲು ವಿಳಂಬ ಮಾಡಿದ ಕಾರಣಕ್ಕೆ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ₹5 ಲಕ್ಷ ದಂಡ ವಿಧಿಸಿತ್ತು. ಸರ್ಕಾರ ಈಗಾಗಲೇ ದಂಡವನ್ನೂ ಪಾವತಿಸಿದೆ.

ದಂಡ ಪಾವತಿಸುವಾಗ ಏ.1ರ ಒಳಗೆ ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲು ನಿಗದಿಪಡಿಸಿ ಅಧಿಸೂಚನೆ ಹೊರಡಿಸಲಾಗುವುದು. ನಂತರ ಮುಂದಿನ ಕ್ರಮಕ್ಕಾಗಿ ರಾಜ್ಯ ಚುನಾವಣಾ ಆಯೋಗಕ್ಕೆ ಕಳುಹಿಸಿಕೊಡಲಾಗುವುದು ಎಂದು ಅಡ್ವೊಕೇಟ್ ಜನರಲ್ ನ್ಯಾಯಪೀಠಕ್ಕೆ ಭರವಸೆ ನೀಡಿದ್ದರು.

ಮೀಸಲಾತಿ ನಿಗದಿ ವಿಳಂಬ ಏಕೆ?

ನಿಖರವಾದ ಅಂಕಿಅಂಶಗಳ ಆಧಾರದಲ್ಲಿ ತ್ರಿಸ್ತರದ ಪರಿಶೀಲನೆ ನಡೆಸಿದ ಬಳಿಕವೇ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ವರ್ಗದ ಜನರಿಗೆ ಶೇಕಡ 27ರಷ್ಟು ಮೀಸಲಾತಿ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದ್ದ ಕಾರಣ ಕ್ಷೇತ್ರವಾರು ಮೀಸಲು ನಿಗದಿ ವಿಳಂಬವಾಗಿತ್ತು.

ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ನಿಗದಿಪಡಿಸುವಾಗ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು ಪ್ರತ್ಯೇಕ ಆಯೋಗವೊಂದನ್ನು ನೇಮಿಸಬೇಕು. ಈ ಆಯೋಗವು ವಿಸ್ತೃತವಾದ ಪರಿಶೀಲನೆ ಬಳಿಕ ನೀಡುವ ವರದಿ ಆಧರಿಸಿ, ಪ್ರತಿ ಸ್ಥಳೀಯ ಸಂಸ್ಥೆಯನ್ನು ಒಂದು ಘಟಕವಾಗಿ ಪರಿಗಣಿಸಿ ಮೀಸಲಾತಿ ನಿಗದಿಪಡಿಸಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ನೀಡುವ ಮೀಸಲಾತಿಯ ಒಟ್ಟು ಪ್ರಮಾಣವು ಶೇ 50ರಷ್ಟನ್ನು ಮೀರುವಂತಿಲ್ಲ ಎಂದು ಕೋರ್ಟ್ ಆದೇಶಿಸಿತ್ತು.

ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಇರುವ ರಾಜಕೀಯ ಮೀಸಲಾತಿಯನ್ನು ಖಾತರಿಪಡಿಸಿದ ಬಳಿಕವೇ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸಲಾಗುವುದು ಎಂದು ಸರ್ಕಾರ ಅಂದು ಘೋಷಿಸಿತ್ತು. ಅದಕ್ಕೆ ಅನುಗುಣವಾಗಿ ನ್ಯಾಯಮೂರ್ತಿ ಎಂ. ಭಕ್ತವತ್ಸಲಂ ಆಯೋಗವನ್ನು ರಚಿಸಿ, ವರದಿಯನ್ನೂ ಸರ್ಕಾರ ಪಡೆದಿತ್ತು.

ಒಮ್ಮೆ ದಂಡ ಕಟ್ಟಿದ್ದರೂ ಸರ್ಕಾರ ಪಾಠ ಕಲಿತಿಲ್ಲ. ನ್ಯಾಯಾಲಯದ ಮುಂದೆ ಮಾತುಕೊಟ್ಟಂತೆ ಜನವರಿ ಒಳಗೆ ಮೀಸಲು ಪಟ್ಟಿ ಪ್ರಕಟಿಸಿಲ್ಲ. ಸರ್ಕಾರದ ನಡೆಯ ವಿರುದ್ಧ ಮುಂದಿನ ವಾರ ಕೋರ್ಟ್ ಮೊರೆಹೋಗುತ್ತೇವೆ
ಬಿ. ಬಸವರಾಜು, ಆಯುಕ್ತ, ರಾಜ್ಯ ಚುನಾವಣಾ ಆಯೋಗ

ಮೈಸೂರು ತಾಲ್ಲೂಕಿನ ಜಯಪುರದ ಕೆ.ಸಾಲುಂಡಿ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ಮೃತಪಟ್ಟ ಕನಕರಾಜು ತಾಯಿ ರತ್ನಮ್ಮ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಸಾಂತ್ವನ ಹೇಳಿದರು –ಪ್ರಜಾವಾಣಿ ಚಿತ್ರ

ಶುದ್ಧ ನೀರು ಕೊಡದಿದ್ದರೆ ಅಮಾನತು ಅಧಿಕಾರಿಗಳಿಗೆ ಮುಖ್ಯಮಂತ್ರಿ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇನ್ನು ಮುಂದೆ ರಾಜ್ಯದ ಯಾವುದೇ ಭಾಗದಲ್ಲಿ ಕಲುಷಿತ ನೀರಿನಿಂದ ಜನರಿಗೆ ತೊಂದರೆಯಾದರೆ ಅದಕ್ಕೆ ಜಿಲ್ಲಾಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು. ತಪ್ಪಿತಸ್ಥ ಅಧಿಕಾರಿಗಳನ್ನು ಕೂಡಲೇ ಅಮಾನತು ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಚ್ಚರಿಕೆ ನೀಡಿದರು.

ಬರ ಮತ್ತು ಮುಂಗಾರು ಕೃಷಿ ಚಟುವಟಿಕೆ ಕುರಿತು ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜತೆ ಗುರುವಾರ ವಿಡಿಯೊ ಸಂವಾದ ನಡೆಸಿದ ಅವರು ಅಧಿಕಾರಿಗಳಿಗೆ ಚುರುಕು ಮುಟ್ಟಿಸಿದರು.

'ಮೈಸೂರಿನ ಎರಡು ಗ್ರಾಮಗಳಲ್ಲಿ ಕಾಲರಾ ಕಂಡು ಬಂದಿದೆ. ಇದಕ್ಕೆ ಕಾರಣ ಕಲುಷಿತ ನೀರು. ನೀರು ಕಲುಷಿತಗೊಳ್ಳಲು ಎಂಜಿನಿಯರ್‌ಗಳೇ ಕಾರಣ. ಕುಡಿಯಲು ನೀರು ಯೋಗ್ಯವೇ ಅಲ್ಲವೇ ಎಂಬುದನ್ನು ಪತ್ತೆ ಮಾಡದಿರುವುದು ದೊಡ್ಡ ಅಪರಾಧ. ಕುಡಿಯುವ ನೀರಿನ ಪರೀಕ್ಷೆ ನಿತ್ಯವೂ ಆಗಬೇಕು' ಎಂದು ತಾಕೀತು ಮಾಡಿದರು.

ಎಲ್ಲ ನಗರ ಮತ್ತು ಗ್ರಾಮೀಣ ಸ್ಥಳೀಯ ಆಡಳಿತ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಗುಣಮಟ್ಟವನ್ನು ಖಾತರಿಪಡಿಸಬೇಕು ಹಾಗೂ ಕಲುಷಿತ ನೀರು ಪೂರೈಕೆ ಪ್ರಕರಣಗಳನ್ನು ತಡೆಯಬೇಕು ಎಂದು ಸೂಚನೆ ನೀಡಿದರು.

ಸಕಾಲದಲ್ಲಿ ರೈತರಿಗೆ ಸಾಲ: ಬರ ಪರಿಹಾರದ ಮೊತ್ತ ರೈತರ ಖಾತೆಗೆ ಜಮೆಯಾದಾಗ ಅದನ್ನು ಸಾಲದ ಬಾಕಿಗಾಗಿ ವಜಾ ಮಾಡಿಕೊಳ್ಳಬಾರದು. ಸಕಾಲದಲ್ಲಿ ರೈತರಿಗೆ ಸಾಲ ಸಿಗುವುದನ್ನು ಖಾತರಿಪಡಿಸಬೇಕು. ಇದಕ್ಕಾಗಿ ಜಿಲ್ಲಾ ಬ್ಯಾಂಕರ್‌ಗಳೊಂದಿಗೆ ಮಾತುಕತೆ ನಡೆಸಿ ಕ್ರಮಕೈಗೊಳ್ಳಬೇಕು ಎಂದು ಅವರು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

13ನೇ ಪುಟ ನೋಡಿ

842 ರೈತರ ಆತ್ಮಹತ್ಯೆ

ರಾಜ್ಯದಲ್ಲಿ 2023–24 ರಲ್ಲಿ 842 ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿದ್ದು, ಅದರಲ್ಲಿ 90 ಮನವಿಗಳು ತಿರಸ್ಕೃತವಾಗಿವೆ. 132 ಪ್ರಕರಣಗಳು ಡಿಬಿಟಿಗೆ ಬಾಕಿ ಉಳಿದಿದ್ದು, 62 ಪ್ರಕರಣಗಳು ಉಪವಿಭಾಗ ಹಂತದಲ್ಲಿ ಬಾಕಿ ಇದೆ. ಉಳಿದ ಕುಟುಂಬಗಳಿಗೆ ಪರಿಹಾರ ವಿತರಿಸಲಾಗಿದೆ ಎಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

ಬಹಳಷ್ಟು ಪ್ರಕರಣಗಳಲ್ಲಿ ವಿಧಿವಿಜ್ಞಾನ ವರದಿಯ ನಿರೀಕ್ಷೆಯಲ್ಲಿ ಇರುವುದರಿಂದ ತಡವಾಗಿದೆ ಎಂದು ಅವರು ಹೇಳಿದರು.

ಈ ಹಂತದಲ್ಲಿ ಮಧ್ಯ ಪ್ರವೇಶಿಸಿ ಮಾತನಾಡಿದ ಸಿದ್ದರಾಮಯ್ಯ, 'ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಿರುವ ಜಿಲ್ಲೆಗಳಲ್ಲಿ ಅದಕ್ಕೆ ಕಾರಣ ಮತ್ತು ಪರಿಹಾರ ಏನು ಎಂಬ ಬಗ್ಗೆ ಅಧ್ಯಯನ ನಡೆಸಿ' ಎಂದು ಸೂಚಿಸಿದರು.

ಮಲ್ಲೇಶ್ವರಂ
ಸುದರ್ಶನ್ ಜುವೆಲ್ಲರ್ಸ್
916 BIS ಹಾಲ್ಮಾರ್ಕ್ ಜುವೆಲ್ಲರಿ
ಅತ್ಯಂತ ಕಡಿಮೆ ಚಿನ್ನದ ದರ
₹6730/gm
ಬೆಳ್ಳಿ ದರ: ₹92/gm
ವೆಸ್ಟೇಜ್ 3% ರಿಂದ ಪ್ರಾರಂಭ
ಬೆಳ್ಳಿ ಲೇಖನಗಳ ಮೇಲೆ ಮೇಕಿಂಗ್ ಚಾರ್ಜಸ್ ಇಲ್ಲ
ನಿಯಮಗಳು ಮತ್ತು ಷರತ್ತುಗಳು ಅನ್ವಯ
Ph- 080-29909733/ 9513394070

ಮೊಮ್ಮಗ ಪ್ರಜ್ವಲ್ ರೇವಣ್ಣಗೆ ದೇವೇಗೌಡರ ಬಹಿರಂಗ

ಶರಣಾಗು: ಗೌಡರ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲಿದ್ದರೂ ಬಂದು ಪೊಲೀಸರಿಗೆ ಶರಣಾಗಬೇಕು, ವಿಚಾರಣೆ ಎದುರಿಸಬೇಕು ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು ತಮ್ಮ ಮೊಮ್ಮಗನೂ ಆದ ಹಾಸನ ಸಂಸದ ಪ್ರಜ್ವಲ್ ರೇವಣ್ಣಗೆ ಕರೆ ನೀಡಿದ್ದು, ತಪ್ಪಿದರೆ ಕುಟುಂಬದಿಂದ ಏಕಾಂಗಿಯಾಗಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಈ ಕುರಿತು ಬರೆದ ಪತ್ರವನ್ನು 'ಎಕ್ಸ್' ನಲ್ಲಿ ಹಂಚಿಕೊಂಡ ಅವರು ಮಾಧ್ಯಮಗಳಿಗೂ ಬಿಡುಗಡೆ ಮಾಡಿದ್ದಾರೆ.

'ಇದು ನಾನು ಅವನಿಗೆ ಕೊಡುತ್ತಿರುವ ಎಚ್ಚರಿಕೆ. ಅವನು ಈ ಎಚ್ಚರಿಕೆಗೆ ಮನ್ನಣೆ ಕೊಡದಿದ್ದಲ್ಲಿ ಅವನು ನನ್ನ ಮತ್ತು ಕುಟುಂಬದವರೆಲ್ಲರ ಕೋಪ ಎದುರಿಸಬೇಕಾಗುತ್ತದೆ. ಎಸಗಿದ್ದಾನೆ ಎನ್ನಲಾದ ತಪ್ಪುಗಳನ್ನು ತೀರ್ಮಾನಿಸಲು ಕಾನೂನು ಇದೆ. ತಲೆಬಾಗದಿದ್ದಲ್ಲಿ, ಏಕಾಂಗಿಯಾಗಬೇಕಾಗುತ್ತದೆ. ನನ್ನ ಬಗ್ಗೆ ಗೌರವವಿದ್ದಲ್ಲಿ ಅವನು ಕೂಡಲೇ ಹಿಂದಿರುಗಿ ಬರಬೇಕು' ಎಂದಿದ್ದಾರೆ.

8ನೇ ಪುಟ ನೋಡಿ

ಪಾಸ್‌ಪೋರ್ಟ್ ರದ್ದತಿಗೆ ಪ್ರಕ್ರಿಯೆ

ನವದೆಹಲಿ (ಪಿಟಿಐ): ಸಂಸದ ಪ್ರಜ್ವಲ್ ರೇವಣ್ಣ ಅವರ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಗೊಳಿಸುವ ಪ್ರಕ್ರಿಯೆಯನ್ನು ವಿದೇಶಾಂಗ ಸಚಿವಾಲಯ ಆರಂಭಿಸಿದೆ. ಪ್ರಜ್ವಲ್ ಅವರ ರಾಜತಾಂತ್ರಿಕ ಪಾಸ್‌ಪೋರ್ಟ್ ಅನ್ನು ರದ್ದು ಮಾಡಬೇಕು ಎಂದು ಕರ್ನಾಟಕ ಸರ್ಕಾರವು ಕೋರಿತ್ತು. ಈ ಕೋರಿಕೆಯ ಮೇರೆಗೆ ಸಚಿವಾಲಯವು ಪ್ರಕ್ರಿಯೆ ಆರಂಭಿಸಿದೆ.

ಕರ್ನಾಟಕದಿಂದ ಈ ಕುರಿತು ಪತ್ರ ಬಂದಿದೆ ಎಂದು ವಿದೇಶಾಂಗ ಸಚಿವಾಲಯದ ಮೂಲಗಳು ಮಾಹಿತಿ ನೀಡಿವೆ. 'ಪ್ರಜ್ವಲ್ ಅವರ ರಾಜತಾಂತ್ರಿಕ ಪಾಸ್‌ಪೋರ್ಟ್ ಅನ್ನು ರದ್ದು ಮಾಡುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಆದರೆ, ಇದುವರೆಗೂ ಕೇಂದ್ರದಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ' ಎಂದು ಬುಧವಾರವಷ್ಟೇ ಗೃಹ ಸಚಿವ ಜಿ.ಪರಮೇಶ್ವರ ಅವರು ಹೇಳಿದ್ದರು.

ಮತ್ತೆ ಪ್ರಧಾನಿಗೆ ಪತ್ರ: ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ, ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದು ಮಾಡಬೇಕು, ಭಾರತಕ್ಕೆ ಮರಳಿ ಕರೆತರಲು ಸಹಕಾರ ನೀಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತೆ ಪತ್ರ ಬರೆದಿದ್ದಾರೆ.

ಸಂಸದ ಪ್ರಜ್ವಲ್ ರೇವಣ್ಣನನ್ನು ವಿದೇಶಕ್ಕೆ ಕಳಿಸಿರುವುದೇ ಅವರ ತಾತ ಎಚ್.ಡಿ. ದೇವೇಗೌಡರು. ವಿದೇಶಕ್ಕೆ ಕಳುಹಿಸಿ ಈಗ ಪತ್ರ ಬರೆದು ಏನು ಮಾಡುತ್ತಾರೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಸೆನ್ಸೆಕ್ಸ್, ನಿಫ್ಟಿ ಸಾರ್ವಕಾಲಿಕ ದಾಖಲೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಗುರುವಾರವೂ ಗೂಳಿಯ ಓಟ ಮುಂದುವರಿದಿದ್ದು, ಲೋಕಸಭಾ ಚುನಾವಣೆಯ ಫಲಿತಾಂಶಕ್ಕೂ ಮುನ್ನವೇ ಸೂಚ್ಯಂಕಗಳು ಸಾರ್ವಕಾಲಿಕ ಗರಿಷ್ಠ ಮಟ್ಟ ದಾಖಲಿಸಿವೆ. 12



ನಟಿ ಹೇಮಾ ಸೇರಿ 86 ಮಂದಿ ಡ್ರಗ್ಸ್ ಸೇವನೆ ದೃಢ

ಬೆಂಗಳೂರು: 'ಹೆಬ್ಬಗೋಡಿ ಬಳಿಯ ಹುಸ್ಕೂರು ಸಮೀಪದಲ್ಲಿರುವ ಜಿ.ಆರ್. ಫಾರ್ಮ್ ಹೌಸ್‌ನಲ್ಲಿ ನಡೆದಿದ್ದ ರೇವ್ ಪಾರ್ಟಿಯಲ್ಲಿ ಪಾಲ್ಗೊಂಡಿದ್ದ 86 ಮಂದಿ ಡ್ರಗ್ಸ್ ಸೇವನೆ ಮಾಡಿದ್ದರು' ಎಂಬ ಮಾಹಿತಿ ವೈದ್ಯಕೀಯ ವರದಿಯಿಂದ ಗೊತ್ತಾಗಿದೆ. 7

ಚಿನಕುರುಳಿ
ಪ್ರಕಾಶ್ ಶೆಟ್ಟಿ

ಕೇರಳದ ಹಲವೆಡೆ ಭಾರಿ ಮಳೆ

ಪ್ರಜಾವಾಣಿ ವಾರ್ತೆ/ಪಿಟಿಐ/ರಾಯಿಟರ್ಸ್

ಕೊಚ್ಚಿ: ಕೇರಳದಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ರಾಜ್ಯದ ಹಲವು ನಗರಗಳ ತಗ್ಗು ಪ್ರದೇಶಗಳಲ್ಲಿ ಪ್ರವಾಹ ಉಂಟಾಗಿದೆ. ಈ ಮಧ್ಯೆ ರಾಜ್ಯದ ಎರಡು ಜಿಲ್ಲೆಗಳಲ್ಲಿ ಒಂದೇ ದಿನದಲ್ಲಿ ಸುಮಾರು 20 ಸೆಂ.ಮೀ. ಮಳೆಯಾಗಬಹುದು ಎಂದು ಭಾರತೀಯ ಹವಾಮಾನ ಇಲಾಖೆಯು ಗುರುವಾರ ಮುನ್ನೆಚ್ಚರಿಕೆ ನೀಡಿದೆ.

ಬುಧವಾರ ರಾತ್ರಿ ಸುರಿದ ಮಳೆಯಿಂದಾಗಿ ಒಟ್ಟು ಐದು ಮಂದಿ ಮೃತಪಟ್ಟಿದ್ದಾರೆ. ಗುರುವಾರ ಯಾವುದೇ ಸಾವು ಸಂಭವಿಸಿಲ್ಲ. ಪ್ರತಿ ವರ್ಷ ಮೇ ತಿಂಗಳಲ್ಲಿ ಸುರಿಯುವ ಮಳೆಗಿಂತ ಈ ಬಾರಿ ಶೇ 18ಕ್ಕಿಂತೂ ಹೆಚ್ಚಿನ ಪ್ರಮಾಣದ ಮಳೆ ಸುರಿದಿದೆ. 'ಹಠಾತ್ ಆಗಿ ಪ್ರವಾಹ ಉಂಟಾಗುವ ಸ್ಥಿತಿ ಇದೆ. ಜನರು ಎಚ್ಚರಿಕೆಯಿಂದ ಇರಬೇಕು' ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮನವಿ ಮಾಡಿದ್ದಾರೆ.

13ನೇ ಪುಟ ನೋಡಿ



ಸದ್ಯ ಸಾಕುನಾಯಿಗಳ ಸಂಗಾತಿಗಳ ಹುಡುಕಾಟಕ್ಕೆ ಅವಕಾಶ

ಸಾಕುಪ್ರಾಣಿಗಳಿಗೂ 'ಮ್ಯಾಟ್ರಿಮನಿ' ಪೋರ್ಟಲ್

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಸಾಕುಪ್ರಾಣಿಗಳಿಗೆ ಸರಿಯಾದ ಸಂಗಾತಿಯನ್ನು ಅರಸುವುದು ಕೇರಳದಲ್ಲಿ ಇನ್ನು ಮುಂದೆ ಕಷ್ಟದ ಕೆಲಸ ಆಗಲಿಕ್ಕಿಲ್ಲ. ಏಕೆಂದರೆ, ಸಾಕುಪ್ರಾಣಿಗಳಿಗೆ ಸಂಗಾತಿಯನ್ನು ಹುಡುಕಿಕೊಡುವ (ಮ್ಯಾಟ್ರಿಮನಿ) ಪೋರ್ಟಲ್ ಒಂದನ್ನು ರಾಜ್ಯದಲ್ಲಿ ಈಗ ಆರಂಭಿಸಲಾಗಿದೆ! ಈ ಪೋರ್ಟಲ್‌ನಲ್ಲಿ ಸಾಕುಪ್ರಾಣಿಗಳ ಫೋಟೊ ಹಾಗೂ ಅವುಗಳ ಕುರಿತ ಒಂದಿಷ್ಟು ವಿವರಗಳು ಕೂಡ ಇರಲಿವೆ.

ಕೇರಳ ಪಶುವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನ ವಿಶ್ವವಿದ್ಯಾಲಯದ (ಕೆವಿಎಎಸ್‌ಯು) ವಿದ್ಯಾರ್ಥಿಯೊಬ್ಬರ ಆಲೋಚನೆ ಈ ಪೋರ್ಟಲ್‌ನ ಹಿಂದೆ ಇದೆ. ಪೋರ್ಟಲ್ ಆರಂಭಿಸುವುದಕ್ಕೆ ವಿಶ್ವವಿದ್ಯಾಲಯದ ಬೆಂಬಲ ಕೂಡ ಇದೆ. vet-igo.in ವೆಬ್ ವಿಳಾಸ ಹೊಂದಿರುವ ಈ ಪೋರ್ಟಲ್ ಸದ್ಯಕ್ಕೆ ಸಾಕುನಾಯಿಗಳಿಗೆ ಮಾತ್ರ ಸಂಗಾತಿಗಳನ್ನು ಅರಸಲು ನೆರವು ನೀಡುತ್ತದೆ.

ಮುಂದಿನ ದಿನಗಳಲ್ಲಿ ಇದು ಬೆಕ್ಕುಗಳಿಗೆ ಸಂಗಾತಿ ಹುಡುಕಿಕೊಡಲಿಕ್ಕೂ ನೆರವು ಒದಗಿಸಲಿದೆ, ಆನ್‌ಲೈನ್ ಮೂಲಕ ಪಶುವೈದ್ಯಕೀಯ ಸಮಾಲೋಚನೆಯ ಸೇವೆಯನ್ನೂ ನೀಡಲಿದೆ ಎಂದು ಪೋರ್ಟಲ್‌ನ ರೂವಾರಿ ಅಬಿನ್ ಜಾಯ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಜಾಯ್ ಅವರು ಪಶುವೈದ್ಯಕೀಯ ವಿಜ್ಞಾನದಲ್ಲಿ ಪದವಿ ಪಡೆದಿದ್ದಾರೆ. ಈಗ ಅವರು ಇಂಟರ್ನ್‌ಶಿಪ್‌ನಲ್ಲಿ ತೊಡಗಿಸಿಕೊಂಡಿದ್ದಾರೆ. ತಾವು ಆರಂಭಿಸಿರುವುದು ಕೇರಳದಲ್ಲಿ ಸಾಕುಪ್ರಾಣಿಗಳಿಗೆ ಸಂಗಾತಿ ಅರಸಲು ಮೀಸಲಾಗಿರುವ ಮೊದಲ ಪೋರ್ಟಲ್ ಆಗಿರಬಹುದು ಎಂದು ಅವರು ತಿಳಿಸಿದರು. ಇತರ ರಾಜ್ಯಗಳಲ್ಲಿಯೂ ಇಂಥದ್ದೊಂದು ಪೋರ್ಟಲ್ ಇರಲಿಕ್ಕಿಲ್ಲ ಎಂದರು.

ಸಾಕುಪ್ರಾಣಿಗಳ ಸಂಪರ್ಕಕ್ಕೆ ಮಾಲೀಕರಿಗೆ ನೆರವಾಗುವ ಕೆಲವು ಆನ್‌ಲೈನ್ ವೇದಿಕೆಗಳು ಈಗಾಗಲೇ ಇವೆ. ಆದರೆ ಈ ವೇದಿಕೆಗಳು ಫೋಟೊಗಳನ್ನು ಪ್ರಕಟಿಸುತ್ತಿಲ್ಲ. ಹೀಗಾಗಿ, ಸಾಕುಪ್ರಾಣಿಗಳ ಫೋಟೊ ಹಾಗೂ ಕೆಲವು ವಿವರಗಳನ್ನು ಹೊಂದಿರುವ vet-igo.in ಪೋರ್ಟಲ್ ಅವುಗಳಿಗೆ ಸೂಕ್ತವಾದ ಸಂಗಾತಿಯನ್ನು ಗೊತ್ತುಮಾಡುವ ಕೆಲಸವನ್ನು ಮಾಲೀಕರಿಗೆ ಸುಲಭವಾಗಿಸಿಕೊಡುತ್ತದೆ.

'ಸಾಕುಪ್ರಾಣಿಗಳಿಗೆ ದೈಹಿಕ ಸಂಪರ್ಕಕ್ಕೆ ಸೂಕ್ತ ಸಂಗಾತಿ ಅರಸಬೇಕು, ನೆರವು ಕೊಡಿ ಎಂದು ಹಲವರು ನನ್ನಲ್ಲಿ ಕೇಳಿದ್ದಿದೆ. ಆಗ ಈ ಆಲೋಚನೆ ನನ್ನಲ್ಲಿ ಮೂಡಿತು' ಎಂದು ಅವರು ತಿಳಿಸಿದರು.

ಸಾಕುಪ್ರಾಣಿಗಳ ಮಾಲೀಕರು vet-igo.in ಪೋರ್ಟಲ್‌ನಲ್ಲಿ ತಮ್ಮ ವಿವರಗಳನ್ನು ನೋಂದಾಯಿಸಿ, ತಮ್ಮಲ್ಲಿರುವ ಸಾಕುಪ್ರಾಣಿಗಳ ಫೋಟೊ ಹಾಗೂ ಕೆಲವು ವಿವರಗಳನ್ನು ಸಲ್ಲಿಸಬೇಕು. ಸದ್ಯಕ್ಕೆ ಇಲ್ಲಿ ಐವತ್ತು ಸಾಕುಪ್ರಾಣಿಗಳ ವಿವರ ಇದೆ. ಇದರ ಬಗ್ಗೆ ಪ್ರಚಾರ ಸಿಕ್ಕಂತೆಲ್ಲ ಇನ್ನಷ್ಟು ಮಂದಿ ನೋಂದಾಯಿಸಿಕೊಳ್ಳಬಹುದು ಎಂಬ ನಿರೀಕ್ಷೆಯನ್ನು ಜಾಯ್ ಹೊಂದಿದ್ದಾರೆ.

collegedunia ಪ್ರಸ್ತುತಪಡಿಸುತ್ತದೆ
ಭಾರತದ ಅತಿ ದೊಡ್ಡ
ಶಿಕ್ಷಣ ಮೇಳ
25 ಮತ್ತು 26ನೇ ಮೇ, 2024 | ಗಾಯತ್ರಿ ವಿಹಾರ್ ಸಾಗರ್, ಗೇಟ್ ನಂ.4, ಅರಮನೆಮೈದಾನ ಬೆಂಗಳೂರು

ವಿಶೇಷ ಆಕರ್ಷಣೆ
100 ವಿಶ್ವವಿದ್ಯಾಲಯಗಳನ್ನು ಭೇಟಿ ಮಾಡಿ
ಮುಖಾಮುಖಿ ಕೌನ್ಸೆಲಿಂಗ್
ಉಚಿತ ಸೈಕೋಮೆಟ್ರಿಕ್ ಪರೀಕ್ಷೆ
ಸ್ಥಳದಲ್ಲೇ ಕಾಲೇಜು ದಾಖಲಾತಿ
100 ಕೋಟಿ ಮೌಲ್ಯದ ವಿದ್ಯಾರ್ಥಿವೇತನವನ್ನು ಪಡೆಯಿರಿ.

MEGA CAREER CARNIVAL 2024
ಕಾಲೇಜ್ ಡುನಿಯಾ ಕಾರ್ನೀವಲ್‌ನಲ್ಲಿ ನಿಮ್ಮ ಎಲ್ಲಾ ಉತ್ತರಗಳನ್ನು ಪಡೆಯಿರಿ
25 ಮತ್ತು 26ನೇ ಮೇ, 2024
ಗಾಯತ್ರಿ ವಿಹಾರ್ ಸಾಗರ್, ಅರಮನೆ ಮೈದಾನ ಬೆಂಗಳೂರು
ಗೇಟ್ ನಂ .4

ಪಾಲುದಾರರು
AMITY UNIVERSITY BENGALURU
MANIPAL ACADEMY of HIGHER EDUCATION BENGALURU CAMPUS
SAPTHAGIRI NPS UNIVERSITY
HKBK GROUP OF INSTITUTIONS www.hkbk.edu.in
VIDYASHILP UNIVERSITY
SURANA COLLEGE AUTONOMOUS
JGI JAIN

ಸ್ಕ್ಯಾನ್ ಮಾಡಿ ಮತ್ತು ನೋಂದಾಯಿಸಿ
ಹೇಗೆ ನೋಂದಾಯಿಸುವುದು?
• www.collegeduniacarnival.com ಗೆ ಹೋಗಿ
• "Register Now" ಮೇಲೆ ಕ್ಲಿಕ್ ಮಾಡಿ
• ನಿಮ್ಮ ಮಾಹಿತಿಯನ್ನು ಭರ್ತಿ ಮಾಡಿ ಮತ್ತು ಉಚಿತವಾಗಿ ನೋಂದಾಯಿಸಿ
ಪ್ರಶ್ನೆಗಳಿಗೆ ನಮ್ಮನ್ನು ಇಲ್ಲಿ ಸಂಪರ್ಕಿಸಿ: career.carnival@collegedunia.com

ಟಿ ಮತ್ತು ಸಿ ಅನ್ವಯಿಸಿ:
ಯಾವುದೇ ಸಮಯದಲ್ಲಿ ಪೂರ್ವ ಸೂಚನೆಯಿಲ್ಲದೆ ಈವೆಂಟ್ ಅನ್ನು ಮಾರ್ಪಡಿಸಲು, ರದ್ದುಗೊಳಿಸಲು ಅಥವಾ ಮುಂದೂಡಲು ಸಂಘಟಕರಿಗೆ ಹಕ್ಕಿದೆ. ಕಾರ್ಯಕ್ರಮದ ಸಮಯದಲ್ಲಿ ಅಭ್ಯರ್ಥಿಗಳ ವೈಯಕ್ತಿಕ ಆಸ್ತಿಗೆ ಯಾವುದೇ ನಷ್ಟ ಅಥವಾ ಹಾನಿಗೆ ಸಂಘಟಕರು ಜವಾಬ್ದಾರರಾಗಿರುವುದಿಲ್ಲ. ಈವೆಂಟ್‌ನ ಛಾಯಾಚಿತ್ರಗಳು ಮತ್ತು ವೀಡಿಯೊಗಳನ್ನು ತೆಗೆದುಕೊಳ್ಳುವ ಮತ್ತು ಪ್ರಚಾರದ ಉದ್ದೇಶಗಳಿಗಾಗಿ ಅವುಗಳನ್ನು ಬಳಸುವ ಹಕ್ಕನ್ನು ಸಂಘಟಕರು ಹೊಂದಿದ್ದಾರೆ. ಈವೆಂಟ್ ಭಾರತದ ಕಾನೂನುಗಳು ಮತ್ತು ಕರ್ನಾಟಕದ ನ್ಯಾಯಾಲಯಗಳ ನ್ಯಾಯವ್ಯಾಪ್ತಿಗೆ ಒಳಪಟ್ಟಿರುತ್ತದೆ. ಈವೆಂಟ್‌ಗೆ ನೋಂದಾಯಿಸುವ ಮೂಲಕ, ಅಭ್ಯರ್ಥಿಗಳು ಮೇಲೆ ತಿಳಿಸಲಾದ ನಿಯಮಗಳು ಮತ್ತು ಷರತ್ತುಗಳಿಗೆ ಬದ್ಧರಾಗಲು ಒಪ್ಪುತ್ತಾರೆ.

ಶುಕ್ರವಾರದ ಉಷ್ಣಾಂಶ
32° ಗರಿಷ್ಠ 22° ಕನಿಷ್ಠ

ಹವಾಮಾನ ಮುನ್ಸೂಚನೆ
ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ.

ಮುನ್ನೋಟ

ಶನಿವಾರ	ಭಾನುವಾರ	ಸೋಮವಾರ
32° 23°	33° 23°	33° 23°

ಬುದ್ಧನ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಭಿಕ್ಕು ಆನಂದ ಕಿವಿಮಾತು

ಶ್ರದ್ಧಾಭಕ್ತಿಯಿಂದ ನಡೆದ ಬುದ್ಧ ಪೂರ್ಣಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೌದ್ಧ ಧರ್ಮೀಯರ ಪವಿತ್ರ ದಿನಗಳಲ್ಲಿ ಒಂದಾದ ಬುದ್ಧ ಪೂರ್ಣಿಮೆಯನ್ನು ನಗರದಲ್ಲಿ ಗುರುವಾರ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಮಹಾಬೋಧಿ ಸೊಸೈಟಿ, ನಾಗಸೇನ ವಿದ್ಯಾಲಯ, ಬುದ್ಧ ವಿಹಾರ ಹಾಗೂ ಬೌದ್ಧ ಮಹಾಸಭಾ, ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ರಂಗೋತ್ರಿ ಮಕ್ಕಳ ರಂಗಶಾಲೆ ಸೇರಿ ವಿವಿಧ ಸಂಘ–ಸಂಸ್ಥೆಗಳು ಬುದ್ಧ ಪೂರ್ಣಿಮೆ ಹಮ್ಮಿಕೊಂಡಿದ್ದವು. ಪ್ರಾರ್ಥನೆ, ಉಪನ್ಯಾಸ, ನಾಟಕ ಪ್ರದರ್ಶನ, ವಿಚಾರ ಸಂಕಿರಣ ಸೇರಿ ವಿವಿಧ ಕಾರ್ಯಕ್ರಮಗಳು ನಡೆದವು.

ಮಹಾಬೋಧಿ ಸೊಸೈಟಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಭಿಕ್ಕು ಆನಂದ ಅವರು 'ಇಂದಿಗೆ ಬುದ್ಧರ ಬೋಧನೆಗಳ ಪ್ರಸ್ತುತತೆ' ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. 'ಭವಿಷ್ಯದ ಬಗ್ಗೆ ಚಿಂತಿಸಿ ಸಮಯವನ್ನು ವ್ಯರ್ಥ ಮಾಡುವ ಬದಲು ಪ್ರಸ್ತುತ ಕ್ಷಣದ ಬಗ್ಗೆ ಯೋಚಿಸಬೇಕು. ಈ ಕ್ಷಣದ ಬಗ್ಗೆ ಯೋಚಿಸಿದಾಗ ಶಾಂತಿಯುತ ಜೀವನ ನಡೆಸಲು ಸಾಧ್ಯವಾಗುತ್ತದೆ. ಭವಿಷ್ಯದ ಚಿಂತೆಯಿಂದ ಅಮೂಲ್ಯವಾದ ಈಗಿನ ಸಮಯ ಹಾಳಾಗುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಪ್ರಸ್ತುತ ಸಮಯದ ಬಗ್ಗೆ ಯೋಚಿಸಿದಾಗ ಸಂತೋಷವು ನಿಮ್ಮನ್ನು ಹಿಂಬಾಲಿಸುತ್ತದೆ' ಎಂದು ಕಿವಿಮಾತು ಹೇಳಿದರು.

'ಬುದ್ಧನ ಬೋಧನೆಗಳು ವೈಜ್ಞಾನಿಕ ತಳಹದಿಯ ಮೇಲೆ ನಿಂತಿದೆ. ತಾನು ಹೇಳಿದ್ದೇ ನಿಜ ಎಂದು ಬುದ್ಧ ಎಂದೂ ಹೇಳಲಿಲ್ಲ. ಒಮ್ಮೆ ಪರಾಮರ್ಶಿಸಿ ಒಪ್ಪಿಕೊಳ್ಳುವಂತೆ ಹೇಳಿದ್ದು ಬುದ್ಧ ಮಾತ್ರ. ಬುದ್ಧನನ್ನು ಒಪ್ಪಿಕೊಂಡ ದೇಶಗಳೆಲ್ಲ ಇಂದು ಪ್ರಗತಿ ಹೊಂದಿವೆ. ಬುದ್ಧನ ಬೋಧನೆಗಳನ್ನು ಅನುಸರಿಸಿದರೆ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ' ಎಂದರು.

ಮಹಾಬೋಧಿ ಸೊಸೈಟಿಯಲ್ಲಿ ಮುಂಜಾನೆ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ವಿವಿಧ ಆಚರಣೆಗಳು ನಡೆದವು. ಹಳೆ ವಿಹಾರದಿಂದ ಮಹಾಬೋಧಿ ಲೋಕ ಶಾಂತಿ ಬುದ್ಧ ವಿಹಾರದವರೆಗೆ ಮೆರವಣಿಗೆ ನಡೆಸಲಾಯಿತು. ಭಿಕ್ಕು ಸುಗತಾನಂದ ಅವರಿಂದ ಸತಿ ಮತ್ತು ಮೈತ್ರಿಧ್ಯಾನ ಕಾರ್ಯಕ್ರಮಗಳು ನಡೆದವು. ಬಳಿಕ ಕನ್ನಡ ಅನುವಾದಿತ ಪ್ರೊ. ಹನುಮಂತಯ್ಯ ಅವರ 'ನಿತ್ಯ ಜೀವನದಲ್ಲಿ ಅಭಿಧಮ್ಮ', ಕೆ. ಮಾಯೀಗೌಡ ಅವರ 'ಬೌದ್ಧರು ಏನನ್ನು ನಂಬುವವರು' ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು.

ತತ್ವಗಳು ಮದ್ದು: ರಂಗೋತ್ರಿ ಮಕ್ಕಳ ರಂಗಶಾಲೆ ಸಂಸ್ಥೆ ಹಮ್ಮಿಕೊಂಡಿದ್ದ ಬುದ್ಧ ಪೂರ್ಣಿಮೆ ಹಾಗೂ ಬುದ್ಧನ ಬೆಳದಿಂಗಳ ರಾತ್ರಿ ಉತ್ಸವವನ್ನು ರಂಗನಿರ್ದೇಶಕ ಕೆ.ಎಚ್.ಕುಮಾರ್ ಉದ್ಘಾಟಿಸಿ, ಮಾತನಾಡಿದರು.

ನಾಗಸೇನ ವಿದ್ಯಾಲಯ, ಬುದ್ಧ ವಿಹಾರ ಮತ್ತು ಬುದ್ಧ ಮಹಾ ಸಭಾ ಆಯೋಜಿಸಿದ್ದ 2568ನೇ ಬುದ್ಧ ಜಯಂತಿ ಅಂಗವಾಗಿ ಗುರುವಾರ ವೈಶಾಖ ಬುದ್ಧ ಪೂರ್ಣಿಮಾ ಆಚರಣೆಯ ಸಂದರ್ಭ ಭಿಕ್ಕುನಿ ಬುದ್ಧಮ್ಮ ಅವರಿಂದ ಬುದ್ಧನ ಮೂರ್ತಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

ಸುದ್ದಿ 2 ನಿಮಿಷ

ಯಲಹಂಕ: ಮಹೇಶ್ವರಮ್ಮನವರ ಅದ್ದೂರಿ ಕರಗ ಮಹೋತ್ಸವ

ಯಲಹಂಕ: ಇತಿಹಾಸ ಪ್ರಸಿದ್ಧ, ವಹ್ನಿಕುಲ ಕ್ಷತ್ರಿಯ ಆರಾಧ್ಯದೇವಿ ಮಹೇಶ್ವರಮ್ಮನವರ ಹೂವಿನ ಕರಗ ಮಹೋತ್ಸವ ಹಾಗೂ ವಿವಿಧ ದೇವರ ಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಬಜಾರ್ ರಸ್ತೆಯಲ್ಲಿರುವ ಮಹೇಶ್ವರಮ್ಮನವರ ದೇವಾಲಯದಿಂದ ಬುಧವಾರ ರಾತ್ರಿ 1.40ಕ್ಕೆ ಹೊರಟ ಹೂವಿನ ಕರಗ, ಕೋಟೆಬೀದಿ, ಬೆಸ್ತರಬೀದಿ, ಕಾಮಾಕ್ಷಮ್ಮ ಬಡಾವಣೆ, ಹೊಸಬೀದಿ, ಗಾಂಧಿನಗರ, ಮನ್ವಂತರ ತೋಟ, ಡೌನ್ ಬಜಾರ್ ರಸ್ತೆ, ಮಾರುತಿನಗರ, ವೆಂಕಟಾಲ ಮತ್ತಿತರ ಬಡಾವಣೆಗಳಲ್ಲಿ ಸಂಚರಿಸಿ, ಗುರುವಾರ ಬೆಳಿಗ್ಗೆ 8 ಗಂಟೆಗೆ ಮತ್ತೆ ದೇವಾಲಯಕ್ಕೆ ಆಗಮಿಸಿತು.

ಶಕ್ತಿದೇವತೆ ಮಹೇಶ್ವರಮ್ಮನವರ ಕರಗ, ಮನೆಗಳ ಮುಂದೆ ಬಂದಾಗ ಮಹಿಳೆಯರು ಆರತಿ ಬೆಳಗಿ ಹೂವಿನ ಅರ್ಚನೆ ಮಾಡಿ ಸ್ವಾಗತಿಸಿದರು. ಸುತ್ತಮುತ್ತಲಿನ ಗ್ರಾಮಗಳ 27 ದೇವರ ಅಲಂಕೃತಗೊಂಡಿದ್ದ ಮುತ್ತಿನ ಪಲ್ಲಕ್ಕಿ ಉತ್ಸವ ಕರಗ ಮಹೋತ್ಸವಕ್ಕೆ ವಿಶೇಷ ಮೆರುಗು ನೀಡಿತು. ಸಾವಿರಾರು ಜನರು ಕರಗ ವೀಕ್ಷಿಸಿದರು. ಅಯ್ಯಪ್ಪ ಅವರು 5ನೇ ಬಾರಿಗೆ ಕರಗ ಹೊತ್ತಿದ್ದರು.

ಇಂದಿನಿಂದ 'ಮಾವು ಮೇಳ'

ಬೆಂಗಳೂರು: ರಾಜ್ಯ ಮಾವು ಅಭಿವೃದ್ಧಿ ನಿಗಮದ ವತಿಯಿಂದ ಇದೇ 24ರಿಂದ ಜೂನ್ 10ರವರೆಗೆ 'ಮಾವು ಮತ್ತು ಹಲಸು' ಮೇಳ ಲಾಲ್‌ಬಾಗ್‌ನಲ್ಲಿ ನಡೆಯಲಿದೆ.

ಮೇಳದಲ್ಲಿ ಸುಮಾರು 74 ಮಾವು, 9 ಹಲಸು ಮತ್ತು 14 ಇತರೆ ಹಣ್ಣಿನ ಮಳಿಗೆಗಳು ಇರಲಿವೆ. ಕೊಪ್ಪಳದ ಕೇಸರ್, ಚಿತ್ರದುರ್ಗ ಮತ್ತು ತುಮಕೂರಿನ ಬಾದಾಮಿ, ರಸಪುರಿ, ಬೆನಿಶಾ, ಮಲಗೋವಾ, ಮಲ್ಲಿಕಾ, ಆಮ್ರಪಾಲಿ, ದಶೇರಿ, ಬಂಗನಪಲ್ಲಿ, ರಸಪುರಿ, ಇಮಾಮ್ ಪಸಂದ್‌ನಂತಹ ತಳಿಗಳು ಮೇಳದಲ್ಲಿ ಲಭ್ಯವಿರುತ್ತವೆ. ಮಾವು ಮತ್ತು ಹಲಸಿನ ವೈವಿಧ್ಯಮಯ ಮೌಲ್ಯವರ್ಧಿತ ಉತ್ಪನ್ನಗಳೂ ಮಾರಾಟಕ್ಕಿರಲಿವೆ ಎಂದು ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

ಮೇಳವು ಬೆಳಿಗ್ಗೆ 7ರಿಂದ ಸಂಜೆ 7 ಗಂಟೆಯವರೆಗೆ ಗ್ರಾಹಕರಿಗೆ ಮುಕ್ತವಾಗಿರಲಿದ್ದು, ಸಹಜವಾಗಿ ಮಾಗಿದ ಹಣ್ಣುಗಳನ್ನು ಮಾರಾಟ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

CENTUM

(CIN): L85110KA1993PLC013869 ನೋಂದಾಯಿತ ಕಚೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು – 560 106.
ದೂರವಾಣಿ: +91-80-41436000 ಫ್ಯಾಕ್ಸ್: +91-80-41436005
ಇ–ಮೇಲ್: investors@centumelectronics.com ವೆಬ್‌ಸೈಟ್: www.centumelectronics.com

31ನೇ ಮಾರ್ಚ್ 2024ರ ತ್ರೈಮಾಸಿಕ ಮತ್ತು ವಾರ್ಷಿಕ ಅವಧಿಗೆ ಕೊನೆಗೊಂಡ ಪರಿಶೋಧಿತ ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್ಸ್‌ಗಳಲ್ಲಿ)

ಕ್ರ. ಸಂ.	ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ			ವರ್ಷಕ್ಕೆ ಕೊನೆಗೊಂಡ	
		31 ಮಾರ್ಚ್ 2024 ಪರಿಶೋಧಿತ (ಟಿಪ್ಪಣಿ 5ನ್ನು ಸಹ ಗಮನಿಸಿ)	31 ಡಿಸೆಂಬರ್ 2023 (ಅಪರಿಶೋಧಿತ)	31 ಮಾರ್ಚ್ 2023 ಪರಿಶೋಧಿತ (ಟಿಪ್ಪಣಿ 5ನ್ನು ಸಹ ಗಮನಿಸಿ)	31 ಮಾರ್ಚ್ 2024 (ಪರಿಶೋಧಿತ)	31 ಮಾರ್ಚ್ 2023 (ಪರಿಶೋಧಿತ)
1.	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	3,006.60	2,992.66	3,176.99	10,976.34	9,288.22
2.	ನಿವ್ವಳ ಲಾಭ / (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	1.44	107.23	338.07	127.57	121.36
3.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ ಮುಂಚೆ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	(47.35)	107.23	338.07	78.78	121.36
4.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳ ನಂತರ)	(68.95)	72.48	257.93	(27.55)	66.94
5.	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	(59.41)	59.86	261.86	(5.20)	74.00
6.	ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ರೂ.10 ಪ್ರತಿ ಷೇರಿಗೆ)				128.88	128.85
7.	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಆಡಿಟೆಡ್ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವಂತೆ				1,903.84	1,978.32
8.	ಪ್ರತಿ ಷೇರಿನ ಗಳಿಕೆ (ಪ್ರತಿ ರೂ. 10 ಕ್ಕೆ) ಕಾರ್ಯಾಚರಣೆಗಳನ್ನು ಮುಂದುವರಿಸುವದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ					
	ಎ) ಮೂಲಭೂತ:	(4.18)	5.95	19.80	1.38	7.62
	ಬಿ) ಡೈಲ್ಯೂಟೆಡ್:	(4.18)	5.88	19.61	1.36	7.55

ಸೂಚನೆ :

1. 31 ಮಾರ್ಚ್ 2024ರ ತ್ರೈಮಾಸಿಕ ಹಾಗೂ ವರ್ಷಕ್ಕೆ ಕೊನೆಗೊಂಡ ಪ್ರತ್ಯೇಕವಾದ ಪರಿಶೋಧಿತ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ			ವರ್ಷಕ್ಕೆ ಕೊನೆಗೊಂಡ	
	31 ಮಾರ್ಚ್ 2024 ಪರಿಶೋಧಿತ (ಟಿಪ್ಪಣಿ 5ನ್ನು ಸಹ ಗಮನಿಸಿ)	31 ಡಿಸೆಂಬರ್ 2023 (ಅಪರಿಶೋಧಿತ)	31 ಮಾರ್ಚ್ 2023 ಪರಿಶೋಧಿತ (ಟಿಪ್ಪಣಿ 5ನ್ನು ಸಹ ಗಮನಿಸಿ)	31 ಮಾರ್ಚ್ 2024 (ಪರಿಶೋಧಿತ)	31 ಮಾರ್ಚ್ 2023 (ಪರಿಶೋಧಿತ)
ನಿವ್ವಳ ಮಾರಾಟ / ಕಾರ್ಯಾಚರಣೆಗಳಂದ ಆದಾಯ	1,730.10	1,774.10	1,970.29	6,395.20	5,052.30
ಲಾಭ ತೆರಿಗೆಯ ಮುಂಚೆ	118.87	145.80	307.64	489.98	263.78
ಲಾಭ ತೆರಿಗೆಯ ನಂತರ	87.08	108.40	228.22	362.52	193.99

2. ಅಪರಿಶೋಧಿತ, ಪ್ರತ್ಯೇಕವಾದ ಹಾಗೂ ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳನ್ನು ಕಂಪನಿಯ ಲೆಕ್ಕಪರಿಶೋಧಕ ಸಮಿತಿಯು 21ನೇ ಮೇ, 2024 ರಂದು ಪರಿಶೀಲಿಸಿದ್ದು ಹಾಗೂ ನಿರ್ದೇಶಕ ಮಂಡಳಿಯು 22ನೇ ಮೇ, 2024 ರಂದು ನಡೆದ ಸಭೆಯಲ್ಲಿ ಅನುಮೋದಿಸಿದೆ.
3. ಕಂಪನಿಯ ನಿರ್ದೇಶಕರ ಮಂಡಳಿಯು ಮೇ 22, 2024 ರಂದು ನಡೆದ ಸಭೆಯಲ್ಲಿ, ಮಾರ್ಚ್ 31, 2024ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಅವಧಿಗೆ ಷೇರು ಬಂಡವಾಳದ ಮೇಲೆ ಪ್ರತಿ 10 ರೂ. ಷೇರಿಗೆ ರೂ. 3/- ಡಿವಿಡೆಂಡ್ ಅನ್ನು ಶಿಫಾರಸು ಮಾಡಿದೆ. ಈ ಅಂತಿಮ ಡಿವಿಡೆಂಡ್ ಅನ್ನು, ಕಂಪನಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಷೇರುದಾರರ ಅನುಮೋದನೆಗೆ ಒಳಪಟ್ಟಿರುತ್ತದೆ.
4. ಮೇಲಿರುವ ತ್ರೈಮಾಸಿಕ ಮತ್ತು ವಾರ್ಷಿಕ ಅವಧಿಗೆ ಕೊನೆಗೊಂಡ, 2015ರ ಸೆಬಿ (ಪಟ್ಟಿ ಕರಾರು ಮಾಡುವುದು ಮತ್ತು ಬಹಿರಂಗಗೊಳಿಸುವಿಕೆ ಅಗತ್ಯಗಳು) ನಿಯಮಾವಳಿಗಳ ನಿಯಮಾವಳಿ 33 ರಂತೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲು ಮಾಡಲಾದ, ಸಮಗ್ರ ಹಣಕಾಸಿನ ಪರಿಶೋಧಿತ, ಪ್ರತ್ಯೇಕವಾದ ಫಲಿತಾಂಶಗಳ ಸಂಕ್ಷಿಪ್ತ ರೂಪ ಮತ್ತು ಸಮಗ್ರ ಹಣಕಾಸಿನ ಫಲಿತಾಂಶಗಳ ವಿವರವಾದ ವಿಧಾನದ ಸಂಕ್ಷಿಪ್ತ ರೂಪವಾಗಿದೆ. ಸಮಗ್ರ ತ್ರೈಮಾಸಿಕ ಮತ್ತು ವಾರ್ಷಿಕ ಅವಧಿಗೆ ಕೊನೆಗೊಂಡ ಪರಿಶೋಧಿತ ಹಣಕಾಸಿನ ಪ್ರತ್ಯೇಕವಾದ ಫಲಿತಾಂಶಗಳ ಸಮಗ್ರ ಹಣಕಾಸಿನ ಫಲಿತಾಂಶಗಳ ವಿವರವಾದ ವಿಧಾನದ ಪೂರ್ಣರೂಪವು ಸ್ಟಾಕ್ ಎಕ್ಸ್‌ಚೇಂಜ್‌ನ ಜಾಲತಾಣದಲ್ಲಿ www.nseindia.com, www.bseindia.com ಮತ್ತು ನಮ್ಮ ಕಂಪನಿಯ ಜಾಲತಾಣದಲ್ಲಿ www.centumelectronics.com ಲಭ್ಯವಿದೆ.
5. ಪ್ರಸ್ತುತ ಮಾರ್ಚ್ 31 ರಂದು ಕೊನೆಗೊಂಡ ತ್ರೈಮಾಸಿಕ ಮತ್ತು ಹಿಂದಿನ ವರ್ಷಗಳ ಅಂಕಿಅಂಶಗಳು ಸಂಪೂರ್ಣ ಹಣಕಾಸು ವರ್ಷಗಳ ಲೆಕ್ಕಪರಿಶೋಧನೆಯ ಅಂಕಿಅಂಶಗಳ ನಡುವಿನ ಸಮತೋಲನ ಅಂಕಿಅಂಶಗಳು ಮತ್ತು ಆಯಾ ವರ್ಷಗಳಿಗೆ ಡಿಸೆಂಬರ್ 31 ಕ್ಕೆ ಕೊನೆಗೊಂಡ ಒಂಬತ್ತು ತಿಂಗಳ ಲೆಕ್ಕಪರಿಶೋಧನೆ ಮಾಡದ ಪ್ರಕಟಿತ ವರ್ಷದಿಂದ ದಿನಾಂಕದ ಅಂಕಿಅಂಶಗಳು, ಸೀಮಿತ ಪರಿಶೀಲನೆಗೆ ಒಳಪಟ್ಟಿರುವ ಆರ್ಥಿಕ ವರ್ಷದ ಮೂರನೇ ತ್ರೈಮಾಸಿಕದ ಅಂತ್ಯದ ದಿನಾಂಕವಾಗಿದೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ನ ಪರವಾಗಿ
ಸಹಿ/–
ಅಪ್ಪಾರಾವ್ ವಿ ಮಲ್ಲವರಪು
ಅಧ್ಯಕ್ಷರು ಮತ್ತು ನಿರ್ವಾಹಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ: ಮೇ 22, 2024

ಉತ್ತರ ಪ್ರದೇಶ ನಿಯೋಗ ಬಿಎಂಟಿಸಿಗೆ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಬಿಎಂಟಿಸಿಗೆ ಭೇಟಿ ನೀಡಿ ಮಾಹಿತಿ ಪಡೆದರು.

ಬಿಎಂಟಿಸಿ ಅಳವಡಿಸಿಕೊಂಡಿರುವ ಮಾದರಿ ಉಪಕ್ರಮಗಳು, ಸಂಸ್ಥೆಯ ಇತಿಹಾಸ, ಶಕ್ತಿ ಯೋಜನೆಯ ಅನುಷ್ಠಾನ, ಪ್ರಯಾಣಿಕರ ಪಾಸ್ ವ್ಯವಸ್ಥೆ, ಆರ್ಥಿಕ ಕಾರ್ಯಕ್ಷಮತೆ, ಸಂಚಾರ ಆದಾಯ, ಜಾಹೀರಾತು ಶಿಷ್ಟಾಚಾರ, ಸಂಸ್ಥೆಯ ಬಸ್ ವೇಳಾಪಟ್ಟಿ, ಕಾರ್ಯಚರಣೆಗಳ ವೆಚ್ಚ, ಎಲೆಕ್ಟ್ರಿಕ್ ಬಸ್ಸುಗಳ ಹಸಿರು ತಂತ್ರಜ್ಞಾನದ ಕಾರ್ಯಾಚರಣೆ ಬಗ್ಗೆ ಚರ್ಚಿಸಿದರು.

ಬಿಎಂಟಿಸಿ ನಿರ್ದೇಶಕಿ(ಮಾಹಿತಿ ತಂತ್ರಜ್ಞಾನ) ಶಿಲ್ಪಾ ಪ್ರಾತ್ಯಕ್ಷಿಕೆ ನೀಡಿದರು. ಉತ್ತರ ಪ್ರದೇಶ ರಾಜ್ಯ ರಸ್ತೆ ಸಾರಿಗೆ ವ್ಯವಸ್ಥಾಪಕ ನಿರ್ದೇಶಕರಾದ ಪ್ರನ್ನಾತ ಐಶ್ವರ್ಯ, ಪ್ರಧಾನ ವ್ಯವಸ್ಥಾಪಕ(ಟೆಕ್) ರಾಜೀವ್ ಆನಂದ್, ಪ್ರಾದೇಶಿಕ ವ್ಯವಸ್ಥಾಪಕ ಕೇಸರಿ ನಂದನ್ ಚೌಧರಿ, ಸೇವಾ ನಿರ್ವಾಹಕ ಅನುರಾಗ್ ಯಾದವ್ ನಿಯೋಗದಲ್ಲಿದ್ದರು. ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ (ಆಚರಣೆ) ಜಿ.ಟಿ. ಪ್ರಭಾಕರ ರೆಡ್ಡಿ, ಮುಖ್ಯ ತಾಂತ್ರಿಕ ಎಂಜಿನಿಯರ್ ಎ.ಎನ್. ಗಜೇಂದ್ರ ಕುಮಾರ್, ಗಣಕ ವ್ಯವಸ್ಥಾಪಕಿ ಎ. ಪ್ರಿಯಾಂಕ, ವಿಭಾಗೀಯ ಸಂಚಾರ ಅಧಿಕಾರಿ ಪ್ರತಿಮಾ.ಎಸ್.ವಿ. ಉಪಸ್ಥಿತರಿದ್ದರು.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು–560 064
ವೆಬ್‌ಸೈಟ್: www.rwf.indianrailways.gov.in

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಸ್/02/2024–25 ದಿನಾಂಕ: 22.05.2024

ಭಾರತದ ರಾಷ್ಟ್ರಪತಿಗಳ ಪರವಾಗಿ ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು, ಭಾರತೀಯ ರೈಲ್ವೆ ಇ-ಪೋರ್ಟಲ್ **www.ireps.gov.in** ನಲ್ಲಿ ಕೆಳಕಂಡ ಸಾಮಗ್ರಿಗಳ ಪೂರೈಕೆಗಾಗಿ ಅನುಭವಿ ತಯಾರಕರು/ ಅಧಿಕೃತ ವಿತರಕರಿಂದ ಎಲೆಕ್ಟ್ರಾನಿಕ್ ಗ್ಲೋಬಲ್ ಓಪನ್ ಟೆಂಡರ್ ಅನ್ನು ಆಹ್ವಾನಿಸಿದ್ದಾರೆ.
ಟೆಂಡರ್ ಸಂಖ್ಯೆ: ಪಿ3245015
ಸಂಕ್ಷಿಪ್ತ ವಿವರಣೆ: ಸೀಮೆನ್ಸ್ ಸ್ಪೇರ್ಸ್ (5 ಐಟಮ್ಸ್)

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 20.06.2024, ಮಧ್ಯಾಹ್ನ 2.00 ಗಂಟೆಗೆ

ಟೆಂಡರ್ ವಿವರಗಳನ್ನು ನಮ್ಮ ವೆಬ್‌ಸೈಟ್ **www.rwf.indianrailways.gov.in** ಅಥವಾ **www.ireps.gov.in.** ನಲ್ಲಿ ವೀಕ್ಷಿಸಬಹುದು. ಟೆಂಡರ್ ಡಾಕ್ಯುಮೆಂಟ್‌ಗಳು ಮತ್ತು ತಿದ್ದುಪಡಿ ಯಾವುದಾದರೂ ಇದ್ದರೆ, ಪೋರ್ಟಲ್ ನಲ್ಲಿ ಮಾತ್ರ ಲಭ್ಯವಿರುತ್ತದೆ.
ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಇ-ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಮ್/ಓಟಿ/ಎಮ್‌ಡಬ್ಲ್ಯೂಎಫ್‌ಎಸ್/2024–25/08 ದಿನಾಂಕ: 23.05.2024

ಇ-ಟೆಂಡರ್: ಭಾರತದ ರಾಷ್ಟ್ರಪತಿಗಳ ಪರವಾಗಿ ಪ್ರಧಾನ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್, ಕೆಳಕಂಡ ಕೆಲಸಕ್ಕಾಗಿ ಎಲೆಕ್ಟ್ರಾನಿಕ್ ಟೆಂಡರ್ ಅನ್ನು ಆನ್‌ಲೈನ್ ವೆಬ್‌ಸೈಟ್ ***http://www.ireps.gov.in (Works)*** ಮೂಲಕ ಆಹ್ವಾನಿಸಿದ್ದಾರೆ.
ಟೆಂಡರ್ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಮ್/ಓಟಿ/ಎಮ್‌ಡಬ್ಲ್ಯೂಎಫ್‌ಪಿಎಸ್/2024–25/15 ದಿನಾಂಕ: 23.05.2024
ಕಾಮಗಾರಿಯ ಹೆಸರು: ಕ್ಲೀನಿಂಗ್ ಮೆಷಿನ್ ಸಂಖ್ಯೆ 1 ಮತ್ತು 2 ಮತ್ತು ಪೀನಿಂಗ್ ಮೆಷಿನ್ ಸಂಖ್ಯೆ 1 ಮತ್ತು 2 ರ ಆಧಾರಿತ ನಿರ್ವಹಣೆ ಅಗತ್ಯವಿದೆ.
ಅಂದಾಜು ಮೌಲ್ಯ: ರೂ.15,29,014.24
ಇಎಂಡಿ: ರೂ.30,600.00
ಕಾಮಗಾರಿ ಪೂರ್ಣಗೊಳಿಸಲು ಅವಧಿ: 18 ತಿಂಗಳು

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 14.06.2024, ಬೆಳಗ್ಗೆ 10.30 ಗಂಟೆಗೆ

ಟೆಂಡರ್ ವಿವರಗಳನ್ನು ನಮ್ಮ ವೆಬ್‌ಸೈಟ್ **www.rwf.indianrailways.gov.in** ನಲ್ಲಿ ವೀಕ್ಷಿಸಬಹುದು.
ಉಪ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್/ಡಬ್ಲ್ಯೂ-II

ಉದಯಭಾನು ಕಲಾಸಂಘದಿಂದ ಆಯೋಜನೆ

ಸಂಗೀತ ಶಿಬಿರ, ಕೌಶಲ ತರಬೇತಿಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದಯಭಾನು ಕಲಾಸಂಘವು ತನ್ನ ವಜ್ರ ಮಹೋತ್ಸವದ ಆಚರಣೆಯ ಸಂದರ್ಭದಲ್ಲಿ ಕಂಪ್ಯೂಟರ್ ಬೇಸಿಕ್ ತರಗತಿ, ಸಂಗೀತ ಕಲಿಕಾ ತರಬೇತಿ ಶಿಬಿರ ಸೇರಿದಂತೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಸಂಗೀತದಲ್ಲಿ ಆಸಕ್ತಿ ಇರುವ ಏಳು ವರ್ಷ ಮೇಲ್ಪಟ್ಟವರಿಗಾಗಿ ಜೂನ್ 1ರಿಂದ 8ರವರೆಗೆ 'ಮುಂಗಾರು ಸಂಗೀತ ರಸಗ್ರಹಣ ಶಿಬಿರ'ವನ್ನು ಆಯೋಜಿಸುತ್ತಿದೆ. ಶಿಬಿರಕ್ಕೆ ಪ್ರವೇಶ ಉಚಿತವಾಗಿದೆ.

ಸ್ವಯಂ ಉದ್ಯೋಗ ಕೌಶಲ ಅಭಿವೃದ್ಧಿ ಯೋಜನೆ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಬೇಸಿಕ್ ತರಗತಿಗಳು ಮತ್ತು ವಾಣಿಜ್ಯ ತರಗತಿಯ ವಿದ್ಯಾರ್ಥಿಗಳಿಗೆ ಟ್ಯಾಲಿ, ಟಿಡಿಎಸ್, ಜಿಎಸ್‌ಟಿ ಅಕೌಂಟಿಂಗ್ ತರಬೇತಿಗಳು ಜೂನ್ 1ರಿಂದ ಪ್ರಾರಂಭವಾಗಲಿವೆ. ತಜ್ಞ ಕಲಾವಿದರಿಂದ ಭರತನಾಟ್ಯ, ಚಿತ್ರಕಲೆ, ಸುಗಮ ಸಂಗೀತ, ಕೀಬೋರ್ಡ್, ತಬಲಾ, ಕೊಳಲು, ಕರ್ನಾಟಕ ಮತ್ತು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ತರಗತಿಗಳನ್ನು ನಡೆಸಲಾಗುತ್ತಿದೆ.

ಪೂರಕ ಶಿಕ್ಷಣದ ಅಗತ್ಯವಿರುವ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯ ವಿಜ್ಞಾನ, ವಾಣಿಜ್ಯ ಮತ್ತು ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಉಪನ್ಯಾಸ ತರಗತಿಗಳನ್ನು ಜುಲೈ ಮೊದಲ ವಾರದಲ್ಲಿ ಆರಂಭಿಸಲಾಗುವುದು. ಆಸಕ್ತರು ಉದಯಭಾನು ಕಲಾ ಸಂಘದ ಕಚೇರಿಯಿಂದ ಅರ್ಜಿಗಳನ್ನು ಪಡೆದು, ಶಿಬಿರ ಮತ್ತು ತರಗತಿಗಳಿಗೆ ನೋಂದಾಯಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿವರಕ್ಕೆ: 080-26601831/26609343 (ಬೆಳಿಗ್ಗೆ 10-1 ಮತ್ತು ಸಂಜೆ 5-8ರ ಒಳಗೆ) ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ 9844192952

ನಾವೀನ್ಯ ವಿನಿಮಯ 'ಸೃಷ್ಟಿ' ಇದೇ 24ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ವತಿಯಿಂದ ಇದೇ 24ರಿಂದ 26ರವರೆಗೆ 'ಸೃಷ್ಟಿ–2024' ನಾವೀನ್ಯ ವಿನಿಮಯ ಕಾರ್ಯಕ್ರಮವು ಹೆಬ್ಬಾಳದ ಏಟ್ರಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಆವರಣದಲ್ಲಿ ನಡೆಯಲಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಬಿವಿಪಿ ರಾಜ್ಯ ಕಾರ್ಯದರ್ಶಿ ಎಚ್.ಕೆ. ಪ್ರವೀಣ್, 'ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸೇರಿದಂತೆ ವೈಜ್ಞಾನಿಕ, ಸಂಶೋಧನಾ ಮನೋಭಾವವುಳ್ಳ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಈ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ಈ ಕಾರ್ಯಕ್ರಮದಲ್ಲಿ 200ಕ್ಕೂ ಹೆಚ್ಚು ಕಾಲೇಜುಗಳ ಸುಮಾರು 3,500 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಅಂತಿಮ ವರ್ಷದ 300ಕ್ಕೂ ಹೆಚ್ಚು ಎಂಜಿನಿಯರಿಂಗ್ ವಿದ್ಯಾರ್ಥಿಗಳು ತಮ್ಮ ಪ್ರಾಜೆಕ್ಟ್‌ಗಳನ್ನು ಪ್ರಸ್ತುತಪಡಿಸಲಿದ್ದಾರೆ' ಎಂದರು.

'ಸೃಷ್ಟಿ 2024'ರಲ್ಲಿ 48 ಗಂಟೆಗಳ ಹ್ಯಾಕಥಾನ್ ನಡೆಯಲಿದ್ದು, 70ಕ್ಕೂ ಹೆಚ್ಚು ತಂಡಗಳು ಈಗಾಗಲೇ ನೋಂದಾಯಿಸಿಕೊಂಡಿವೆ. ಈ ಎಲ್ಲ ಕಾರ್ಯಕ್ರಮಗಳಲ್ಲಿ ಜಯಶೀಲರಾಗುವ ವಿದ್ಯಾರ್ಥಿಗಳಿಗೆ ₹25 ಲಕ್ಷವರೆಗಿನ ಬಹುಮಾನ ವಿತರಿಸಲಾಗುವುದು. ಅಷ್ಟೇ ಅಲ್ಲದೇ ವಿವಿಧ ಗುಂಪುಗಳಲ್ಲಿ ನಡೆಯುವ ಸ್ಪರ್ಧೆಯ ಎಲ್ಲ ಹಂತಗಳಲ್ಲಿ ಅತ್ಯುತ್ತಮ ಸಾಧನೆ ತೋರಿದ ಶೈಕ್ಷಣಿಕ ಸಂಸ್ಥೆಗಳಿಗೆ ಚಾಂಪಿಯನ್ ಹಾಗೂ ರನ್ನರ್ಸ್ ಅಪ್ ಪ್ರಶಸ್ತಿಯನ್ನು ನೀಡಲಾಗುವುದು' ಎಂದು ತಿಳಿಸಿದರು.

ನಗರದಲ್ಲಿ ಇಂದು

ಇನ್‌ವೆನ್ಸಿಯಾ–2024 ವಾರ್ಷಿಕ ಸಾಂಸ್ಕೃತಿಕ ಉತ್ಸವದ ಉದ್ಘಾಟನೆ: ಅತಿಥಿಗಳು: ಕೌಸರ್ ನಿಸ್ಸಾರ್ ಅಹಮದ್, ಉಪಸ್ಥಿತಿ: ಧನ್ಯಾ ರಾಮಕುಮಾರ್, ಸಂಗೀತ ಕಾರ್ಯಕ್ರಮ: ರಾಹುಲ್ ಡಿಟ್–ಒ, ಧ್ವನಿ ಭಾನುಶಾಲಿ, ಆಯೋಜನೆ ಮತ್ತು ಸ್ಥಳ: ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ರಾಜನಕುಂಟೆ, ಯಲಹಂಕ, ಬೆಳಿಗ್ಗೆ 9ರಿಂದ

ಶಂಕರಾಚಾರ್ಯರ ಜಯಂತಿ: 'ಶಂಕರ ವಿಜಯ' ಹರಿಕಥೆ: ಸುಮಿತ್ರಾನಂದ, ಆಯೋಜನೆ ಮತ್ತು ಸ್ಥಳ: ಅನುಸೂಯ ಆಶ್ರಮ, 3ನೇ ಮುಖ್ಯರಸ್ತೆ, ಕೈಗಾರಿಕಾ ನಗರ, ರಾಜಾಜಿನಗರ, ಸಂಜೆ 6.30

ಸೃಷ್ಟಿ–2024 ಉದ್ಘಾಟನೆ: ಅತಿಥಿಗಳು: ದೀಪಕ್ ಶ್ರೀವತ್ಸ, ಮನು ಸಾಳೆ, ಎಸ್. ವಿದ್ಯಾಶಂಕರ್, ಅಶಿಶ್ ಚೌಹಾಣ್, ಅಧ್ಯಕ್ಷತೆ: ಸಿ.ಎಸ್. ಸುಂದರ್ ರಾಜು, ಆಯೋಜನೆ: ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಸ್ಥಳ: ಏಟ್ರಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಹೆಬ್ಬಾಳ, ಮಧ್ಯಾಹ್ನ 3.30

ಚೈತನ್ಯ ಸಂಜೆ–910 'ಶರಣ ಶಿವನಾಗಮಯ್ಯ ಜಯಂತಿ' ಕುರಿತು ಉಪನ್ಯಾಸ: ರುದ್ರೇಶ್ ಅದರಂಗಿ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತಿ: ಮಂಜುಳಾ ಶಿವಾನಂದ್, ಗೀತಾ ಜಯಂತ್, ಪ್ರಮೀಳಾ ಗರಡಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆಎಸ್‌ಎಸ್ ಕಾಲೇಜಿನ ಸಭಾಂಗಣ, ಜಯನಗರ 8ನೇ ವಿಭಾಗ, ಸಂಜೆ 5.30

ಅನ್ನಪೂರ್ಣಾಂಬ ಸಮೇತ ನಗರೇಶ್ವರಸ್ವಾಮಿ ಬ್ರಹ್ಮರಥೋತ್ಸವ: ಬೆಳಿಗ್ಗೆ 8ಕ್ಕೆ ಮೂಲ ದೇವರುಗಳಿಗೆ ಪಂಚಾಮೃತ ಅಭಿಷೇಕ, 10.30ಕ್ಕೆ ಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.30ಕ್ಕೆ ಲಲಿತ ಸಹಸ್ರನಾಮ, 6.30ಕ್ಕೆ ಮೃಗಯಾತ್ರೋತ್ಸವ, ಕಥಾಶ್ರವಣ, ವಿಶೇಷ ಪೂಜೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಆಯೋಜನೆ: ಬಿ.ಎ.ಎಸ್. ವಿ. ನಗರ್ತ ಸಮಿತಿ, ಸ್ಥಳ: ನಗರೇಶ್ವರಸ್ವಾಮಿ ದೇವಸ್ಥಾನದ ಆವರಣ, ನಗರ್ತಪೇಟೆ

ಪ್ರಸನ್ನ ವೆಂಕಟರಮಣಸ್ವಾಮಿ ರಥೋತ್ಸವ: ಸಿಂಹವಾಹನೋತ್ಸವ, ಆಯೋಜನೆ: ಹಿಂದೂ ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ, ಕೋಟೆ; ಸಂಜೆ 7ರಿಂದ

ತಿಲಕನಗರ ಕರಗ ಮತ್ತು ಕೊಂಡ ನಡೆತ ಮಹೋತ್ಸವ: ಉಪಸ್ಥಿತಿ: ರಾಮಲಿಂಗಾರೆಡ್ಡಿ, ಸೌಮ್ಯರೆಡ್ಡಿ, ತೇಜಸ್ವಿಸೂರ್ಯ, ಆರ್.ವಿ. ದೇವರಾಜ್, ಸಿ.ಕೆ. ರಾಮಮೂರ್ತಿ, ಯು.ಬಿ. ವೆಂಕಟೇಶ್, ಉದಯ್ ಬಿ. ಗರುಡಾಚಾರ್, ಆಯೋಜನೆ: ಮಹಾಶಕ್ತಿ ಮಾರಿಅಮ್ಮ ದೇವಸ್ಥಾನ, ತಿಲಕನಗರ, ರಾತ್ರಿ 8

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.
nagaradalli_indu@prajavani.co.in

KIRLOSKAR ELECTRIC COMPANY LIMITED

REGD OFFICE: No.19, 2nd Main Road, Peenya 1st Stage, Phase-1, Peenya, Bengaluru - 560 058.
Phone no: 080-28397256; **Fax:** 080-28396727; **Website:** www.kirloskarelectric.com
Email: investors@kirloskarelectric.com; **CIN:** L31100KA1946PLC000415

EXTRACT OF STATEMENT OF AUDITED FINANCIAL RESULTS FOR THE QUARTER AND YEAR ENDED MARCH 31, 2024

(₹. in Lakhs)

Sr. No.	Particulars	STANDALONE				CONSOLIDATED			
		Quarter ended		Year ended		Quarter ended		Year ended	
		March 31, 2024 Audited	March 31, 2023 Audited	March 31, 2024 Audited	March 31, 2023 Audited	March 31, 2024 Audited	March 31, 2023 Audited	March 31, 2024 Audited	March 31, 2023 Audited
1	Total income from operations	17,077	14,621	56,528	48,963	17,081	14,620	56,534	49,580
2	Net Profit / (Loss) for the period (before Tax, Exceptional and/or Extraordinary items)	574	1,115	1,517	2,588	542	1,089	1,408	3,108
3	Net Profit / (Loss) for the period before tax (after Exceptional and/or Extraordinary Items)	574	1,115	1,517	2,588	542	1,089	1,408	3,108
4	Net Profit / (Loss) for the period after tax (after Exceptional and/or Extraordinary Items)	574	1,115	1,517	2,588	542	1,089	1,408	3,108
5	Total Comprehensive Income for the period [Comprising Profit / (Loss) for the period (after tax) and Other Comprehensive Income (after tax)]	(1,787)	(339)	(839)	1,066	(1,819)	(365)	(948)	1,586
6	Equity Share Capital	6,641	6,641	6,641	6,641	6,641	6,641	6,641	6,641
7	Reserves (excluding revaluation reserves as shown in the Balance Sheet of previous year)	NA	NA	NA	NA	NA	NA	NA	NA
8	Earnings Per Share (EPS) (₹.)								
	(a) Basic EPS before extra ordinary items (not annualised)	0.86	1.68	2.28	3.90	0.82	1.64	2.12	4.68
	(b) Diluted EPS before extra ordinary items (not annualised)	0.86	1.68	2.28	3.90	0.82	1.64	2.12	4.68
	(c) Basic EPS after extra ordinary items (not annualised)	0.86	1.68	2.28	3.90	0.82	1.64	2.12	4.68
	(d) Diluted EPS after extra ordinary items (not annualised)	0.86	1.68	2.28	3.90	0.82	1.64	2.12	4.68

NOTE:
1. The above audited standalone and consolidated financial results have been reviewed by the Audit Committee and approved by the Board of Directors at its meeting held on May 23, 2024.
2. The standalone and consolidated financial results of the Company for the quarter and year ended March 31, 2024 have been audited by its Statutory auditors.
3. The above is an extract of the detailed format of the audited financial results for the quarter and year ended March 31, 2024 filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015 as amended. The full format of the audited financial results are available on the stock exchange websites (www.bseindia.com, ww.nseindia.com) and also on the company's website (https://www.kirloskarelectric.com/investors/investors-information/financial.html).

Sd/-
Vijay R Kirloskar
Executive Chairman

Place : Bengaluru
Date : May 23, 2024

ಈಶಾನ್ಯ ವಿಭಾಗದ ಸೈಬರ್ ಕ್ರೈಂ ಪೊಲೀಸರ ತನಿಖೆ • ಮೂವರು ಆರೋಪಿಗಳ ಬಂಧನ

ಮೃತ ಪೊಲೀಸ್ ಹೆಸರಲ್ಲಿ ದಂಡ ವಸೂಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೃತ ಹೆಡ್‌ಕಾನ್‌ ಸ್ಟೆಬಲ್ ವೊಬ್ಬರ ಗುರುತಿನ ಚೀಟಿಯನ್ನು ದುರುಪಯೋಗಪಡಿಸಿಕೊಂಡು ಜನರಿಂದ ಸಂಚಾರ ನಿಯಮ ಉಲ್ಲಂಘನೆಯ ದಂಡ ವಸೂಲಿ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮುಖ್ಯಾಂಶಗಳು

- ಪೊಲೀಸರ ಹೆಸರಿನಲ್ಲಿ ನಕಲಿ ನೋಟಿಸ್
- ದಂಡ ಪಾವತಿಸದಿದ್ದರೆ ವಾಹನ ಜಪ್ತಿ ಬೆದರಿಕೆ
- ಪೊಲೀಸ್, ಸಾರಿಗೆ ಇಲಾಖೆ ಜಾಲತಾಣಗಳ ದುರುಪಯೋಗ

ಅಪರಾಧ ಸುದ್ದಿ

'ಕೋಲ್ಕತ್ತಾದ ರಂಜನ್ ಕುಮಾರ್ ಪೋರ್ಬಿ (30), ಇಸ್ಮಾಯಿಲ್ ಅಲಿ (30) ಮತ್ತು ಸುಭಿರ್ ಮಲ್ಲಿಕ್ (27) ಬಂಧಿತರು. ಇವರಿಂದ ಮೂರು ಮೊಬೈಲ್ ಜಪ್ತಿ ಮಾಡಲಾಗಿದೆ. ವಂಚನೆಗೆ ಬಳಸಿದ್ದ ಬ್ಯಾಂಕ್ ಖಾತೆಗಳ ಮಾಹಿತಿ ಕಲೆಹಾಕಿ, ವಹಿವಾಟು ಸ್ಥಗಿತಗೊಳಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಬೆಂಗಳೂರು ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿದ್ದ ಹೆಡ್‌ಕಾನ್‌ಸ್ಟೆಬಲ್‌ವೊಬ್ಬರು ಕಳೆದ ವರ್ಷ ಮೃತಪಟ್ಟಿದ್ದರು. ಜಾಲತಾಣವೊಂದರಲ್ಲಿ ಅಪ್‌ಲೋಡ್ ಮಾಡಿದ್ದ ಹೆಡ್ ಕಾನ್‌ಸ್ಟೆಬಲ್ ಅವರ ಗುರುತಿನ ಚೀಟಿ ಡೌನ್‌ಲೋಡ್ ಮಾಡಿಕೊಂಡಿದ್ದ ಆರೋಪಿಗಳು, ಭಾವಚಿತ್ರ ಮಾತ್ರ ಉಳಿಸಿಕೊಂಡು ಹೆಸರು ಬದಲಾಯಿಸಿದ್ದರು. ಅದೇ ಗುರುತಿನ ಚೀಟಿಗಳನ್ನು ಜನರಿಗೆ ಕಳುಹಿಸಿ, ನಂಬಿಸಿ ಹಣ ವಸೂಲಿ ಮಾಡುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'ಮೃತ ಹೆಡ್ ಕಾನ್‌ಸ್ಟೆಬಲ್ ಅವರ ಮಗಳು, ಆರೋಪಿಗಳ ಕೃತ್ಯದ ಬಗ್ಗೆದೂರು ನೀಡಿದ್ದರು. ತನಿಖೆ ಕೈಗೊಂಡು ಮೂವರೂ ಆರೋಪಿಗಳನ್ನು ಬಂಧಿಸಲಾಗಿದೆ. ಈ ಆರೋಪಿಗಳು, ಇದುವರೆಗೂ 100ಕ್ಕೂ ಹೆಚ್ಚು ಜನರನ್ನು ವಂಚಿಸಿರುವ ಮಾಹಿತಿ ಲಭ್ಯವಾಗಿದೆ. ಆದರೆ, ಯಾರೊಬ್ಬರೂ ದೂರು ನೀಡಿಲ್ಲ. ವಂಚನೆಗೀಡಾದವರು ಯಾರಾದರೂ ಇದ್ದರೆ, ಠಾಣೆಗೆ ದೂರು ನೀಡಬಹುದು' ಎಂದು ಕೋರಿದರು.

'₹500, ₹1,000 ದಂಡ'

'ಮೂವರು ಆರೋಪಿಗಳು, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದರೆಂಬ ಮಾಹಿತಿ ಲಭ್ಯವಾಗಿದೆ. ಆರೋಪಿಗಳ ನಕಲಿ ನೋಟಿಸ್‌ಗೆ ಹೆದರಿ, ₹500 ಹಾಗೂ ₹1,000 ಪಾವತಿ ಮಾಡಿದ್ದ ಜನರ ಸಂಖ್ಯೆಯೇ ಹೆಚ್ಚಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದಂಡ ಪಾವತಿ ನಂತರ ಆರೋಪಿಗಳು ಹಲವರಿಗೆ ರಶೀದಿ ನೀಡಿದ್ದಾರೆ' ಎಂದು ತಿಳಿಸಿವೆ.

ಬ್ಯಾಂಕ್ ಕೆಲಸಕ್ಕೆ ರಾಜೀನಾಮೆ, ವಂಚನೆಗೆ ಸಂಚು: 'ಆರೋಪಿ ರಂಜನ್‌ಕುಮಾರ್, ಕೋಲ್ಕತ್ತಾದ ಬ್ಯಾಂಕ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ. ಇನ್ನೊಬ್ಬ ಆರೋಪಿ ಇಸ್ಮಾಯಿಲ್ ಅಲಿ, ಸೈಬರ್ ಕೆಫೆ ತೆರೆದಿದ್ದ. ಮತ್ತೊಬ್ಬ ಆರೋಪಿ ಸುಭಿರ್ ಮಲ್ಲಿಕ್, ಜೆರಾಕ್ಸ್ ಮಳಿಗೆ ಇಟ್ಟುಕೊಂಡಿದ್ದ' ಎಂದು ಪೊಲೀಸರು ಹೇಳಿದರು.

ರಂಜನ್ ಕುಮಾರ್

ಇಸ್ಮಾಯಿಲ್ ಅಲಿ

ಸುಭಿರ್

'ಬ್ಯಾಂಕ್ ಕೆಲಸಕ್ಕೆ ರಾಜೀನಾಮೆ ನೀಡಿದ್ದ ರಂಜನ್‌ಕುಮಾರ್, 'ಬೆಂಗಳೂರಿನಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡುವವರು ಹೆಚ್ಚಿದ್ದು, ಪೊಲೀಸರ ಹೆಸರಿನಲ್ಲಿ ದಂಡ ವಸೂಲಿ ಮಾಡೋಣ' ಎಂಬುದಾಗಿ ಹೇಳಿ ಇತರೆ ಆರೋಪಿಗಳ ಜೊತೆ ಸೇರಿ ಸಂಚು ರೂಪಿಸಿದ್ದ' ಎಂದು ತಿಳಿಸಿದರು.

ಜಾಲತಾಣಗಳಿಂದ ಮಾಹಿತಿ: 'ಬೆಂಗಳೂರಿನ ಹಲವು ವಾಹನಗಳ ಫೋಟೊವನ್ನು ಆರೋಪಿಗಳು ಗೂಗಲ್ ಜಾಲತಾಣದ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುತ್ತಿದ್ದರು. ಅದೇ ವಾಹನಗಳ ನೋಂದಣಿ ಸಂಖ್ಯೆಯನ್ನು ಸಂಚಾರ ಪೊಲೀಸರ ಜಾಲತಾಣದಲ್ಲಿ ನಮೂದಿಸಿ, ದಂಡದ ಮಾಹಿತಿ ತಿಳಿದುಕೊಳ್ಳುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ದಂಡ ಬಾಕಿ ಇರುತ್ತಿದ್ದ ವಾಹನಗಳ ನೋಂದಣಿ ಸಂಖ್ಯೆಯನ್ನು ಸಾರಿಗೆ ಇಲಾಖೆಯ ಜಾಲತಾಣದಲ್ಲಿ ನಮೂದಿಸುತ್ತಿದ್ದರು. ವಾಹನಗಳ ಮಾಲೀಕರ ಹೆಸರು, ವಿಳಾಸ ಹಾಗೂ ಮೊಬೈಲ್ ಸಂಖ್ಯೆ ಲಭ್ಯವಾಗುತ್ತಿತ್ತು' ಎಂದರು.

ವಾಟ್ಸ್‌ಆ್ಯಪ್‌ಗೆ ದಂಡದ ನೋಟಿಸ್: 'ದಂಡದ ನಕಲಿ ನೋಟಿಸ್ ಸಿದ್ಧಪಡಿಸುತ್ತಿದ್ದ ಆರೋಪಿಗಳು, ವಾಹನಗಳ ಮಾಲೀಕರ ವಾಟ್ಸ್‌ಆ್ಯಪ್‌ಗೆ ಕಳುಹಿಸುತ್ತಿದ್ದರು. ಇದರ ಜೊತೆಯಲ್ಲಿ ಹೆಡ್ ಕಾನ್‌ಸ್ಟೆಬಲ್ ಅವರ ಗುರುತಿನ ಚೀಟಿ ಲಗತ್ತಿಸುತ್ತಿದ್ದರು. ಅದು ನಿಜವೆಂದು ನಂಬಿದ್ದ ಹಲವರು, ಆರೋಪಿಗಳು ಸೂಚಿಸುತ್ತಿದ್ದ ಖಾತೆಗಳಿಗೆ ಹಣ ಜಮೆ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು. 'ಕೋಲ್ಕತ್ತಾದಿಂದಲೇ ಆರೋಪಿಗಳು ಕೃತ್ಯ ಎಸಗುತ್ತಿದ್ದರು. ಈ ಬಗ್ಗೆ ಸಂಚಾರ ಪೊಲೀಸರಿಗೆ ಮಾಹಿತಿ ಲಭ್ಯವಾಗಿತ್ತು. ಅವರು ನೀಡಿದ್ದ ಸುಳಿವು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಇವರ ಹಿನ್ನೆಲೆ ಏನು ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

ಪ್ರಭುದ್ಯಾ ಕೊಲೆ: ಇಬ್ಬರ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎ ವಿದ್ಯಾರ್ಥಿನಿ ಪ್ರಭುದ್ಯಾ (20) ಕೊಲೆ ಆರೋಪದಡಿ ಇಬ್ಬರನ್ನು ವಶಕ್ಕೆ ಪಡೆದಿರುವ ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು, ವಿಚಾರಣೆ ನಡೆಸುತ್ತಿದ್ದಾರೆ.

ಬೃಂದಾವನ ಲೇಔಟ್‌ನಲ್ಲಿರುವ ಮನೆಯೊಂದರಲ್ಲಿ ಪ್ರಭುದ್ಯಾ ಮೃತಪಟ್ಟಿದ್ದರು. ಅನುಮಾನಾಸ್ಪದ ಸಾವು ಆರೋಪದಡಿ ಆರಂಭದಲ್ಲಿ ಪ್ರಕರಣ ದಾಖಲಾಗಿತ್ತು. ಕೊಲೆ ಆರೋಪದಡಿ ತಾಯಿ ದೂರು ನೀಡಿದ್ದರು. ಕೊಲೆ ಪ್ರಕರಣವಾಗಿ ಪರಿಗಣಿಸಿ ತನಿಖೆ ನಡೆಸುತ್ತಿರುವ ಪೊಲೀಸರು, ಹೆಚ್ಚಿನ ಮಾಹಿತಿ ಕಲೆಹಾಕುತ್ತಿದ್ದಾರೆ. 'ಮನೆ ಅಕ್ಕ–ಪಕ್ಕದ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿ ಹಾಗೂ ಸ್ಥಳೀಯರ ಹೇಳಿಕೆ ಆಧರಿಸಿ ಇಬ್ಬರು ಅನುಮಾನಾಸ್ಪದ ವ್ಯಕ್ತಿಗಳನ್ನು ಗುರುತಿಸಲಾಗಿದೆ. ಈ ಪೈಕಿ ಒಬ್ಬಾತ ಬಾಲಕ. ಇಬ್ಬರನ್ನೂ ವಿಚಾರಣೆಗೆಂದು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಭುದ್ಯಾ ಕೈ ಹಾಗೂ ಕತ್ತಿನಲ್ಲಿ ಗಾಯವಾಗಿದೆ. ಹೀಗಾಗಿ, ಸಾವಿನ ಬಗ್ಗೆ ಅನುಮಾನಗಳಿವೆ. ವಶಕ್ಕೆ ಪಡೆದಿರುವ ಇಬ್ಬರಿಗೂ ಹಾಗೂ ಪ್ರಭುದ್ಯಾ ಸಾವಿಗೂ ಸಂಬಂಧವಿದೆಯಾ? ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ಮೂಲಗಳು ತಿಳಿಸಿವೆ.

ರಸ್ತೆ ಬದಿ ಅಂಗಡಿಗಳ ತೆರವು

ಪ್ರಜಾವಾಣಿ ವಾರ್ತೆ

ನೆಲಮಂಗಲ: ವಾಹನ ದಟ್ಟಣೆ ಉಂಟಾಗುತ್ತದೆ ಎಂದು ರಸ್ತೆ ಬದಿ ವ್ಯಾಪಾರಿಗಳನ್ನು ಹಾಗೂ ಅಂಗಡಿಗಳ ಮಾಲೀಕರು ಮಾಡಿಕೊಂಡಿದ್ದ ಒತ್ತುವರಿಯನ್ನು ನಗರಸಭೆ ಅಧಿಕಾರಿಗಳು ತೆರವುಗೊಳಿಸಿದರು.

ಪಟ್ಟಣದ ಸೊಂಡೇಕೊಪ್ಪ ರಸ್ತೆಯಲ್ಲಿ ತಳ್ಳುಗಾಡಿಯಲ್ಲಿ ವ್ಯಾಪಾರ ಮಾಡುತ್ತಿದ್ದವರು, ರಸ್ತೆಗೆ ಅಂಗಡಿ ವಿಸ್ತರಿಸಿಕೊಂಡವನ್ನು ನಗರಸಭೆ ಅಧಿಕಾರಿಗಳು, ಆರೋಗ್ಯಾಧಿಕಾರಿಗಳು ಪೊಲೀಸರ ಸಹಾಯದಿಂದ ತೆರವುಗೊಳಿಸಿದರು. ತಳ್ಳುಗಾಡಿಗಳನ್ನು ಕಸದ ಗಾಡಿಯಲ್ಲಿ ತುಂಬಿಸಿದರು.

'ಇಲ್ಲೇ ಏಕೆ ತೆರವು ಮಾಡುತ್ತಿದ್ದೀರಿ? ಎಲ್ಲ ಕಡೆ ಯಾಕೆ ಕ್ರಮ ಕೈಗೊಳ್ಳುತ್ತಿಲ್ಲ? ಬಡವರಿಗೆ ಅನ್ಯಾಯ ಮಾಡುತ್ತಿದ್ದೀರಿ' ಎಂದು ಸ್ಥಳೀಯರು ಅಧಿಕಾರಿಗಳೊಂದಿಗೆ ವಾಗ್ವಾದ ನಡೆಸಿದರು. ಪೊಲೀಸರು ವಾತಾವರಣವನ್ನು ತಿಳಿಗೊಳಿಸಿದರು.

ರಸ್ತೆ ಬದಿ ಅಂಗಡಿಗಳನ್ನು ತೆರವುಗೊಳಿಸುವ ಸಂದರ್ಭ ಅಧಿಕಾರಿಗಳು ಮತ್ತು ವ್ಯಾಪಾರಸ್ಥರ ನಡುವೆ ವಾಗ್ವಾದ ನಡೆಯಿತು

ಅಂಗಡಿಗಳ ಮುಂದೆ ಇದ್ದ ಸಾಮಗ್ರಿಗಳನ್ನು ಕೂಡ ಅಧಿಕಾರಿಗಳು ತೆರವುಗೊಳಿಸಿದರು. 'ರಸ್ತೆಯನ್ನು ಅಳತೆ ಮಾಡಬೇಕು. ಎಲ್ಲಿಯವರೆಗೆ ರಸ್ತೆ ಇದೆ? ಎಲ್ಲಿ ಪಾದಚಾರಿ ಮಾರ್ಗ ಇದೆ ಎಂಬುದನ್ನು ಗುರುತಿಸಿ ನೋಟಿಸ್ ನೀಡಿದರೆ ಅನುಕೂಲವಾಗುತ್ತದೆ. ಮೊದಲು ಪಾದಚಾರಿ ಮಾರ್ಗ ನಿರ್ಮಾಣ ಮಾಡಿ. ಈಗಾಗಲೇ ರಸ್ತೆ ವಿಸ್ತರಣೆಯಿಂದ ನಾವು ಸಾಕಷ್ಟು ಜಾಗ ಕಳೆದುಕೊಂಡಿದ್ದೇವೆ. ಹೀಗೆ ಏಕಾಏಕಿ ಬಂದು ತೆರವುಗೊಳಿಸಿದರೆ ಬಡವರ, ವ್ಯಾಪಾರಸ್ಥರ ಗತಿ ಏನು' ಎಂದು ವಾಣಿಜ್ಯ ಮಳಿಗೆಯ ಮಾಲಿಕ ಸಂತೋಷ್‌ಕುಮಾರ್ ಪ್ರಶ್ನಿಸಿದರು.

ಗಾಂಜಾ ಗಿಡ ಬೆಳೆದ ಆರೋಪಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಫಿ ತೋಟದ ಮಧ್ಯೆ ಎಂಟು ಗಾಂಜಾ ಗಿಡಗಳನ್ನು ಬೆಳೆದಿದ್ದ ಆರೋಪದ ಅಡಿ ಬಂಧನಕ್ಕೆ ಒಳಗಾಗಿದ್ದ ವ್ಯಕ್ತಿಯೊಬ್ಬರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಪ್ರಕರಣದ ಆರೋಪಿಯಾದ ಕೆ.ಎಂ. ರಾಜೇಂದ್ರ (55) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ರಜಾಕಾಲದ ಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ಜಿ. ಉಮಾ ಪುರಸ್ಕರಿಸಿದ್ದಾರೆ. 'ಅರ್ಜಿದಾರರ ವಿರುದ್ಧದ ಆರೋಪ ಗಂಭೀರ ಸ್ವರೂಪದಿಂದ ಕೂಡಿದೆ. ತೋಟದಲ್ಲಿ ಎಂಟು ಗಾಂಜಾ ಗಿಡಗಳನ್ನು ಬೆಳೆದಿದ್ದು, ಅದನ್ನು ಪೊಲೀಸರು ವಶಪಡಿಸಿಕೊಂಡು ಸ್ಥಳವನ್ನು ಮಹಜರು ಮಾಡಿದ್ದಾರೆ. ಪ್ರಕರಣದ ತನಿಖೆ ಪ್ರಗತಿಯಲ್ಲಿದೆ. ಮುಂದಿನ ವಿಚಾರಣೆಗೆ ಅರ್ಜಿದಾರರ ಅಗತ್ಯವಿಲ್ಲವಾಗಿದೆ. ಹಾಗಾಗಿ, ಜಾಮೀನು ಮಂಜೂರು ಮಾಡಲಾಗುತ್ತಿದೆ' ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಆರೋಪಿಯು ₹2 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಮತ್ತು ಅಷ್ಟೇ ಮೊತ್ತಕ್ಕೆ ಇಬ್ಬರ ಭದ್ರತಾ ಖಾತರಿ ನೀಡಬೇಕು. ಇದೇ ಮಾದರಿಯ ಅಪರಾಧ ಕೃತ್ಯದಲ್ಲಿ ಭಾಗಿಯಾಗಬಾರದು' ಎಂಬ ಷರತ್ತುಗಳನ್ನು ವಿಧಿಸಲಾಗಿದೆ.

ಪ್ರಕರಣವೇನು?: ಖಚಿತ ಮಾಹಿತಿಯ ಮೇರೆಗೆ ಚಿಕ್ಕಮಗಳೂರು ಸಿಇಎನ್ ಠಾಣಾ ಪೊಲೀಸರು, 2024ರ ಮಾರ್ಚ್ 6ರಂದು ಬೆಳಿಗ್ಗೆ 8 ಗಂಟೆಗೆ ಅವತಿ ಹೋಬಳಿಯ ಕೆಳಹೊಲಗದ್ದೆ ಗ್ರಾಮದ ನಿವಾಸಿ ರಾಜೇಂದ್ರ ಎಂಬುವರ ಕಾಫಿ ತೋಟಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು.

ಈ ವೇಳೆ ಕಾಫಿ ಗಿಡಗಳ ಮಧ್ಯೆ, ಮಾರಾಟ ಮಾಡುವ ಉದ್ದೇಶದಿಂದ 8 ಗಾಂಜಾ ಗಿಡಗಳನ್ನು ಬೆಳೆದಿರುವುದು ಕಂಡುಬಂದಿತ್ತು. ಅದರಂತೆ ₹1 ಸಾವಿರ ಬೆಲೆ ಬಾಳುವ 100 ಗ್ರಾಂನಷ್ಟು ಗಾಂಜಾ ಗಿಡ, ಅದರ ಹಸಿ ಬೇರು, ಕಾಂಡ, ಕಡ್ಡಿ, ಸೊಪ್ಪು, ಮೊಗ್ಗುಗಳನ್ನು ವಶಪಡಿಸಿಕೊಂಡಿದ್ದ ಪೊಲೀಸರು ರಾಜೇಂದ್ರ ಅವರನ್ನು ಬಂಧಿಸಿದ್ದರು.

ಗಾಂಜಾ ಗಿಡ ಬೆಳೆಸಿಕೊಡುವಂತೆ ಹೇಳಿದ್ದ ಅದೇ ಗ್ರಾಮದ ಲಕ್ಷ್ಮಣ್ ಎಂಬುವರನ್ನು ಎರಡನೇ ಆರೋಪಿಯನ್ನಾಗಿಸಿದ್ದರು.

ಪಂಚತಾರಾ ಹೋಟೆಲ್‌ಗಳಿಗೆ ಬಾಂಬ್ ಬೆದರಿಕೆ ಇ–ಮೇಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 3 ಪಂಚತಾರಾ ಹೋಟೆಲ್‌ಗಳಿಗೆ ಬಾಂಬ್ ಬೆದರಿಕೆ ಇ–ಮೇಲ್ ಬಂದಿದ್ದು, ಪೊಲೀಸರು ಹೋಟೆಲ್‌ಗಳಲ್ಲಿ ಗುರುವಾರ ತೀವ್ರ ಶೋಧ ನಡೆಸಿದರು.

'ಎಲೆಕ್ಟ್ರಾನಿಕ್ ಸಿಟಿ ಠಾಣೆ ವ್ಯಾಪ್ತಿಯಲ್ಲಿರುವ ದಿ ಒಟೆರಾ, ಒಬೆರಾಯ್ ಗ್ರೂಪ್ ಹಾಗೂ ಐಎಚ್‌ಸಿಎಲ್ ಟಾಟಾ ಪಂಚತಾರಾ ಹೋಟೆಲ್‌ಗಳಿಗೆ ಬಾಂಬ್ ಬೆದರಿಕೆ ಇ–ಮೇಲ್ ಬಂದಿದೆ. ಮಾಹಿತಿ ಲಭ್ಯವಾಗುತ್ತಿದ್ದಂತೆ ಹೋಟೆಲ್‌ಗಳಿಗೆ ಹೋಗಿ ತಪಾಸಣೆ ನಡೆಸಲಾಯಿತು. ಯಾವುದೇ ಅನುಮಾನಾಸ್ಪದ ವಸ್ತು ಸಿಗಲಿಲ್ಲ' ಎಂದು ಪೊಲೀಸರು ಹೇಳಿದರು. 'ಮೂರು ಹೋಟೆಲ್‌ಗಳ ಇ–ಮೇಲ್‌ಗೆ ಗುರುವಾರ ನಸುಕಿನಲ್ಲಿ ಇ–ಮೇಲ್ ಬಂದಿತ್ತು. ಗಾಬರಿಗೊಂಡ ಸಿಬ್ಬಂದಿ, ಠಾಣೆಗೆ ಮಾಹಿತಿ ನೀಡಿದ್ದರು. ಕೆಲ ನಿಮಿಷಗಳಲ್ಲಿ ಸ್ಥಳಕ್ಕೆ ಹೋಗಿದ್ದ ಶ್ವಾನ ದಳ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ, ಗ್ರಾಹಕರು ಹಾಗೂ ಸಿಬ್ಬಂದಿಯಿಂದ ಹೋಟೆಲ್‌ನಿಂದ ಹೊರಗೆ ಕಳುಹಿಸಿ ತಪಾಸಣೆ ನಡೆಸಿದರು. ಇದೊಂದು ಹುಸಿ ಬೆದರಿಕೆ ಎಂಬುದು ಗೊತ್ತಾಗುತ್ತಿದ್ದಂತೆ ಸಿಬ್ಬಂದಿ ಹಾಗೂ ಗ್ರಾಹಕರು ನಿಟ್ಟುಸಿರು ಬಿಟ್ಟರು' ಎಂದರು.

ಅರಣ್ಯ ಭೂಮಿ ಒತ್ತುವರಿ ತೆರವು

ಬೆಂಗಳೂರು: ಬನಶಂಕರಿ ಬಳಿಯ ಬಿ.ಎಂ.ಕಾವಲ್ ಸರ್ವೆ ನಂಬರ್ 92ರಲ್ಲಿ ಒತ್ತವರಿ ಮಾಡಲಾಗಿದ್ದ ₹60 ಕೋಟಿ ಮೌಲ್ಯದ 5 ಎಕರೆ ಅರಣ್ಯ ಭೂಮಿ ಒತ್ತುವರಿ ತೆರವು ಮಾಡಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಬಿ.ಎಂ. ಕಾವಲ್ ವ್ಯಾಪ್ತಿಯ ಗೊಟ್ಟಿಗೆರೆಪಾಳ್ಯದ ಅರಣ್ಯ ಭೂಮಿ ಒತ್ತುವರಿ ತೆರವು ಮಾಡಲಾಗಿದ್ದು, ಈ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ ಎಂದರು.

ಕರಗ ಉತ್ಸವ

ನಗರದ ಕಲಾಸಿಪಾಳ್ಯದಲ್ಲಿರುವ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಶ್ರೀ ಪೇರಿಮಲ್ ದೇವಸ್ಥಾನ ಟ್ರಸ್ಟ್ ಆಯೋಜಿಸಿದ್ದ ಅಗ್ನಿಕುಂಡ ಮತ್ತು ಕರಗ ಉತ್ಸವದಲ್ಲಿ ಅರ್ಚಕ ಕರಗ ಹೊತ್ತು ದೇವಸ್ಥಾನದಿಂದ ಹೊರಬಂದಾಗ ಭಕ್ತರು ಹೂವು ಎರಚಿ ಸ್ವಾಗತಿಸಿದರು
-ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ವಿಜಯನಗರದಲ್ಲಿ ಸರಣಿ ಅಪಘಾತ: ಎನ್‌ಆರ್‌ಐ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಸರಣಿ ಅಪಘಾತ ಸಂಭವಿಸಿದ್ದು, ಅತಿ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆ ಆರೋಪದಡಿ ಅನಿವಾಸಿ ಭಾರತೀಯ (ಎನ್‌ಆರ್‌ಐ) ಶ್ರೀಕಾಂತ್ ಶರ್ಮಾ ಅವರನ್ನು ಸಂಚಾರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಮೇ 21ರಂದು ನಡೆದಿದ್ದ ಅಪಘಾತದ ಬಗ್ಗೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಕಾರಿನ ನೋಂದಣಿ ಸಂಖ್ಯೆ ಆಧರಿಸಿ ಆರೋಪಿ ಶ್ರೀಕಾಂತ್‌ನನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಲಂಡನ್‌ನಲ್ಲಿದ್ದ ಶ್ರೀಕಾಂತ್ ಶರ್ಮಾ ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದ. ವಿಜಯನಗರ ಠಾಣೆ ವ್ಯಾಪ್ತಿಯಲ್ಲಿ ಮೇ 21ರಂದು ಕಾರಿನಲ್ಲಿ ಹೊರಟಿದ್ದ. ಎನ್‌ಪಿಎಸ್ ಜಂಕ್ಷನ್ ಬಳಿ ಅಡ್ಡಾದಿಡ್ಡಿ ಕಾರು ಚಲಾಯಿಸಿದ್ದ. ಈತನ ಕಾರು, ರಸ್ತೆ ಬದಿ ನಿಂತಿದ್ದ ಇನ್ನೊಂದು ಕಾರಿಗೆ ಡಿಕ್ಕಿ ಹೊಡೆದಿತ್ತು.'

'ಅಪಘಾತದ ಬಳಿಕ ಕಾರಿನ ಸಮೇತ ಆರೋಪಿ ಪರಾರಿಯಾಗಿದ್ದ. ಸುಮ್ಮನಹಳ್ಳಿ ರಸ್ತೆಯಲ್ಲೂ ಅತಿ ವೇಗವಾಗಿ ಕಾರು ಚಲಾಯಿಸಿದ್ದ. ಅಲ್ಲಿಯೂ 2 ಬೈಕ್‌ಗಳಿಗೆ ಕಾರು ಡಿಕ್ಕಿ ಹೊಡೆದಿತ್ತು. ರಸ್ತೆ ಬದಿ ಆಟವಾಡುತ್ತಿದ್ದ ಇಬ್ಬರು ಮಕ್ಕಳಿಗೂ ಕಾರು ಗುದ್ದಿತ್ತು. ಮಕ್ಕಳು ಗಾಯಗೊಂಡಿದ್ದು, ಚಿಕಿತ್ಸೆ ಪಡೆದುಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಪಘಾತ ಸ್ಥಳದಲ್ಲಿ ಸೇರಿದ್ದ ಸ್ಥಳೀಯರು, ಕಾರು ನಿಲ್ಲಿಸುವಂತೆ ಹೇಳಿದ್ದರು. ಅಷ್ಟಾದರೂ ಆರೋಪಿ, ಅಲ್ಲಿಂದ ಹೊರಟು ಪರಾರಿಯಾಗಿದ್ದ. ಸ್ಥಳಕ್ಕೆ ಹೋಗಿದ್ದ ಸಿಬ್ಬಂದಿ, ಸ್ಥಳೀಯರಿಂದ ಮಾಹಿತಿ ಪಡೆದಿದ್ದರು' ಎಂದು ಮೂಲಗಳು ತಿಳಿಸಿವೆ.

PVR - INOX CINEMAS {DIRECTORS CUT, FORUM REX WALK, 6:55 p.m. | NEXUS FORUM MALL, KORMANGALA, 10:00, 4:20 p.m., IN ATMOS, 10:15 p.m. | ORION MALL, YESHWANTPUR, 10:00, 4:10, 9:45 p.m. | VAISHNAVI SAPPHIRE MALL, TUMKUR ROAD, 12:15, 6:00 p.m. | VEGA CITY MALL, 1:00, 7:10 p.m., IN ATMOS, 10:35, 4:15, 10:15 p.m. | MSR REGALIA, 12:10, 6:05 p.m. | PHOENIX MARKET CITY, K.R. PURAM, 10:05, 1:05, 6:50 p.m. | GT WORLD MALL, 12:05, 6:15 p.m. | VR MALL, 10:35, 4:15, 10:15 p.m. | SPIRIT MALL, 7:35 p.m. | GLOBAL MALL, NAYANDALLI, 10:05, 9:20 p.m. | SUPERPLEX FALCON CITY, 10:25, 4:15, 7:30, 10:15 p.m. | MALL OF ASIA, 11:00, 3:15, 10:20 p.m. | MANTRI MALL, 10:00, 12:40, 6:50, 9:50 p.m. | CENTRAL MALL, J.P.NAGAR, 12:55, 7:05 p.m., IN ATMOS, 9:55, 10:20 p.m. | GARUDA MALL, MAGRATH ROAD, 11:15, 4:30, 7:25, 10:20 p.m. | LIDO,9:55, 7:15, 9:40 p.m. | GARUDA, YELAHANKA, 10:25, 1:15, 10:00 p.m. | SBR HORIZON MALL, 9:50, 10:10 p.m., IN ATMOS, 1:20, 7:25 p.m. | VALUE NEIGHBOURHOOD MALL, 10:15, 12:30, 7:35 p.m.} | CINEPOLIS CINEMAS {ROYAL MEENAKSHI MALL, 11:00, 4:40, 7:00, 10:20 p.m. | ETA MALL, BINNY MILL, 10:00, 11:10, 2:00, 4:50, 7:40, 10:30 p.m. | EAST ORION MALL, 10:45, 4:35, 7:25, 10:15 p.m. | SHANTINIKETAN, 10:00, 11:00, 1:50, 4:40, 7:30, 10:20 p.m. | LULU MALL (TRD), 10:20, 1:10, 7:00, 9:50 p.m. | LULU MALL (VIP), 10:30, 7:25, 10:15 p.m.} | GOPALAN CINEMAS {ARCH MALL, 11:30, 5:00, 10:00 p.m. | GRAND MALL, 11:15, 4:45, 10:00 p.m. | INNOVATION MALL, 10:00, 2:05, 7:30 p.m.} | INNOVATIVE {MARATHHALLI, 10:15, 1:00, 4:00, 6:40, 9:30 p.m.} | CINEPHILE {HSR LAYOUT, 11:00, 4:05 p.m.} | PVR - INOX CINEMAS {S MALL, TUMKUR, 10:15, 1:10, 7:15 p.m.} | BHARATH CINEMAS {MANGALORE, 2:45, 8:00 p.m. | MANIPAL, 1:45, 4:45, 7:35 p.m. | SHIMOGA, 5:00, 7:30, 10:15 p.m.} | DRC CINEMAS {MYSORE, 1:35, 4:25 p.m.}.

FARNAZ

ಸಿಐಡಿ ದಾಳಿ; 9 ನಕ್ಷತ್ರ ಆಮೆ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲ ಹಾಗೂ ಪಂತರಪಾಳ್ಯದಲ್ಲಿರುವ ಎರಡು ಸ್ಥಳಗಳ ಮೇಲೆ ಸಿಐಡಿ ಅರಣ್ಯ ವಿಭಾಗದ ಅಧಿಕಾರಿಗಳು ದಾಳಿ ಮಾಡಿದ್ದು, 9 ನಕ್ಷತ್ರ ಆಮೆಗಳನ್ನು ರಕ್ಷಿಸಿದ್ದಾರೆ.

'ಕೋರಮಂಗಲದ ಬಿಲಿಯನೇರ್ ಸ್ಟ್ರೀಟ್‌ನಲ್ಲಿರುವ ಉದ್ಯಮಿ ರೋಹಿ ಅವರ ಮನೆಯಲ್ಲಿ ನಕ್ಷತ್ರ ಆಮೆಗಳನ್ನು ಅಕ್ರಮವಾಗಿ ಇಟ್ಟುಕೊಳ್ಳಲಾಗಿತ್ತು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆಮೆಗಳನ್ನು ರಕ್ಷಿಸಲಾಗಿದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ಮನೆಯ ಮೇಲ್ವಿಚಾರಕ ಬಾಲಾಜಿ ಎಂಬುವವರನ್ನು ವಶಕ್ಕೆ ಪಡೆಯಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ನಕ್ಷತ್ರ ಆಮೆಗಳನ್ನು ಮನೆಯಲ್ಲಿ ಇಟ್ಟುಕೊಂಡರೆ ಒಳ್ಳೆಯದಾಗುತ್ತದೆ. ವ್ಯವಹಾರದಲ್ಲಿ ಲಾಭವಾಗಿ ಆದಾಯ ದುಪ್ಪಟ್ಟಾಗುತ್ತದೆ. ಆರೋಗ್ಯ ಉತ್ತಮವಾಗಿರುತ್ತದೆ' ಎಂಬುದಾಗಿ ಜ್ಯೋತಿಷಿಯೊಬ್ಬರು ಹೇಳಿದ್ದರು. ಈ ಮಾತು ನಂಬಿದ್ದ ಉದ್ಯಮಿ, ಮನೆಯಲ್ಲಿ ನಕ್ಷತ್ರ ಆಮೆಗಳನ್ನು ಇರಿಸಿಕೊಂಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ.'

'ನಕ್ಷತ್ರ ಆಮೆಗಳನ್ನು ಎಲ್ಲಿಂದ ತಂದಿದ್ದರು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ಮನೆಯಲ್ಲಿದ್ದ ಬಾಲಾಜಿಯನ್ನು ವಿಚಾರಣೆ ನಡೆಸಲಾಗುತ್ತಿದೆ. ಮಾಲೀಕ ರೋಹಿ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ' ಎಂದು ಮೂಲಗಳು ತಿಳಿಸಿವೆ.

'ಪಂತರಪಾಳ್ಯದಲ್ಲೂ ಸ್ಥಳವೊಂದರ ಮೇಲೆ ದಾಳಿ ಮಾಡಿ, ಕಾರ್ತಿಕ್ ಎಂಬುವವರನ್ನು ವಶಕ್ಕೆ ಪಡೆಯಲಾಗಿದೆ. ಇವರ ಬಳಿಯಿಂದಲೂ ನಕ್ಷತ್ರ ಆಮೆಗಳನ್ನು ರಕ್ಷಿಸಲಾಗಿದೆ' ಎಂದು ಹೇಳಿವೆ.

ರಸ್ತೆ ಗುಂಡಿಗೆ ತಾತ್ಕಾಲಿಕ ಮುಕ್ತಿ

ಹೆಸರಘಟ್ಟ: ಮಾಕಳಿ–ಹುಸ್ಕೂರು ರಸ್ತೆಯಲ್ಲಿ ಉಂಟಾಗಿದ್ದ ಬೃಹತ್ ಗುಂಡಿಯನ್ನು ಮುಚ್ಚಲಾಗಿದೆ.

ಈ ರಸ್ತೆಯಲ್ಲಿ ಗುಂಡಿಬಿದ್ದಿರುವ ಕುರಿತು ಮೇ 15ರಂದು 'ಪ್ರಜಾವಾಣಿ'ಯಲ್ಲಿ ವರದಿ ಪ್ರಕಟಿಸಲಾಗಿತ್ತು. ಇದನ್ನು ಗಮನಿಸಿದ ಪಂಚಾಯಿತಿ ಅಧಿಕಾರಿಗಳು ಮುಖ್ಯರಸ್ತೆಯಲ್ಲಿ ಆಳವಾಗಿ ಬಿದ್ದಿದ್ದ ಗುಂಡಿಯನ್ನು ಮಣ್ಣು ಹಾಕಿ ಮುಚ್ಚಿಸಿ ವಾಹನಗಳು ಸರಾಗವಾಗಿ ಸಂಚರಿಸುವಂತೆ ಮಾಡಿದ್ದಾರೆ.

'ಗುಂಡಿಗೆ ಡಾಂಬರು ಹಾಕಿ ಶಾಶ್ವತವಾಗಿ ಪರಿಹಾರ ಕಲ್ಪಿಸದೇ ಗುಂಡಿಗೆ ಮಣ್ಣು ತುಂಬಿದ್ದಾರೆ' ಎಂದು ಸ್ಥಳೀಯರು ದೂರಿದ್ದಾರೆ. 'ಮಳೆ ಬಂದರೆ ಗುಂಡಿಯಲ್ಲಿನ ಮಣ್ಣು ಕೊಚ್ಚಿಹೋಗಿ ಮತ್ತೆ ಗುಂಡಿ ಬೀಳುವ ಸಾಧ್ಯತೆ ಇದೆ. ಹಾಗಾಗಿ, ತಕ್ಷಣವೇ ಡಾಂಬರೀಕರಣ ಮಾಡಬೇಕು' ಎಂದು ಸ್ಥಳೀಯರು ಆಗ್ರಹಿಸಿದ್ದಾರೆ. 'ಈ ಮುಖ್ಯರಸ್ತೆ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿದೆ. ಡಾಂಬರ್ ಹಾಕಿ ರಸ್ತೆ ಸರಿಪಡಿಸುವಂತೆ ಕೋರಿ ಇಲಾಖೆಗೆ ಪತ್ರ ಬರೆಯಲಾಗಿದೆ' ಎಂದು ಸ್ಥಳೀಯ ಗ್ರಾಮ ಪಂಚಾಯಿತಿ ಅಧಿಕಾರಿ ತಿಳಿಸಿದ್ದಾರೆ.

ಅಂದ್ರಹಳ್ಳಿಯ ವಿದ್ಯಾಮಾನ್ಯ ಶಾಲೆಯ ಮಕ್ಕಳಿಂದ ಕುಹೂ ಕುಹೂ ಕೋಗಿಲೆ ನಾಟಕ ಪ್ರದರ್ಶನ ನಡೆಯಿತು

'ಕುಹೂ ಕುಹೂ...' ನಾಟಕ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಅಂದ್ರಹಳ್ಳಿಯ ವಿದ್ಯಾಮಾನ್ಯ ವಿದ್ಯಾ ಕೇಂದ್ರ ಶಾಲೆಯ 'ವಿದ್ಯಾಮಾನ್ಯ ವಿಶುವಲ್ಸ್' ರಂಗವೇದಿಕೆಯಲ್ಲಿ ಮಕ್ಕಳಿಂದ 'ಕುಹೂ ಕುಹೂ ಕೋಗಿಲೆ'ಯ ನಾಟಕ ಕಲಾ ಪ್ರದರ್ಶನ ನಡೆಯಿತು.

ವಿದ್ಯಾಮಾನ್ಯ ವಿದ್ಯಾ ಕೇಂದ್ರದ ಗೌರವ ಸಂಸ್ಥಾಪಕ ರಮೇಶ ಸೌಂದರ್ಯ ಮತ್ತು 'ಸಂಸ್ಕಾರ ಭಾರತಿ'ಯ ಶ್ರೀಪತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವಿದ್ದು ಉಚ್ಚಿಲ್ ನಿರ್ದೇಶನದಲ್ಲಿ, ದಿವಾಕರ್ ಕಟೀಲ್ ಅವರ ಸಂಗೀತದಲ್ಲಿ 'ಕುಹೂ ಕುಹೂ ಕೋಗಿಲೆ' ಮೂಡಿ ಬಂದಿತ್ತು.

ಮಂಜುನಾಥ್ ಬೇಲಿಕೆರೆ ಬರೆದು ರಚಿಸಿದ ಈ ನಾಟಕವು ಕಲಾರಸಿಕರ ಮನಸೂರೆಗೊಂಡಿತು. 'ವಿದ್ಯಾಮಾನ್ಯ ವಿಶುವಲ್ಸ್' ಮಕ್ಕಳಿಗೆ ರಂಗ ಶಿಕ್ಷಣವನ್ನು ಒದಗಿಸುವ ಮೂಲಕ ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಮತ್ತು ಶೈಕ್ಷಣಿಕ ಬೆಳವಣಿಗೆಗೆ ಉತ್ತೇಜನ ನೀಡುವುದು ಉದ್ದೇಶ' ಎಂದು ರಮೇಶ್ ಸೌಂದರ್ಯ ತಿಳಿಸಿದರು. ಶಾಲೆಯ ನಿರ್ದೇಶಕ ಭರತ್ ಸೌಂದರ್ಯ, ಪ್ರಾಂಶುಪಾಲರಾದ ಎನ್.ಕೆ. ಶಾರದಾ ಭಾಗವಹಿಸಿದ್ದರು.

ಆಟೊ ಕದ್ದಿದ್ದ ಆರೋಪಿ ಬಂಧನ

ಬೆಂಗಳೂರು: ಸಾರ್ವಜನಿಕ ಸ್ಥಳದಲ್ಲಿ ನಿಲ್ಲಿಸಿದ್ದ ಆಟೊ ಕಳ್ಳತನ ಮಾಡಿದ್ದ ಆರೋಪಿ ನವೀದ್ ಉಲ್ಲಾ ಖುರೇಶಿ (30) ಎಂಬುವವರನ್ನು ಪುಲಕೇಶಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಫ್ರೇಜರ್ ಟೌನ್‌ನ ನವೀದ್, ಅಪರಾಧ ಹಿನ್ನೆಲೆಯುಳ್ಳವ. ಈತನ ವಿರುದ್ಧ ಈಗಾಗಲೇ ಎರಡು ಪ್ರಕರಣ ದಾಖಲಾಗಿದ್ದವು. ಈತನಿಂದ ₹2.45 ಲಕ್ಷ ಮೌಲ್ಯದ ಆಟೊ ಹಾಗೂ ಬೈಕ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು. 'ಆರೋಪಿ, ಆಟೊ ಚಲಾಯಿಸಿಕೊಂಡು ಠಾಣೆ ವ್ಯಾಪ್ತಿಯಲ್ಲಿ ಹೊರಟಿದ್ದ. ಅನುಮಾನಗೊಂಡಿದ್ದ ಗಸ್ತಿನಲ್ಲಿದ್ದ ಸಿಬ್ಬಂದಿ, ಆಟೊ ತಡೆದು ಪರಿಶೀಲನೆ ನಡೆಸಿದ್ದರು. ಆರೋಪಿ ಆಟೊದ ದಾಖಲೆಗಳನ್ನು ತೋರಿಸಿರಲಿಲ್ಲ. ಆರೋಪಿಯನ್ನು ವಶಕ್ಕೆ ಪಡೆದಿದ್ದ ಸಿಬ್ಬಂದಿ ಠಾಣೆಗೆ ಕರೆತಂದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡ.'

'ಆಟೊವನ್ನು ಜಪ್ತಿ ಮಾಡಿ,ತನಿಖೆ ಮುಂದುವರಿಸಲಾಗಿತ್ತು. ಕೆಲ ದಿನ ಗಳ ಹಿಂದೆ ಬೈಕ್ ಕದ್ದಿದ್ದ ಸಂಗತಿಯನ್ನೂ ಆರೋಪಿ ಬಾಯ್ಬಿಟ್ಟಿದ್ದ. ಬೈಕ್ ಸಹ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

ಚುಟುಕು

ಸಾರಣ್ ಹಿಂಸಾಚಾರ: ಲಾಲು ಪುತ್ರಿ ವಿರುದ್ಧ ಎಫ್‌ಐಆರ್

ಸಾರಣ್/ಪಟ್ನಾ (ಪಿಟಿಐ): ಬಿಹಾರದ ಸಾರಣ್ ಲೋಕಸಭಾ ಕ್ಷೇತ್ರದಲ್ಲಿ ಮತದಾನದ ಬಳಿಕ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿ ದಾಖಲಾಗಿರುವ ಎಫ್‌ಐಆರ್‌ನಲ್ಲಿ ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಪುತ್ರಿ, ರೋಹಿಣಿ ಆಚಾರ್ಯ ಅವರ ಹೆಸರನ್ನು ಉಲ್ಲೇಖಿಸಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ರೋಹಿಣಿ ಅವರು ಸಾರಣ್ ಕ್ಷೇತ್ರದಲ್ಲಿ 'ಮಹಾಘಟಬಂಧನ್' ಅಭ್ಯರ್ಥಿಯಾಗಿ, ಬಿಜೆಪಿಯ ರಾಜೀವ್ ಪ್ರತಾಪ್ ರೂಡಿ ವಿರುದ್ಧ ಸ್ಪರ್ಧಿಸಿದ್ದರು.

ಮನೋಜ್ ಕುಮಾರ್ ಎಂಬವರು ನೀಡಿರುವ ದೂರನ್ನು ಆಧರಿಸಿ ರೋಹಿಣಿ ಅವರ ಹೆಸರನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಗಲಭೆ ನಡೆದ ಪ್ರದೇಶದಲ್ಲಿ ಮೇ 25ರ ವರೆಗೆ ರಾಜ್ಯ ಸರ್ಕಾರವು ಇಂಟರ್‌ನೆಟ್ ಸೇವೆಯನ್ನು ಸ್ಥಗಿತಗೊಳಿಸಿದೆ. ಹಿಂಸಾಚಾರದಲ್ಲಿ ಒಬ್ಬರು ಮೃತಪಟ್ಟಿದ್ದು, ಇಬ್ಬರು ಗಾಯಗೊಂಡಿದ್ದರು. ಆರೋಪಿಗಳ ಪತ್ತೆಗಾಗಿ ಪೊಲೀಸರು ವಿಶೇಷ ತನಿಖಾ ತಂಡವನ್ನು ರಚಿಸಿದ್ದಾರೆ.

ಮತದಾನದ ದಿನ ನಡೆದ ಅಕ್ರಮಗಳಿಗೆ ಹಾಗೂ ಬಳಿಕ ನಡೆದ ಗಲಭೆಗೆ ಸಂಬಂಧಿಸಿ ಪೊಲೀಸರು ಒಟ್ಟು ನಾಲ್ಕು ಎಫ್‌ಐಆರ್‌ಗಳನ್ನು ದಾಖಲಿಸಿದ್ದರು. ಈ ಸಂಬಂಧ ಇಬ್ಬರನ್ನು ಬಂಧಿಸಲಾಗಿದೆ.

ಸುಲ್ತಾನ್‌ಪುರ: ವರುಣ್ ಪ್ರಚಾರ

ಸುಲ್ತಾನ್‌ಪುರ (ಪಿಟಿಐ): ಬಿಜೆಪಿ ಮುಖಂಡ ಹಾಗೂ ಪಿಲಿಭಿತ್ ಕ್ಷೇತ್ರದ ಸಂಸದ ವರುಣ್ ಗಾಂಧಿ ಅವರು ತಾಯಿ ಮೇನಕಾ ಗಾಂಧಿ ಪರ ಸುಲ್ತಾನ್‌ಪುರದಲ್ಲಿ ಗುರುವಾರ ಪ್ರಚಾರ ನಡೆಸಿದರು.

ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ದೇಶದೆಲ್ಲೆಡೆ ಚುನಾವಣೆ ನಡೆಯುತ್ತಿದೆ. ಆದರೆ ಒಂದು ಪ್ರದೇಶದ ಜನರು ಮಾತ್ರ ತಮ್ಮ ಸಂಸದರನ್ನು 'ಸಂಸದ್‌ಜಿ', 'ಮಂತ್ರಿಜಿ' ಅಥವಾ ಹೆಸರಿನಿಂದ ಕರೆಯುವುದಿಲ್ಲ ಬದಲಾಗಿ 'ಮಾತಾಜಿ' ಎಂದು ಕರೆಯುತ್ತಾರೆ' ಎಂದು ಕ್ಷೇತ್ರದ ಜನರಿಗೆ ಮೇನಕಾ ಗಾಂಧಿ ಅವರ ಮೇಲಿರುವ ಗೌರವವನ್ನು ಉಲ್ಲೇಖಿಸಿದರು.

ವರುಣ್ ಗಾಂಧಿ ಸುಲ್ತಾನ್‌ಪುರದಲ್ಲಿ ಪ್ರಚಾರ ಸಭೆಯಲ್ಲಿ ಪಾಲ್ಗೊಂಡಿದ್ದು, ಇದರಿಂದ ತಮ್ಮ ಗೆಲುವಿಗೆ ಅನುಕೂಲವಾಗಲಿದೆ ಎಂದು ಮೇನಕಾ ಗಾಂಧಿ ತಿಳಿಸಿದ್ದಾರೆ.

ವರುಣ್ ಅವರು ಈ ಬಾರಿಯ ಚುನಾವಣೆಯಲ್ಲಿ ಪ್ರಚಾರದಲ್ಲಿ ಪಾಲ್ಗೊಂಡಿದ್ದು ಇದೇ ಮೊದಲು. ಪಿಲಿಭಿತ್ ಕ್ಷೇತ್ರದಿಂದ ಸ್ಪರ್ಧಿಸಲು ವರುಣ್ ಅವರಿಗೆ ಬಿಜೆಪಿಯು ಟಿಕೆಟ್ ನಿರಾಕರಿಸಿತ್ತು. ಸುಲ್ತಾನ್‌ಪುರ ಕ್ಷೇತ್ರಕ್ಕೆ ಮೇ 25ರಂದು ಮತದಾನ ನಡೆಯಲಿದೆ.

'ಅಗ್ನಿಪಥ: ಆಯೋಗದ ನಿರ್ದೇಶನ ತಪ್ಪು'

ನವದೆಹಲಿ (ಪಿಟಿಐ): ಅಗ್ನಿಪಥ ಯೋಜನೆಯನ್ನು ರಾಜಕೀಯಗೊಳಿಸದಂತೆ ಚುನಾವಣಾ ಆಯೋಗವು ಕಾಂಗ್ರೆಸ್‌ಗೆ ನಿರ್ದೇಶನ ನೀಡಿರುವುದು 'ದೊಡ್ಡ ತಪ್ಪು' ಎಂದು ಪಕ್ಷದ ನಾಯಕ ಪಿ. ಚಿದಂಬರಂ ಹೇಳಿದ್ದಾರೆ. ಸರ್ಕಾರದ ನೀತಿಯನ್ನು ಟೀಕಿಸುವ ಹಕ್ಕು ವಿರೋಧ ಪಕ್ಷಗಳಿಗೆ ಇದೆ ಎಂದು ಅವರು ಗುರುವಾರ ಪ್ರತಿಪಾದಿಸಿದರು.

ಜಾತಿ, ಸಮುದಾಯ, ಭಾಷೆ ಮತ್ತು ಧರ್ಮದ ಆಧಾರದಲ್ಲಿ ಚುನಾವಣಾ ಪ್ರಚಾರ ನಡೆಸದಿರುವಂತೆ ಆಯೋಗವು ಗುರುವಾರ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಕಟ್ಟುನಿಟ್ಟಿನ ಸೂಚನೆ ನೀಡಿತ್ತು. ಸೇನೆಗೆ ಸಂಬಂಧಿಸಿದ ವಿಷಯಗಳನ್ನು ರಾಜಕೀಯಗೊಳಿಸಬಾರದು ಎಂದು ಕಾಂಗ್ರೆಸ್‌ಗೆ ನಿರ್ದೇಶಿಸಿತ್ತು.

'ರಾಜಕೀಯಗೊಳಿಸುವುದು' ಎಂಬ ಮಾತಿನ ಅರ್ಥ ಏನು? ಅಗ್ನಿಪಥ ಎಂಬುದು ಸರ್ಕಾರ ಜಾರಿಗೊಳಿಸಿರುವ ಒಂದು ಯೋಜನೆ. ಸರ್ಕಾರದ ನೀತಿಗಳನ್ನು ಟೀಕಿಸುವುದು ವಿರೋಧ ಪಕ್ಷಗಳ ಹಕ್ಕು. ನಾವು ಅಧಿಕಾರಕ್ಕೆ ಬಂದರೆ ಅಗ್ನಿಪಥ ಯೋಜನೆಯನ್ನು ರದ್ದುಗೊಳಿಸುತ್ತೇವೆ' ಎಂದು ಹೇಳಿದರು.

'ಅಗ್ನಿವೀರ'ರು ನಾಲ್ಕು ವರ್ಷಗಳ ಬಳಿಕ ಕೆಲಸ ಕಳೆದುಕೊಳ್ಳುವರು. ಅವರಿಗೆ ಯಾವುದೇ ಪಿಂಚಣಿ ಸೌಲಭ್ಯವೂ ಇರುವುದಿಲ್ಲ. ಸೇನೆ ಕೂಡಾ ಈ ಯೋಜನೆಯನ್ನು ವಿರೋಧಿಸಿತ್ತು. ಆದರೆ ಸರ್ಕಾರವು ಈ ಯೋಜನೆಯನ್ನು ಬಲವಂತವಾಗಿ ಹೇರಿವುದು ತಪ್ಪು' ಎಂದು ಅಭಿಪ್ರಾಯಪಟ್ಟರು.

ಪಶ್ಚಿಮ ಬಂಗಾಳ ರಾಜ್ಯಪಾಲರ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು

ನವದೆಹಲಿ (ಪಿಟಿಐ): ಕೋಲ್ಕತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಶ್ಚಿಮ ಬಂಗಾಳದ ರಾಜ್ಯಪಾಲ ಆನಂದ ಬೋಸ್ ಅವರು ಬಿಜೆಪಿ ಚಿಹ್ನೆ ಧರಿಸಿ ಪ್ರಚಾರ ಮಾಡಿದ್ದಾರೆ ಎಂದು ಆರೋಪಿಸಿ ತೃಣಮೂಲ ಕಾಂಗ್ರೆಸ್, ಚುನಾವಣಾ ಆಯೋಗಕ್ಕೆ ಗುರುವಾರ ದೂರು ನೀಡಿದೆ.

'ಕೋಲ್ಕತ್ತದ ರಾಮ ದೇವಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಬೋಸ್ ಅವರು ಎದೆಯ ಮೇಲೆ ಬಿಜೆಪಿಯ ಚಿಹ್ನೆಯನ್ನು ಧರಿಸಿದ್ದರು' ಎಂದು ಮುಖ್ಯ ಚುನಾವಣಾ ಆಯುಕ್ತರಿಗೆ ನೀಡಿರುವ ದೂರಿನಲ್ಲಿ ಆರೋಪಿಸಲಾಗಿದೆ.

'ರಾಜ್ಯಪಾಲರ ನಡೆಯು ಪ್ರಜಾಪ್ರಭುತ್ವ ವಿರೋಧಿಯಾಗಿದೆ ಮತ್ತು ಸಂವಿಧಾನದ ಮೌಲ್ಯಗಳನ್ನು ಉಲ್ಲಂಘಿಸಿದೆ' ಎಂದೂ ಟಿಎಂಸಿ ದೂರಿದೆ. ಈ ಹಿಂದೆ ರಾಜಕೀಯ ಪಕ್ಷಗಳ ಪರವಾಗಿ ಪ್ರಚಾರ ಮಾಡಿದ್ದ ರಾಜ್ಯಪಾಲರ ವಿರುದ್ಧ ಚುನಾವಣಾ ಆಯೋಗವು ಕ್ರಮ ಕೈಗೊಂಡಿದ್ದನ್ನೂ ದೂರಿನಲ್ಲಿ ಉಲ್ಲೇಖಿಸಿದೆ.

'ಬಿಜೆಪಿ ಆಡಳಿತ: ಬ್ರಾಹ್ಮಣರಿಗೂ ಕಿರುಕುಳ'

ಮಿರ್ಜಾಪುರ (ಉತ್ತರ ಪ್ರದೇಶ): ಪ್ರಬಲ ಜಾತಿಗಳಲ್ಲಿರುವ ಬಡವರ ಸ್ಥಿತಿ ಉತ್ತಮವಾಗಿಲ್ಲ. ಬಿಜೆಪಿ ಆಡಳಿತವಿರುವ ಉತ್ತರ ಪ್ರದೇಶದಲ್ಲಿ ಬ್ರಾಹ್ಮಣರು ಕೂಡ ಕಿರುಕುಳಕ್ಕೊಳಗಾಗಿದ್ದಾರೆ ಎಂದು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಗುರುವಾರ ಆರೋಪಿಸಿದರು.

ಮಿರ್ಜಾಪುರದಲ್ಲಿ ಬಿಎಸ್‌ಪಿ ಅಭ್ಯರ್ಥಿ ಮನೀಷ್ ತಿವಾರಿ ಪರ ಹಮ್ಮಿಕೊಂಡಿದ್ದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಹಿಂದುತ್ವದ ಹೆಸರಿನಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳು ಉತ್ತುಂಗಕ್ಕೇರಿವೆ ಎಂದರು.

ಕಾಂಗ್ರೆಸ್‌ನಂತೆಯೇ ಬಿಜೆಪಿಯೂ ತಪ್ಪು ನೀತಿಗಳನ್ನು ಅನುಸರಿಸುತ್ತಿದೆ. ಚುನಾವಣೆಯು ನ್ಯಾಯಸಮ್ಮತವಾಗಿ ನಡೆದರೆ ಎನ್‌ಡಿಎಯು ಈ ಬಾರಿ ಕೇಂದ್ರದಲ್ಲಿ ಅಧಿಕಾರಕ್ಕೇರದು ಎಂದು ಹೇಳಿದರು.

ಚುನಾವಣೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಅನ್ನು ಅಧಿಕಾರಕ್ಕೇರಲು ಬಿಡಬೇಡಿ ಎಂದು ಜನರಲ್ಲಿ ಮನವಿ ಮಾಡಿದ ಅವರು, ಬಿಎಸ್‌ಪಿ ಅಧಿಕಾರಕ್ಕೆ ಬಂದರೆ ಜನರ ಕಲ್ಯಾಣವಾಗಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಎಂಥಾ ಮಾತು!

ಪ್ರಜಾಪ್ರಭುತ್ವ ಮತ್ತು ಸಂವಿಧಾನದ ರಕ್ಷಣೆಯ ದೃಷ್ಟಿಯಿಂದ ಈ ಚುನಾವಣೆಯು ಮಹತ್ವದ್ದಾಗಿದೆ. ಜನರು ಈ ಹೋರಾಟದಲ್ಲಿ ಪಾಲ್ಗೊಂಡು 'ಇಂಡಿಯಾ' ಒಕ್ಕೂಟದ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು. ನಿಮ್ಮ ಪ್ರತಿ ಮತವು ಉದ್ಯೋಗ ಸೃಷ್ಟಿಸಲಿದೆ, ಹಣದುಬ್ಬರವನ್ನು ತಗ್ಗಿಸಲಿದೆ, ಸಮಾನತೆಗೆ ಸಹಕಾರಿಯಾಗಲಿದೆ

ಸೋನಿಯಾ ಗಾಂಧಿ, ಕಾಂಗ್ರೆಸ್ ನಾಯಕಿ

(ದೆಹಲಿಯ ಜನರನ್ನುದ್ದೇಶಿಸಿ ನೀಡಿದ ವಿಡಿಯೊ ಹೇಳಿಕೆ)

ದೆಹಲಿಯ ಎಲ್ಲ ಏಳು ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳು ಗೆಲ್ಲಲಿದ್ದಾರೆ. 'ಇಂಡಿ' ಒಕ್ಕೂಟವು ಸಂಪೂರ್ಣವಾಗಿ ವಿಫಲವಾಗಿದೆ. ಆ ಒಕ್ಕೂಟಕ್ಕೆ ನಾಯಕರಿಲ್ಲದಂತಾಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಎನ್‌ಡಿಎ ಪರ ಜನರು ಇದ್ದಾರೆ. ನಾವು ಖಂಡಿತವಾಗಿಯೂ 400ಕ್ಕಿಂತಲೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲಲಿದ್ದೇವೆ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಜನರ ನಂಬಿಕೆಗೆ ದ್ರೋಹ ಎಸಗಿದ್ದಾರೆ. ಅವರು ಕೆಲವು ದಿನಗಳಿಗಷ್ಟೇ ಜಾಮೀನಿನ ಮೇಲೆ ಹೊರ ಬಂದಿದ್ದಾರೆ. ಅಬಕಾರಿ ನೀತಿ ಪ್ರಕರಣದಲ್ಲಿ ಮತ್ತೆ ಜೈಲು ಸೇರಲಿದ್ದಾರೆ

ಪೀಯೂಷ್ ಗೋಯಲ್, ಕೇಂದ್ರ ಸಚಿವ

ದೆಹಲಿಯ 675 ಕೊಳೆಗೇರಿಗಳಲ್ಲಿ 20 ಲಕ್ಷಕ್ಕೂ ಅಧಿಕ ಮಂದಿ ವಾಸ • ಮತ ಸೆಳೆಯಲು ಕಸರತ್ತು

ಕೊಳೆಗೇರಿಗಳ ಮತ ಚಿತ್ತ ಯಾರತ್ತ?

• ಮಂಜುನಾಥ ಹೆಬ್ಬಾರ್

ಲೋಕನೀತಿ ಸಮೀಕ್ಷೆಯ ಪ್ರಕಾರ, 2020ರ ವಿಧಾನಸಭಾ ಚುನಾವಣೆಯಲ್ಲಿ ಶೇ 61ರಷ್ಟು ಬಡವರು ಎಎಪಿಗೆ ಮತ ಚಲಾಯಿಸಿದ್ದರು. 2015ಕ್ಕೆ ಹೋಲಿಸಿದರೆ ಮತ ಪ್ರಮಾಣ ಶೇ 5ರಷ್ಟು ಕಡಿಮೆಯಾಗಿತ್ತು. ಇನ್ನೊಂದೆಡೆ, 2015ರಲ್ಲಿ ಶೇ 21ರಷ್ಟು ಬಡವರು ಬಿಜೆಪಿಗೆ ಮತ ಹಾಕಿದ್ದರು. 2020ಕ್ಕೆ ಶೇ 33ರಷ್ಟು ಬಡವರ ಮತ ಕೇಸರಿ ಪಾಳಯಕ್ಕೆ ಬಂದಿತ್ತು

ನವದೆಹಲಿ: ಬಿಕಾರಿ ಯಾದವ್ ಬಿಹಾರದವರು. 22 ವರ್ಷಗಳಿಂದ ನವದೆಹಲಿಯ ಲಕ್ಷ್ಮಿನಗರದಲ್ಲಿ ತಳ್ಳು ಗಾಡಿಯಲ್ಲಿ ತರಕಾರಿ ವ್ಯಾಪಾರ ಮಾಡುತ್ತಿದ್ದಾರೆ. ದಿನಕ್ಕೆ ₹500ರಿಂದ ₹600 ಸಂಪಾದನೆ ಮಾಡುತ್ತಾರೆ. ಅವರು ಲಕ್ಷ್ಮಿನಗರದ ಕೊಳೆಗೇರಿಯೊಂದರಲ್ಲಿ ನೆಲೆಸಿದ್ದಾರೆ. ಬಿರು ಬಿಸಿಲಿನಲ್ಲಿ ತರಕಾರಿ ವ್ಯಾಪಾರದಲ್ಲಿ ತೊಡಗಿದ್ದ ಅವರಲ್ಲಿ 'ಲೋಕಸಭಾ ಚುನಾವಣೆಯ ಟ್ರೆಂಡ್ ಹೇಗಿದೆ' ಎಂದು ಪ್ರಶ್ನಿಸಿದಾಗ, 'ಎಎಪಿ–ಕಾಂಗ್ರೆಸ್ ಮೈತ್ರಿಕೂಟ ಕನಿಷ್ಠ ನಾಲ್ಕೈದು ಸೀಟುಗಳಲ್ಲಿ ಗೆಲ್ಲಲಿದೆ' ಎಂದು ಖಡಾಖಂಡಿತವಾಗಿ ಹೇಳಿದರು. 'ಹಿಂದಿನ ಎರಡು ಚುನಾವಣೆಗಳಲ್ಲಿ ಬಿಜೆಪಿ ಕ್ಲೀನ್ ಸ್ವೀಪ್ ಮಾಡಿತ್ತಲ್ಲ' ಎಂದು ಕೇಳಿದಾಗ, 'ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸಲು ಚಿತಾವಣೆ ನೀಡುವ ಮೂಲಕ ಬಿಜೆಪಿ ತಪ್ಪು ಮಾಡಿತು. ಕೇಜ್ರಿವಾಲ್ ಪರ ದೊಡ್ಡ ಮಟ್ಟದ ಅನುಕಂಪದ ಅಲೆ ನಿರ್ಮಾಣವಾಗಿದೆ. ಮಧ್ಯಮ ವರ್ಗ ಹಾಗೂ ಬಡವರು, ಹಿಂದುಳಿದ ಸಮುದಾಯದವರು ದೊಡ್ಡ ಪ್ರಮಾಣದಲ್ಲಿ ಮೈತ್ರಿಕೂಟದ ಪರ ಮತ ಹಾಕಲಿದ್ದಾರೆ. ಕಾದು ನೋಡಿ' ಎಂದರು.

ಅಬಕಾರಿ ನೀತಿ ಹಗರಣದಲ್ಲಿ ದೊಡ್ಡ ಮಟ್ಟದ ಭ್ರಷ್ಟಾಚಾರ ನಡೆಸಿರುವ ಆರೋಪ ಇದೆಯಲ್ಲ ಎಂದು ಕೆಣಕಿದಾಗ, 'ಎಎಪಿ ಸರ್ಕಾರ ಸಣ್ಣ ಮಟ್ಟದ ಭ್ರಷ್ಟಾಚಾರ ನಡೆಸಿರಬಹುದು. ಭ್ರಷ್ಟಾಚಾರ ನಡೆಸದ ಸರ್ಕಾರ ಯಾವುದಿದೆ ಎಂಬುದನ್ನು ತೋರಿಸಿ' ಎಂದು ಸವಾಲು ಎಸೆದರು. 'ಎಎಪಿ ಬಂದ ಬಳಿಕ ನಮ್ಮ ಜೀವನ ಮಟ್ಟದಲ್ಲಿ ಗಣನೀಯ ಸುಧಾರಣೆ ಆಗಿದೆ. ಶಿಕ್ಷಣ, ಆರೋಗ್ಯ, ಪಡಿತರ, ವಿದ್ಯುತ್, ನೀರು ಎಲ್ಲವೂ ಉಚಿತ ಆಗಿದೆ. ಕೈಯಲ್ಲಿ ನಾಲ್ಕು ಕಾಸು ಉಳಿಯುತ್ತಿದೆ. ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲುವ ಉದ್ದೇಶದಿಂದಲೇ ಕೇಜ್ರಿವಾಲ್ ಅವರನ್ನು ಬಿಜೆಪಿ ಬಂಧಿಸಿದೆ. ದೆಹಲಿಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಎಲ್ಲ ಸೌಲಭ್ಯಗಳಿಗೆ ಕತ್ತರಿ ಹಾಕಲಿದೆ' ಎಂದು ಆತಂಕ ವ್ಯಕ್ತಪಡಿಸಿದರು.

ದೆಹಲಿಯ ವಸಂತ ವಿಹಾರ್ ಬಳಿಯ ಕೊಳೆಗೇರಿಯನ್ನು 2023ರ ಜೂನ್‌ನಲ್ಲಿ ನೆಲಸಮಗೊಳಿಸಿದಾಗ, ಅಲ್ಲಿನ ನಿವಾಸಿಗಳು ತಮ್ಮ ಸರಕು ಸರಂಜಾಮುಗಳೊಂದಿಗೆ ದಿಕ್ಕುತೋಚದೆ ಕುಳಿತಿದ್ದ ದೃಶ್ಯ –ಪಿಟಿಐ ಚಿತ್ರ

ದೆಹಲಿಯಲ್ಲಿ 675 ಕೊಳೆಗೇರಿ ಸಮೂಹಗಳಿವೆ. 20 ಲಕ್ಷಕ್ಕೂ ಅಧಿಕ ಮಂದಿ ಕೊಳೆಗೇರಿಗಳಲ್ಲಿ ನೆಲೆಸಿದ್ದಾರೆ. ಇವುಗಳಲ್ಲಿ ಅನೇಕ ಕೊಳೆಗೇರಿಗಳು ಅಕ್ರಮವಾಗಿ ತಲೆ ಎತ್ತಿದಂಥವು. ಇಲ್ಲಿನ ನಿವಾಸಿಗಳು ಭಯ ಹಾಗೂ ಆತಂಕದಿಂದ ಜೀವನ ನಡೆಸುತ್ತಿದ್ದಾರೆ. ಕಳೆದ ವರ್ಷ ಜಿ–20 ಶೃಂಗಸಭೆಯ ಸಂದರ್ಭದಲ್ಲಿ ಗೋವಿಂದಪುರಿ, ಸುಂದರ್ ನಗರದ ಹಲವು ಕೊಳೆಗೇರಿಗಳನ್ನು ನೆಲಸಮಗೊಳಿಸಲಾಗಿತ್ತು. ದಕ್ಷಿಣ ದೆಹಲಿಯ ಗೋವಿಂದಪುರಿ ಕೊಳೆಗೇರಿಯ ನಿವಾಸಿಗಳು 2023ರ ಜೂನ್‌ನಲ್ಲಿ ನಡೆದ ಘಟನೆಯನ್ನು ನೆನಪಿಸಿಕೊಂಡರು. 'ಹತ್ತಾರು ಬುಲ್ಡೋಜರ್‌ಗಳು 2,000ಕ್ಕೂ ಅಧಿಕ ಮನೆಗಳನ್ನು ನೆಲಸಮಗೊಳಿಸಿದವು. ಇಲ್ಲಿನ ನಿವಾಸಿಗಳು ಕಣ್ಣೀರು ಹಾಕಿದರೂ ಮನೆಗಳನ್ನು ಕೆಡವಿ ಹಾಕಲಾಯಿತು. ವಿವಿಧ ದೇಶಗಳ ಪ್ರತಿನಿಧಿಗಳಿಗೆ ರಾಷ್ಟ್ರ ರಾಜಧಾನಿಯ ಇನ್ನೊಂದು ಮುಖ ಗೊತ್ತಾಗಬಾರದು ಎಂಬ ಕಾರಣಕ್ಕೆ ಕೇಂದ್ರ ಸರ್ಕಾರವು ಗುಡಿಸಲುಗಳನ್ನು ಧ್ವಂಸ ಮಾಡಿಸಿತು. ಆದರೆ, ಸರ್ಕಾರವು ಪುನರ್ವಸತಿ ಕಲ್ಪಿಸಲಿಲ್ಲ. ಇಲ್ಲೇ ಸಣ್ಣ ಗುಡಿಸಲು ಕಟ್ಟಿಕೊಂಡು ನೆಲೆಸಿದ್ದೇವೆ' ಎಂದು ಹೇಳಿಕೊಂಡರು. 50 ವರ್ಷ ವಯಸ್ಸಿನ ಉಷಾ ಇಲ್ಲಿನ ಜೋಪಡಿಯೊಂದರಲ್ಲಿ ನೆಲೆಸಿದ್ದಾರೆ. ವರ್ಷದ ಹಿಂದೆ ಅವರ ಪತಿ ಮೃತಪಟ್ಟಿದ್ದಾರೆ. ರಾಜ್ಯ ಸರ್ಕಾರದಿಂದ ವಿಧವಾ ವೇತನ ಬರುತ್ತಿದೆ. ಜೀವನ ನಿರ್ವಹಣೆಗೆ ಅದನ್ನೇ ನಂಬಿಕೊಂಡಿದ್ದಾರೆ. ಚುನಾವಣೆಯಲ್ಲಿ ಎಎಪಿ ಸೋತರೆ ವಿಧವಾ ವೇತನ ಸ್ಥಗಿತಗೊಳ್ಳಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ನವಜೀವನ ಕೊಳೆಗೇರಿ ಸಮೀಪದಲ್ಲಿ ಸಣ್ಣ ಅಂಗಡಿ ಇಟ್ಟುಕೊಂಡಿರುವ ರಾಮನಾಥ್ ಬಾರ್ತಿ ಅವರು ಕೇಜ್ರಿವಾಲ್ ಬಂಧನದ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಿಲ್ಲ. 'ಎಎಪಿ ಸರ್ಕಾರವು ನಮಗೆ ಎಲ್ಲ ಸವಲತ್ತುಗಳನ್ನು ಒದಗಿಸಿ ಉತ್ತಮ ಕೆಲಸ ಮಾಡಿದೆ. ಕೇಜ್ರಿವಾಲ್ ಜೈಲಿನಲ್ಲಿದ್ದರೆ ಸೌಲಭ್ಯಗಳೇನೂ ನಿಲ್ಲುವುದಿಲ್ಲ. ಅವರ ಉತ್ತರಾಧಿಕಾರಿಗಳು ಈ ಗ್ಯಾರಂಟಿಗಳನ್ನು ನಿಲ್ಲಿಸುವುದಿಲ್ಲ. ನಮ್ಮ ಮತ ಅವರಿಗೆ' ಎಂದರು.

ಸುಂದರ್ ನಗರದ ಕೊಳೆಗೇರಿಯಲ್ಲಿ ನೆಲೆಸಿರುವ ಕಾರು ಚಾಲಕ ಜ್ಞಾನೇಶ್, 'ಈ ಸಲ ಬಿಜೆಪಿಗೆ ಬಹುಮತ ಸಿಗುವುದಿಲ್ಲ. ದೆಹಲಿಯಲ್ಲೂ ಸೀಟುಗಳು ಕಡಿಮೆಯಾಗಲಿವೆ. ಕೆಲವು ವರ್ಷಗಳಿಂದ ಜೀವನಾವಶ್ಯಕ ವಸ್ತುಗಳ ಬೆಲೆ ಭಾರಿ ಹೆಚ್ಚಳ ಆಗಿದೆ. ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ಆದರೆ, ಲೋಕಸಭಾ ಚುನಾವಣೆಯಲ್ಲಿ ನಾನು ಬಿಜೆಪಿಗೆ ಮತ ಹಾಕುತ್ತೇನೆ. ವಿಧಾನಸಭಾ ಚುನಾವಣೆಯಲ್ಲಿ ನನ್ನ ಮತ ಎಎಪಿಗೆ' ಎಂದು ಬಹಿರಂಗಪಡಿಸಿದರು.

40ರ ಹರೆಯದ ಶಾಹಿದ್ ಅವರು ಉತ್ತರ ಪ್ರದೇಶದವರು. ಉದ್ಯೋಗ ಅರಸಿ ಅವರು ಎಂಟು ವರ್ಷಗಳ ಹಿಂದೆ ರಾಷ್ಟ್ರ ರಾಜಧಾನಿಗೆ ಬಂದ ಅವರು, ಎಲೆಕ್ಟ್ರಿಕ್ ರಿಕ್ಷಾ ಓಡಿಸುತ್ತಿದ್ದಾರೆ. 'ದೆಹಲಿ ಸರ್ಕಾರವು ನಮಗೆ ಆಟೊ ಕೊಡಿಸಿತು' ಎಂದು ಖುಷಿಯಿಂದ ಹೇಳಿಕೊಂಡರು. ಸುಮಾರು 30 ಸಾವಿರ ಮಂದಿಗೆ ಎಎಪಿ ಸರ್ಕಾರವು ಆಟೊ ಪರವಾನಗಿ ನೀಡಿದೆ. ಅವರು ಒಂದರ್ಥದಲ್ಲಿ ಎಎಪಿ ಪ್ರಚಾರಕರು ಇದ್ದಂತೆ.

ಲಕ್ಷ್ಮಿನಗರದಲ್ಲಿ ಸಣ್ಣದೊಂದು ವ್ಯವಹಾರ ನಡೆಸುತ್ತಿರುವ ಮನೋಜ್ ಕುಮಾರ್, 'ಸಬ್ಸಿಡಿಗಳಿಂದ ಆರ್ಥಿಕತೆಗೆ ಹೊಡೆತ ಬೀಳುತ್ತದೆ. ಅವುಗಳನ್ನು ಮೊದಲು ನಿಲ್ಲಿಸಬೇಕು. ರಾಷ್ಟ್ರವನ್ನು ಮುನ್ನಡೆಸಬಲ್ಲ ಛಾತಿ ಇರುವವರಿಗೆ ನನ್ನ ಮತ. ಹಾಗಾಗಿ, ಈ ಸಲವೂ ಬಿಜೆಪಿಗೆ ಮತ ಹಾಕುವೆ' ಎಂದು ಹೇಳಿಕೊಂಡರು.

ಎಎಪಿಗೆ ಮತ ಏಕೆ?

ಎಎಪಿ ಸರ್ಕಾರದ ಅವಧಿಯಲ್ಲಿ ವಿದ್ಯುತ್ ಬಿಲ್ ಗಣನೀಯವಾಗಿ ಕಡಿಮೆಯಾಗಿದೆ. ಕುಡಿಯುವ ನೀರು ಪುಕ್ಕಟೆ ಸಿಗುತ್ತಿದೆ. ಉಚಿತ ಪಡಿತರ ಹಾಗೂ ಗುಣಮಟ್ಟದ ವೈದ್ಯಕೀಯ ಸೇವೆ ಸುಲಭದಲ್ಲಿ ಸಿಗುತ್ತಿದೆ. ಹೀಗಾಗಿ, ಎಎಪಿಗೆ ಮತ ಹಾಕುತ್ತೇವೆ ಎಂಬುದು ಕೊಳೆಗೇರಿಗಳ ನಿವಾಸಿಗಳ ಅಭಿಪ್ರಾಯ.

ಬಿಜೆಪಿ ಪರ ಒಲವು ಏಕೆ?

ತಮ್ಮ ಸಮುದಾಯಕ್ಕೆ ಭದ್ರತೆ ಒದಗಿಸುತ್ತದೆ ಎಂಬ ಕಾರಣಕ್ಕೆ ಬಿಜೆಪಿಗೆ ಮತ ಹಾಕುತ್ತೇವೆ ಎಂದು ಕೊಳೆಗೇರಿಗಳ ಅನೇಕ ನಿವಾಸಿಗಳು ಹೇಳುತ್ತಾರೆ. ಪ್ರಧಾನಿ ನರೇಂದ್ರ ಮೋದಿ ಜನಪ್ರಿಯತೆ, ಹಿಂದೂ ರಾಷ್ಟ್ರ ಹಾಗೂ ರಾಷ್ಟ್ರೀಯವಾದದ ಕಾರಣಕ್ಕೆ ಲೋಕಸಭಾ ಚುನಾವಣೆಯಲ್ಲಿ ಕಮಲ ಪಾಳಯಕ್ಕೆ ಮತ ನೀಡುತ್ತೇವೆ ಎಂದೂ ಅವರು ಹೇಳುತ್ತಾರೆ. ಆದರೆ, ವಿಧಾನಸಭಾ ಚುನಾವಣೆಯಲ್ಲಿ ಎಎಪಿ ಕಡೆಗೆ ಒಲವು ತೋರುತ್ತೇವೆ ಎಂದು ಹೇಳುವುದನ್ನು ಮರೆಯುವುದಿಲ್ಲ.

ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಕಾಂಗ್ರೆಸ್‌ನಿಂದ ದೇಶ ವಿಭಜನೆ: ಮೋದಿ

'ರಾಮ ನಾಮ ಜಪಿಸಿದರೆ ಬಂಧನ'

ಮಹೇಂದ್ರಗಢ (ಹರಿಯಾಣ) (ಪಿಟಿಐ): ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದರೆ 'ರಾಮ, ರಾಮ' ಎನ್ನುವವರನ್ನು ಬಂಧಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಆರೋಪಿಸಿದರು.

ಹರಿಯಾಣದ ಮಹೇಂದ್ರಗಢದಲ್ಲಿ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡ ಅವರು, ಕಾಂಗ್ರೆಸ್ ತನ್ನ ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ದೇಶವನ್ನು ವಿಭಜಿಸಿ ಎರಡು ಮುಸ್ಲಿಂ ರಾಷ್ಟ್ರಗಳ (ಪಾಕಿಸ್ತಾನ ಮತ್ತು ಬಾಂಗ್ಲಾದೇಶ) ಹುಟ್ಟಿಗೆ ಕಾರಣವಾಯಿತು ಎಂದು ವಾಗ್ದಾಳಿ ನಡೆಸಿದರು. 'ಹರಿಯಾಣದಲ್ಲಿ ಪ್ರತಿಯೊಬ್ಬರೂ ರಾಮ ನಾಮ ಜಪಿಸುವರು. ಜನರು ಪ್ರತಿ ಹತ್ತು ಹೆಜ್ಜೆಗೊಮ್ಮೆ 'ರಾಮ, ರಾಮ' ಎನ್ನುವರು. ಆದರೆ, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರಾಮನ ಹೆಸರು ಹೇಳುವವರನ್ನು ಬಂಧಿಸಲಿದೆ' ಎಂದು ಹೇಳಿದರು.

ದೇಶ ವಿಭಜನೆಯನ್ನು ಪ್ರಸ್ತಾಪಿಸಿ ಕಾಂಗ್ರೆಸ್ ಅನ್ನು ಟೀಕಿಸಿದ ಪ್ರಧಾನಿ, 'ಕಾಂಗ್ರೆಸ್ ಮತ್ತು 'ಇಂಡಿ' ಒಕ್ಕೂಟವು ವೋಟ್ ಬ್ಯಾಂಕ್ ರಾಜಕಾರಣ ಮಾಡುತ್ತಿದೆ. ದೇಶವನ್ನು ಈಗಾಗಲೇ ವಿಭಜಿಸಿ ಎರಡು ಮುಸ್ಲಿಂ ದೇಶಗಳ ಹುಟ್ಟಿಗೆ ಕಾರಣರಾಗಿದ್ದಾರೆ. ದೇಶದ ಇನ್ನುಳಿದ ಭಾಗದಲ್ಲಿ ಮುಸ್ಲಿಮರಿಗೆ ಮೊದಲು ಹಕ್ಕು ಸಿಗಬೇಕು ಎಂದು ಆ ಪಕ್ಷದ ನಾಯಕರು ಹೇಳುತ್ತಿದ್ದಾರೆ' ಎಂದು ಕಿಡಿಕಾರಿದರು.

ಪಶ್ಚಿಮ ಬಂಗಾಳದಲ್ಲಿ ಮುಸ್ಲಿಮರಿಗೆ ನೀಡಲಾಗಿದ್ದ ಇತರ ಹಿಂದುಳಿದ ವರ್ಗಗಳ (ಒಬಿಸಿ) ಸ್ಥಾನಮಾನವನ್ನು ಕಲ್ಕತ್ತ ಹೈಕೋರ್ಟ್ ಬುಧವಾರ ರದ್ದುಗೊಳಿಸಿದೆ. ಆದರೆ ಅಲ್ಲಿನ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೈಕೋರ್ಟ್ ತೀರ್ಪನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ ಎಂದು ದೂರಿದರು.

'ನ್ಯಾಯಾಲಯ ಇಲ್ಲದೇ ಇರುತ್ತಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು? ಶೋಷಿತರು ಮತ್ತು ನಮ್ಮ ದಲಿತ ಹಾಗೂ ಆದಿವಾಸಿ ಸಹೋದರ ಸಹೋದರಿಯರಿಗೆ ಏನು ಮಾಡಲು ಸಾಧ್ಯವಿತ್ತು? ನೀವು ವಿರೋಧಪಕ್ಷಗಳ ಮನೋಭಾವವನ್ನು ಗಮನಿಸಿ. ತೀರ್ಪು ಒಪ್ಪಿಕೊಳ್ಳಲು ಮಮತಾ ಸಿದ್ಧರಿಲ್ಲ. ಒಬಿಸಿ ಮೀಸಲಾತಿಯನ್ನು ಅವರು ಮುಸ್ಲಿಮರಿಗೆ ನೀಡುತ್ತಾರೆ' ಎಂದು ಆರೋಪಿಸಿದರು.





ಬಿಜೆಪಿಗೆ ಮಹಿಳೆಯರು 'ಎರಡನೇ ದರ್ಜೆ ಪೌರರು': ರಾಹುಲ್

ನವದೆಹಲಿ (ಪಿಟಿಐ): ಬಿಜೆಪಿಯು ಮಹಿಳೆಯರನ್ನು 'ಎರಡನೇ ದರ್ಜೆಯ ಪೌರ'ರ ರೀತಿ ನಡೆಸಿಕೊಳ್ಳುತ್ತಿದ್ದು, ಅದರ 'ಸೈದ್ಧಾಂತಿಕ ಪೋಷಕ' ಆರ್‌ಎಸ್‌ಎಸ್ ತನ್ನ ಶಾಖೆಗಳಿಗೆ ಮಹಿಳೆಯರು ಪ್ರವೇಶಿಸುವುದಕ್ಕೆ ಅವಕಾಶ ನೀಡುವುದಿಲ್ಲ ಎಂದು ರಾಹುಲ್ ಗಾಂಧಿ ಆರೋಪಿಸಿದರು.

ದೆಹಲಿಯ ಮಂಗೋಲ್‌ಪುರಿಯಲ್ಲಿ ಗುರುವಾರ ಮಹಿಳೆಯರಿಗಾಗಿ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, 'ಆರ್‌ಎಸ್‌ಎಸ್‌ನವರು ಯಾವುದೇ ಹುದ್ದೆಗೆ ಮಹಿಳೆಯರನ್ನು ನೇಮಕ ಮಾಡುವುದಿಲ್ಲ ಎಂಬುದು ನಿಮಗೆ ತಿಳಿದಿದೆಯೇ? ಮಹಿಳೆಯರು ಸಂಘದ ಶಾಖೆಗಳಿಗೆ ಪ್ರವೇಶಿಸುವಂತಿಲ್ಲ. ಮಹಿಳೆಯರನ್ನು ಎರಡನೇ ದರ್ಜೆಯ ಪೌರರ ರೀತಿ ನಡೆಸಿಕೊಳ್ಳಬೇಕು ಎಂಬ ನಂಬಿಕೆ ಅವರ ಮನಸ್ಸಿನಲ್ಲಿ ಆಳವಾಗಿ ಬೇರೂರಿದೆ' ಎಂದು ಟೀಕಿಸಿದರು.

ಆ ಬಳಿಕ ಈಶಾನ್ಯ ದೆಹಲಿಯ ದಿಲ್ಶಾದ್ ಗಾರ್ಡನ್‌ನಲ್ಲಿ ಪಕ್ಷದ ಅಭ್ಯರ್ಥಿ ಕನ್ಹಯ್ಯ ಕುಮಾರ್ ಪರ ಪ್ರಚಾರ ಕೈಗೊಂಡ ಅವರು, ಬಿಜೆಪಿಯು ಸಂವಿಧಾನವನ್ನು ನಾಶ ಮಾಡಲಿದೆ ಎಂಬ ಆರೋಪ ಪುನರುಚ್ಚರಿಸಿದರು.

ಜಯಲಲಿತಾ ಹಿಂದುತ್ವವಾದಿ ನಾಯಕಿ: ಅಣ್ಣಾಮಲೈ

ನವದೆಹಲಿ (ಪಿಟಿಐ): ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜೆ.ಜಯಲಲಿತಾ ಅವರು ಹಿಂದುತ್ವವಾದಿ ನಾಯಕಿ ಆಗಿದ್ದರು. ಅವರ ನಿಧನದಿಂದ ತಮಿಳುನಾಡಿಗೆ ಆಗಿರುವ ನಷ್ಟವನ್ನು ಬಿಜೆಪಿ ತುಂಬುತ್ತಿದೆ ಎಂದು ತಮಿಳುನಾಡು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಅಭಿಪ್ರಾಯಪಟ್ಟಿದ್ದಾರೆ.

ಪಿಟಿಐ ಸಂಪಾದಕರ ಜತೆಗಿನ ಸಂವಾದದಲ್ಲಿ ಮಾತನಾಡಿದ ಅವರು, 'ಜಯಲಲಿತಾ ಅವರು ಬದುಕಿರುವವರೆಗೂ ತಮಿಳುನಾಡಿನಲ್ಲಿ ಇತರ ಎಲ್ಲರಿಗಿಂತ ಶ್ರೇಷ್ಠ ಹಿಂದುತ್ವವಾದಿ ನಾಯಕಿ ಆಗಿದ್ದರು. 2014ಕ್ಕೂ ಮುನ್ನ ಒಂದು ಪಕ್ಷವಾಗಿ ಬಿಜೆಪಿ ಮತ್ತು ಒಬ್ಬರು ನಾಯಕಿಯಾಗಿ ಜಯಲಲಿತಾ ಅವರು ನಿಮ್ಮ ಮುಂದೆ ಇದ್ದಾಗ, ಹಿಂದೂ ಮತದಾರರ ಸಹಜ ಆಯ್ಕೆ ಜಯಲಲಿತಾ ಆಗಿರುತ್ತಿದ್ದರು. ಅವರು ತಮ್ಮ ಹಿಂದುತ್ವದ ಪರ ಒಲವನ್ನು ಬಹಿರಂಗವಾಗಿಯೇ ಪ್ರದರ್ಶಿಸಿದ್ದರು' ಎಂದು ಹೇಳಿದರು.

ಬಿಜೆಪಿ ನಾಯಕರನ್ನು ಹೊರತುಪಡಿಸಿ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕೆ ಬೆಂಬಲ ಸೂಚಿಸಿದ ದೇಶದ ಮೊದಲ ರಾಜಕಾರಣಿ ಜಯಲಲಿತಾ ಆಗಿದ್ದರು ಎಂದು ತಿಳಿಸಿದರು.

ಜಯಲಲಿತಾ ಅವರು 2016ರಲ್ಲಿ ನಿಧನರಾದ ಬಳಿಕ ಎಐಎಡಿಎಂಕೆಯು ಹಿಂದುತ್ವ ಆದರ್ಶಗಳಿಂದ ದೂರ ಸರಿಯಿತಲ್ಲದೆ, ಪಿಎಫ್ಐನ ರಾಜಕೀಯ ಸಂಘಟನೆಯಾಗಿರುವ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಜತೆ ಕೈಜೋಡಿಸಿತು ಎಂದು ಆರೋಪಿಸಿದರು.

'ತಮಿಳುನಾಡಿನಲ್ಲಿ ಹಿಂದೂಗಳು ತಮ್ಮ ದೇವಸ್ಥಾನಗಳನ್ನು ರಕ್ಷಿಸುವ ಪಕ್ಷವೊಂದನ್ನು ಹುಡುಕುತ್ತಿದ್ದರೆ, ಅವರ ಮುಂದಿರುವ ಆಯ್ಕೆ ಬಿಜೆಪಿ ಆಗಿದೆ. ಏಕೆಂದರೆ ಎಐಎಡಿಎಂಕೆಯು ಜಯಲಲಿತಾ ಅವರು ಹೊಂದಿದ್ದ ಸಿದ್ಧಾಂತದಿಂದ ದೂರ ಸರಿದಿದೆ' ಎಂದರು.

ಪ್ರಚಾರ...

ಜಮ್‌ಶೆಡ್‌ಪುರದಲ್ಲಿ ಚುನಾವಣಾ ಪ್ರಚಾರದ ವೇಳೆ ಜೆಎಂಎಂ ನಾಯಕಿ ಕಲ್ಪನಾ ಸೊರೇನ್ ಅವರು ಸಾಂಪ್ರದಾಯಿಕ ಚರ್ಮವಾದ್ಯ ಬಾರಿಸಿದರು –ಪಿಟಿಐ ಚಿತ್ರ

ಆರನೇ ಹಂತ: ಬಹಿರಂಗ ಪ್ರಚಾರ ಅಂತ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯ ಆರನೇ ಹಂತದ ಮತದಾನದ ಬಹಿರಂಗ ಪ್ರಚಾರ ಗುರುವಾರ ಸಂಜೆ ಅಂತ್ಯಗೊಂಡಿದೆ. ಆರನೇ ಹಂತದಲ್ಲಿ ಶನಿವಾರ 58 ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ. ಒಟ್ಟು 889 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ಈ 58 ಕ್ಷೇತ್ರಗಳ ಪೈಕಿ ಕಾಂಗ್ರೆಸ್ ಒಂದೂ ಸ್ಥಾನ ಗೆದ್ದಿರಲಿಲ್ಲ. ಆದರೆ ಈ ಬಾರಿ ದೆಹಲಿ, ಹರಿಯಾಣ, ಬಿಹಾರ ಮತ್ತು ಉತ್ತರ ಪ್ರದೇಶದಲ್ಲಿ ಕೆಲವು ಸ್ಥಾನಗಳನ್ನು ಗೆಲ್ಲುವ ವಿಶ್ವಾಸ ಹೊಂದಿದೆ. ಬಿಜೆಪಿಯು ಕಳೆದ ಬಾರಿ 40 ಸ್ಥಾನಗಳನ್ನು ಜಯಿಸಿತ್ತು. ಎಸ್‌ಪಿ ಒಂದು ಸ್ಥಾನವನ್ನು ಗೆದ್ದಿತ್ತಾದರೂ, ಉಪ ಚುನಾವಣೆಯಲ್ಲಿ ಅದನ್ನು ಕಳೆದುಕೊಂಡಿತ್ತು.

ಮನೋಹರಲಾಲ್ ಖಟ್ಟರ್ (ಕರ್ನಾಲ್), ದೀಪೇಂದರ್ ಹೂಡಾ (ರೋಹ್ಟಕ್), ಮೇನಕಾ ಗಾಂಧಿ (ಸುಲ್ತಾನ್‌ಪುರ) ಮತ್ತು ಮೆಹಬೂಬಾ ಮುಫ್ತಿ (ಅನಂತನಾಗ್–ರಜೌರಿ) ಅವರು ಆರನೇ ಹಂತದಲ್ಲಿ ಕಣದಲ್ಲಿರುವ ಪ್ರಮುಖರಾಗಿದ್ದಾರೆ.

ದೆಹಲಿಯ ಎಲ್ಲ ಏಳೂ ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ. 2014 ಮತ್ತು 2019ರ ಚುನಾವಣೆಯಲ್ಲಿ ಬಿಜೆಪಿಯು ಏಳೂ ಸ್ಥಾನಗಳನ್ನು ಗೆದ್ದುಕೊಂಡಿತ್ತು. ಏಳನೇ ಹಾಗೂ ಕೊನೆಯ ಹಂತದ ಮತದಾನ ಜೂನ್ 1ರಂದು ನಡೆಯಲಿದೆ.

ಹಂತ ಐದು: ಶೇ 62.2 ಮತದಾನ

ನವದೆಹಲಿ (ಪಿಟಿಐ): ಮೇ 20ರಂದು ನಡೆದ ಲೋಕಸಭಾ ಚುನಾವಣೆಯ ಐದನೇ ಹಂತದಲ್ಲಿ ಶೇ 62.2ರಷ್ಟು ಮತದಾನವಾಗಿದ್ದು, ಪುರುಷರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಹಕ್ಕು ಚಲಾಯಿಸಿದ್ದಾರೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಶೇ 61.48ರಷ್ಟು ಪುರುಷರು ಹಾಗೂ ಶೇ 63ರಷ್ಟು ಮಹಿಳೆಯರು ಮತದಾನ ಮಾಡಿದ್ದಾರೆ. ಎರಡು ಕೇಂದ್ರಾಡಳಿತ ಪ್ರದೇಶಗಳು ಹಾಗೂ ಆರು ರಾಜ್ಯಗಳ 49 ಕ್ಷೇತ್ರಗಳಿಗೆ ಐದನೇ ಹಂತದಲ್ಲಿ ಮತದಾನ ನಡೆದಿತ್ತು ಎಂದು ಹೇಳಿಕೆಯಲ್ಲಿ ವಿವರಿಸಿದೆ. ಬಿಹಾರ, ಜಾರ್ಖಂಡ್, ಲಡಾಖ್, ಒಡಿಶಾ ಮತ್ತು ಉತ್ತರ ಪ್ರದೇಶದಲ್ಲಿ ಪುರುಷರಿಗಿಂತ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸಿದ್ದಾರೆ ಎಂದು ಆಯೋಗದ ಅಧಿಕಾರಿಗಳು ಹೇಳಿದ್ದಾರೆ. 2019ರ ಲೋಕಸಭಾ ಚುನಾವಣೆಯ ಐದನೇ ಹಂತದಲ್ಲಿ ಶೇ 64.16ರಷ್ಟು ಮತದಾನವಾಗಿತ್ತು ಎಂದಿದ್ದಾರೆ.

ಏಳನೇ ಹಂತ: 151 ಅಭ್ಯರ್ಥಿಗಳ ವಿರುದ್ಧ ಗಂಭೀರ ಪ್ರಕರಣ

ನವದೆಹಲಿ: ಲೋಕಸಭಾ ಚುನಾವಣೆಯ ಏಳನೇ ಹಾಗೂ ಅಂತಿಮ ಹಂತದ ಮತದಾನ ನಡೆಯಲಿರುವ 57 ಕ್ಷೇತ್ರಗಳಲ್ಲಿ 904 ಸ್ಪರ್ಧಿಗಳು ಕಣದಲ್ಲಿದ್ದಾರೆ. ಈ ಪೈಕಿ 151 ಅಭ್ಯರ್ಥಿಗಳು ಗಂಭೀರ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ. ಅಭ್ಯರ್ಥಿಗಳ ಅಪರಾಧ ಹಿನ್ನೆಲೆ, ಹಣಕಾಸು, ಶಿಕ್ಷಣ, ಲಿಂಗ ಹಾಗೂ ಇತರ ವಿಷಯಗಳ ಬಗ್ಗೆ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಗುರುವಾರ ವರದಿ ಪ್ರಕಟಿಸಿದೆ. ಏಳನೇ ಹಂತದಲ್ಲಿ ಕಣದಲ್ಲಿರುವವರಲ್ಲಿ ಬಿಜೆಪಿಯ 18, ಬಿಎಸ್‌ಪಿಯ 10, ಕಾಂಗ್ರೆಸ್‌ನ 7, ಎಸ್‌ಪಿ 6, ಎಎಪಿ, ಸಿಪಿಎಂ ಹಾಗೂ ಅಕಾಲಿ ದಳದ ತಲಾ ನಾಲ್ವರು ಅಭ್ಯರ್ಥಿಗಳು ಗಂಭೀರ ಅಪರಾಧ ಪ್ರಕರಣ ಎದುರಿಸುತ್ತಿದ್ದಾರೆ. ಏಳನೇ ಹಂತದ ಮತದಾನ ಜೂನ್ 1 ರಂದು ನಡೆಯಲಿದೆ.

ಅಭ್ಯರ್ಥಿಗಳ ವಿವರ

904 ಒಟ್ಟು ಅಭ್ಯರ್ಥಿಗಳು

95 ಮಹಿಳೆಯರು | 904 ಪ್ರಮಾಣಪತ್ರ ವಿಶ್ಲೇಷಣೆ



ಅಪರಾಧ ಪ್ರಕರಣ

ಗಂಭೀರ ಅಪರಾಧ ಪ್ರಕರಣ ಎದುರಿಸುತ್ತಿರುವವರು	ಕೊಲೆ ಆರೋಪ	ಕೊಲೆ ಯತ್ನ ಆರೋಪ	ಮಹಿಳೆಯರ ವಿರುದ್ಧದ ಅಪರಾಧ	ಅತ್ಯಾಚಾರ	ಪ್ರಕರಣಗಳಲ್ಲಿ ಶಿಕ್ಷೆಗೊಳಗಾದವರು	ದ್ವೇಷ ಭಾಷಣ
151	4	27	13	2	13	25

ಸಂಪತ್ತು

₹3.27 ಕೋಟಿ ಅಭ್ಯರ್ಥಿಗಳ ಸರಾಸರಿ ಆಸ್ತಿ

ಪಕ್ಷವಾರು ಕೋಟ್ಯಧಿಪತಿಗಳು

ಬಿಜೆಪಿ	ಕಾಂಗ್ರೆಸ್	ಬಿಎಸ್‌ಪಿ	ಅಕಾಲಿದಳ	ಎಎಪಿ	ಟಿಎಂಸಿ	ಎಸ್‌ಪಿ
44	30	22	13	13	8	9

ಶ್ರೀಮಂತ ಅಭ್ಯರ್ಥಿಗಳು

ಹರ್‌ಸಿಮ್ರತ್ ಕೌರ್ ಬಾದಲ್ (ಅಕಾಲಿದಳ, ಬಠಿಂಡಾ) ₹198.51 ಕೋಟಿ

ವೈಜಯಂತ್ ಪಾಂಡಾ (ಬಿಜೆಪಿ, ಕೇಂದ್ರಪಾಡ) ₹148.08 ಕೋಟಿ



ಸಂಜಯ್ ಟಂಡನ್ (ಬಿಜೆಪಿ, ಚಂಡೀಗಢ) ₹111.86 ಕೋಟಿ

ಆಧಾರ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್)

ಜನಸಾಮಾನ್ಯರು ತಮ್ಮ ಅದಮ್ಯ ಮನೋಭಾವದಿಂದ ಜೀವನದ ದೈನಂದಿನ ಸವಾಲುಗಳನ್ನು ಎದುರಿಸುತ್ತಲೇ ಇರುತ್ತಾರೆ, ಎಂತಹ ಸಂದರ್ಭದಲ್ಲೂ ಪ್ರಗತಿ ಸಾಧಿಸುವುದೇ ಅವರ ಜೀವನದ ಮೂಲ ಮಂತ್ರವಾಗಿರುತ್ತದೆ.
ಅವರ ದೈನಂದಿನ ಹೋರಾಟವು ಅವರ ಆಂತರಿಕ ಸಂಕಲ್ಪವನ್ನು ತೋರಿಸುತ್ತದೆ. ಸಂದರ್ಭಗಳ ಒತ್ತಡಕ್ಕೆ ಮಣಿಯದ ಅವರ ಆ ಸಂಕಲ್ಪ ಹಾಗೂ ತಮ್ಮ ಕನಸು ಮತ್ತು ಆಕಾಂಕ್ಷೆಗಳ ಬೆನ್ನಟ್ಟಿ ಅಭಿವೃದ್ಧಿಯ ಹಾದಿಯಲ್ಲಿ ಸಾಗುವ ಅವರ ಆತ್ಮವಿಶ್ವಾಸ ತಮ್ಮ ಪ್ರೀತಿಪಾತ್ರರ ಭವಿಷ್ಯವನ್ನು ಭದ್ರಪಡಿಸುವ ಮತ್ತು ಸುಧಾರಿಸುವ ಬಯಕೆಯನ್ನು ವ್ಯಕ್ತಪಡಿಸುತ್ತವೆ. ದೃಢ ನಿರ್ಧಾರದೊಂದಿಗೆ ಅವರು ಮುಂದಿಡುವ ಪ್ರತಿಯೊಂದು ಹೆಜ್ಜೆಯೂ ಕನಸನ್ನು ನನಸಾಗಿಸುವ ದಿಕ್ಕಿನಲ್ಲಿ ಇಡುವ ಒಂದು ದಿಟ್ಟ ಹೆಜ್ಜೆಯಾಗಿರುತ್ತದೆ ಎಂಬುದನ್ನು ಇದು ನಮಗೆ ನೆನಪಿಸುತ್ತದೆ.
'ಛಲ, ಮುನ್ನಡೆಯುತ್ತಲೇ ಇರುವ ಛಲ!', ಎಂಬುದು ಪ್ಯಾರಗಾನ್‌ನ ಸ್ಫೂರ್ತಿಯಾಗಿದೆ. ಏನೇ ಆಗಲಿ, ರಸ್ತೆ ಎಷ್ಟೇ ಕಠಿಣವಾಗಿರಲಿ, ಅಚಲವಾದ ಆತ್ಮವಿಶ್ವಾಸದಿಂದ ಮುನ್ನಡೆಯುತ್ತಿರುವ ಈ ಜನರಿಗೆ ನಾವು ಆರಾಮ ನೀಡುತ್ತೇವೆ ಎಂಬುದೇ ನಮಗೆ ಹೆಮ್ಮೆಯ ಸಂಗತಿ.
Paragon®
ಛಲ, ಮುನ್ನಡೆಯುತ್ತಲೇ ಇರುವ ಛಲ!
Turmeriq-Paragon-K-103
Shop now
www.paragonfootwear.com
ವಿಶಿಷ್ಟ ಪ್ಯಾರಗಾನ್ ಸ್ಟೋರ್‌ಗಳಲ್ಲಿ ಹಾಗೂ ಪ್ರಮುಖ ಮಲ್ಟಿ-ಬ್ರ್ಯಾಂಡ್ ಫುಟ್‌ವೇರ್ ಔಟ್‌ಲೆಟ್‌ಗಳಲ್ಲಿ ಲಭ್ಯ.
Follow us on /paragonfootwear
Model No. 6767
Model No. 6667
Model No. 9613
Model No. 7042
Model No. 9580

ನಗರದಲ್ಲಿ ಕುಡಿಯುವ ನೀರು ಗುಣಮಟ್ಟ ಖಾತರಿಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ

ಸಮಸ್ಯೆ ನಿವಾರಣೆಗೆ 5 ಅಂಶಗಳ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು: ನಗರದಲ್ಲಿ ಜನರ ಸಮಸ್ಯೆಗಳ ನಿವಾರಣೆಗೆ ಐದು ಅಂಶಗಳ ಕಾರ್ಯಕ್ರಮ ಜಾರಿಗೊಳಿಸಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೂಚಿಸಿದರು.

ಬಿಬಿಎಂಪಿ, ಜಲಮಂಡಳಿ, ಬಿಡಿಎ ಹಾಗೂ ಬಿಎಂಟಿಎಫ್ ಅಧಿಕಾರಿಗಳೊಂದಿಗೆ ಗುರುವಾರ ಸಭೆ ನಡೆಸಿದ ಶಿವಕುಮಾರ್, ಈ ಐದೂ ಅಂಶಗಳ ಕಾರ್ಯಕ್ರಮಗಳನ್ನು ಸದ್ಯದಿಂದಲೇ ಜಾರಿಗೊಳಿಸಬೇಕು ಎಂದು ಆದೇಶಿಸಿದರು.

ನಗರದಲ್ಲಿ ನಾಗರಿಕರಿಗೆ ಪೂರೈಕೆ ಆಗುತ್ತಿರುವ ಕುಡಿಯುವ ನೀರಿನ ಗುಣಮಟ್ಟದ ಬಗ್ಗೆ ಖಾತರಿ ಇರಬೇಕು. ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಜಲಮಂಡಳಿ ಪ್ರತ್ಯೇಕ ತಂಡ ರಚಿಸಬೇಕು. ಬಿಬಿಎಂಪಿ ಸಿಬ್ಬಂದಿ ನಗರದ ಎಲ್ಲ ಭಾಗಗಳಲ್ಲಿ ನಿತ್ಯವೂ ನೀರಿನ ಮಾದರಿ ಸಂಗ್ರಹಿಸಿ ಜಲಮಂಡಳಿಗೆ ಪರೀಕ್ಷೆಗೆ ನೀಡಬೇಕು ಎಂದು ಸೂಚಿಸಲಾಗಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ನಗರದಲ್ಲಿ 2016-17ರಲ್ಲಿ ರಾಜಕಾಲುವೆಗಳಲ್ಲಿ 2,626 ಒತ್ತುವರಿಗಳನ್ನು ಗುರುತಿಸಲಾಗಿತ್ತು. 2022- 23ರ ಹೊತ್ತಿಗೆ 556 ಒತ್ತುವರಿ ತೆರವು ಮಾಡಲಾಗಿತ್ತು. ಈಗ 1,136 ಹೊಸದಾಗಿ ಒತ್ತುವರಿಗಳನ್ನು ಗುರುತಿಸಲಾಗಿದ್ದು, ಒಟ್ಟು 4,316 ಒತ್ತುವರಿಗಳಿವೆ. ಉಪಗ್ರಹ, ಗೂಗಲ್ ಇಮೇಜ್ ಮತ್ತು ಸರ್ವೆ ಇಲಾಖೆ ಮೂಲಕ ಈ ಒತ್ತುವರಿ ಮಾಹಿತಿ ಸಂಗ್ರಹಿಸಿದೆ. ರಾಜಕಾಲುವೆಗಳ ಒತ್ತುವರಿ ತೆರವುಗೊಳಿಸಬೇಕು ಎಂದು ಪಾಲಿಕೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಹಲವು ಪ್ರಕರಣಗಳು ನ್ಯಾಯಾಲಯದಲ್ಲಿದ್ದು, ಅವುಗಳ ಶೀಘ್ರ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳಲಾಗುತ್ತದೆ. ರಾಜಕಾಲುವೆಯ ಒತ್ತುವರಿ ತೆರವುಗೊಳಿಸಲು ಬೆಂಗಳೂರು ಮಹಾನಗರ ಕಾರ್ಯಪಡೆ (ಬಿಎಂಟಿಎಫ್) ನೆರವು ಪಡೆದುಕೊಳ್ಳಬೇಕು ಎಂದು ಪಾಲಿಕೆ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ಹೇಳಿದರು.

ಲೋಕಸಭಾ ಚುನಾವಣೆಯ ಹಿಂದೆ 'ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ' ಕಾರ್ಯಕ್ರಮದಲ್ಲಿ, ಅಧಿಕಾರಿಗಳ ದೌರ್ಜನ್ಯ ಸೇರಿದಂತೆ ನಾಗರಿಕರು ಹಲವು ರೀತಿಯ ದೂರುಗಳನ್ನು ನೀಡಿದ್ದರು. ಈ ದೂರುಗಳ ಬಗ್ಗೆ ಚುನಾವಣೆ ಫಲಿತಾಂಶದ ನಂತರ ಪುನರ್‌ವಿಮರ್ಶೆ ಸಭೆ ನಡೆಸಲಾಗುತ್ತದೆ. ಜನರಿಗೆ ಪರಿಹಾರ ಕಲ್ಪಿಸಿರುವ ವಿವರ ಅಥವಾ ಯಾವ ಕಾರಣಕ್ಕೆ ಪರಿಹಾರ ಸಾಧ್ಯವಾಗಿಲ್ಲ ಎಂಬ ಪ್ರಮಾಣೀಕೃತ ಮಾಹಿತಿಯನ್ನು ಒದಗಿಸಲು ಎಲ್ಲ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಬೆಂಗಳೂರಿನಲ್ಲಿ 182 ಕೆರೆಗಳಿವೆ. ಅದರಲ್ಲಿ 116 ಕೆರೆಗಳ ಸರ್ವೆ ನಡೆಯಬೇಕಿದೆ. ಎಲ್ಲ ರೀತಿಯ ಡಿಜಿಟಲ್ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಸರ್ವೆ ಕಾರ್ಯ ಮುಗಿಸಲು ಬಿಬಿಎಂಪಿ ಹಾಗೂ ಸರ್ವೆ ಇಲಾಖೆಗೆ ಸೂಚಿಸಲಾಗಿದೆ. ನಗರದಲ್ಲಿ 7,000 ಕೊಳವೆಬಾವಿಗಳು ಬತ್ತಿದ್ದವು. ಅಂತರ್ಜಲ ಕುಸಿತವಾಗಿರುವುದರಿಂದ ಅದನ್ನು ವೃದ್ಧಿಸಲು ಕೆರೆಗಳನ್ನು ತುಂಬಿಸಬೇಕಿದೆ. ವರ್ಷದ ಎಲ್ಲ ಸಮಯದಲ್ಲೂ ಕೆರೆಗಳು ಸಂಸ್ಕರಿಸಿದ ನೀರಿನಿಂದ ತುಂಬಿರಬೇಕು. ಇದಕ್ಕೆ ಅಗತ್ಯವಾದ ಕೊಳವೆಮಾರ್ಗ ಸೇರಿದಂತೆ ಎಲ್ಲ ರೀತಿಯ ನಿರ್ವಹಣೆಯನ್ನೂ ಜಲಮಂಡಳಿಗೆ ವಹಿಸಲಾಗಿದೆ ಎಂದು ಶಿವಕುಮಾರ್ ಮಾಹಿತಿ ನೀಡಿದರು.

ಬಿಬಿಎಂಪಿ ಆಸ್ತಿಗಳ ಬಗ್ಗೆ ನಿಖರವಾದ ಮಾಹಿತಿ ಇಲ್ಲ. ಹೀಗಾಗಿ ಪಾಲಿಕೆ ಆಸ್ತಿಗಳು ಎಷ್ಟಿವೆ, ಎಲ್ಲಿವೆ, ಬಾಡಿಗೆ ಅಥವಾ ಗುತ್ತಿಗೆಗೆ ನೀಡಲಾಗಿದೆಯೇ, ಒತ್ತುವರಿ ಆಗಿದೆಯೇ ಎಂಬ ಪ್ರತ್ಯೇಕ ಮಾಹಿತಿ ಪಟ್ಟಿ ತಯಾರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ನಗರದಲ್ಲಿ 5 ಸಾವಿರಕ್ಕೂ ಹೆಚ್ಚು ರಸ್ತೆಗುಂಡಿಗಳು ಇವೆ ಎಂದು ಮುಖ್ಯಮಂತ್ರಿಯವರು ಬುಧವಾರ ಮಾಹಿತಿ ನೀಡಿದ್ದರು. ಈ ಎಲ್ಲ ಗುಂಡಿಗಳನ್ನು 15 ದಿನಗಳಲ್ಲಿ ಮುಚ್ಚಲು ಈಗಾಗಲೇ ಸೂಚಿಸಲಾಗಿದೆ. ಲೋಕಸಭಾ ಚುನಾವಣಾ ಫಲಿತಾಂಶ ಬಂದ ನಂತರ ಸಾರ್ವಜನಿಕರೇ ರಸ್ತೆಗುಂಡಿಗಳ ಚಿತ್ರ ತೆಗೆದು ಮಾಹಿತಿ ನೀಡುವ ಆ್ಯಪ್ ಬಿಡುಗಡೆ ಮಾಡಲಾಗುತ್ತದೆ ಎಂದು ಶಿವಕುಮಾರ್ ಅವರು ತಿಳಿಸಿದರು.

ಐದು ಅಂಶಗಳು ಯಾವುವು

- ಕುಡಿಯುವ ನೀರು ಗುಣಮಟ್ಟ ಖಾತರಿ
- ರಾಜಕಾಲುವೆ ತೆರವಿಗೆ ಬಿಎಂಟಿಎಫ್ ನೆರವು
- ನಾಗರಿಕರ ದೂರಿಗೆ ಪರಿಹಾರಕ್ಕೆ ಪ್ರಮಾಣ
- ಸದಾ ಕಾಲ ಕೆರೆಗಳನ್ನು ತುಂಬಿಸುವ ಹೊಣೆ ಜಲಮಂಡಳಿಗೆ
- ಬಿಬಿಎಂಪಿ ಆಸ್ತಿಗಳ ರಕ್ಷಣೆಗೆ ಕ್ರಿಯಾಯೋಜನೆ

ರೈಲ್ವೆ ಸುರಕ್ಷಾ ಕ್ರಮ: ಜಾಗೃತಿ

ರೈಲ್ವೆ ಸಂರಕ್ಷಣಾ ಪಡೆ (ಆರ್‌ಪಿಎಫ್) ಮತ್ತು ಬಚ್‌ಪನ್ ಬಚಾವೊ ಆಂದೋಲನ (ಬಿಬಿಎ) ವತಿಯಿಂದ ಹೆಬ್ಬಾಳ ರೈಲು ನಿಲ್ದಾಣದ ಬಳಿ ಸಾರ್ವಜನಿಕ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆ ಸಂರಕ್ಷಣಾ ಪಡೆ (ಆರ್‌ಪಿಎಫ್) ಮತ್ತು ಬಚ್‌ಪನ್ ಬಚಾವೊ ಆಂದೋಲನ (ಬಿಬಿಎ) ವತಿಯಿಂದ ಸುರಕ್ಷಾ ಕ್ರಮಗಳ ಬಗ್ಗೆ ಮತ್ತು ರೈಲ್ವೆ ಹಳಿಗಳ ಸುತ್ತಲಿನ ನಿವಾಸಿಗಳ ಜವಾಬ್ದಾರಿ ಬಗ್ಗೆ ಹೆಬ್ಬಾಳ ರೈಲು ನಿಲ್ದಾಣದ ಬಳಿ ಸಾರ್ವಜನಿಕ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕೊಳೆಗೇರಿ ನಿವಾಸಿಗಳಲ್ಲಿ ಅರಿವು ಮೂಡಿಸುವುದು ಮತ್ತು ಅವರನ್ನು ತೊಡಗಿಸುವ ಉದ್ದೇಶದಿಂದ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ 100ಕ್ಕೂ ಅಧಿಕ ನಿವಾಸಿಗಳು ಭಾಗವಹಿಸಿದ್ದರು. ರೈಲ್ವೆ ಹಳಿಗಳ ಬಳಿ ಅಸುರಕ್ಷಿತ ಅಭ್ಯಾಸಗಳಿಂದ ಅಪಾಯ ಉಂಟಾಗಲಿದೆ ಎಂದು ಅಧಿಕಾರಿಗಳು ತಿಳಿಸಿಕೊಟ್ಟರು.

ರೈಲುಗಳ ಮೇಲೆ ಕಲ್ಲು ತೂರಾಟ ಮಾಡುವುದು, ಹಳಿಗಳ ಮೇಲೆ ಕಸ ಎಸೆಯುವುದು, ವಸ್ತುಗಳನ್ನು ಇಡುವುದು ಮುಂತಾದ ಚಟುವಟಿಕೆಗಳ ದುಷ್ಪರಿಣಾಮದ ಬಗ್ಗೆ ತಿಳಿಸಿಕೊಡಲಾಯಿತು. ಸಂಗೀತದೊಂದಿಗೆ ಆರಂಭವಾದ ಈ ಕಾರ್ಯಕ್ರಮದಲ್ಲಿ ಸಂವಾದದ ಮೂಲಕ ಜಾಗೃತಿ ಮೂಡಿಸಲಾಯಿತು. ದುಷ್ಪರಿಣಾಮಗಳ ಬಗ್ಗೆ ತಿಳಿವಳಿಕೆ ಕರಪತ್ರಗಳನ್ನು ವಿತರಿಸಲಾಯಿತು ಎಂದು ಸಾರ್ವಜನಿಕ ಸಂಪರ್ಕ ಅಧಿಕಾರಿ ತ್ರಿನೇತ್ರ ಕೆ.ಆರ್. ತಿಳಿಸಿದ್ದಾರೆ.

ಬಾಕಿ ಪಾವತಿಸಿ– ಪತ್ರಕರ್ತರ ಸಹಕಾರ ಸಂಘಕ್ಕೆ ಆದೇಶ

ಬೆಂಗಳೂರು: ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ನಿವೃತ್ತ ಕಾರ್ಯದರ್ಶಿ ಎ.ಎಸ್. ನಾಗರಾಜಸ್ವಾಮಿ ಅವರಿಗೆ ಮೂರು ತಿಂಗಳ ವ್ಯತ್ಯಾಸ ತುಟ್ಟಿಭತ್ಯೆ, ರಜೆ ನಗದೀಕರಣ ವ್ಯತ್ಯಾಸ ಮೊತ್ತ, 2020–21ನೇ ಸಾಲಿನ ಬೋನಸ್ ಬಾಕಿ ಪಾವತಿಸುವಂತೆ ಸಂಘಕ್ಕೆ ಸಹಕಾರ ಸಂಘಗಳ ಹೆಚ್ಚುವರಿ ನಿಬಂಧಕರು ಆದೇಶಿಸಿದ್ದಾರೆ.

ಮೇ 18ರಂದು ಆದೇಶ ಹೊರಡಿಸಲಾಗಿದ್ದು, ದಾವಾ ಅರ್ಜಿ ದಾಖಲಿಸಿದ ದಿನಾಂಕದಿಂದ ಮರುಪಾವತಿ ದಿನದವರೆಗೆ ಶೇ 18ರ ಬಡ್ಡಿಯೊಂದಿಗೆ ಪಾವತಿಸುವಂತೆ ಸಂಘಕ್ಕೆ ಸೂಚಿಸಲಾಗಿದೆ.

ಉಪದಾನ ಪಾವತಿ ಕಾಯ್ದೆಯಡಿ ನೇಮಕಗೊಂಡ ಮೇಲ್ಮನವಿ ಪ್ರಾಧಿಕಾರಿ ಸಂಘ ಸಲ್ಲಿಸಿದ್ದ ಮೇಲ್ಮನವಿಯನ್ನೂ ಮಾರ್ಚ್ 28ರಂದು ವಜಾಗೊಳಿಸಿದ್ದರು. ನಿಯಂತ್ರಣಾಧಿಕಾರಿಗಳು ಹೊರಡಿಸಿದ್ದ ಆದೇಶವನ್ನು ಸ್ಥಿರೀಕರಿಸಿ, ಸಂಘ ಪಾವತಿಸಬೇಕಾದ ₹8.28 ಲಕ್ಷ ಮತ್ತು ಆ ಮೊತ್ತದ ಮೇಲೆ ಶೇ 10ರಷ್ಟು ಬಡ್ಡಿ ಪಡೆಯಲು ನಾಗರಾಜಸ್ವಾಮಿ ಅವರು ಅರ್ಹರೆಂದು ಹೆಚ್ಚುವರಿ ನಿರ್ದೇಶಕರು ಆದೇಶ ನೀಡಿದ್ದಾರೆ.

ದೆಹಲಿ: 12 ಕಾಲೇಜುಗಳಿಗೆ ಇ–ಮೇಲ್ ಬಾಂಬ್ ಬೆದರಿಕೆ

ನವದೆಹಲಿ (ಪಿಟಿಐ): ದೆಹಲಿ ವಿಶ್ವವಿದ್ಯಾನಿಲಯದ ಪ್ರತಿಷ್ಠಿತ ಲೇಡಿ ಶ್ರೀರಾಮ್ ಕಾಲೇಜು ಸೇರಿದಂತೆ ಸುಮಾರು 12 ಕಾಲೇಜುಗಳಿಗೆ ಗುರುವಾರ ಬಾಂಬ್ ಬೆದರಿಕೆ ಇ-ಮೇಲ್‌ಗಳು ಬಂದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಲ್‌ಎಸ್‌ಆರ್ ಕಾಜೇಜು, ಹಂಸರಾಜ್ ಕಾಲೇಜು, ಗಾರ್ಗಿ ಕಾಲೇಜು, ರಾಮಜಾಸ್ ಕಾಲೇಜು, ಜಾಕಿರ್ ಹುಸೇನ್ ಕಾಲೇಜು, ಇಂದ್ರಪ್ರಸ್ಥ ಮಹಿಳಾ ಕಾಲೇಜು, ಲೇಡಿ ಇರ್ವಿನ್ ಕಾಲೇಜು, ಕಿರೋರಿ ಮಾಲ್ ಕಾಲೇಜು, ಭಾಸ್ಕರಾಚಾರ್ಯ ಕಾಲೇಜು, ದೀನ್ ದಯಾಳ್ ಉಪಾಧ್ಯಾಯ ಕಾಲೇಜು, ಶ್ರೀ ವೆಂಕಟೇಶ್ವರ ಕಾಲೇಜು, ಮತ್ತು ಪಿಜಿಡಿಎವಿ ಕಾಲೇಜುಗಳಿಗೂ ಇ–ಮೇಲ್ ಬಾಂಬ್ ಬೆದರಿಕೆ ಇ–ಮೇಲ್‌ಗಳು ಬಂದಿವೆ ಎಂದಿದ್ದಾರೆ.

ಸ್ಥಳೀಯ ಪೊಲೀಸರು, ಬಾಂಬ್ ನಿಷ್ಕ್ರಿಯ ದಳ, ಬಾಂಬ್ ಪತ್ತೆ ತಂಡ ಶ್ವಾನ ದಳದೊಂದಿಗೆ ಎಲ್‌ಎಸ್‌ಆರ್ ಕಾಲೇಜಿಗೆ ಆಗಮಿಸಿ ಶೋಧ ನಡೆಸಲಾಗಿದೆ. ಎಲ್ಲಾ ಕಾಲೇಜು ಕ್ಯಾಂಪಸ್‌ಗಳನ್ನು ಶೋಧಿಸಲಾಗುತ್ತಿದ್ದು, ಅವುಗಳಲ್ಲಿ ಯಾವುದೂ ಅನುಮಾನಾಸ್ಪದವಾಗಿ ಪತ್ತೆಯಾಗಿಲ್ಲ ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ.

ಟರ್ಫ್ ಕ್ಲಬ್‌ನಲ್ಲಿ ರೇಸ್ ಆಯೋಜಿಸಲು ಅನುಮತಿ ಕೋರಿ ಅರ್ಜಿ

'10 ದಿನಗಳಲ್ಲಿ ಮನವಿ ಪರಿಗಣಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ (ರೇಸ್ ಕೋರ್ಸ್) ಕುದುರೆ ಪಂದ್ಯಾವಳಿಗಳ ಆಯೋಜನೆಗೆ ಅನುಮತಿ ಕೋರಿ ಸಲ್ಲಿಸಲಾಗಿರುವ ಮನವಿಯನ್ನು ಮುಂದಿನ 10 ದಿನಗಳಲ್ಲಿ ಕಾನೂನು ಬದ್ಧವಾಗಿ ಪರಿಗಣಿಸಿ' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಸೂಚಿಸಿದೆ.

ಕುದುರೆ ಪಂದ್ಯಗಳ ಆಯೋಜನೆಗೆ ಪರವಾನಗಿ ನೀಡದ ಸರ್ಕಾರದ ಕ್ರಮವನ್ನು ಪ್ರಶ್ನಿಸಿ, ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್, ಕರ್ನಾಟಕ ರೇಸ್ ಹಾರ್ಸ್ ಓನರ್ಸ್ ಅಸೋಸಿಯೇಷನ್ ಮತ್ತು ಕರ್ನಾಟಕ ಟ್ರೈನರ್ಸ್ ಅಸೋಸಿಯೇಷನ್ ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ಜಿ.ಎಸ್. ಕಮಲ್ ಅವರಿದ್ದ ನ್ಯಾಯಪೀಠ

ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, 'ಕುದುರೆ ಪಂದ್ಯ ಆಯೋಜನೆ ಪರವಾನಗಿ ವಿಷಯಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ನೇತೃತ್ವದಲ್ಲಿ 2 ಗಂಟೆಗಳ ಕಾಲ ಚರ್ಚೆಯಾಗಿದೆ. ಈ ಸಂಬಂಧ ಇತರೆ ಪಾಲುದಾರರೊಂದಿಗೂ ಚರ್ಚೆ ನಡೆಸಬೇಕಾಗಿದ್ದು, ಅಕ್ರಮಗಳ ತಡೆಗಾಗಿ ಕಾನೂನು ಬದ್ಧವಾಗಿ ಷರತ್ತುಗಳನ್ನು ವಿಧಿಸಿ ಅನುಮತಿ ನೀಡಬೇಕಾಗಿದೆ. ಪಂದ್ಯಾವಳಿಯಲ್ಲಿ ಕೆಲ ಆಕ್ಷೇಪಾರ್ಹ ಚಟುವಟಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದ ಕಾರಣ ಪರವಾನಗಿ ನೀಡಿಕೆ ವಿಳಂಬವಾಗಿದೆ. ಅಕ್ರಮಗಳಿಗೆ ಕಡಿವಾಣ ಹಾಕಿ ಕಾನೂನು ಬದ್ಧ ಷರತ್ತು ವಿಧಿಸಿ ಪರವಾನಗಿ ನೀಡಬೇಕಾಗಿದ್ದು, ನಾಲ್ಕು ವಾರಗಳ ಕಾಲಾವಕಾಶ ನೀಡಬೇಕು' ಎಂದು ಮನವಿ ಮಾಡಿದರು.

ಅರ್ಜಿದಾರರ ಪರ ವಾದ ಮಂಡಿಸಿದ ಹೈಕೋರ್ಟ್ ವಕೀಲ ಶ್ರೀರಂಗ ಅವರು, 'ರೇಸ್ ಕೋರ್ಸ್ ಆಡಳಿತ ಮಂಡಳಿಯಲ್ಲಿ ಸರ್ಕಾರದ ಹಣಕಾಸು ಕಾರ್ಯದರ್ಶಿ, ಬೆಂಗಳೂರು ನಗರ ಪೊಲೀಸ್ ಆಯುಕ್ತರು ಸದಸ್ಯರಾಗಿದ್ದಾರೆ. ಕುದುರೆ ಪಂದ್ಯಗಳ ಆಯೋಜನೆಯ ಎಲ್ಲ ಚಟುವಟಿಕೆಗಳೂ ಸರ್ಕಾರದ ಗಮನಕ್ಕೆ ಬರುತ್ತವೆ. ಹೀಗಾಗಿ, ಅಕ್ರಮಗಳು ನಡೆಯುವ ಸಾಧ್ಯತೆಗಳು ಇಲ್ಲ' ಎಂದು ಪ್ರತಿಪಾದಿಸಿದರು.

'ಬೆಟ್ಟಿಂಗ್ ನಡೆಸಿದ ಆರೋಪ ಹೊತ್ತ ಬುಕ್ಕಿಗಳ ಪರವಾನಗಿ ರದ್ದು ಪಡಿಸುವುದಕ್ಕಾಗಿ ಮಂಡಳಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಕುದುರೆ ಪಂದ್ಯಗಳ ಆಯೋಜನೆಯಲ್ಲಿ ಬುಕ್ಕಿ ಕಂಪನಿಗಳಿಗೆ ಯಾವುದೇ ಸಂಬಂಧವಿರುವುದಿಲ್ಲ' ಎಂದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ಅಡ್ವೊಕೇಟ್ ಜನರಲ್ ಅವರ ವಾದಕ್ಕೆ ಪ್ರತಿಕ್ರಿಯಿಸಿ, 'ನಾಲ್ಕು ವಾರಗಳ ಕಾಲಾವಕಾಶ ವಿಳಂಬವಾಗಲಿದೆ. ಆದ್ದರಿಂದ ಮುಂದಿನ 10 ದಿನಗಳಲ್ಲಿ ಅರ್ಜಿದಾರರ ಮನವಿಯನ್ನು ಪರಿಗಣಿಸಿ' ಎಂದು ಸೂಚಿಸಿ ವಿಚಾರಣೆಯನ್ನು ಜೂನ್ 6ಕ್ಕೆ ಮುಂದೂಡಿತು.

ಹೃಷಿಕೇಶದ ಏಮ್ಸ್ ಆಸ್ಪತ್ರೆಯಲ್ಲಿ ವೈದ್ಯೆಗೆ ಲೈಂಗಿಕ ಕಿರುಕುಳ

'ಸಿನಿಮೀಯ ರೀತಿ ಬಂಧಿತನ ಕರೆದೊಯ್ದರು'

ಡೆಹ್ರಾಡೂನ್ (ಪಿಟಿಐ): ಹೃಷಿಕೇಶದ ಏಮ್ಸ್ ಆಸ್ಪತ್ರೆಯಲ್ಲಿ ವೈದ್ಯೆಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ ನರ್ಸಿಂಗ್ ಅಧಿಕಾರಿಯನ್ನು ಬಂಧಿಸಿದ ಪೊಲೀಸರು, ಆತ ಸಂಭವನೀಯ ಗುಂಪುದಾಳಿಗೆ ಸಿಗದಂತೆ ಆಸ್ಪತ್ರೆಯ ನಾಲ್ಕನೇ ಮಹಡಿಯಿಂದ ಜೀಪಿನಲ್ಲಿ ಸಿನಿಮೀಯ ರೀತಿ ಕರೆದೊಯ್ದ ಘಟನೆ ನಡೆದಿದೆ.

ಮೇ 21ರಂದು ನಡೆದ ಈ ಘಟನೆಯ ವಿಡಿಯೊ ಗುರುವಾರ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿದೆ.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊದಲ್ಲಿ, ಪೊಲೀಸ್ ಜೀಪ್ ಅನ್ನು ಎರಡೂ ಬದಿಯಲ್ಲಿ ಹಾಸಿಗೆಗಳ ಸಾಲುಗಳು ಇರುವ ರೋಗಿಗಳ ನಿರೀಕ್ಷಣಾ ಕಾರಿಡಾರ್‌ನಲ್ಲಿ ಚಾಲನೆ ಮಾಡಿರುವುದು ಕಾಣುತ್ತದೆ. ರೋಗಿಗಳು ಮತ್ತು ಅವರ ಪರಿಚಾರಕರು ದಿಗ್ಭ್ರಮೆಯಲ್ಲಿ ನೋಡುತ್ತಿರುವಾಗಲೇ, ಪೊಲೀಸ್ ವಾಹನಕ್ಕೆ ದಾರಿ ಮಾಡಿಕೊಡಲು ಭದ್ರತಾ ಸಿಬ್ಬಂದಿ ಧಾವಿಸಿ ಹಾಸಿಗೆಗಳನ್ನು, ಸ್ಟ್ರೆಚರ್‌ಗಳನ್ನು ಪಕ್ಕಕ್ಕೆ ಸರಿಸುವ ದೃಶ್ಯಗಳು ಇದರಲ್ಲಿವೆ.

ವೈದ್ಯೆಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ನರ್ಸಿಂಗ್ ಅಧಿಕಾರಿ ಸತೀಶ್ ಕುಮಾರ್ ಎಂಬಾತನನ್ನು ಪೊಲೀಸರು ಭಾನುವಾರ ಆಸ್ಪತ್ರೆಯಲ್ಲೇ ಬಂಧಿಸಿದರು. ಆಸ್ಪತ್ರೆಯ ನಾಲ್ಕನೇ ಮಹಡಿಗೆ ರ‍್ಯಾಂಪ್ ಮೂಲಕವೇ ಜೀಪಿನಲ್ಲಿ ತಲುಪಿದ್ದ ಪೊಲೀಸರು ಆತನನ್ನು ಅಲ್ಲಿಂದಲೇ ಜೀಪಿನಲ್ಲಿ ಕೂರಿಸಿಕೊಂಡು ಮೊದಲ ಮಹಡಿಯವರೆಗೂ ಕರೆತಂದು, ಅಲ್ಲಿ ಪ್ರತಿಭಟನಕಾರರು ಜಮಾಯಿಸಿದ್ದರಿಂದ ರೋಗಿಗಳ ನಿರೀಕ್ಷಣಾ ಕಾರಿಡಾರ್ ಮೂಲಕ ಸುರಕ್ಷಿತವಾಗಿ ಹೊರಗೆ ಕರೆದೊಯ್ದಿದ್ದಾರೆ.

ಹೃಷಿಕೇಶದ ಏಮ್ಸ್ ಆಸ್ಪತ್ರೆಯಲ್ಲಿ ವೈದ್ಯೆಗೆ ಲೈಂಗಿಕ ಕಿರುಕುಳ ನೀಡಿದ ನರ್ಸಿಂಗ್ ಅಧಿಕಾರಿಯನ್ನು ಆಸ್ಪತ್ರೆಯೊಳಗಿನಿಂದ ಬಂಧಿಸಿ ಜೀಪಿನಲ್ಲಿ ಪೊಲೀಸರು ಸಿನಿಮೀಯವಾಗಿ ಕರೆದೊಯ್ದ ಸನ್ನಿವೇಶ — ಪಿಟಿಐ ಚಿತ್ರ

'ವೈದ್ಯೆಗೆ ಲೈಂಗಿಕ ಕಿರುಕುಳ ನೀಡಿರುವುದಕ್ಕೆ ಕೋಪೋದ್ರಿಕ್ತಗೊಂಡಿದ್ದ ಆಸ್ಪತ್ರೆಯ ನಿವಾಸಿ ವೈದ್ಯರು ಪ್ರತಿಭಟನೆಗೆ ಇಳಿದಿದ್ದರು. ಆರೋಪಿಯನ್ನು ಸುರಕ್ಷಿತವಾಗಿ ಹೊರಗೆ ತಂದು, ಪೊಲೀಸ್ ಠಾಣೆಗೆ ಕರೆದೊಯ್ಯುವುದು ಅಗತ್ಯವಾಗಿತ್ತು' ಎಂದು ಡೆಹ್ರಾಡೂನ್‌ನ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಅಜಯ್ ಸಿಂಗ್ 'ಪಿಟಿಐ'ಗೆ ತಿಳಿಸಿದರು.

'ಆರೋಪಿಯನ್ನು ಸುರಕ್ಷಿತವಾಗಿ ಹೊರಗೆ ಕರೆತರಲು ಪೊಲೀಸ್ ವಾಹನವನ್ನು ತುರ್ತು ಮಾರ್ಗವಾಗಿ ರಾಂಪ್ ಬಳಸಿಕೊಂಡು ಆಸ್ಪತ್ರೆಯ ನಾಲ್ಕನೇ ಮಹಡಿಗೆ ಹೋಗಲಾಗಿತ್ತು. ಪರಿಸ್ಥಿತಿ ಉದ್ವಿಗ್ನಗೊಂಡಿದ್ದರಿಂದ ಆರೋಪಿಯ ಸುರಕ್ಷತೆಗಾಗಿ ಏಮ್ಸ್ ಆಡಳಿತದ ಅನುಮತಿಯೊಂದಿಗೆ ಈ ಕ್ರಮ ಅನುಸರಿಸಿದೆವು. ಈ ರೀತಿ ಮಾಡದಿದ್ದರೆ, ಅಲ್ಲಿ ಏನು ಬೇಕಾದರೂ ಆಗಬಹುದಿತ್ತು. ಗುಂಪು ಹತ್ಯೆ ಕೂಡ ನಡೆದುಬಿಡಹುದಿತ್ತು' ಎಂದರು.

ಆರೋಪಿ ಸತೀಶ್ ಕುಮಾರ್ ಕ್ಷಮೆಯಾಚಿಸಿ ಆಸ್ಪತ್ರೆಯ ಆಡಳಿತಕ್ಕೆ ಲಿಖಿತ ಪತ್ರ ನೀಡಿದ್ದ. ಈ ಘಟನೆ ನಂತರ ಆತನನ್ನು ಅಮಾನತುಗೊಳಿಸಲಾಗಿತ್ತು. ಆದರೆ, ವೈದ್ಯರು ಆತನನ್ನು ವಜಾಗೊಳಿಸುವಂತೆ ಒತ್ತಾಯಿಸಿದ್ದಾರೆ.

ಆರೋಪಿ ಮೇ 19ರಂದು ಟ್ರಾಮಾ ವಾರ್ಡ್‌ನ ಶಸ್ತ್ರ ಚಿಕಿತ್ಸೆಯ ಕೊಠಡಿಯ ಕಿರಿಯ ನಿವಾಸಿ ವೈದ್ಯೆಯೊಬ್ಬರಿಗೆ ಕಿರುಕುಳ ನೀಡಿದ್ದ. ವೈದ್ಯೆ ಮೇ 21ರಂದು ಪೊಲೀಸರಿಗೆ ದೂರು ನೀಡಿದ್ದು, ನಂತರ ಆರೋಪಿಯನ್ನು ಬಂಧಿಸಲಾಗಿದೆ. ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಸ್‌ಡಿಆರ್‌ಎಫ್ ಮೂವರ ಸಾವು

ಪುಣೆ (ಪಿಟಿಐ): ಪ್ರವರಾ ನದಿಯಲ್ಲಿ ಮುಳುಗಿದ್ದವರ ಪತ್ತೆಗಾಗಿ ಶೋಧ ನಡೆಸುತ್ತಿದ್ದ ರಾಜ್ಯ ವಿಪತ್ತು ನಿರ್ವಹಣಾ ಪಡೆಯ (ಎಸ್‌ಡಿಆರ್‌ಎಫ್) ಸಿಬ್ಬಂದಿಯಿದ್ದ ದೋಣಿ ಗುರುವಾರ ಬೆಳಿಗ್ಗೆ ಮುಳುಗಿದ್ದು, ಮೂವರು ಮೃತಪಟ್ಟಿದ್ದಾರೆ.

ಮಹಾರಾಷ್ಟ್ರದ ಅಹ್ಮದ್ ನಗರ ಜಿಲ್ಲೆಯ ಅಕೋಲೆ ಬಳಿಯ ಸುಗಾವ್ ಗ್ರಾಮದ ಸಮೀಪ ದೋಣಿ ಮುಳುಗಿದ್ದು, ಡಿಆರ್‌ಎಫ್‌ನ ಸಬ್ ಇನ್‌ಸ್ಪೆಕ್ಟರ್ ಮತ್ತು ಇಬ್ಬರು ಕಾನ್‌ಸ್ಟೆಬಲ್‌ಗಳು ಮೃತಪಟ್ಟಿದ್ದಾರೆ. ನಾಪತ್ತೆಯಾದವರಿಗಾಗಿ ಶೋಧ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶೋಧ ತಂಡದಲ್ಲಿ ನಾಲ್ವರು ಎಸ್‌ಡಿಆರ್‌ಎಫ್ ಸಿಬ್ಬಂದಿ ಹಾಗೂ ಒಬ್ಬ ನಾಗರಿಕರಿದ್ದರು. 'ಯುವಕರಿಬ್ಬರು ಬುಧವಾರ ಬೆಳಿಗ್ಗೆ 7.45ರ ವೇಳೆಗೆ ನದಿಯಲ್ಲಿ ಮುಳುಗಿದ್ದರು. ಒಬ್ಬನ ಮೃತದೇಹ ಪತ್ತೆಯಾಗಿತ್ತು.

ಬೆಂಗಳೂರಿನ ಬಿಜೆಪಿ ರಾಜ್ಯ ಕಚೇರಿಯಲ್ಲಿ ಕಾರ್ಯಕರ್ತರಿಂದ ಸಲಹೆಗಳನ್ನು ಪಡೆಯಲು ಸಲಹಾ ಪೆಟ್ಟಿಗೆಯನ್ನು ಅಳವಡಿಸಲಾಯಿತು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಪ್ರಧಾನಕಾರ್ಯದರ್ಶಿ ಪಿ.ರಾಜೀವ್ ಇದ್ದರು.

ಸುದ್ದಿ 2 ನಿಮಿಷ

ಮಲಬಾರ್ ವಿರುದ್ಧ ಅಪಪ್ರಚಾರಕ್ಕೆ ತಡೆ

ಬೆಂಗಳೂರು: ಜಾಗತಿಕ ಮಟ್ಟದ ಆಭರಣ ಕಂಪನಿಯಾದ ಮಲಬಾರ್ ಗ್ರೂಪ್‌ನ ವಿದ್ಯಾರ್ಥಿ ವೇತನದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ಮಾಡದಂತೆ ಬಾಂಬೆ ಹೈಕೋರ್ಟ್ ತಡೆ ನೀಡಿದೆ.

ಮಲಬಾರ್ ಗ್ರೂಪ್ ದೇಶದಾದ್ಯಂತ ಹಿಂದುಳಿದ ಕುಟುಂಬಗಳಿಗೆ ಸೇರಿದ 77 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸೌಲಭ್ಯ ನೀಡುತ್ತಿದೆ. ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಈ ಸಮಾಜ ಕಾರ್ಯದ ಬಗ್ಗೆ ಅಪಪ್ರಚಾರ ನಡೆಯುತ್ತಿತ್ತು. ಈ ಬಗ್ಗೆ ಮಲಬಾರ್ ಗೋಲ್ಡ್ ಲಿಮಿಟೆಡ್ ಹೈಕೋರ್ಟ್‌ನ ಮೆಟ್ಟಿಲೇರಿತ್ತು.

ಮಲಬಾರ್ ಗ್ರೂಪ್ ಬಗ್ಗೆ ಅಪಪ್ರಚಾರ ಮಾಡುವಂತಹ ಮಾಹಿತಿಯನ್ನು ಎಕ್ಸ್, ಇನ್‌ಸ್ಟಾಗ್ರಾಂ ಹಾಗೂ ಫೇಸ್‌ಬುಕ್‌ನಿಂದ ತೆಗೆದು ಹಾಕುವಂತೆ ಈ ಜಾಲತಾಣಗಳನ್ನು ನಿರ್ವಹಿಸುತ್ತಿರುವ ಕಂಪನಿಗಳಿಗೆ ಹೈಕೋರ್ಟ್ ಸೂಚಿಸಿದೆ.

'ಕಂಪನಿ ಬಗ್ಗೆ ಅಪಪ್ರಚಾರದಲ್ಲಿ ತೊಡಗಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಮಲಬಾರ್ ಗ್ರೂಪ್ ಅಧ್ಯಕ್ಷ ಎಂ.ಪಿ. ಅಹ್ಮದ್ ತಿಳಿಸಿದ್ದಾರೆ.

ಗೋಮಾಳ ಒತ್ತುವರಿ ದೂರು ಸರ್ಕಾರಕ್ಕೆ ಕೋರ್ಟ್ ನೋಟಿಸ್

ಬೆಂಗಳೂರು: 'ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕಿನ ಮಜರಾ ಹೊಸಹಳ್ಳಿಯಲ್ಲಿ ಖಾಸಗಿ ವ್ಯಕ್ತಿಗಳಿಂದ ಕನಿಷ್ಠ 35 ಎಕರೆ ಗೋಮಾಳ ಜಮೀನಿನ ಒತ್ತುವರಿಯಾಗಿದೆ. ಅದನ್ನು ತೆರವುಗೊಳಿಸಲು ಆದೇಶಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ 'ಕರ್ನಾಟಕ ದಲಿತ ಸಂಘರ್ಷ ಸಮಿತಿ' ಸಮನ್ವಯಕಾರ ರಾಮು ನೇರಳಘಟ್ಟ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ನೇತೃತ್ವದ ರಜಾಕಾಲದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ರಾಜ್ಯ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ, ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ, ದೊಡ್ಡಬಳ್ಳಾಪುರ ಉಪ ವಿಭಾಗಾಧಿಕಾರಿ, ದೊಡ್ಡಬಳ್ಳಾಪುರ ತಾಲ್ಲೂಕು ತಹಶೀಲ್ದಾರ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠವು ವಿಚಾರಣೆಯನ್ನು ಜೂನ್ 10ಕ್ಕೆ ಮುಂದೂಡಿದೆ.

ಅರ್ಜಿಯಲ್ಲಿ ಏನಿದೆ?: 'ಮಜರಾ ಹೊಸಹಳ್ಳಿಯ ವಿವಿಧ ಸರ್ವೆ ನಂಬರ್‌ಗಳಲ್ಲಿರುವ 35 ಎಕರೆ ಜಮೀನನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿದ್ದಾರೆ. ಜಾಗದ ಸುತ್ತಲೂ ತಡೆಗೋಡೆ ನಿರ್ಮಿಸಲಾಗಿದೆ. ಈ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ, ಒತ್ತುವರಿ ತೆರವುಗೊಳಿಸಲು ಕೋರಿ ಸ್ಥಳೀಯ ಜಿಲ್ಲಾಧಿಕಾರಿ, ಸಹಾಯಕ ಉಪವಿಭಾಗಾಧಿಕಾರಿ ಮತ್ತು ತಹಶೀಲ್ದಾರ್ ಅವರಿಗೆ ಸಾಕ್ಷ್ಯಾಧಾರಗಳ ಸಮೇತ ದೂರು ನೀಡಲಾಗಿತ್ತು. ಆದರೆ, ಈವರೆಗೂ ಒತ್ತುವರಿ ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಂಡಿಲ್ಲ. ಒತ್ತುವರಿ ತೆರವುಗೊಳಿಸಬೇಕು. ಒತ್ತುವರಿದಾರರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲು ನಿರ್ದೇಶಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಸರ್ಕಾರಿ ಅತಿಥಿಗೃಹದಲ್ಲಿ ಮದ್ಯದ ಔತಣಕೂಟ: ನೋಟಿಸ್ ಜಾರಿ

ಪ್ರಜಾವಾಣಿ ವಾರ್ತೆ

ಜಮಖಂಡಿ (ಬಾಗಲಕೋಟೆ): ಇಲ್ಲಿನ ಲೋಕೋಪಯೋಗಿ ಇಲಾಖೆಯ 'ರಮಾ ನಿವಾಸ'ದಲ್ಲಿ (ಐಬಿ) ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ಕಚೇರಿ ವೇಳೆಯಲ್ಲಿ ಗುತ್ತಿಗೆದಾರರ ಜೊತೆ ಎಂಜಿನಿಯರ್‌ಗಳು ಮದ್ಯ ಸೇವಿಸುತ್ತ ಮೋಜು ಮಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದು, ತಹಶೀಲ್ದಾರ್ ಸದಾಶಿವ ಮಕ್ಕೋಜಿ ಅವರಿಗೆ ಗುರುವಾರ ಜಿಲ್ಲಾಧಿಕಾರಿ ಕೆ.ಜಾನಕಿ ನೋಟಿಸ್ ನೀಡಿದ್ದಾರೆ.

ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದೆ. ಕಚೇರಿಗೆ ಹಾಜರಾಗದೇ ಐಬಿಯಲ್ಲಿ ಔತಣಕೂಟದಲ್ಲಿ ಭಾಗಿಯಾದ ಆರೋಪದ ಮೇಲೆ ಜಿಲ್ಲಾ ಪಂಚಾಯಿತಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಎಸ್.ಎಂ.ನಾಯಕ, ಎಂಜಿನಿಯರ್‌ಗಳಾದ ರಾಮಪ್ಪ ರಾಠೋಡ, ಜಗದೀಶ ನಾಡಗೌಡ, ಗಜಾನನ ಪಾಟೀಲ ಅವರಿಗೂ ನೋಟಿಸ್ ಹೊರಡಿಸಲಾಗಿದೆ.

'ನೀತಿ ಸಂಹಿತೆ ಜಾರಿಯಾದಾಗ ವಸತಿ ಗೃಹಗಳನ್ನು ಸುಪರ್ದಿಗೆ ತೆಗೆದುಕೊಳ್ಳಲು ನಿರ್ದೇಶನ ನೀಡಲಾಗಿತ್ತು. ಅನುಮತಿ ಇಲ್ಲದೆ ಜಿಲ್ಲಾ ಪಂಚಾಯಿತಿ ಅಧಿಕಾರಿ ಹಾಗೂ ಸಿಬ್ಬಂದಿ ವಸತಿ ಗೃಹದಲ್ಲಿ ಹೇಗೆ ಪ್ರವೇಶಿಸಿದರು? ಇದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಇದಕ್ಕೆ ಉತ್ತರಿಸಬೇಕು' ಎಂದು ನೋಟಿಸ್‌ನಲ್ಲಿ ತಹಶೀಲ್ದಾರ್‌ಗೆ ಸೂಚಿಸಲಾಗಿದೆ.

'ವಸತಿ ಗೃಹಗಳ ಸಿಬ್ಬಂದಿ ವಿಚಾರಣೆ ಮಾಡಿ 24 ಗಂಟೆಯಲ್ಲಿ ವರದಿ ಸಲ್ಲಿಸಲು ಜಿಲ್ಲಾಧಿಕಾರಿ ಆದೇಶಿಸಿದ್ದಾರೆ. ಇದು ಅತ್ಯಂತ ಅಶಿಸ್ತಿನ ನಡವಳಿಕೆಯಾಗಿದ್ದು, ಅಧಿಕಾರಿಗಳ ಮೇಲೆ ಶಿಸ್ತು ಕ್ರಮಕ್ಕೆ ವರದಿ ಸಲ್ಲಿಸಲಾಗುವುದು' ಎಂದು ಉಪ ವಿಭಾಗಾಧಿಕಾರಿ ಸಂತೋಷ ಕಾಮಗೌಡ ತಿಳಿಸಿದ್ದಾರೆ.

'ಜಿಲ್ಲಾ ಪಂಚಾಯಿತಿಯ ನಾಲ್ವರು ಅಧಿಕಾರಿಗಳು ಮತ್ತು ಆರು ಗುತ್ತಿಗೆದಾರರು ಸೇರಿ ಹತ್ತಕ್ಕೂ ಹೆಚ್ಚು ಜನ ಸೇರಿ ಬುಧವಾರ ಮಧ್ಯಾಹ್ನ 2 ಗಂಟೆಗೆ ಸರ್ಕಾರಿ ಐಬಿಯಲ್ಲಿ ಮದ್ಯ ಮಾಂಸದ ಔತಣಕೂಟ ಹಮ್ಮಿಕೊಂಡಿದ್ದರು. ಇದನ್ನು ತಿಳಿದ ಸಾರ್ವಜನಿಕರೊಬ್ಬರು ವಿಡಿಯೊ ಮಾಡಿ ಮಾಹಿತಿ ನೀಡಿದಾಗ, ಅಧಿಕಾರಿಗಳಿಗೆ ನೋಟಿಸ್ ಜಾರಿಯಾಗಿದೆ' ಎಂದು ಮೂಲಗಳು ತಿಳಿಸಿವೆ.

ಮರಿಯಕ್ಕ ತಾಯಿ ದೇವಸ್ಥಾನ ಜೀರ್ಣೋದ್ಧಾರ, ಮೂರ್ತಿ ಪುನರ್ ಪ್ರತಿಷ್ಠಾಪನೆ ಕಾರ್ಯ

ನೆಲಮಂಗಲ: ಜೀರ್ಣೋದ್ಧಾರಗೊಂಡಿರುವ ಪಟ್ಟಣದ ಗ್ರಾಮದೇವತೆ ಮರಿಯಕ್ಕ ತಾಯಿ ದೇವಸ್ಥಾನದ ಮೂರ್ತಿ ಪುನರ್ ಪ್ರತಿಷ್ಠಾಪನಾ ಕಾರ್ಯ ಇತ್ತೀಚೆಗೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಗೋಪುರದ ಕಳಶಕ್ಕೆ ಕುಂಭಾಭಿಷೇಕ ನಡೆಯಿತು. ಪುನರ್ ಪ್ರಾತಿಷ್ಠಾಪನೆ ಕಾರ್ಯಕ್ರಮದ ಅಂಗವಾಗಿ ನಾಲ್ಕು ದಿನಗಳು ಅನ್ನಸಂತರ್ಪಣೆ ನಡೆಯಿತು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಪಟ್ಟಣದಾದ್ಯಂತ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಸಾವಿರಾರು ಭಕ್ತರು ಈ ವೇಳೆ ಭಾಗಿಯಾಗಿದ್ದರು.

ವಿಶೇಷವಾಗಿ ದೇವಿಗೆ ಎಲ್ಲ ಭಕ್ತರು ಹಾಲಿನ ಅಭಿಷೇಕ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ಹೋಮ ಹವನ, ದೇವಿ ನಾಮಾವಳಿಗಳ ಪಾರಾಯಣ, ಕಳಶಸ್ಥಾಪನೆ, ಚಕ್ರಸ್ಥಾಪನೆ, ಕುಂಭಾಭಿಷೇಕ, ಹೂವಿನ ಪಲ್ಲಕ್ಕಿ ಮೆರವಣಿಗೆ ನಡೆಯಿತು.

ಜೀರ್ಣೋದ್ಧಾರ ಪ್ರಕ್ರಿಯೆ: ಎಂಟು ವರ್ಷಗಳ ಹಿಂದೆ ಪಟ್ಟಣದ ಮುಖ್ಯರಸ್ತೆಯಾಗಿದ್ದ ಪೇಟೆಬೀದಿಯ ಹೆಬ್ಬಾಗಿಲಿನಲ್ಲಿದ್ದ ಗ್ರಾಮದೇವತೆ ಮರಿಯಕ್ಕ

ಮರಿಯಕ್ಕ ತಾಯಿ ದೇವಸ್ಥಾನದ ಕಳಶ ಕುಂಭಾಭಿಷೇಕಕ್ಕಾಗಿ ಕುಂಭತೀರ್ಥವನ್ನು ಗೋಪುರದ ಮೇಲಕ್ಕೆ ತೆಗೆದುಕೊಂಡು ಹೋಗುತ್ತಿರುವುದು.

ತಾಯಿ ದೇವಸ್ಥಾನದ ಗೋಡೆಗಳು ಸೀಳುಬಿಟ್ಟು, ದೇವರ ವಿಗ್ರಹ ಭಿನ್ನವಾಗಿ ಶಿಥಿಲಾವಸ್ಥೆಗೆ ತಲುಪಿತ್ತು. ಹಿಂದೆ ಪುರಸಭೆ ಅಧ್ಯಕ್ಷರಾಗಿದ್ದ ದಿವಂಗತ ನೆ.ಲ.ಗಿರಿಧರ್ ಅವರು ಮುತುವರ್ಜಿವಹಿಸಿ ಈಗಿನ ದೇವಸ್ಥಾನ ಸಮಿತಿ ಅಧ್ಯಕ್ಷ ಸತೀಶ್, ನಗರಸಭೆ ಸದಸ್ಯ ಎನ್.ಜಿ.ರವಿಕುಮಾರ್, ಚಿಕ್ಕಹನುಮಯ್ಯ, ಬೈಲಪ್ಪ ಅವರನ್ನೊಳಗೊಂಡ ಸಮಿತಿ ರಚಿಸಿ, ದೇವಾಲಯವನ್ನು ಜೀರ್ಣೋದ್ಧಾರಗೊಳಿಸಲು ತೀರ್ಮಾನಿಸಲಾಯಿತು. ದೇವಾಲಯ ಜೀರ್ಣೋದ್ಧಾರ ಕಾರ್ಯ ಆರಂಭವಾಯಿತು. ಆದರೆ, ನೋಟು ಅಮಾನ್ಯೀಕರಣ, ಕೋವಿಡ್ ಹಾಗೂ ಇತರೆ ಕಾರಣಗಳಿಂದಾಗಿ ಜೀರ್ಣೋದ್ಧಾರ ವಿಳಂಬವಾಯಿತು.

'ಈಗ ಪುನರ್ ಪ್ರತಿಷ್ಠಾಪನೆ ಪೂರ್ಣಗೊಂಡಿದೆ. ಜೀರ್ಣೋದ್ಧಾರ ಕಾರ್ಯಕ್ಕೆ ಸುಮಾರು ₹1.5 ಕೋಟಿ ವೆಚ್ಚವಾಗಿದೆ. ತಾಲ್ಲೂಕಿನಾದ್ಯಂತ ಇರುವ ಎಲ್ಲ ಜನಾಂಗದವರೂ ಈ ಕಾರ್ಯಕ್ಕೆ ನೆರವಾಗಿದ್ದಾರೆ. ಪ್ರತಿಷ್ಠಾಪನಾ ಕಾರ್ಯಕ್ಕೆ ₹45 ಲಕ್ಷ ರಿಂದ ₹50 ಲಕ್ಷ ವೆಚ್ಚವಾಗಿದೆ' ಎಂದು ನಗರಸಭೆ ಸದಸ್ಯ ಎನ್.ಜಿ.ರವಿಕುಮಾರ್ ತಿಳಿಸಿದರು.

ಮಾರ್ಗಸೂಚಿಯಲ್ಲಿ ಬದಲಾವಣೆ ತಂದ ಕೇಂದ್ರ; ತಿದ್ದುಪಡಿ ಮಾಡದ ರಾಜ್ಯ ಸರ್ಕಾರ

ಡಿಎಂಎಫ್‌ಟಿ: ಇನ್ನೂ ಸಿದ್ಧವಾಗದ ಯೋಜನೆ

• ಹರಿಶಂಕರ್ ಆರ್.

ಬಳ್ಳಾರಿ: ಗಣಿ ಬಾಧಿತ ಜನರ ಮತ್ತು ಪ್ರದೇಶಗಳ ಅಭಿವೃದ್ಧಿ ಯೋಜನೆಗಳಿಗೆ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (ಡಿಎಂಎಫ್‌ಟಿ) ಮೂಲಕ ಸಂಗ್ರಹಿಸಿರುವ ನಿಧಿ ಬಳಕೆಗೆ ಕೇಂದ್ರ ಸರ್ಕಾರ ಇತ್ತೀಚೆಗೆ ಪ್ರಕಟಿಸಿರುವ 'ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆ' (ಪಿಎಂಕೆಕೆಕೆವೈ) ಹೊಸ ಮಾರ್ಗಸೂಚಿ ಅಡ್ಡಿಯಾಗಿದೆ.

ಕೇಂದ್ರ ಸರ್ಕಾರದ ಪಿಎಂಕೆಕೆಕೆವೈನ ಮಾರ್ಗಸೂಚಿಯನ್ವಯ ಡಿಎಂಎಫ್‌ಟಿ ನಿಧಿ ಬಳಸಬೇಕು. 2016ರ ಮಾರ್ಗಸೂಚಿಗೆ ಕೇಂದ್ರ ಸರ್ಕಾರ ಈ ವರ್ಷ ಮಹತ್ವದ ಬದಲಾವಣೆ ತಂದಿದೆ. ಇದನ್ನು ಯಥಾವತ್ ಜಾರಿಗೆ ತರಬೇಕೆ ಅಥವಾ ತಿದ್ದುಪಡಿ ಮಾಡಬೇಕೆ ಎಂಬುದರ ಬಗ್ಗೆ ರಾಜ್ಯ ಸರ್ಕಾರ ಇನ್ನೂ ತೀರ್ಮಾನಿಸಿಲ್ಲ. ಹೀಗಾಗಿ, ಜನವರಿ ವೇಳೆಗೆ ಸಿದ್ಧವಾಗಬೇಕಿದ್ದ ಡಿಎಂಎಫ್‌ಟಿ ನಿಧಿ ಬಳಕೆಯ ಕ್ರಿಯಾ ಯೋಜನೆಗಳು ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಇನ್ನೂ ತಯಾರಾಗಿಲ್ಲ. ಇದರ ಪರಿಣಾಮ ಹೊಸ ಯೋಜನೆಗಳು ಜಾರಿಯಾಗಿಲ್ಲ.

> **ಹೊಸ ಮಾರ್ಗಸೂಚಿಯಲ್ಲಿ ತಿದ್ದುಪಡಿ ಮಾಡಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಕ್ರಿಯಾ ಯೋಜನೆ ಸಿದ್ಧಪಡಿಸಲು ಈಗಾಗಲೇ ಸಭೆ ನಡೆಸಲಾಗಿದೆ. ಕೆಲ ಜಿಲ್ಲೆಗಳಲ್ಲಿ ಕ್ರಿಯಾ ಯೋಜನೆಗಳು ಆಗಿಲ್ಲ**
> **ಗಿರೀಶ್ ಆರ್.,** ನಿರ್ದೇಶಕರು, ರಾಜ್ಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆ

> **ಪಿಎಂಕೆಕೆಕೆವೈ–2024ರ ಮಾರ್ಗಸೂಚಿಗಳನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಈ ಕುರಿತು ರಾಜ್ಯ ಸರ್ಕಾರ ಕ್ರಮ ಕೈಗೊಂಡ ಕೂಡಲೇ 2024–25ಕ್ಕೆ ಕ್ರಿಯಾ ಯೋಜನೆಗಳನ್ನು ರೂಪಿಸಲಾಗುವುದು**
> **ಮಂಜುನಾಥ್,** ಡಿಎಂಎಫ್‌ಟಿ ವಿಶೇಷ ಅಧಿಕಾರಿ, ಬಳ್ಳಾರಿ

ಹೊಸ ಮಾರ್ಗಸೂಚಿಯಲ್ಲಿ ಏನಿದೆ?: ಗಣಿ ಸುತ್ತಲ 15 ಕಿ.ಮೀ ಪ್ರದೇಶವನ್ನು ನೇರ ಬಾಧಿತ ಮತ್ತು 25 ಕಿ.ಮೀ ಪ್ರದೇಶವನ್ನು ಪರೋಕ್ಷ ಬಾಧಿತ ಎಂದು ಹೊಸ ಮಾರ್ಗಸೂಚಿಯಲ್ಲಿ ಹೇಳಲಾಗಿದೆ. ನಿಧಿ ಬಳಕೆಗೆ ಎರಡು ಆದ್ಯತಾ ವಲಯ ಸೃಷ್ಟಿಸಲಾಗಿದೆ. ಕುಡಿಯುವ ನೀರು, ಪರಿಸರ ಸಂರಕ್ಷಣೆ, ಆರೋಗ್ಯ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ನೈರ್ಮಲ್ಯ, ವಸತಿ, ಕೃಷಿ, ಹೈನುಗಾರಿಕೆಯನ್ನು ಪ್ರಮುಖ ಆದ್ಯತೆ ವಲಯಗಳನ್ನಾಗಿ ಗುರುತಿಸಲಾಗಿದೆ. ಮೂಲಸೌಲಭ್ಯ, ನೀರಾವರಿ, ವಿದ್ಯುತ್ ಮತ್ತು ಜಲಾನಯನ ವಿಷಯಗಳನ್ನು ಇತರ ಆದ್ಯತೆ ವಲಯಗಳಾಗಿ ಗುರುತಿಸಲಾಗಿದೆ. ಡಿಎಂಎಫ್‌ಟಿಯ ಶೇ 70ರಷ್ಟು ಹಣವನ್ನು ನೇರ ಬಾಧಿತ ಪ್ರದೇಶಗಳಲ್ಲಿ ಮಾತ್ರ ಬಳಸಬೇಕು. ಜತೆಗೆ, ಪ್ರಮುಖ ಆದ್ಯತಾ ವಲಯಗಳಿಗೆ ಮಾತ್ರವೇ ಬಳಸಬೇಕು ಎಂದು ತಿಳಿಸಲಾಗಿದೆ. ಕ್ರಿಯಾ ಯೋಜನೆಗಳನ್ನು 3 ವರ್ಷದ ಬದಲಿಗೆ 5 ವರ್ಷಗಳಿಗೆ ಸಿದ್ಧಪಡಿಸಬೇಕು ಎಂದೂ ಹೇಳಲಾಗಿದೆ.

ಈ ಹಿಂದೆ ಡಿಎಂಎಫ್‌ಟಿ ನಿಧಿಯು ನೇರ ಮತ್ತು ಪರೋಕ್ಷ ಬಾಧಿತ ಪ್ರದೇಶಗಳ ಜತೆಗೆ, ಉದಾರವಾಗಿ ಇಡೀ ಜಿಲ್ಲೆಗಳ ವಿವಿಧ ಯೋಜನೆಗಳಿಗೆ ಬಳಕೆ ಆಗುತ್ತಿತ್ತು. ಹೀಗಾಗಿ ಇಡೀ ಜಿಲ್ಲೆಗೆ ಡಿಎಂಎಫ್‌ಟಿಯ ಅನುಕೂಲ ಸಿಗುತ್ತಿತ್ತು. ಹೊಸ ಮಾರ್ಗಸೂಚಿ ಪ್ರಕಾರ, ಗಣಿಯಿಂದ ಗರಿಷ್ಠ 25 ಕಿ.ಮೀ. ವ್ಯಾಪ್ತಿಯ ಪ್ರದೇಶಗಳಿಗೆ ಮಾತ್ರ ಅನುದಾನ ಬಳಸಬಹುದು.

ಕೇಂದ್ರದ ಈ ಮಾರ್ಗಸೂಚಿಯನ್ನು ರಾಜ್ಯ ಸರ್ಕಾರ ತಿದ್ದುಪಡಿ ಮಾಡಲು ಅವಕಾಶವಿದೆ. ತಿದ್ದುಪಡಿಯಾದ ನಂತರವೇ ನಿಧಿ ಬಳಕೆಯ ಸ್ಪಷ್ಟ ಮಾರ್ಗಸೂಚಿ ಸಿಗಲು ಸಾಧ್ಯ. ಆದರೆ, ಚುನಾವಣೆ ಮತ್ತು ಇತರ ಕಾರಣಗಳಿಂದ ರಾಜ್ಯ ಸರ್ಕಾರ ಕೇಂದ್ರದ ಹೊಸ ಮಾರ್ಗಸೂಚಿ ವಿಚಾರವಾಗಿ ಇನ್ನೂ ಯಾವುದೇ ನಿರ್ಧಾರ ಕೈಗೊಂಡಿಲ್ಲ.

12,388 ಯೋಜನೆಗಳಿಗೆ ಹಣ: ಪ್ರಮುಖ ಮತ್ತು ಸಣ್ಣ ಖನಿಜಗಳ ಗಣಿ ಗುತ್ತಿಗೆಗಳ ರಾಯಧನದ ರೂಪದಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳ ಡಿಎಂಎಫ್‌ಟಿಗಳಿಗೆ 2015ರಿಂದ ಈ ವರೆಗೆ ಒಟ್ಟು ₹4828.34 ಕೋಟಿ ಸಂಗ್ರಹವಾಗಿದೆ. ಒಂದೊಂದು ಜಿಲ್ಲೆಗೆ ಅಲ್ಲಿನ ಗಣಿ ಚಟುವಟಿಕೆ ಸಾಮರ್ಥ್ಯಕ್ಕೆ ತಕ್ಕಂತೆ ಹಣ ಲಭ್ಯವಾಗಿದೆ.

ಉದಾಹರಣೆಗೆ, ಬಳ್ಳಾರಿ ಜಿಲ್ಲೆಯೊಂದರಲ್ಲೇ ಈ ವರೆಗೆ ಒಟ್ಟು ₹2623.82 ಕೋಟಿ ಸಂಗ್ರಹವಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಈವರೆಗೆ ಒಟ್ಟು 12,388 ಯೋಜನೆಗಳನ್ನು ಕೈಗೊಳ್ಳಲಾಗಿದೆ. 5,355 ಯೋಜನೆಗಳು ಪೂರ್ಣಗೊಂಡಿವೆ. ಗಣಿಗಾರಿಕೆಯಿಂದ ತೀವ್ರ ತೊಂದರೆಗೆ ಒಳಗಾದ ಜಿಲ್ಲೆಗಳಲ್ಲಿ ಜನ ಕಲ್ಯಾಣ ಯೋಜನೆಗಳನ್ನು ಕೈಗೊಳ್ಳಲು ಮತ್ತು ಮೂಲಸೌಕರ್ಯ ಅಭಿವೃದ್ಧಿ ಮಾಡಲು ಡಿಎಂಎಫ್‌ಟಿ ನೆರವಾಗಿದೆ.

ಅಂಕಿ ಅಂಶ...

₹4828.34 ಕೋಟಿ — 2015ರಿಂದ ಈವರೆಗೆ ಡಿಎಂಎಫ್‌ಟಿಯಲ್ಲಿ ಒಟ್ಟಾರೆ ಸಂಗ್ರಹವಾದ ಮೊತ್ತ

₹814.67 ಕೋಟಿ — ರಾಜ್ಯದಲ್ಲಿ 2023–24ನೇ ಸಾಲಿನಲ್ಲಿ ಸಂಗ್ರಹದ ನಿಧಿ

₹492.82 ಕೋಟಿ — ಬಳ್ಳಾರಿ ಜಿಲ್ಲೆಯಲ್ಲಿ ಕಳೆದ ವರ್ಷ ಸಂಗ್ರಹವಾದ ಹಣ

268 — ರಾಜ್ಯದಲ್ಲಿ ಕಳೆದ ಆರ್ಥಿಕ ವರ್ಷ ಕೈಗೊಂಡ ಯೋಜನೆಗಳು

ನಗರದಲ್ಲಿ 516 ಕಾರ್ಯಕರ್ತೆಯರು ಹಾಗೂ 833 ಸಹಾಯಕಿಯರ ಹುದ್ದೆಗಳು ಖಾಲಿ

ಸಿಬ್ಬಂದಿ ಕೊರತೆ: ಬಳಲಿದ ಅಂಗನವಾಡಿಗಳು

• ಖಲೀಲಅಹ್ಮದ ಶೇಖ

ಬೆಂಗಳೂರು: ನಗರ ಜಿಲ್ಲೆಯ ಅಂಗನವಾಡಿ ಕೇಂದ್ರಗಳು ಸಿಬ್ಬಂದಿ ಕೊರತೆಯಿಂದ ಬಳಲುತ್ತಲೇ ಇವೆ. ತೀರಾ ಅಗತ್ಯವಾಗಿರುವ ಸಿಬ್ಬಂದಿಯನ್ನೂ ಕೊಟ್ಟಿಲ್ಲ. ಇದರಿಂದಾಗಿ ನಗರದಲ್ಲಿರುವ ಹಲವು ಕೇಂದ್ರಗಳು ಪ್ರಭಾರ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಮೇಲೆ ಅವಲಂಬಿತವಾಗಿವೆ.

'ಬೆಂಗಳೂರು ನಗರದಲ್ಲಿ 516 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 833 ಸಹಾಯಕಿಯರ ಹುದ್ದೆಗಳು ಖಾಲಿ ಇವೆ. ಅಕ್ಕಪಕ್ಕದ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರೇ ಪ್ರಭಾರ ಹೊಣೆ ಹೊತ್ತು ಕೆಲಸ ಮಾಡುತ್ತಿದ್ದಾರೆ' ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.

'ಅಂಗನವಾಡಿ ಸಹಾಯಕಿಯರ ಹುದ್ದೆಗಳ ನೇಮಕಾತಿಗೆ ಸರ್ಕಾರ ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ. ₹6,500 ವೇತನ ದೊರೆಯುತ್ತಿದೆ. ಬೆಂಗಳೂರು ನಗರದಲ್ಲಿ ಈ ವೇತನ ಪಡೆದು ಕಾರ್ಯನಿರ್ವಹಿಸಲು ಯಾರೂ ಬರುತ್ತಿಲ್ಲ. ಆದ್ದರಿಂದ ಸಹಾಯಕಿಯರ ಹುದ್ದೆಗೆ ಯಾರೂ ಅರ್ಜಿ ಸಲ್ಲಿಸುವುದಿಲ್ಲ. ಕಳೆದ ಐದಾರು ವರ್ಷಗಳಿಂದ ಸಹಾಯಕಿಯರಿಲ್ಲದೆ ಕಾರ್ಯಕರ್ತೆಯರೇ ಕೆಲಸ ಮಾಡುವ ಪರಿಸ್ಥಿತಿ ಎದುರಾಗಿದೆ' ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ರಾಜ್ಯ ಕಾರ್ಯದರ್ಶಿ ಜಯಮ್ಮ ತಿಳಿಸಿದರು.

ನಗರದಲ್ಲಿ ಒಟ್ಟು 2,877 ಅಂಗನವಾಡಿಗಳು ಕೇಂದ್ರಗಳಿದ್ದು, ಅದರಲ್ಲಿ 840 ಕೇಂದ್ರಗಳು ಬಾಡಿಗೆ ಕಟ್ಟಡಗಳನ್ನು ಅವಲಂಬಿಸಿವೆ. ಕೆಲವು ಅಂಗನವಾಡಿಗಳಿಗೆ ಸ್ವಂತ ಕಟ್ಟಡವಿದ್ದರೂ ಬಹಳಷ್ಟು ಶಿಥಿಲಾವಸ್ಥೆಯಲ್ಲೇ ಇವೆ.

ಈಗ ಮಳೆಗಾಲ ಪ್ರಾರಂಭವಾಗಿದ್ದು, ಕಟ್ಟಡಗಳನ್ನು ದುರಸ್ತಿಗೊಳಿಸಬೇಕೆಂಬುದು ಪಾಲಕರು ಒತ್ತಾಯಿಸುತ್ತಿದ್ದಾರೆ.

'ಸ್ವಂತ ಕಟ್ಟಡ ಹೊಂದಿರದ ಅಂಗನವಾಡಿಗಳಿಗೆ ಬಾಡಿಗೆ ಹಣವನ್ನು ಮೂರು ತಿಂಗಳಿಗೊಮ್ಮೆ ನೀಡಲಾಗುತ್ತಿದೆ. ಕಳೆದ ಎರಡು ತಿಂಗಳಿಂದ ಕಟ್ಟಡ ಬಾಡಿಗೆ ಬಿಡುಗಡೆಯಾಗಿಲ್ಲ. ಕಟ್ಟಡಗಳ ಮಾಲೀಕರು ಬಾಡಿಗೆಗಾಗಿ ಕಾಯುತ್ತಿದ್ದಾರೆ. ಕಾರ್ಯಕರ್ತೆಯರು ಕಚೇರಿಗೆ ಅಲೆಯುವ ಪರಿಸ್ಥಿತಿ ಎದುರಾಗಿದೆ. ಕಾರ್ಯಕರ್ತೆಯರು, ಸಹಾಯಕಿಯರ ಸ್ಥಿತಿಯಂತೂ ಶೋಚನೀಯವಾಗಿದೆ' ಎಂದು ಜಯಮ್ಮ ಹೇಳಿದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುವ ಕೇಂದ್ರಗಳಿಗೆ ತಿಂಗಳಿಗೆ ₹8 ಸಾವಿರ ಬಾಡಿಗೆ ನೀಡುತ್ತೇವೆಂದು ಇಲಾಖೆ ಹೇಳುತ್ತಿದೆ. ಆದರೆ, ಆ ಮನೆಗೆ ಮುಂಗಡವಾಗಿ ₹60 ಸಾವಿರದಿಂದ ₹80 ಸಾವಿರ ಹಣ ಕಾರ್ಯಕರ್ತೆಯರು ಎಲ್ಲಿಂದ ನೀಡಬೇಕು' ಎಂದು ಪ್ರಶ್ನಿಸಿದರು.

'ಅಂಗನವಾಡಿ ಕೇಂದ್ರಗಳ ವ್ಯಾಪ್ತಿಯಲ್ಲಿ ಮಾತೃಪೂರ್ಣ ಯೋಜನೆ ಸೇರಿದಂತೆ ಸರ್ಕಾರ ನಡೆಸುವ ಸಮೀಕ್ಷೆಗಳಿಗೂ ಕಾರ್ಯಕರ್ತೆಯರನ್ನು ಬಳಸಿಕೊಳ್ಳುತ್ತಿದ್ದಾರೆ. ಆದರೆ, ವೇತನ ಮಾತ್ರ ಹೆಚ್ಚಿಸಿಲ್ಲ. ಹೀಗೆ ಹೇಳುತ್ತಾ ಹೋದರೆ ಸಾಲು ಸಾಲು ಕೊರತೆಗಳು ಇದ್ದರೂ ಸರ್ಕಾರ ಇದರತ್ತ ಗಮನಹರಿಸುತ್ತಿಲ್ಲ' ಎಂದು ದೂರಿದರು.

ಬೆಂಗಳೂರು ನಗರ ಜಿಲ್ಲೆಯ ಅಂಗನವಾಡಿಗಳ ಮಾಹಿತಿ



> **ಅಂಗನವಾಡಿ ಕೇಂದ್ರಗಳಲ್ಲಿ ಪ್ರಭಾರ ಹೊಣೆ ಹೊತ್ತು ಕಾರ್ಯನಿರ್ವಹಿಸುವ ಕಾರ್ಯಕರ್ತೆಯರಿಗೆ ಪ್ರತಿ ತಿಂಗಳು ಕೇವಲ ₹50 ಹೆಚ್ಚುವರಿ ವೇತನ ನೀಡಲಾಗುತ್ತದೆ.**
> **ಜಯಮ್ಮ**, ಎಐಟಿಯುಸಿ ರಾಜ್ಯ ಕಾರ್ಯದರ್ಶಿ

ಬ್ರಹ್ಮ ರಥೋತ್ಸವ ನಗರ್ತರಪೇಟೆಯಲ್ಲಿ ಗುರುವಾರ ನಡೆದ ಅನ್ನಪೂರ್ಣಾಂಬ ಸಮೇತ ನಗರೇಶ್ವರಸ್ವಾಮಿಯ 140ನೇ ಬ್ರಹ್ಮರಥೋತ್ಸವದಲ್ಲಿ ಭಾರಿ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು. -ಪ್ರಜಾವಾಣಿ ಚಿತ್ರ

ಸರ್ಕಾರದ ವೈಫಲ್ಯವೇ ಕಾರಣ: ಅಶ್ವತ್ಥನಾರಾಯಣ

ಬೆಂಗಳೂರು: ಮೈಸೂರು ಜಿಲ್ಲೆಯಲ್ಲಿ ಕಲುಷಿತ ನೀರು ಕುಡಿದು ಒಬ್ಬರ ಸಾವಿಗೆ ಸರ್ಕಾರದ ನಿರ್ಲಕ್ಷ್ಯವೇ ಕಾರಣ ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಆರೋಪಿಸಿದರು.

'ಸಿದ್ದರಾಮಯ್ಯ ಅವರ ಬಲಗೈ ಬಂಟ ಮರಿಗೌಡರ ಊರು ಕೆ.ಸಾಲುಂಡಿಯಲ್ಲಿ ಘಟನೆ ನಡೆದಿದೆ. ಈ ಬಗ್ಗೆ ಜನರು ಡಿಎಚ್‌ಒಗೆ ದೂರು ನೀಡಿದ್ದರೂ ಅವರು ಗಮನಹರಿಸಲಿಲ್ಲ' ಎಂದು ಸುದ್ದಿಗೋಷ್ಠಿಯಲ್ಲಿ ದೂರಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಪ್ರಭಾವಿ ಸಚಿವ ಮಹದೇವಪ್ಪ ಅವರು ಇದ್ದರೂ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾರೆ ಮತ್ತು 37 ಜನರ ಆಸ್ಪತ್ರೆಗೆ ದಾಖಲಾಗಿದ್ದಾರೆ. ಜಿಲ್ಲಾಡಳಿತ ಕುಡಿಯುವ ನೀರಿನ ಸಮಸ್ಯೆಗೆ ಸ್ಪಂದಿಸುತ್ತಿಲ್ಲ. ಇದು ಸರ್ಕಾರದ ವೈಫಲ್ಯಕ್ಕೆ ಸ್ಪಷ್ಟ ಉದಾಹರಣೆ' ಎಂದು ಅವರು ಹೇಳಿದರು.

ರಸ್ತೆ ನಿಯಮ ಉಲ್ಲಂಘನೆ ಪ್ರಕರಣ ಹೆಚ್ಚು ದಾಖಲಿಸಿ

ಬೆಂಗಳೂರು: ನಿಯಮ ಉಲ್ಲಂಘಿಸುವ ವಾಹನಗಳಿಗೆ ದಂಡ ವಸೂಲಿ ಮಾಡುವ ಪ್ರಕರಣಗಳನ್ನು ಹೆಚ್ಚಿಸಲು ಬ್ರೇಕ್ ಇನ್‌ಸ್ಪೆಕ್ಟರ್‌ಗಳಿಗೆ ಮೇಲಧಿಕಾರಿಗಳು ಸೂಚನೆ ನೀಡಿದ್ದಾರೆ. ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಆದಾಯ ಇಳಿಕೆಯಾಗದಂತೆ ಮಾಡಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಮೇಲಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಕುಡಿದು ವಾಹನ ಚಾಲನೆ, ಓವರ್ ಲೋಡ್, ಸದೃಢ ಪ್ರಮಾಣಪತ್ರ (ಫಿಟ್‌ನೆಸ್ ಸರ್ಟಿಫಿಕೆಟ್) ಇಲ್ಲದಿರುವುದು, ರಹದಾರಿ (ಪರ್ಮಿಟ್) ಇರದಿರುವುದು, ವಾಯು ಮಾಲಿನ್ಯ-ಶಬ್ದ ಮಾಲಿನ್ಯ ಉಂಟು ಮಾಡುವುದು ಸೇರಿದಂತೆ ಮೋಟರು ವಾಹನ ಕಾಯ್ದೆ ನಿಯಮಗಳನ್ನು ಉಲ್ಲಂಘಿಸುವ ವಾಹನಗಳಿಗೆ ದಂಡ ವಿಧಿಸಬೇಕು. ಪ್ರತಿ ಆರ್‌ಟಿಒ ಕಚೇರಿ ವ್ಯಾಪ್ತಿಯಲ್ಲಿ ತಿಂಗಳಿಗೆ 250ರಿಂದ 300 ಪ್ರಕರಣ ದಾಖಲಿಸುವ ಗುರಿ ಇತ್ತು. ಅದನ್ನು 400ಕ್ಕೆ ಏರಿಸಲಾಗಿದೆ. ಆದಾಯ ಏರಿಕೆ ಜೊತೆಗೆ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಕಡಿಮೆ ಮಾಡುವುದು ಕೂಡ ಆದ್ಯತೆಯಾಗಿದೆ ಎಂದು ಸಾರಿಗೆ ಜಂಟಿ ಆಯುಕ್ತರು ತಿಳಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ, ನಗರದ ಯಶವಂತಪುರ, ಕೋರಮಂಗಲ, ಚಂದಾಪುರ, ಎಲೆಕ್ಟ್ರಾನಿಕ್ಸ್ ಸಿಟಿ, ಜಯನಗರ, ಜ್ಞಾನಭಾರತಿ, ಇಂದಿರಾನಗರ, ಕೆ.ಆರ್. ಪುರ, ರಾಜಾಜಿನಗರ ಪ್ರಾದೇಶಿಕ ಸಾರಿಗೆ ಕಚೇರಿಗಳಿಗೆ ಈ ಗುರಿ ನಿಗದಿಪಡಿಸಲಾಗಿದೆ.

ಗುರಿ ತಲುಪುವುದು ಕಷ್ಟ: 'ನಿಯಮ ಉಲ್ಲಂಘಿಸುವ ವಾಹನಗಳ ಮೇಲೆ ದಾಖಲಿಸುವ ಪ್ರಕರಣ ಹೆಚ್ಚಿಸಬೇಕು ಎಂದು ಸೂಚನೆ ನೀಡುವುದರ ಜೊತೆಗೆ ಕುಡಿದು ಚಾಲನೆ ಪತ್ತೆಗೆ ಒತ್ತು ನೀಡಬೇಕು ಎಂದು ತಿಳಿಸಿದ್ದಾರೆ. ನಡು-ರಾತ್ರಿಯಲ್ಲಿ ನಾವು ಪರೀಕ್ಷೆ ಮಾಡಲು ಮುಂದಾದರೆ, ವಾಹನ ಸವಾರರು ಹಲ್ಲೆಗೆ ಮುಂದಾಗುತ್ತಾರೆ. ಪೊಲೀಸ್ ರಕ್ಷಣೆ ಇಲ್ಲದೇ ಈ ಕೆಲಸ ಕಷ್ಟ' ಎಂದು ಬ್ರೇಕ್ ಇನ್‌ಸ್ಪೆಕ್ಟರ್‌ಗಳು ತಿಳಿಸಿದರು.

'ಬಹುತೇಕ ಆರ್‌ಟಿಒ ಕಚೇರಿಗಳಲ್ಲಿ ಬ್ರೇಕ್ ಇನ್‌ಸ್ಪೆಕ್ಟರ್‌ಗಳ ಕೊರತೆ ಇದೆ. ದಂಡ ವಸೂಲಿ ಮಾಡುವ ಅಧಿಕಾರ ಬ್ರೇಕ್ ಇನ್‌ಸ್ಪೆಕ್ಟರ್‌ಗಳಿಗೆ ಮಾತ್ರ ಇರುವುದರಿಂದ ಕಚೇರಿ ಕೆಲಸದೊಂದಿಗೆ ಇದನ್ನೂ ಮಾಡಬೇಕು' ಎಂದು ದೂರಿದರು.

'ಅರ್ಜುನ'ನ ಸಮಾಧಿಗೆ ಕಾಂಪೌಂಡ್

ಪ್ರಜಾವಾಣಿ ವಾರ್ತೆ

ಹೆತ್ತೂರು (ಹಾಸನ): ಸಮೀಪದ ದಬ್ಬಳಿಕಟ್ಟೆ ಅರಣ್ಯದಲ್ಲಿ ಪುಂಡಾನೆ ಸೆರೆ ಕಾರ್ಯಾಚರಣೆ ವೇಳೆ ಮೃತಪಟ್ಟಿದ್ದ ಅಂಬಾರಿ ಆನೆ ಅರ್ಜುನನ ಸಮಾಧಿ ಸುತ್ತ ಹಾಸುಗಲ್ಲು ನಿಲ್ಲಿಸಿ ರಕ್ಷಣೆ ನೀಡಲಾಗಿದೆ.

2023ರ ಡಿಸೆಂಬರ್ 4ರಂದು ನಡೆದಿದ್ದ ಕಾರ್ಯಾಚರಣೆ ವೇಳೆ ಅರ್ಜುನ ಮೃತಪಟ್ಟಿತ್ತು. ಡಿ.5ರಂದು ಸಮಾಧಿ ಮಾಡಲಾಗಿತ್ತು. ಅಲ್ಲಿಯೇ ಸ್ಮಾರಕ ನಿರ್ಮಿಸಬೇಕೆಂಬ ಒತ್ತಾಯವಿತ್ತು.

'ಸಮಾಧಿ ನಿರ್ಮಾಣಕ್ಕಾಗಿ ಚಿತ್ರನಟ ದರ್ಶನ್ ಅಭಿಮಾನಿಗಳು ಬುಧವಾರ ವಾಹನದಲ್ಲಿ ಹಾಸುಗಲ್ಲುಗಳನ್ನು ತಂದಿದ್ದರು. ದಬ್ಬಳಿಕಟ್ಟೆ ರಕ್ಷಿತಾರಣ್ಯ ವ್ಯಾಪ್ತಿಯಲ್ಲಿರುವುದರಿಂದ ಸ್ಮಾರಕ ನಿರ್ಮಿಸುವಂತಿಲ್ಲ. ಸರ್ಕಾರದಿಂದ ಸೂಚನೆ ಬಂದಿಲ್ಲ. ಎಲ್ಲಿ ಸ್ಮಾರಕ ನಿರ್ಮಿಸಬೇಕೆಂಬುದು ತೀರ್ಮಾನವಾದ ನಂತರ ಕ್ರಮ ಕೈಗೊಳ್ಳಲಾಗುವುದು' ಎಂದು ಇಲಾಖೆ ಸಿಬ್ಬಂದಿ, ಅಷ್ಟೂ ಕಲ್ಲುಗಳನ್ನು ಸುಪರ್ದಿಗೆ ತೆಗೆದುಕೊಂಡರು.

'ಕಲ್ಲುಗಳನ್ನು ತಂದಿದ್ದವರಿಗೆ ಅದರ ನಿಗದಿತ ಹಣ ಸಂದಾಯ ಮಾಡಿ, ಅವುಗಳನ್ನೇ ಬಳಸಿ, ಸಮಾಧಿ ಜಾಗವನ್ನು ರಕ್ಷಿಸಲಾಗಿದೆ. ಜೋರು ಮಳೆ ಬಂದರೂ, ಸಮಾಧಿಗೆ ತೊಂದರೆಯಾಗದು' ಎಂದು ವಲಯ ಅರಣ್ಯಾಧಿಕಾರಿ ವಿಜಯ್‌ಕುಮಾರ್ ಅವರು ತಿಳಿಸಿದ್ದಾರೆ.

ಹೆತ್ತೂರು ಸಮೀಪದ ಅರಣ್ಯ ಪ್ರದೇಶದಲ್ಲಿರುವ ಅರ್ಜುನನ ಸಮಾಧಿ ಸುತ್ತ ಹಾಸುಗಲ್ಲು ನಿಲ್ಲಿಸಿದ ಅರಣ್ಯ ಸಿಬ್ಬಂದಿ

ಸುಧಾ, ಮಯೂರ ಓದಿರಿ

ಮಾತಾ-ಪಿತೃಗಳ ಪುಣ್ಯಸ್ಮರಣೆ

ಶ್ರೀ ಕೋಟೆ ಎನ್.ಸಿ. ಶ್ರೀನಿವಾಸ ರೆಡ್ಡಿ
ಜನನ: 16-12-1931 ನಿಧನ: 24-05-2009

ಶ್ರೀಮತಿ ಗೌರಮ್ಮನವರು
ಜನನ: 05-09-1938 ನಿಧನ: 22-01-2010

KBW Bricks
ಕೋದಂಡರಾಮ ನಿಲಯ, ದೊಡ್ಡನೆಕ್ಕುಂದಿ ಮುಖ್ಯರಸ್ತೆ, ಬೆಂಗಳೂರು-37.

ನಮ್ಮೆಲ್ಲರ ಆರಾಧ್ಯ ದೇವರು ನೀವು, ನಮ್ಮ ಬದುಕಿನ ಬೇರು ನೀವು, ನೀವಿಲ್ಲದೆ ವರ್ಷಗಳು ಸವೆದಿವೆ.
ಕಾಲವೆಷ್ಟೆ ಉರುಳಿದರು, ನಿಮ್ಮ ಪ್ರೀತಿ, ತಾಳ್ಮೆ, ನಿಮ್ಮ ಆದರ್ಶಗಳೇ ನಮ್ಮ ಬದುಕಿನ ಮುನ್ನುಡಿ..
ನೀವಿರುವಿರಿ ಸದಾ ಬೆಳಕಾಗಿ ನಮ್ಮ ಮನಗಳಲ್ಲಿ, ನಾವಿರುವೆವು ನಿಮ್ಮದೇ ನೆನಪಿನಲ್ಲಿ ಸದಾ ಸ್ಮರಿಸುವೆವು.

ಕೋಟೆ ಕುಟುಂಬದವರು ಎನ್. ಎಸ್. ನಾಗರಾಜ ರೆಡ್ಡಿ, ಎನ್. ಎಸ್. ವಸಂತಮ್ಮ ಮತ್ತು ಎನ್. ಎಸ್. ನಂದೀಶ ರೆಡ್ಡಿ ಮಾಜಿ ಅಧ್ಯಕ್ಷರು, ಬಿ.ಎಂ.ಟಿ.ಸಿ., (ಮಾಜಿ ಶಾಸಕರು, ಕೆ. ಆರ್. ಪುರ, ಬೆಂಗಳೂರು)
ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಬಂಧು-ಮಿತ್ರರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ADMISSION CORNER ಕ್ಲಾಸಿಫೈಡ್ಸ್

JOB OPPORTUNITIES

Manager

WANTED
Manager to manage Super Market of FMCG at Koramangala with 5 years experience. Salary Negotiable. Mail ASAP: hrd@kof.coop

Teachers/ Professors

TEACHERS WANTED To Teach all Subjects for English Medium high School and LKG to 7th Std. Qualification: any degree, D.Ed/ B.Ed, C.PEd/ B.PEd, with good fluency in English. Contact immediately. NBN Vidyamandira, Weaves Colony, Bannerugatta Road. Phone:- 9341247744.

WALK-IN INTERVIEW. Carmel Garden High School, Nandini Layout, Bangalore. MSC B.Ed. CBZ. Phone: 8618293621.

DH Classifieds More value, more impact | ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
9731810277
9886213331
9845114560

BETHESDA HIGH SCHOOL
No. 99, Railway Parallel Road, Kumara Park West, Bangalore-20.
Require
→ Maths / English Teacher for Primary
→ Nursery Teacher (NTT trained)
→ Physical Education (P T Teacher)
Salary: 15,000 & above
Walk-in interview Between 11.00 AM to 4.00 P.M
Contact: 9901352480

TRAINED POST-GRADUATE TEACHERS for HIGH SCHOOL. ENGLISH, MATHS, SCIENCE, SOCIAL SCIENCE, HINDI. NAVODAYA VIDYANIKETHANA #19- Dinnur Main Road RT.-Nagar Bangalore-32 Whatsapp:9343247885 navodayavidyanikethna222 @gmail.com

Wanted

WANTED FEMALE Office Assistant- any Degree, Good Communication Skills English & Hindi for Pvt Ltd Company in Rajajinagar Contact: 9108458798/ 9845579620

REAL ESTATE SELLING

Sites

Anjanapura

SALE 40X60 North facing BDA site, 11th block, Anjanapura Layout, Good location, 11000/sft- 9448225072.

Kempegowda Layout

NADAPRABHU KEMPEGOWDA LAYOUT,3rd Block 40x60 W/F,30x40 E/F and 7th Block 20x30 S/F Contact: 9686469799

Multiple Locations

80*120 SADASHIVANAGARA, 40*60 Central Excise Layout, 60*90 Malleshwaram, 30*40 Sanjaynagara, Judicial Layout 80*120. 9538111239

REAL ESTATE BUYING

Flat

Multiple Locations

WANTED 1, 2, 3 BHK Flat Sale and Rental and Plots. Rajajinagar, Malleshwaram, Yeshwantpur. 7022573176/ 8308173176.

General

General

WANTED AGRICULTURE/ Residential/ Commercial/ Industrial Lands for JV or Purchase in BLR. 9916310226/ 9620253180. vernadevelopers1@gmail.com Barton Centre, MG Road.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

B.Com
BCA
BBA
BBA Aviation Management
B.Sc. Aircraft Maintenance
Approved by AICTE & Affiliated to Bengaluru North University
Eligibility: 12th Std. or Diploma (DTE approved)

HINDUSTAN AVIATION ACADEMY
Approved by Directorate General of Civil Aviation, Govt. of India
Aircraft Maintenance Engineering
• B1.1 Aeroplane Turbine
• B2 Avionics
• B.Sc. Aircraft Maintenance
Eligibility: 12th Std. with PCM or Diploma (DTE approved)

HINDUSTAN ELECTRONICS ACADEMY
Approved by DTE & AICTE
Polytechnic Diploma Engineering
Eligibility: 10th Std.
• Aeronautical Engineering
• Mechanical Engineering
• Computer Science Engineering
AUTHORIZED TRAINING CENTER IATA

HBS HINDUSTAN BUSINESS SCHOOL
MARATHAHALLI, BENGALURU
8971404357 / 9740037853
Ashwathnagar, Marathahalli, Bengaluru - 560037
Ph: 080-25238650, 25232217
E: admissions@hindustanacademy.edu.in
www.hindustanacademy.edu.in
ADMISSIONS ARE OPEN FOR 2024-25
SCAN QR CODE FOR MORE DETAILS

RENTAL PROPERTIES

Accommodation Available

Industrial And Factory

AVAILABLE OF Industrial Shed for Rent 95000sqft at Soukya Road, Whitefield. Contact: 9341234288/ 9663224353/ 9845417487.

PERSONAL

Announcements

ANNOUNCEMENT
I, ABDUL AZEEZ S/o Late Mohammed R/a No. 290, Pulakunta Building 15th Street, 9th Cross, Vinayaka Nagara, K.R.Puram Bangalore -560 036 have changed my name from ABDUL AZEEZ to MOKSHITH KADUR. religion from Islam to Hinduism vide affidavit dated 17-05-2024 before Notary Bhagya Kumari N, Bangalore.

Change of Name

CHANGE OF NAME
I, Jalajakshi (Existing name of spouse as per change of next of Kin POR/ Service Documents) spouse of Kushendra Kumara Gowda (Name of the husband) resident of Kyasapura Village, Kootagal Hobli, Ramanagara Taluk & Dist.-562159, have changed my name from Jalajakshi (Existing name of spouse as per change of next of Kin POR/ Service Document(s) to JALAJAMMA. A.M (proposed / adopted new name) for future and also rectified the date of birth as 20/05/1971, vide affidavit dated 23/05/2024 before notary B.M. Srivatsa, Ramanagara.

CHANGE OF NAME
I, M. KAUSALYA Residing at No. 5, 6th Cross, 2nd Main Road, Raghavendra Circle, Manjunatha Nagar, Kalkere, Horamavu, Bangalore-560043, have changed my name to M. JAYA KAUSALYA vide affidavit dated 23.5.2024 before Notary Y.R. Chandrasekar, Bangalore. Henceforth I shall be known as M. JAYA KAUSALYA only.

CHANGE OF NAME
I, BANASHREE DEBANGSHI, D/o Ashis Kumar Debangshi, residing at Tropical Dwellings Appartment, Flat No. 105, Veera Bhadra Nagar Main Road, Talacauvery Housing Society, Basavanagar, Bengaluru- 560037, have changed my name to BANASHREE DAS vide affidavit dated 23/05/2024 Sworn before Notary Bhagya Kumari N, Bengaluru. Henceforth I shall be called as BANASHREE DAS only

H.P - AMEENA BI FREE HOSTEL FOR STUDENTS
No.49, Risaldar Road, Seshadripuram, opp old Kino Theatre, Bangalore – 560020
Invites application from the candidates of Muslim Boys students for the academic year 2024-2025 who wants to pursue their studies after 10th or 12th Standard and those who are really in need of and willing to Join for Free Hostel Facility (Boarding and Lodging) can apply. Candidates can forward their Application to below mentioned E-mail ID or Phone Number on or before 10-06-2024.
Email ID : hashmathpasha.advocate@gmail.com
Mobile Number : 9845183197

I, LEENA PHILIP D SILVA have changed my name to LEENA DSILVA vide affidavit dated: 23/5/2024 before Notary Manohar Jeerige Bangalore.

Lost

I, ABDULLAH Ahmed Mohammed Barrqaan, Residing at No. 406, 4th G Main, 2nd Block, HRBR Layout, Bengaluru- 560043. have lost Educational Certificate, Document Name: Bachelor of Business Management ID: 125026 Place of Issue: Bangalore University. Lost while Transit. Finders Please Contact: 7353256586

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

AUTOMOTIVE

Four Wheelers Selling

Tractors / Heavy Vehicles

Ashok Leyland 14 Tyres TRUCKS FOR SALE

Mfg.Y	No.'s	Model
2015	10	3718
2016	29	3718

Contact 7997654447 9848996120 9948790011

RV Girls High School
RASHTREEYA SIKSHANA SAMITHI TRUST INSTITUTIONS
Affiliated to Karnataka School Examination and Assessment Board | Recognised by Government of Karnataka
Scan Here
Go, change the world

SCHOOL TOPPERS
The Management extends heartfelt congratulations to the staff and students for their outstanding performance in the SSLC Examination 2023-24.

Umme Hanee 591 - 94.56% | Trisha Tiwari 591 - 94.56% | Suha Haleema 586 - 93.76% | Prema N 586 - 93.76% | Sai Sharanya K 585 - 93.6%
Spandana R Vernekar 580 - 92.8% | Ramitha G R 579 - 92.64% | Rithikka V 571 - 91.36% | Tejashri M 571 - 91.36% | Yashaswini S 570 - 91.2%
Faiza Tabassum 566 - 90.56% | Chaithanya S 565 - 90.4% | Arshiya Banu 564 - 90.24%

SRI KRISHNA GROUP OF INSTITUTIONS
ITI Layout (Near Vidyapeeta), Banashankari 3rd Stage, Bangalore-560 085
ADMISSIONS OPEN 2024-25
PUC: SCIENCE & COMMERCE
DEGREE: B.COM DAY EVENING, BBA & BCA
PUC STATE TOPPERS 2022-24 BATCH | BENGALURU CITY UNIVERSITY RANK HOLDERS 2020-23 BATCH

SCIENCE 9TH RANK VISHNU S BHARDWAJ | COMMERCE 10TH RANK TEJASWINI R | BBA 1ST RANK MS. RUTH R | BCA 5TH RANK MR. MAHESH G
CONTACT: 9844784320, 9945330589



ಅಮೆಜಾನ್ ಪೇ ಪರ್ ವ್ಯೂ ಯೋಜನೆ ಅಂತ್ಯ?

ಅಮೆಜಾನ್‌ನ ಪ್ರೈಂ ವಿಡಿಯೊ ಡೈರೆಕ್ಟ್(ಪಿವಿಡಿ) ವೇದಿಕೆಯ 'ಪೇ ಪರ್ ವ್ಯೂ' ಯೋಜನೆ ಗಳಿಕೆ ದೃಷ್ಟಿಯಿಂದ ಒಂದಷ್ಟು ಸಿನಿಮಾಗಳಿಗೆ ಆಮ್ಲಜನಕವಾಗಿತ್ತು. ಪ್ರಮುಖ ಒಟಿಟಿ ವಾಹಿನಿ ಆ ಕಾರ್ಯಕ್ರಮವನ್ನು ನಿಲ್ಲಿಸಲು ಸಜ್ಜಾಗಿದೆ ಎಂಬ ಚರ್ಚೆಗಳು ನಡೆಯುತ್ತಿವೆ...

ವಿನಾಯಕ ಕೆ.ಎಸ್

ಕನ್ನಡ ಸಿನಿಮಾಗಳನ್ನು ಜನ ಚಿತ್ರಮಂದಿರಗಳಿಗೆ ಬಂದು ನೋಡುತ್ತಿಲ್ಲ. ಜನ ಬಾರದ ಸಿನಿಮಾಗಳನ್ನು ಬಿಡುಗಡೆ ನಂತರ ಯಾವ ವೇದಿಕೆಗಳೂ ಖರೀದಿಸುತ್ತಿಲ್ಲ. ಕನ್ನಡ ಚಿತ್ರರಂಗ ಕೋವಿಡ್ ಬಳಿಕ ಎದುರಿಸುತ್ತಿರುವ ಗಂಭೀರ ಸಮಸ್ಯೆಯಿದು. ಇಂತಹ ಸಮಯದಲ್ಲಿ ಕೆಲವಷ್ಟು ಸಿನಿಮಾಗಳಿಗೆ ಆದಾಯ ಗಳಿಕೆ ದೃಷ್ಟಿಯಿಂದ ಆಸರೆಯಾಗಿರುವುದು ಅಮೆಜಾನ್‌ನ ಪ್ರೈಂ ವಿಡಿಯೊ ಡೈರೆಕ್ಟ್(ಪಿವಿಡಿ) ವೇದಿಕೆ.

ಏನಿದು ಕಾರ್ಯಕ್ರಮ?

ಇತ್ತೀಚಿನ ವರ್ಷಗಳಲ್ಲಿ ಜನರು ಚಿತ್ರಮಂದಿರಗಳಿಗಿಂತ ಹೆಚ್ಚಾಗಿ ಮನೆಯಲ್ಲೇ ಕುಳಿತು ಸಿನಿಮಾ ನೋಡಲು ಇಷ್ಟಪಡುತ್ತಾರೆ. ಇದನ್ನು ಲಾಭವಾಗಿಸಿಕೊಂಡು ಮೊಬೈಲ್, ಟಿವಿ, ಇಂಟರ್‌ನೆಟ್‌ಗಳಲ್ಲಿ ಸಿನಿಮಾ, ವೆಬ್ ಸಿರೀಸ್‌ಗಳನ್ನು ನೀಡುವ ಒಟಿಟಿ (ಓವರ್ ದಿ ಟಾಪ್) ಮನರಂಜನಾ ವಾಹಿನಿಗಳು ಬಹುಬೇಗ ಜನಪ್ರಿಯಗೊಂಡವು. ವಿದೇಶಿ ಮೂಲದ ಅಮೆಜಾನ್, ನೆಟ್‌ಫ್ಲಿಕ್ಸ್ ನಮ್ಮ ಮಾರುಕಟ್ಟೆಯಲ್ಲಿ ಪ್ರಾಬಲ್ಯ ಸಾಧಿಸುತ್ತಿದ್ದಂತೆ, ನಮ್ಮಲ್ಲಿನ ಮನರಂಜನಾ ವಾಹಿನಿಗಳಾದ ಜೀ, ಕಲರ್ಸ್, ಸೋನಿ, ಸ್ಟಾರ್‌ಗಳು ತಮ್ಮ ಒಟಿಟಿ ವೇದಿಕೆಗಳ ಬಲವರ್ಧನೆಗೊಳಿಸಿದವು.

ಪ್ರಾರಂಭದಲ್ಲಿ ಸಿನಿಮಾವೊಂದು ಚಿತ್ರಮಂದಿರದಲ್ಲಿ ಬಿಡುಗಡೆಗೆಯಾಗುವ ಮೊದಲೇ, ಅದರ ಒಟಿಟಿ ಪ್ರಸಾರ ಹಕ್ಕನ್ನು ಖರೀದಿಸಲಾಗುತ್ತಿತ್ತು. ಈ ಖರೀದಿಯಲ್ಲಿ ಅಮೆಜಾನ್ ಮುಂಚೂಣಿಯಲ್ಲಿತ್ತು. ನೆಟ್‌ಫ್ಲಿಕ್ಸ್ ಕನ್ನಡ ಸಿನಿಮಾಗಳಿಗೆ ಮಣೆ ಹಾಕಿದ್ದು ವಿರಳ. ಜೀ, ಕಲರ್ಸ್, ಸ್ಟಾರ್, ಉದಯ ವಾಹಿನಿಗಳು ಕೂಡ ಸ್ಯಾಟ್‌ಲೈಟ್ ಹಕ್ಕಿನ ಜೊತೆಗೆ ಒಟಿಟಿ ಹಕ್ಕನ್ನೂ ಖರೀದಿಸುತ್ತಿದ್ದವು. ಕ್ರಮೇಣವಾಗಿ ಈ ಖರೀದಿ ನಿಂತಿತು. ಪ್ರಸ್ತುತ ಅಮೆಜಾನ್ ಹೊರತುಪಡಿಸಿ ಯಾವ ವಾಹಿನಿಯೂ, ಒಟಿಟಿಯೂ ಸ್ಟಾರ್ ನಟನಿಲ್ಲದ, ದೊಡ್ಡ ನಿರ್ಮಾಣ ಸಂಸ್ಥೆಯದಲ್ಲದ ಕನ್ನಡ ಸಿನಿಮಾ ಖರೀದಿಸುತ್ತಿಲ್ಲ ಎನ್ನುವ ಸ್ಥಿತಿಗೆ ಬಂದುನಿಂತಿದೆ.

ಈ ಹಂತದಲ್ಲಿ ಅಮೆಜಾನ್ ಹೈಬ್ರಿಡ್ ಡೀಲ್ ಪರಿಚಯಿಸಿತು. ಅಂದರೆ ಅದು ಆರು ತಿಂಗಳು ಅಥವಾ ವರ್ಷದ ಅವಧಿಗೆ ಸಿನಿಮಾದ ಒಟಿಟಿ ಹಕ್ಕನ್ನು ಖರೀದಿಸುತ್ತದೆ. ಆ ಅವಧಿ ಮುಗಿದ ಬಳಿಕ ಸಿನಿಮಾ ಹಕ್ಕು ನಿರ್ಮಾಪಕರಿಗೆ ಮರಳುತ್ತದೆ. ಇದು ಹೆಚ್ಚು ಲಾಭದಾಯಕವಾಗದ ಕಾರಣ 'ಪೇ ಪರ್ ವ್ಯೂ' ಎಂಬ ಯೋಜನೆ ಪರಿಚಯಿಸಿತು. ಈ ಯೋಜನೆಯಡಿ ಸಿನಿಮಾ ಆಯ್ಕೆಗೊಂಡರೆ ನಿರ್ಮಾಪಕ ಅಮೆಜಾನ್ ಪ್ರೈಂನಲ್ಲಿ ಸಿನಿಮಾ ಪ್ರಸಾರ ಮಾಡಬಹುದು. ಒಬ್ಬ ವೀಕ್ಷಕ ಸಿನಿಮಾವನ್ನು ಒಂದು ಗಂಟೆ ವೀಕ್ಷಿಸಿದರೆ ನಿರ್ಮಾಪಕನಿಗೆ ಅಮೆಜಾನ್ ₹3–8 ವರೆಗೆ ನೀಡುತ್ತದೆ. ಎರಡು ಗಂಟೆಯ ಸಿನಿಮಾ ಎಂದರೆ ಒಬ್ಬ ಪ್ರೇಕ್ಷಕನಿಂದ ನಿರ್ಮಾಪಕನಿಗೆ ₹6–12 ಬರುತ್ತದೆ. ಇದರ ಡ್ಯಾಶ್‌ಬೋರ್ಡ್ ಅನ್ನು ನಿರ್ಮಾಪಕನಿಗೆ ಅಥವಾ ಅಮೆಜಾನ್‌ನಲ್ಲಿ ಸಿನಿಮಾವನ್ನು ಅಪ್‌ಲೋಡ್ ಮಾಡುವ ಏಜೆನ್ಸಿಗೆ ನೀಡುತ್ತದೆ. ಅಲ್ಲಿ ಎಷ್ಟು ನಿಮಿಷ ವೀಕ್ಷಣೆಯಾಗಿದೆ, ಎಷ್ಟು ಹಣ ಬಂದಿದೆ ಎಂಬ ಲೆಕ್ಕವಿರುತ್ತದೆ. ಒಮ್ಮೆ ಸಿನಿಮಾ ಅಪ್‌ಲೋಡ್ ಆದರೆ ಸುಮಾರು 62 ದೇಶಗಳ ಬಳಕೆದಾರರಿಗೆ ಈ ಸಿನಿಮಾ ವೀಕ್ಷಣೆಗೆ ಸಿಗುತ್ತದೆ.

ರೆಂಟಲ್ ಲಾಭದಾಯಕವೇ?

ರೆಂಟಲ್‌ನಲ್ಲಿ ಸಿನಿಮಾ ಹಾಕುವ ಯೋಜನೆಯನ್ನು ಅಮೆಜಾನ್ ಜಾರಿಗೆ ತರಲಿದೆ. ಇದೊಂದು ರೀತಿ ಚಿತ್ರಮಂದಿರದಲ್ಲಿ ಸಿನಿಮಾ ಬಿಡುಗಡೆ ಮಾಡಿದಂತೆ ಒಟಿಟಿಯಲ್ಲಿ ಬಿಡುಗಡೆಯ ಯೋಜನೆ. ಒಂದು ಸಿನಿಮಾ ₹79–199ಗೆ ರೆಂಟ್‌ಗೆ ಸಿಗುತ್ತದೆ. ಪ್ರೇಕ್ಷಕ ಈ ಮೊತ್ತ ನೀಡಿ ಒಂದು ಸಲ ಅಮೆಜಾನ್ ಪ್ರೈಂನಲ್ಲಿ ಆ ಸಿನಿಮಾವನ್ನು ನೋಡಬಹುದು. ಅದರಲ್ಲಿ ಅಮೆಜಾನ್ ಒಂದು ಪಾಲು ಇಟ್ಟುಕೊಂಡು ಮಿಕ್ಕಿದ್ದನ್ನು ನಿರ್ಮಾಪಕನ ಖಾತೆಗೆ ಹಾಕುತ್ತದೆ.

'ರೆಂಟಲ್ ಯೋಜನೆ ಹೊಸತೇನಲ್ಲ. ಈ ಹಿಂದೆಯೇ ಇತ್ತು. ಅಮೆಜಾನ್ ತಾನೇ ದುಡ್ಡು ಕೊಟ್ಟು ಹಕ್ಕು ಖರೀದಿಸಿದ ದೊಡ್ಡ ಸ್ಟಾರ್ ನಟರ ಸಿನಿಮಾಗಳನ್ನು ಚಿತ್ರಮಂದಿರದಲ್ಲಿ ಬಿಡುಗಡೆಗೊಂಡ ಬಳಿಕ ರೆಂಟಲ್ ಯೋಜನೆಯಡಿ ಹಾಕುತ್ತಿತ್ತು. ಕೆಜಿಎಫ್‌ನಂತಹ ಚಿತ್ರ ಕೆಲ ದಿನಗಳ ಕಾಲ ರೆಂಟಲ್‌ನಲ್ಲಿತ್ತು. 'ಪೇ ಪರ್ ವ್ಯೂ' ಯೋಜನೆ ನಿಲ್ಲಿಸುತ್ತದೆ ಎಂಬುದೆಲ್ಲ ವದಂತಿಯಷ್ಟೆ. 'ಪೇ ಪರ್ ವ್ಯೂ'ನಲ್ಲಿ ಸಾಕಷ್ಟು ಸಿನಿಮಾಗಳನ್ನು ಅಮೆಜಾನ್ ಹಾಕುತ್ತಿಲ್ಲ ಎಂದು ಹಲವರು ಆರೋಪಿಸುತ್ತಾರೆ. ಅಂಥವರಿಗೆ ರೆಂಟಲ್ ಯೋಜನೆಯಲ್ಲಿ ಸಿನಿಮಾ ಹಾಕುವ ದಾರಿಯನ್ನು ಮಾಡಿಕೊಡುತ್ತಿದೆ. ನಿಮ್ಮ ಸಿನಿಮಾ ಚೆನ್ನಾಗಿದೆಯೆಂದರೆ ಈ ವಿಭಾಗದಲ್ಲಿ ಹಾಕಿ ಸಾಬೀತುಪಡಿಸಿ ಎಂಬ ಸವಾಲಿನಂತಿದೆ ಇದು. ಒಂದು ರೀತಿ 'ಪೇ ಪರ್ ವ್ಯೂ'ನಲ್ಲಿ ಪ್ರೇಕ್ಷಕನಿಗೆ ₹1ಕ್ಕೆ ಸಿನಿಮಾ ಸಿಕ್ಕಂತೆ. ಅದನ್ನೇ ನೋಡದವರು ಪ್ರತಿ ಸಿನಿಮಾಗೆ ₹79 ಕೊಟ್ಟು ಸಿನಿಮಾ ನೋಡುತ್ತಾರೆ ಎಂಬುದು ಕಷ್ಟ' ಎನ್ನುತ್ತಾರೆ ಒಟಿಟಿಗಳಿಗಾಗಿ ಸಿನಿಮಾಗಳನ್ನು ಖರೀದಿಸುವ ಸಂಸ್ಥೆಯಾಗಿರುವ 'ಜೀರೋ ಬಿಟ್ರೇಟ್'ನ ನಿರಂಜನ್.

'ಚಿತ್ರಮಂದಿರಗಳಲ್ಲಿ ಸಿನಿಮಾ ತೆರೆ ಕಂಡು 60 ದಿನಗಳೊಳಗೆ ಅಮೆಜಾನ್‌ನಲ್ಲಿ ಪ್ರಸಾರಗೊಂಡರೆ, ಗಂಟೆಗೆ ₹4 ಸಿಗುತ್ತದೆ. ಅದರ ಬಳಿಕವಾದರೆ ₹3. ದೊಡ್ಡ ಹೀರೊ ಅಥವಾ ಬ್ರ್ಯಾಂಡ್ ಇರುವ ನಿರ್ಮಾಣ ಸಂಸ್ಥೆಗಳಿಗೆ ಗಂಟೆಗೆ ₹6–8 ವರೆಗೂ ಕೊಡುತ್ತಾರಂತೆ. ಒಂದು ಸಿನಿಮಾ 10 ಕೋಟಿ ನಿಮಿಷ ವೀಕ್ಷಣೆಯಾದರೆ ನಿರ್ಮಾಪಕನಿಗೆ ಸುಮಾರು ₹65 ಲಕ್ಷ ಬರುತ್ತದೆ. ನಮ್ಮ 'ಸೀತಾರಾಮ್ ಬಿನೋಯ್' ಸಿನಿಮಾ ಈತನಕ ಸುಮಾರು 13 ಕೋಟಿ ನಿಮಿಷ ವೀಕ್ಷಣೆಯಾಗಿರಬಹುದು. 'ಕೇಸ್ ಆಫ್ ಕೊಂಡಾಣ' ಕನ್ನಡ ಮತ್ತು ಮಲಯಾಳದಲ್ಲಿ ಬಿಡುಗಡೆಗೊಂಡಿದೆ. ಎರಡು ತಿಂಗಳಲ್ಲಿ ಸುಮಾರು 5.5 ಕೋಟಿ ನಿಮಿಷ ಸ್ಟ್ರೀಮ್ ಆಗಿದೆ. ಇದೊಂದರಿಂದಲೇ ಸಿನಿಮಾಗೆ ಹಾಕಿದ ಬಂಡವಾಳವನ್ನು ಪೂರ್ತಿಯಾಗಿ ತೆಗೆಯಲು ಸಾಧ್ಯವಿಲ್ಲ. ಸಿನಿಮಾ ಪ್ರಸಾರಗೊಂಡು 90 ದಿನಗಳ ನಂತರ ನಿರ್ಮಾಪಕನಿಗೆ ಹಣ ಬರಲು ಪ್ರಾರಂಭವಾಗುತ್ತದೆ' ಎನ್ನುತ್ತಾರೆ ನಿರ್ದೇಶಕ ಮತ್ತು ನಿರ್ಮಾಪಕ ದೇವಿಪ್ರಸಾದ್ ಶೆಟ್ಟಿ.

'ಅಮೆಜಾನ್‌ಗೆ ಸಿನಿಮಾ ಪ್ರಸಾರದ ಪ್ರಸ್ತಾವ ಇಡುವ ದೊಡ್ಡ ಸಂಸ್ಥೆಗಳಿಗೆ 'ಪೇ ಪರ್ ವ್ಯೂ' ನಿಲ್ಲಿಸುವ ಸೂಚನೆ ದೊರೆತಿದೆ. ಈ ಬಗ್ಗೆ ಅಧಿಕೃತವಾಗಿ ಯಾವುದೇ ಮಾಹಿತಿ ಲಭಿಸಿಲ್ಲ. ಕನ್ನಡದ ಕೆಲ ಸಿನಿಮಾಗಳು ರೆಂಟಲ್ ಮಾದರಿಯಲ್ಲಿ ಈಗಾಗಲೇ ಅಮೆಜಾನ್‌ನಲ್ಲಿ ಬಂದಿವೆ. ಆದರೆ ಆದಾಯದ ದೃಷ್ಟಿಯಿಂದ ಉತ್ತಮ ಎನ್ನಲು ಸಾಧ್ಯವಿಲ್ಲ. ಅಂಕಿಅಂಶಗಳ ಪ್ರಕಾರ ಕನ್ನಡ ಸಿನಿಮಾಕ್ಕೆ ಸುಮಾರು 8 ಲಕ್ಷ ಸಕ್ರಿಯ ವೀಕ್ಷಕರಿದ್ದಾರೆ. ಅಮೆಜಾನ್‌ನಲ್ಲಿ 'ಪೇ ಪರ್ ವ್ಯೂ' ಯೋಜನೆಯಲ್ಲಿ ಸಿನಿಮಾ ಸ್ವೀಕೃತವಾದರೆ ನಾವೇ ನಿರ್ಮಾಪಕರಿಗೆ ಮುಂಗಡ ಹಣ ಕೊಟ್ಟು ಸಿನಿಮಾ ಖರೀದಿಸುತ್ತೇವೆ. ಆದರೆ ಸಿನಿಮಾ ಸುಲಭಕ್ಕೆ ಸ್ವೀಕೃತವಾಗುತ್ತಿಲ್ಲ. ಈ ವರ್ಷ ಕನ್ನಡ ಆರೆಂಟು ಸಿನಿಮಾಗಳು ಪ್ರೈಮ್‌ನಲ್ಲಿ ಬಂದಿರಬಹುದು' ಎನ್ನುತ್ತಾರೆ ಪಾಪ್ಟರ್ ಮೀಡಿಯಾ ನೆಟವರ್ಕ್‌ನ ಪ್ರತಿನಿಧಿ ನಿಖಿಲ್ ಪೈ.

ಕೊನೆಯ ಆಯ್ಕೆ



'ಪೇ ಪರ್ ವ್ಯೂ'(ಪಿವಿಒಡಿ) ಎಂಬುದು ವಿಧಿಯಿಲ್ಲದ ಕೊನೆಯ ಆಯ್ಕೆ. ಚಿತ್ರಮಂದಿರಗಳಲ್ಲಿ ಸದ್ದು ಮಾಡಿದ ಸಿನಿಮಾಗಳು ಮಾತ್ರ ಇಲ್ಲಿ ಓಡುತ್ತವೆ. ಔಟ್‌ರೇಟ್ ಖರೀದಿ ಮಾಡಬೇಕು. 'ಕೌಸಲ್ಯ ಸುಪ್ರಜಾ ರಾಮ' ಚಿತ್ರಮಂದಿರಗಳಲ್ಲಿಯೂ ಸದ್ದು ಮಾಡಿತ್ತು. ಹೀಗಾಗಿ ಔಟ್‌ರೇಟ್‌ನಷ್ಟೇ ದುಡಿದಿದೆ. ಆದರೆ ಆ ಹಣ ದುಡಿಯಲು 9 ತಿಂಗಳು ಕಾಯಬೇಕಾಯ್ತು. ಎಲ್ಲ ನಿರ್ಮಾಪಕರಿಗೂ ಆ ಶಕ್ತಿ ಇರುವುದಿಲ್ಲ. ಹೆಸರು, ಬ್ರ್ಯಾಂಡ್ ಇದ್ದರಷ್ಟೆ ಈ ಮಾದರಿ ವರ್ಕ್ ಆಗುತ್ತದೆ. ಹೊಸಬರಿಗೆ ಕಷ್ಟ. ಇತರ ಒಟಿಟಿಗಳು ಪಿವಿಒಡಿ ಅವಕಾಶ ನೀಡಿದ್ದರೆ ಒಂದು ರೀತಿ ಸ್ಪರ್ಧೆ ಇರುತ್ತಿತ್ತು. ಜನ ಒಟಿಟಿಯಲ್ಲೂ ಕನ್ನಡದ ಸಿನಿಮಾ ನೋಡುವುದಿಲ್ಲ. ಬೇರೆ ಭಾಷೆಯ ಕೆಟ್ಟ ಸಿನಿಮಾ ನೋಡಿ ಹೊಗಳುತ್ತಾರೆ ಎಂಬುದು ಕನ್ನಡದಲ್ಲಿ ಸಿನಿಮಾ ನಿರ್ಮಾಣ ಮಾಡುವವರಿಗೆ ನೋವಿನ ಸಂಗತಿ. ಪಿಒವಿಡಿ 'ನೋಟ' ಇದ್ದಂಗೆ' ಎನ್ನುತ್ತಾರೆ ನಿರ್ದೇಶಕ, ನಿರ್ಮಾಪಕ ಶಶಾಂಕ್.

10 ಕೋಟಿ ಟಾರ್ಗೆಟ್

'ಒಂದು ಸಿನಿಮಾ 'ಪೇ ಪರ್ ವ್ಯೂ'ನಲ್ಲಿ ಯಶಸ್ವಿ ಎನಿಸಿಕೊಳ್ಳಬೇಕಿದ್ದರೆ ಅಮೆಜಾನ್ ಪ್ರಕಾರ 10 ಕೋಟಿ ನಿಮಿಷ ವೀಕ್ಷಣೆಯಾಗಬೇಕು. ಆಗ ಬೇರೆ ಭಾಷೆಗಳಿಗೂ ಡಬ್ ಮಾಡಿ ಹಾಕಲು ಅನುಮತಿ ಸಿಗುತ್ತದೆ. ಕನ್ನಡದ ಸಿನಿಮಾಗಳು ಸರಾಸರಿ 3–4 ಕೋಟಿ ನಿಮಿಷ ವೀಕ್ಷಣೆಯಾಗಿ ₹15–20 ಲಕ್ಷ ಗಳಿಸುತ್ತವೆ. 'ಲವ್ ಮಾಕ್ಟೇಲ್', 'ದಿಯಾ', 'ಸೀತಾರಾಮ್ ಬಿನೋಯ್', 'ಟಗರು ಪಲ್ಯ', 'ಕೌಸಲ್ಯ ಸುಪ್ರಜಾ ರಾಮ'... ಹೀಗೆ ಒಂದಷ್ಟು ಸಿನಿಮಾಗಳು ಈ ಮಾದರಿಯಲ್ಲಿಯೇ ದೊಡ್ಡ ಯಶಸ್ಸು ಕಂಡಿವೆ. ಸಾವಿರಾರು ಕೋಟಿ ವಹಿವಾಟು ನಡೆಸುವ ಅಮೆಜಾನ್‌ಗೆ ಭಾರತ ಚಿಕ್ಕ ಮಾರುಕಟ್ಟೆ. ಪ್ರೇಕ್ಷಕರಿಗೆ ಪ್ರತಿ ತಿಂಗಳು ತನ್ನದೇ ಒರಿಜಿನಲ್ ಸರಣಿಗಳನ್ನು ನೀಡುತ್ತದೆ. ಒಟಿಟಿ ಜೀವಂತವಾಗಿರಲು ಹೊಸ ಕಂಟೆಂಟ್ ಬೇಕೇ ಬೇಕು' ಎನ್ನುತ್ತಾರೆ ನಿರಂಜನ್.

3 ಚಿತ್ರಗಳು ತೆರೆಗೆ

ದ ಜಡ್ಜ್‌ಮೆಂಟ್

ಕ್ರೇಜಿಸ್ಟಾರ್ ರವಿಚಂದ್ರನ್ ಪ್ರಮುಖ ಪಾತ್ರದಲ್ಲಿ ನಟಿಸಿರುವ 'ದ ಜಡ್ಜ್‌ಮೆಂಟ್' ಚಿತ್ರ ಇಂದು(ಮೇ 24) ತೆರೆಗೆ ಬರುತ್ತಿದೆ. ಜಿ9 ಕಮ್ಯೂನಿಕೇಷನ್ ಮೀಡಿಯಾ ಆ್ಯಂಡ್ ಎಂಟರ್‌ಟೈನ್ಮೆಂಟ್ ಲಾಂಛನದಲ್ಲಿ ಈ ಚಿತ್ರ ನಿರ್ಮಾಣಗೊಂಡಿದ್ದು, ಗುರುರಾಜ ಕುಲಕರ್ಣಿ ಈ ಚಿತ್ರಕ್ಕೆ ಆ್ಯಕ್ಷನ್-ಕಟ್ ಹೇಳಿದ್ದಾರೆ.

'ನ್ಯಾಯವಾದಿಯೊಬ್ಬ ನ್ಯಾಯಕ್ಕೋಸ್ಕರ, ನ್ಯಾಯಾಲಯದ ಪರಿಧಿಯಲ್ಲೇ ಹೋರಾಡುತ್ತಾನೆ. ಇರುವ ವ್ಯವಸ್ಥೆಯನ್ನು ದೂರದೇ, ಇದ್ದ ವ್ಯವಸ್ಥೆಯನ್ನು ಸದುಪಯೋಗಪಡಿಸಿಕೊಳ್ಳುವ ಕಥೆ. ರವಿಚಂದ್ರನ್ ನ್ಯಾಯವಾದಿಯಾಗಿ ಕಾಣಿಸಿಕೊಂಡಿದ್ದಾರೆ' ಎನ್ನುತ್ತಾರೆ ಕುಲಕರ್ಣಿ.

ನಟಿ ಮೇಘನಾ ಗಾಂವ್ಕರ್ ರವಿಚಂದ್ರನ್‌ಗೆ ಜೋಡಿಯಾಗಿದ್ದಾರೆ. ದಿಗಂತ್, ಧನ್ಯಾ ರಾಮ್‌ಕುಮಾರ್, ಲಕ್ಷ್ಮೀ ಗೋಪಾಲಸ್ವಾಮಿ, ಟಿ.ಎಸ್.ನಾಗಾಭರಣ, ಪ್ರಕಾಶ್ ಬೆಳವಾಡಿ, ರಂಗಾಯಣ ರಘು, ರವಿಶಂಕರ್ ಗೌಡ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಪಿ.ಕೆ. ಎಚ್. ದಾಸ್ ಛಾಯಾಚಿತ್ರಗ್ರಹಣ, ಕೆಂಪರಾಜ್ ಸಂಕಲನ ಚಿತ್ರಕ್ಕಿದೆ. ಅನೂಪ್ ಸೀಳಿನ್ ಸಂಗೀತ ನೀಡಿದ್ದಾರೆ.

ಎವಿಡೆನ್ಸ್

ಕ್ರೈಂ, ಸಸ್ಪೆನ್ಸ್, ಥ್ರಿಲ್ಲರ್ ಜೊತೆಗೊಂದು ತ್ರಿಕೋನ ಪ್ರೇಮಕಥಾಹಂದರ ಒಳಗೊಂಡ ಎವಿಡೆನ್ಸ್ ತೆರೆಗೆ ಬರುತ್ತಿರುವ ಮತ್ತೊಂದು ಚಿತ್ರ ನಟ, ನಿರ್ದೇಶಕ ಉಪೇಂದ್ರ ಅವರ ಜೊತೆ 'ಶ್..' ಚಿತ್ರದಿಂದ 'ಉಪೇಂದ್ರ-2' ವರೆಗೂ ಕೆಲಸ ಮಾಡಿದ ಪ್ರವೀಣ್ ಸಿ. ಪಿ. ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ.

ಶ್ರೀಧೃತಿ ಪ್ರೊಡಕ್ಷನ್ ನಿರ್ಮಾಣದ ಚಿತ್ರದಲ್ಲಿ ನಾಯಕನಾಗಿ 'ಜೋಶ್' ಖ್ಯಾತಿಯ ರೋಬೊ ಗಣೇಶನ್ ಅವರು ನಟಿಸಿದ್ದು, ನಟಿ ಮಾನಸ ಜೋಶಿ ತನಿಖಾಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ಆರೋನ್ ಕಾರ್ತಿಕ್ ವೆಂಕಟೇಶ್ ಸಂಗೀತ, ರವಿ ಸುವರ್ಣ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ.

ಮೂರನೇ ಕೃಷ್ಣಪ್ಪ

ರಂಗಾಯಣ ರಘು ಹಾಗೂ ಸಂಪತ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ 'ಮೂರನೇ ಕೃಷ್ಣಪ್ಪ' ಚಿತ್ರವು ತೆರೆಕಾಣುತ್ತಿದೆ. ನವೀನ್ ನಾರಾಯಣಘಟ್ಟ ನಿರ್ದೇಶನದ ಈ ಚಿತ್ರವು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್‌ನ ನಾರಾಯಣಪುರ ಎಂಬಲ್ಲಿ ನಡೆಯುವ ಕಥೆಯನ್ನು ಹೊಂದಿದೆ.

ಊರಲ್ಲಿ 'ಕೃಷ್ಣಪ್ಪ' ಹೆಸರಿನ ಮೂವರಿದ್ದು, ಅದರಲ್ಲಿ ನಟ ಸಂಪತ್ 'ಮೂರನೇ ಕೃಷ್ಣಪ್ಪ'ನಿಗೆ ಬಣ್ಣಹಚ್ಚಿದ್ದಾರೆ. 'ವೀರಣ್ಣ'ನಾಗಿ ರಂಗಾಯಣ ರಘು ಕಾಣಿಸಿಕೊಂಡಿದ್ದಾರೆ. ಶ್ರೀಪ್ರಿಯಾ ನಾಯಕಿಯಾಗಿ ನಟಿಸಿದ್ದು, ಸಂತೋಷ್, ಉಗ್ರಂ ಮಂಜು ತಾರಾಬಳಗದಲ್ಲಿದ್ದಾರೆ. ಆನಂದ್ ರಾಜವಿಕ್ರಮ್ ಸಂಗೀತ, ಶ್ರೀಕಾಂತ್ ಸಂಕಲನ, ಯೋಗಿ ಛಾಯಾಚಿತ್ರಗ್ರಹಣವಿದೆ.

ಚೈನೀಸ್ ಹೋಟೆಲ್‌ನ 'ಚಿಲ್ಲಿ ಚಿಕನ್'

ಬಹುತೇಕ ಹೊಸಬರಿಂದಲೇ ಕೂಡಿರುವ 'ಚಿಲ್ಲಿ ಚಿಕನ್' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಮೆಟನೋಯ್ ಸ್ಟುಡಿಯೋಸ್ ಪ್ರೊಡಕ್ಷನ್ ಅಡಿಯಲ್ಲಿ ದೀಪ್ ಭೀಮಜಿಯಾನಿ ಮತ್ತು ಸುಧಾ ನಂಬಿಯಾರ್ ಅವರು ನಿರ್ಮಿಸಿರುವ ಚಿತ್ರಕ್ಕೆ ಪ್ರತೀಕ್ ಪ್ರಜೋಶ್ ಅವರ ನಿರ್ದೇಶನವಿದೆ.

'ಕೆಲಸಕ್ಕೆಂದು ಉತ್ತರ ಭಾರತದಿಂದ ಬಂದ ಐದು ಹುಡುಗರು ಬೆಂಗಳೂರಿನಲ್ಲಿ ಚೈನೀಸ್ ಹೋಟೆಲ್‌ವೊಂದರಲ್ಲಿ ಕೆಲಸ ಮಾಡುತ್ತ, ತಾವೇ ಸ್ವಂತ ಹೋಟೆಲ್ ತೆರೆಯಲು ಮುಂದಾಗುತ್ತಾರೆ. ಅನಿರೀಕ್ಷಿತ ಘಟನೆಯೊಂದು ಇವರ ಪ್ರಯತ್ನಕ್ಕೆ ಅಡ್ಡಿಯಾಗುತ್ತದೆ.ಕೊನೆಗೆ ಅದೆಲ್ಲದರಿಂದ ಪಾರಾಗಿ ಗೆಲ್ಲುತ್ತಾರಾ, ಇಲ್ಲವೇ? ಎಂಬುದೇ ಚಿತ್ರದ ಕಥೆ. ಹಿಂದಿಯ ಪದ್ಮಾವತ್, ಮಲಯಾಳ, ಗುಜರಾತಿ ಭಾಷೆಯ ಹಲವು ಸಿನಿಮಾಗಳಿಗೆ ಕೆಲಸ ಮಾಡಿ, ಕೆಲ ಕಿರುಚಿತ್ರಗಳನ್ನು ನಿರ್ದೇಶಿಸಿದ್ದೇನೆ' ಎಂದರು ನಿರ್ದೇಶಕರು.

'ನಾನು ಈಗಾಗಲೇ ಹಿಂದಿಯಲ್ಲಿ ಒಂದಷ್ಟು ಕಿರುಚಿತ್ರಗಳನ್ನು ನಿರ್ಮಿಸಿದ್ದೇನೆ. ಈ ಚಿತ್ರವನ್ನು ಕನ್ನಡದಲ್ಲಿ ಮಾತ್ರ ಮಾಡಿದ್ದೇವೆ. ಚಿತ್ರ ಬಿಡುಗಡೆಗೆ ಸಿದ್ಧವಿದು ಜೂನ್ ವೇಳೆಗೆ ತೆರೆಗೆ ಬರಲಿದೆ. ಚಿತ್ರದ ನಿರ್ದೇಶಕ ಕೇರಳದವರು, ನಿರ್ಮಾಪಕ ಗುಜರಾತಿನವರು. ಮಣಿಪುರ, ಮೇಘಾಲಯ, ಚೆನ್ನೈನ ಕಲಾವಿದರು. ಬೆಂಗಳೂರಿನಲ್ಲಿ ನೆಲೆಗೊಂಡ ನಾವೆಲ್ಲ ಕನ್ನಡಿಗರಾಗಿದ್ದೇವೆ' ಎಂದರು ನಿರ್ಮಾಪಕ ದೀಪ್ ಭೀಮಾಜಿಹಾನಿ. ಸಿದ್ಧಾಂತ್ ಸುಂದರ್ ಸಂಗೀತ, ಶ್ರೀಶ್ ತೋಮರ್ ಛಾಯಾಚಿತ್ರಗ್ರಹಣ, ಆಶಿಕ್ ಕೆ.ಎಸ್ ಅವರ ಸಂಕಲನ ಚಿತ್ರಕ್ಕಿದೆ. ಬಿ.ವಿ.ಶೃಂಗಾ, ರಿನಿ, ನಿತ್ಯಶ್ರೀ, ಬಿಜೌ ತಾಂಜಿಂ ಮುಂತಾದವರು ಚಿತ್ರದಲ್ಲಿದ್ದಾರೆ.

ನಿತ್ಯಶ್ರೀ

'ಜಡ್ಜ್‌ಮೆಂಟ್'ನಲ್ಲಿ ನ್ಯಾಯಕ್ಕಾಗಿ ಹೋರಾಟ

'ನಾನು ಇಲ್ಲಿಯವರೆಗೆ ಮಾಡಿರುವ ಪಾತ್ರಗಳಿಗಿಂತ ವಿಭಿನ್ನವಾದ ಪಾತ್ರ 'ದಿ ಜಡ್ಜ್‌ಮೆಂಟ್' ಸಿನಿಮಾದಲ್ಲಿದೆ. ನ್ಯಾಯಕ್ಕಾಗಿ ಹೋರಾಟ ಮಾಡುವ ಸಾಮಾನ್ಯ ಹೋರಾಟಗಾರನ ಪಾತ್ರ. ಇಂದಿನ ತಲೆಮಾರಿನ ಬೆಂಗಳೂರಿನಂತಹ ಸಿಟಿಯಲ್ಲಿರುವ ಯುವಕರನ್ನು ಪ್ರತಿನಿಧಿಸುವಂತಿದೆ ನನ್ನ ಪಾತ್ರವಿದೆ. ತನ್ನ ಇಷ್ಟದಂತೆ ಜೀವನ ನಡೆಸಲು ಹೊರಟ ಹುಡುಗನೊಬ್ಬನ ಜೀವನದಲ್ಲಿ ನಡೆಯುವ ಕೆಲವು ಅನಿರೀಕ್ಷಿತ ಘಟನೆಗಳು ಏನೆಲ್ಲ ಬದಲಾವಣೆಗಳಿಗೆ ಕಾರಣವಾಗುತ್ತದೆ ಎಂಬುದರ ಸುತ್ತ ನನ್ನ ಪಾತ್ರವಿದೆ' ಎಂದು ಮಾತು ಪ್ರಾರಂಭಿಸಿದರು ದಿಗಂತ್.

'ರವಿಚಂದ್ರನ್ ಅವರಂಥ ದೊಡ್ಡ ನಟರ ಜೊತೆ ಅಭಿನಯಿಸುವ ಅವಕಾಶ, ತುಂಬ ದೊಡ್ಡ ಸ್ಟಾರ್ ಕಾಸ್ಟಿಂಗ್, ತುಂಬ ವೃತ್ತಿಪರವಾಗಿರುವ ತಂಡ...ಇವೆಲ್ಲವೂ ಈ ಸಿನಿಮಾ ಒಪ್ಪಿಕೊಳ್ಳಲು ಕಾರಣವಾಯಿತು. ನಾನು ರವಿ ಸರ್ ಸಿನಿಮಾಗಳನ್ನು ನೋಡಿಕೊಂಡು ಬೆಳೆದವನು. ಮೊದಲ ಬಾರಿಗೆ ಈ ಸಿನಿಮಾದಲ್ಲಿ ಅವರೊಂದಿಗೆ ಅಭಿನಯಿಸುವ ಅವಕಾಶ ಸಿಕ್ಕಿದ್ದಕ್ಕೆ ತುಂಬ ಖುಷಿಯಾಗಿದೆ. ರವಿ ಸರ್ ಜೊತೆಗೆ ಶೂಟಿಂಗ್ ಮಾಡುವಾಗ, ಸಮಯ ಹೋಗುವುದೇ ಗೊತ್ತಾಗುವುದಿಲ್ಲ. ಅವರಿಂದ ಕಲಿತುಕೊಳ್ಳುವುದು ಸಾಕಷ್ಟಿದೆ' ಎಂದು ರವಿಚಂದ್ರನ್ ಜೊತೆಗಿನ ಒಡನಾಟವನ್ನು ಹಂಚಿಕೊಂಡರು.

'ಮೊದಲ ಬಾರಿಗೆ ನಾನು ಧನ್ಯಾ ರಾಮ್‌ಕುಮಾರ್ ಜೋಡಿಯಾಗಿ ಅಭಿನಯಿಸಿದ್ದೇವೆ. ನಮ್ಮಿಬ್ಬರದ್ದೂ, ಇಂದಿನ ಜನರೇಶನ್ ಯುವ ಜೋಡಿಯನ್ನು ಪ್ರತಿನಿಧಿಸುವಂಥ ಪಾತ್ರ.'ಪೌಡರ್' ಸಿನಿಮಾದಲ್ಲೂ ನಾವಿಬ್ಬರೂ ಒಟ್ಟಿಗೇ ಅಭಿನಯಿಸುತ್ತಿದ್ದೇವೆ. ಕನ್ನಡದ ಮಟ್ಟಿಗೆ ತುಂಬ ಅಪರೂಪವಾಗಿರುವ ಲೀಗಲ್-ಥ್ರಿಲ್ಲರ್ ಶೈಲಿಯಲ್ಲಿ ಸಿನಿಮಾ. ಜನ ಹೇಗೆ ಸ್ವೀಕರಿಸುತ್ತಾರೆಂದು ನೋಡಬೇಕು' ಎನ್ನುತ್ತ ಸಿನಿಮಾ ಕುರಿತು ಇನ್ನಷ್ಟು ವಿವರ ನೀಡಿದರು.

'ಮಾರಿಗೋಲ್ಡ್ ನಂತರ ಆ್ಯಕ್ಷನ್ ಪಾತ್ರಗಳು ಬರುತ್ತಿವೆ. 'ಉತ್ತರಕಾಂಡದಲ್ಲಿ ಖಡಕ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವೆ. ಮಿರ್ಚಿ ಮಲ್ಲಿಗೆ ಎಂಬ ಈ ಪಾತ್ರ ಹಿಂದೆ ಮಾಡಿದ ಪಾತ್ರಗಳಿಗಿಂತ ತುಂಬ ಭಿನ್ನವಾಗಿದೆ. 'ಎಡಗೈ ಅಪಘಾತಕ್ಕೆ ಕಾರಣ', 'ಪೌಡರ್' ತೆರೆಗೆ ಬರಲು ಸಿದ್ಧ ಇವೆ. ಮತ್ತೊಂದೆರಡು ಸಿನಿಮಾಗಳು ಪ್ರಾರಂಭಿಕ ಹಂತದಲ್ಲಿವೆ' ಎಂದು ತಮ್ಮ ಮುಂದಿನ ಸಿನಿಮಾಗಳ ವಿವರ ನೀಡಿದರು.

ದಿ ಜಡ್ಜ್‌ಮೆಂಟ್
ದಿಗಂತ್



ಸಿನಿಮಾವಾಗಲಿದೆ 'ಪೆನ್‌ಡ್ರೈವ್' ಪ್ರಕರಣ

ಸಮಾಜದಲ್ಲಿ ಸಂಚಲನ ಮೂಡಿಸಿದ ಪ್ರಕರಣಗಳು ಚಿತ್ರವಾಗಿ ಘೋಷಣೆಯಾಗುವುದು ಹೊಸತೇನಲ್ಲ. ಆದರೆ ಕೆಲವು ಘೋಷಣೆ, ಪೋಸ್ಟರ್‌ಗೆ ಸೀಮಿತವಾಗಿಬಿಡುತ್ತವೆ! ಸದ್ಯ 'ಪೆನ್‌ಡ್ರೈವ್' ಸಾಕಷ್ಟು ಸದ್ದು ಮಾಡುತ್ತಿದೆ. ಅದನ್ನೇ ಶೀರ್ಷಿಕೆಯಾಗಿಸಿಕೊಂಡು ಸಿನಿಮಾವೊಂದು ಸೆಟ್ಟೇರಲು ಸಿದ್ಧವಾಗಿದೆ.

ಈ ಹಿಂದೆ 'ಪಾತರಗಿತ್ತಿ' ಎನ್ನುವ ಚಿತ್ರವನ್ನು ನಿರ್ಮಿಸಿ, ನಿರ್ದೇಶನ ಮಾಡಿದ್ದ ಕೆರ್ನಳ್ಳಿ ಈಶ್ವರ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಸೂಪರ್ ಮೂವೀಸ್ ಮೇಕರ್ಸ್ ಅಡಿಯಲ್ಲಿ ಲೋಕೇಶ್.ಆರ್ ಬಂಡವಾಳ ಹೂಡುತ್ತಿದ್ದಾರೆ. 'ದೊಡ್ಡವರಲ್ಲ ಜಾಣರಲ್ಲ' ಎಂಬ ಅಡಿಬರಹವಿದೆ.

'ಶೀರ್ಷಿಕೆಗೂ ಕಥೆಗೂ ಏನು ಸಂಬಂಧ? ಎಂಬುದನ್ನು ಸಿನಿಮಾದಲ್ಲಿಯೇ ನೋಡಬೇಕು. ಜೈಲು ಊಟವೂ ಇರುತ್ತದೆ, ಕೋರ್ಟು, ಕಚೇರಿಗಳು ಕಥೆಯಲ್ಲಿ ಬರುತ್ತವೆ. ಒಟ್ಟಿನಲ್ಲಿ ಎಲ್ಲರೂ ಊಹಿಸುವಂತಹ ಪಾತ್ರಗಳು ಬರುತ್ತದೆ. ಪೆನ್ ಡ್ರೈವ್ ಎನ್ನುವುದು ಒಂದು ವಿಶ್ವ. ಅದರೊಳಗಡೆ ಏನನ್ನಾದರೂ ತುಂಬಿಸಬಹುದು. ಆದರೆ ಅದರ ಒಳಗಡೆ ಜನರು ನಿರೀಕ್ಷೆ ಮಾಡುವುದಕ್ಕಿಂತ ಹೆಚ್ಚಾದ ವಿಷಯಗಳು ಇರುತ್ತವೆ. ದೊಡ್ಡವರು ಅಥವಾ ಚಿಕ್ಕವರಿರಬಹುದು. ಸಮಾಜದ ಎಲ್ಲಾ ಮುಖಗಳು ಸಿಗುತ್ತದೆ' ಎಂದರು ನಿರ್ದೇಶಕರು.

ಬೆಂಗಳೂರು, ಬಳ್ಳಾರಿ, ಹಾಸನ, ಸಕಲೇಶಪುರ ಕಡೆಗಳಲ್ಲಿ ಚಿತ್ರೀಕರಣ ನಡೆಯಲಿದೆ. ಹಂಸರಾಗ ಸಂಗೀತ, ವಿಜಯ್ ರಾಘವ್ ಛಾಯಾಚಿತ್ರಗ್ರಹಣ, ಜೀವನ್‌ರಾಂ ಸಂಕಲನ ಇರಲಿದೆ.

'ಕೌಮುದಿ'ಯಲ್ಲಿ ಅಕ್ಷತಾ ಪಾಂಡವಪುರ

ನಟಿ ಅಕ್ಷತಾ ಪಾಂಡವಪುರ ಮುಖ್ಯಭೂಮಿಕೆಯಲ್ಲಿರುವ 'ಕೌಮುದಿ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಅಂತರರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ 'ಕಂದೀಲು' ಎಂಬ ಸಿನಿಮಾವನ್ನು ನಿರ್ದೇಶಿಸಿದ್ದ ಯಶೋದ ಪ್ರಕಾಶ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಕಲಾತ್ಮಕ ಚಿತ್ರ ನಿರ್ಮಾಣದಲ್ಲಿ ಗುರುತಿಸಿಕೊಂಡಿರುವ ಯಶೋದ ಅವರಿಗೆ ಇದು ಮೂರನೇ ಚಿತ್ರವಾಗಿದ್ದು, ತಮ್ಮದೇ ಸ್ವಸ್ತಿಕ್ ಎಂಟರ್‌ಟೈನ್‌ಮೆಂಟ್ ಅಡಿಯಲ್ಲಿ ಬಂಡವಾಳವನ್ನು ಹೂಡುತ್ತಿದ್ದಾರೆ.

'ಶಿಕ್ಷಣ ಹಾಗೂ ವೈಜ್ಞಾನಿಕ ಜ್ಞಾನದ ಕೊರತೆಯಿಂದಾಗಿ ಮೂಲನಂಬಿಕೆ, ಮೂಢನಂಬಿಕೆಯ ವ್ಯತ್ಯಾಸ ತಿಳಿಯದೆ ಬದುಕಿಗೆ ಅಪಾಯ ತಂದೊಡ್ಡುವ ಸಂಪ್ರದಾಯ, ಆಚರಣೆಗಳ ಸತ್ಯ-ವಾಸ್ತವಗಳ ಸುತ್ತ ಸಿನಿಮಾವು ಬೆಳಕು ಚೆಲ್ಲಲಿದೆ. ಗತಕಾಲದಿಂದ ಇಂದಿನವರೆಗೂ ಗ್ರಾಮೀಣ ಭಾಗದಲ್ಲಿ ಇಂತಹ ಪದ್ಧತಿಗಳನ್ನು ಅನುಸರಿಸುತ್ತಿದ್ದಾರೆ. ಕಥಾನಾಯಕಿ ಇದರ ವಿರುದ್ಧ ಧ್ವನಿ ಎತ್ತಿ, ಯಾವ ರೀತಿ ಹೋರಾಟ ಮಾಡುತ್ತಾಳೆ ಎಂಬುದನ್ನು ತೋರಿಸುವ ಪ್ರಯತ್ನ ಮಾಡಲಾಗುತ್ತಿದೆ' ಎಂದರು ನಿರ್ದೇಶಕಿ ಯಶೋದ.

ಕುಮಾರಿ ದೀಪಿಕಾ, ಪ್ರತೀಕ, ಅಂಕಿತಾಮೂರ್ತಿ, ನೀನಾಸಂ ನಟರಾಜ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಶ್ರೀಸುರೇಶ್ ಸಂಗೀತ, ಪಿ. ವಿ.ಆರ್.ಸ್ವಾಮಿ ಗೂಗಾರೆದೊಡ್ಡಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಕನಕಪುರ ಸುತ್ತಮುತ್ತ ಒಂದೇ ಹಂತದಲ್ಲಿ ಚಿತ್ರೀಕರಣವನ್ನು ಮುಗಿಸಲು ತಂಡವು ಯೋಜನೆ ರೂಪಿಸಿಕೊಂಡಿದೆ.

ಸಂಕ್ಷಿಪ್ತ ಸುದ್ದಿ

ಪಿಜಿ-ಸಿಇಟಿ: ಜುಲೈ 13, 14ಕ್ಕೆ ಪರೀಕ್ಷೆ

ಬೆಂಗಳೂರು: 2024-25ನೇ ಸಾಲಿನ ಸ್ನಾತಕೋತ್ತರ ಕೋರ್ಸುಗಳ (ಎಂ.ಬಿ.ಎ., ಎಂ.ಸಿ.ಎ., ಎಂ.ಟೆಕ್, ಎಂ.ಇ., ಎಂ.ಆರ್ಕಿಟೆಕ್ಚರ್) ಪ್ರವೇಶಕ್ಕೆ ಜುಲೈ 13 ಮತ್ತು 14ರಂದು ಸಾಮಾನ್ಯ ಪ್ರವೇಶ ಪರೀಕ್ಷೆ (ಪಿಜಿ-ಸಿಇಟಿ) ನಡೆಯಲಿದೆ. ಎಂ.ಇ, ಎಂ.ಟೆಕ್, ಎಂ.ಆರ್ಕಿಟೆಕ್ಚರ್ ಕೋರ್ಸ್‌ಗಳ ಪ್ರವೇಶ ಪರೀಕ್ಷೆ ಜುಲೈ 13 ಹಾಗೂ ಎಂ.ಸಿ.ಎ ಮತ್ತು ಎಂ.ಬಿ.ಎ. ಕೋರ್ಸ್‌ಗಳ ಪ್ರವೇಶ ಪರೀಕ್ಷೆಯನ್ನು ಜುಲೈ 14ರಂದು ನಡೆಯಲಿದೆ. ಮೇ 27ರಿಂದ ಜೂನ್ 17ರವರೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಜೂನ್ 18ರೊಳಗೆ ಶುಲ್ಕ ಪಾವತಿಸಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ. ಗೇಟ್ (ಜಿಎಟಿಇ) ಪರೀಕ್ಷೆಯಲ್ಲಿ ಅರ್ಹತೆ ಪಡೆದಿರುವ ಅಭ್ಯರ್ಥಿಗಳು ಪಿಜಿ-ಸಿಇಟಿಗೆ ಹಾಜರಾಗುವ ಅಗತ್ಯವಿಲ್ಲ. ಆದರೆ, ಅಂತಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿ, ಪ್ರವೇಶಕ್ಕೆ ಅರ್ಹರಾಗಬೇಕಾಗುತ್ತದೆ. ಗೇಟ್ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದಲ್ಲೇ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ನೀಡಲಾಗುತ್ತದೆ ಎಂದು ವಿವರ ನೀಡಿದೆ.

‘ನಾಲ್ವಡಿ’ ಪ್ರಶಸ್ತಿಗೆ ನಾಗಮೋಹನ ದಾಸ್ ಆಯ್ಕೆ

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ನೀಡುವ 2024ನೇ ಸಾಲಿನ ‘ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ’ಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯ್ಕೆಯಾಗಿದ್ದಾರೆ.
ಪ್ರಶಸ್ತಿಯು ₹25 ಸಾವಿರ ನಗದು, ಕಂಚಿನ ಫಲಕ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.
‘2024ರ ಜೂನ್ 10ರಂದು ಬೆಂಗಳೂರಿನ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ನಿವೃತ್ತ ಪ್ರಾಧ್ಯಾಪಕ ರಾಜಪ್ಪ ದಳವಾಯಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಕೋಶಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ ಅತಿಥಿಯಾಗಿ ಭಾಗವಹಿಸಲಿದ್ದಾರೆ’ ಎಂದು ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಧಾನಿ ಹುದ್ದೆಗೆ ರಾಜ್ಯದ ನಾಯಕರು ಸಮರ್ಥರು: ಸಿಎಂ

ಬೆಂಗಳೂರು: ‘ಪ್ರಧಾನಮಂತ್ರಿ ಹುದ್ದೆಗೆ ಅರ್ಹರಾದವರು, ಸಮರ್ಥರು ನಮ್ಮ ರಾಜ್ಯದಲ್ಲಿ ಬಹಳ ನಾಯಕರಿದ್ದಾರೆ’ ಎಂದು ಸಿದ್ದರಾಮಯ್ಯ ಹೇಳಿದರು.

ಗುರುವಾರ ನಡೆದ ಮಾಧ್ಯಮಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ಪ್ರಧಾನಿ ಹುದ್ದೆಗೆ ಕರ್ನಾಟಕದಿಂದ ಯಾರೂ ಅಭ್ಯರ್ಥಿ ಇಲ್ಲ ಎಂಬುದಾಗಿ ನಾನು ಹೇಳಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಪ್ರೆಸ್‌ಕ್ಲಬ್’ ನಲ್ಲಿ ಇತ್ತೀಚೆಗೆ ನಡೆದ ಮಾಧ್ಯಮ ಸಂವಾದದಲ್ಲಿ ಪತ್ರಕರ್ತರೊಬ್ಬರು ‘ಪ್ರಧಾನಿ ಹುದ್ದೆಗೆ ನೀವು ಅಭ್ಯರ್ಥಿ ಆಗುವಿರಾ ಎಂದು ಪ್ರಶ್ನಿಸಿದರು. ಕರ್ನಾಟಕದಿಂದ ನಾನು ಪ್ರಧಾನಿ ಅಭ್ಯರ್ಥಿ ಅಲ್ಲ. ಆಗುವುದೂ ಇಲ್ಲ ಎಂದು ಹೇಳಿದ್ದೆ. ಆದರೆ, ಕೆಲ ಮಾಧ್ಯಮಗಳಲ್ಲಿ ತಪ್ಪಾಗಿ ವರದಿಯಾಗಿದೆ’ ಎಂದರು.

ಅರಮನೆ ಮಂಡಳಿಯಲ್ಲಿ ಅವ್ಯವಹಾರ ಪತ್ತೆ

ಮೈಸೂರು: ಇಲ್ಲಿನ ಅರಮನೆ ಮಂಡಳಿಯಲ್ಲಿ ಅವ್ಯವಹಾರ ನಡೆದಿರುವ ಸಂಗತಿ ಹೊರಬಿದ್ದಿದೆ.

ಲೋಕಾಯುಕ್ತ ಪೊಲೀಸರು ಗುರುವಾರ ದಾಳಿ ಕಾರ್ಯಾಚರಣೆ ನಡೆಸಿದ್ದು, ಪಾರ್ಕಿಂಗ್, ಟಿಕೆಟ್ ಕೌಂಟರ್‌ನಲ್ಲಿ ಅವ್ಯವಹಾರ ನಡೆಯುತ್ತಿರುವುದು ಪತ್ತೆಯಾಗಿದೆ. ಲೆಕ್ಕವಿಲ್ಲದ ₹ 4.10 ಲಕ್ಷ ನಗದು ಜಪ್ತಿ ಮಾಡಲಾಗಿದೆ.

‘ಶೋಧ ಕಾರ್ಯ ಮುಂದುವರಿದಿದೆ’ ಎಂದು ಲೋಕಾಯುಕ್ತ ಪೊಲೀಸರು ಮಾಹಿತಿ ನೀಡಿದರು.

ಸ್ಪರ್ಧೆ: ರಘುಪತಿ ಭಟ್‌ಗೆ ನೋಟಿಸ್

ಬೆಂಗಳೂರು: ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮಾಜಿ ಶಾಸಕ ರಘುಪತಿ ಭಟ್ ಅವರಿಗೆ ಬಿಜೆಪಿ ನೋಟಿಸ್ ನೀಡಿದೆ. ‘ಪಕ್ಷದ ಅಧಿಕೃತ ಅಭ್ಯರ್ಥಿ ವಿರುದ್ಧ ಸ್ಪರ್ಧಿಸಿರುವುದು ಪಕ್ಷದ ಶಿಸ್ತಿನ ಉಲ್ಲಂಘನೆ. ಎರಡು ದಿನಗಳಲ್ಲಿ ಶಿಸ್ತು ಸಮಿತಿ ಮುಂದೆ ಸ್ಪಷ್ಟೀಕರಣ ನೀಡಬೇಕು’ ಎಂದು ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ್ ಪಾಟೀಲ ನೋಟಿಸ್‌ನಲ್ಲಿ ತಿಳಿಸಿದ್ದಾರೆ.

ಹೆದ್ದಾರಿಗಳ ಅಕ್ಕಪಕ್ಕ ಟ್ರಾಮಾ ಸೆಂಟರ್ ಬಲವರ್ಧನೆಗೆ ಆರೋಗ್ಯ ಇಲಾಖೆ ಕ್ರಮ

ರಸ್ತೆ ಅಪಘಾತ: ಜೀವಹಾನಿ ತಡೆಗೆ ಕ್ಷಿಪ್ರ ಚಿಕಿತ್ಸೆ

• ವರುಣ ಹೆಗಡೆ

ಬೆಂಗಳೂರು: ಹೆದ್ದಾರಿಗಳಲ್ಲಿ ಸಂಭವಿಸುತ್ತಿರುವ ರಸ್ತೆ ಅಪಘಾತ ಪ್ರಕರಣಗಳಲ್ಲಿ ಜೀವ ಹಾನಿ ತಪ್ಪಿಸಲು ಟ್ರಾಮಾ ಸೆಂಟರ್‌ಗಳ ಬಲವರ್ಧನೆಗೆ ಮುಂದಾಗಿರುವ ಆರೋಗ್ಯ ಇಲಾಖೆ, ಅಧಿಕ ಅಪಘಾತಗಳು ಸಂಭವಿಸುವ ‘ಹಾಟ್‌ಸ್ಪಾಟ್’ಗಳಲ್ಲಿ ಕ್ಷಿಪ್ರ ಚಿಕಿತ್ಸೆ ಒದಗಿಸಲು ಸಿಬ್ಬಂದಿಗೆ ತರಬೇತಿ ಒದಗಿಸುತ್ತಿದೆ.

ರಸ್ತೆ ಅಪಘಾತ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚಾಗುತ್ತಿವೆ. ರಾಜ್ಯ ಅಪರಾಧ ದಾಖಲೆ ಬ್ಯೂರೊ ಮಾಹಿತಿ ಪ್ರಕಾರ ಮಾರಣಾಂತಿಕ ರಸ್ತೆ ಅಪಘಾತ ಪ್ರಕರಣಗಳ ಸಂಖ್ಯೆಯಲ್ಲಿ ಕರ್ನಾಟಕವು ದೇಶದಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ರಸ್ತೆ ಅಪಘಾತದಿಂದ ವಾರ್ಷಿಕ ಸರಾಸರಿ 13 ಸಾವಿರ ಮಂದಿ ಸಾಯುತ್ತಾರೆ. 4 ಲಕ್ಷ ಗಂಭೀರ ಗಾಯ ಪ್ರಕರಣಗಳು ದಾಖಲಾಗುತ್ತಿವೆ. ರಸ್ತೆ ಅಪಘಾತ ಪ್ರಕರಣಗಳಲ್ಲಿ ವ್ಯಕ್ತಿಗೆ ತುರ್ತು ಚಿಕಿತ್ಸೆ ಅಗತ್ಯ. ಈ ಸಂಬಂಧ ಇಲಾಖೆಯು ‘ರಾಸ್ತಾ’ ಕಾರ್ಯಕ್ರಮದಡಿ ಅಧಿಕ ಅಪಘಾತ ಪ್ರಕರಣಗಳು ವರದಿಯಾಗುವ ಸ್ಥಳಗಳಲ್ಲಿ (ಹಾಟ್‌ಸ್ಪಾಟ್) ಚಿಕಿತ್ಸೆಗೆ ಸಂಬಂಧಿಸಿದಂತೆ ಪೊಲೀಸರು, ಆಂಬುಲೆನ್ಸ್ ಚಾಲಕರು ಹಾಗೂ ಸಾರ್ವಜನಿಕರಿಗೆ ತರಬೇತಿ ನೀಡುತ್ತಿದೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಹಾಗೂ ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಜೀವರಕ್ಷಾ ಟ್ರಸ್ಟ್ ಸಹಯೋಗದಲ್ಲಿ ಈ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪ್ರತಿ ಹಾಟ್‌ಸ್ಪಾಟ್‌ನಲ್ಲಿ ಚಿಕಿತ್ಸೆಗೆ ಸಂಬಂಧಿಸಿದಂತೆ 160 ಮಂದಿಗೆ ಕೌಶಲ ವೃದ್ಧಿಸಲಾಗುತ್ತಿದೆ. ತರಬೇತಿ ಹೊಂದಿದವರು ತುರ್ತು ಚಿಕಿತ್ಸೆ ಒದಗಿಸಿ, ಹೆಚ್ಚಿನ ಚಿಕಿತ್ಸೆಗೆ ವ್ಯವಸ್ಥೆ ಮಾಡಲಿದ್ದಾರೆ.

‘ಹಾಟ್‌ಸ್ಪಾಟ್’ ಗುರುತು: ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರವು ಹೆದ್ದಾರಿಗಳಲ್ಲಿ ನಡೆಯುತ್ತಿರುವ ಅಪಘಾತಗಳ ಆಧಾರದಲ್ಲಿ ‘ಹಾಟ್‌ಸ್ಪಾಟ್’ ಗುರುತಿಸಿ, ಇಲಾಖೆಗೆ ವಿವರ ನೀಡಿದೆ. 3 ವರ್ಷಗಳಲ್ಲಿ ಒಂದೇ ಸ್ಥಳದಲ್ಲಿ 5 ಅಪಘಾತ ಸಂಭವಿಸಿ, 10 ಮಂದಿ ಮೃತಪಟ್ಟ ಸ್ಥಳಗಳನ್ನು ಪಟ್ಟಿ ಮಾಡಿದೆ. ಇಂತಹ ಸ್ಥಳಗಳಲ್ಲಿ ತುರ್ತು ಚಿಕಿತ್ಸೆಗೆ ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ.

‘ರಸ್ತೆ ಅಪಘಾತದಿಂದ ಸಂಭವಿಸುತ್ತಿರುವ ಗಾಯಗಳು ಮಿದುಳಿನ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ. ಹೆಚ್ಚಿನ ಗಾಯಗಳು ಮಿದುಳಿನ ಊತಕ್ಕೆ ಕಾರಣವಾಗುತ್ತವೆ. ರಕ್ತಸ್ರಾವದಿಂದ ಮೃತಪಡುವ ಅಪಾಯವೂ ಇರುತ್ತದೆ. ಆದ್ದರಿಂದ ಟ್ರಾಮಾ ಸೇವೆ ಒದಗಿಸಲು ಕ್ರಮಕೈಗೊಳ್ಳಲಾಗಿದೆ. ಸ್ಥಳದಲ್ಲಿ ತುರ್ತು ಚಿಕಿತ್ಸೆ ಒದಗಿಸುವ ಜತೆಗೆ ಹತ್ತಿರದ ಟ್ರಾಮಾ ಕೇಂದ್ರಕ್ಕೆ ಕರೆದೊಯ್ದು, ಅಗತ್ಯ ಚಿಕಿತ್ಸೆ ನೀಡಲಾಗುತ್ತದೆ. ಇದಕ್ಕಾಗಿ ಸಿಬ್ಬಂದಿಗೆ ತರಬೇತಿ ನೀಡಲಾಗುತ್ತಿದೆ’ ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

23 ಟ್ರಾಮಾ ಆಸ್ಪತ್ರೆ ಗುರುತು

ತುರ್ತು ಚಿಕಿತ್ಸೆಗೆ ಸಂಬಂಧಿಸಿದಂತೆ ಹೆದ್ದಾರಿಗಳ ಅಕ್ಕಪಕ್ಕದ ರಾಜ್ಯದ 23 ಟ್ರಾಮಾ ಆಸ್ಪತ್ರೆಗಳನ್ನು ಗುರುತಿಸಲಾಗಿದ್ದು, ಇವುಗಳ ಬಲವರ್ಧನೆಗೆ ಕ್ರಮ ಕೈಗೊಳ್ಳಲಾಗಿದೆ. ಗಾಯಗೊಂಡವರನ್ನು ಆಂಬುಲೆನ್ಸ್ ನೆರವಿನಿಂದ ಅಲ್ಲಿಗೆ ಸ್ಥಳಾಂತರಿಸಿ, ಚಿಕಿತ್ಸೆ ಒದಗಿಸಲಾಗುತ್ತದೆ. ₹45 ಕೋಟಿ ವೆಚ್ಚದಲ್ಲಿ 146 ಆರೋಗ್ಯ ಕೇಂದ್ರಗಳ ತುರ್ತು ನಿಗಾ ಘಟಕವನ್ನೂ ಮೇಲ್ದರ್ಜೆಗೇರಿಸಲಾಗುತ್ತಿದೆ. ಚಿಕಿತ್ಸೆಗೆ ಅಗತ್ಯವಿರುವ ಮಾನವಸಂಪನ್ಮೂಲ ವೃದ್ಧಿಗೂ ಇಲಾಖೆ ಕ್ರಮಕೈಗೊಂಡಿದೆ.

ನಿಯಮ ಉಲ್ಲಂಘನೆ ಕಾರಣ

ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಪ್ರಕಾರ, ವರದಿಯಾಗುತ್ತಿರುವ ತಲೆ ಗಾಯ ಪ್ರಕರಣಗಳಲ್ಲಿ ಶೇ 70ರಷ್ಟು ರಸ್ತೆ ಅಪಘಾತಕ್ಕೆ ಸಂಭವಿಸಿದ್ದಾಗಿವೆ. ಗಾಯಗೊಳ್ಳುವವರಲ್ಲಿ ಹೆಚ್ಚಿನವರು ದ್ವಿಚಕ್ರವಾಹನ ಸವಾರರಾಗಿದ್ದಾರೆ. ಸೀಟ್ ಬೆಲ್ಟ್ ಹಾಕದಿರುವುದು, ಅತಿಯಾದ ವೇಗದಲ್ಲಿ ಚಾಲನೆ, ವಾಹನ ಚಲಾಯಿಸುವಾಗ ಮೊಬೈಲ್ ಫೋನ್ ಬಳಕೆ, ಗುಣಮಟ್ಟದ ಹೆಲ್ಮೆಟ್ ಧರಿಸದೆ ಇರುವುದು, ಸರಿಯಾದ ರೀತಿಯಲ್ಲಿ ಹೆಲ್ಮೆಟ್ ಹಾಕಿಕೊಳ್ಳದೆ ಇರುವುದು ಸೇರಿ ವಿವಿಧ ಕಾರಣಗಳಿಂದ ರಸ್ತೆ ಅಪಘಾತ ಹಾಗೂ ಮರಣ ಪ್ರಕರಣಗಳು ಹೆಚ್ಚಳವಾಗುತ್ತಿವೆ ಎಂದು ಸಂಸ್ಥೆ ವಿಶ್ಲೇಷಿಸಿದೆ.

ಖಾಸಗಿ ಶಾಲಾ ಶುಲ್ಕ ಪ್ರಕಟಣೆ ಕಡ್ಡಾಯ

ಬೆಂಗಳೂರು: ಖಾಸಗಿ ಶಾಲೆಗಳು ನಿಗದಿಪಡಿಸಿರುವ ಪ್ರವೇಶ ಹಾಗೂ ಇತರೆ ಶುಲ್ಕಗಳ ವಿವರಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಶಾಲಾ ಸೂಚನಾ ಫಲಕ ಹಾಗೂ ಇಲಾಖಾ ಜಾಲತಾಣದಲ್ಲಿ (ಎಸ್‌ಎಟಿಎಸ್) ಪ್ರಕಟಿಸುವಂತೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತೆ ಬಿ.ಬಿ. ಕಾವೇರಿ ಸುತ್ತೋಲೆ ಹೊರಡಿಸಿದ್ದಾರೆ.

ಶಿಕ್ಷಣ ಹಕ್ಕು ಕಾಯ್ದೆ ಪ್ರಕಾರ ಎಲ್ಲ ಶಾಲೆಗಳ ಆಡಳಿತ ಮಂಡಳಿಗಳು ತಾವು ನಿಗದಿಪಡಿಸುವ ಶುಲ್ಕದ ವಿವರ, ವಿದ್ಯಾರ್ಥಿಗಳ ದಾಖಲಾತಿ, ವಸೂಲಾದ ಶುಲ್ಕದ ಮಾಹಿತಿಯನ್ನು ಪೋಷಕರಿಗೆ ಲಭ್ಯವಾಗುವಂತೆ ಸಾರ್ವತ್ರಿಕವಾಗಿ ಪ್ರಕಟಿಸುವುದು ಕಡ್ಡಾಯ. ಯಾವುದೇ ಶಾಲೆ ನಿಯಮಗಳನ್ನು ಪಾಲಿಸದೇ ದೂರು ದಾಖಲಾದಲ್ಲಿ ಕರ್ನಾಟಕ ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣ ನಿಯಮಗಳ ಅಡಿಯಲ್ಲಿ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪ ನಿರ್ದೇಶಕರು ಸೂಕ್ತ ಕ್ರಮ ಜರುಗಿಸಬೇಕು ಎಂದು ಸೂಚಿಸಿದ್ದಾರೆ.

ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಬಹುತೇಕ ಖಾಸಗಿ ಶಾಲೆಗಳು ಶೇ 30ರಿಂದ 40ರಷ್ಟು ಶುಲ್ಕವನ್ನು ಹೆಚ್ಚಿಸಿದ್ದವು. ಈ ಕುರಿತು ಹಲವು ಪೋಷಕರು ಶಿಕ್ಷಣ ಇಲಾಖೆಗೆ ದೂರು ಸಲ್ಲಿಸಿದ್ದರು.

ದಿ ರಾಮೇಶ್ವರಂ ಕೆಫೆ ಪ್ರಕರಣ • ಸಂಚಿನಲ್ಲಿ 11 ಮಂದಿ ಭಾಗಿ ಪತ್ತೆ

ಸ್ಫೋಟಕ್ಕೆ ‘ವಿದೇಶಿ ಹ್ಯಾಂಡ್ಲರ್’ ಸೂಚನೆ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಬ್ರೂಕ್‌ಫೀಲ್ಡ್‌ನಲ್ಲಿರುವ ದಿ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟಿಸಲು ವಿದೇಶದಲ್ಲಿರುವ ಹ್ಯಾಂಡ್ಲರ್ ಸೂಚನೆ ನೀಡಿದ್ದನೆಂಬ ಸಂಗತಿ ತನಿಖೆಯಿಂದ ಗೊತ್ತಾಗಿದ್ದು, ಕೃತ್ಯದ ಸಂಚಿನಲ್ಲಿ ಭಾಗಿಯಾಗಿದ್ದ 11 ಮಂದಿಯನ್ನು ಎನ್‌ಐಎ (ರಾಷ್ಟ್ರೀಯ ತನಿಖಾ ದಳ) ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

ಮಾರ್ಚ್ 1ರಂದು ನಡೆದಿದ್ದ ಬಾಂಬ್ ಸ್ಫೋಟದ ಸಂಬಂಧ ಮುಸಾವೀರ್ ಹುಸೇನ್ ಶಾಜೀಬ್ ಹಾಗೂ ಅಬ್ದುಲ್ ಮಥೀನ್ ಅಹಮ್ಮದ್ ತಾಹಾನನ್ನು ಬಂಧಿಸಿ ವಿಚಾರಣೆ ನಡೆಸಿದ್ದ ಅಧಿಕಾರಿಗಳು, ಹಲವು ಮಾಹಿತಿ ಕಲೆಹಾಕಿದ್ದಾರೆ.

‘ಕಚ್ಚಾ ಬಾಂಬ್ (ಐಇಡಿ) ತಯಾರಿಸಿ ಹೇಳಿದ ಸ್ಥಳದಲ್ಲಿ ಇಟ್ಟು ಬರುವುದಷ್ಟೇ ನಮ್ಮ ಕೆಲಸ. ವಿದೇಶದಲ್ಲಿರುವ **** ಎಂಬ ಹೆಸರಿನ ಹ್ಯಾಂಡ್ಲರ್, ಕೋಡ್ ವರ್ಡ್ ಮೂಲಕ ಸೂಚನೆ ನೀಡಿದ್ದ. ಹೀಗಾಗಿ, ಬಾಂಬ್ ಇಟ್ಟೆವು. ನಮ್ಮ ಕೆಲಸಕ್ಕೆ ಹಲವರು ಹಣಕಾಸು ಹಾಗೂ ಇತರೆ ನೆರವು ನೀಡಿದ್ದಾರೆ’ ಎಂಬುದಾಗಿ ಅಬ್ದುಲ್ ತಾಹಾ ಹಾಗೂ ಮುಸಾವೀರ್ ಬಾಯಿ ಬಿಟ್ಟಿದ್ದಾಗಿ ಮೂಲಗಳು ಹೇಳಿವೆ.

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ, ಭಯೋತ್ಪಾದನಾ ಸಂಘಟನೆ ಪರ ಗೋಡೆ ಬರಹ ಹಾಗೂ ಕೊಯಮತ್ತೂರಿನ ಕಾರು ಬಾಂಬ್ ಸ್ಫೋಟ ಪ್ರಕರಣದಲ್ಲೂ ವಿದೇಶಿ ಹ್ಯಾಂಡ್ಲರ್ ಕೈವಾಡವಿರುವ ಶಂಕೆ ಎನ್‌ಐಎ ಅಧಿಕಾರಿಗಳಿಗೆ ಬಂದಿತ್ತು. ಆದರೆ, ಹ್ಯಾಂಡ್ಲರ್ ಯಾರು ಎಂಬ ಬಗ್ಗೆ ಮಾಹಿತಿ ಸಿಕ್ಕಿರಲಿಲ್ಲ.

ಇದೀಗ, ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟದಲ್ಲೂ ವಿದೇಶಿ ಹ್ಯಾಂಡ್ಲರ್ ಭಾಗಿಯಾಗಿರುವುದು ಗೊತ್ತಾಗಿದೆ.

ದಿ ರಾಮೇಶ್ವರಂ ಕೆಫೆ

ಮುಖ್ಯಾಂಶಗಳು

- ಬೆಂಗಳೂರು, ಹುಬ್ಬಳ್ಳಿಯಲ್ಲಿ ಹಲವರು ವಶಕ್ಕೆ
- ಹಣಕಾಸು ವ್ಯವಹಾರದ ಬಗ್ಗೆ ದಾಖಲೆ ಪರಿಶೀಲನೆ
- ಸಂಚಿನಲ್ಲಿ ಮತ್ತಷ್ಟು ಮಂದಿ ಭಾಗಿ ಶಂಕೆ

‘ಸಂಕೇತಗಳ ಮೂಲಕ ಸಂಭಾಷಣೆ’

‘ವಿದೇಶದಲ್ಲಿರುವ ಹ್ಯಾಂಡ್ಲರ್, ಭಾರತದಲ್ಲಿರುವ ಯುವಕರನ್ನು ಸಂಪರ್ಕಿಸಿ ಭಯೋತ್ಪಾದನಾ ಕೃತ್ಯಕ್ಕೆ ಪ್ರಚೋದಿಸುತ್ತಿದ್ದಾನೆ. ಸಾಮಾಜಿಕ ಮಾಧ್ಯಮಗಳ ಮೂಲಕ ಸಂಭಾಷಣೆ ನಡೆಸುತ್ತಿದ್ದಾನೆ. ಜೊತೆಗೆ, ಬಾಂಬ್ ಸ್ಫೋಟ ಹಾಗೂ ಇತರೆ ಕೃತ್ಯಗಳಿಗೆ ಸೂಚನೆ ಸಹ ನೀಡುತ್ತಿರುವುದು ಗೊತ್ತಾಗಿದೆ’ ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

‘ವಿದೇಶಿ ಹ್ಯಾಂಡ್ಲರ್, ಪ್ರತ್ಯೇಕ ಸಂಕೇತಗಳನ್ನು ಸೃಷ್ಟಿಸಿದ್ದಾನೆ. ಯಾರಿಗೆ ಯಾವ ಸಂದರ್ಭದಲ್ಲಿ ಯಾವ ಸಂಕೇತ ನೀಡಬೇಕು ಎಂಬುದನ್ನು ಆತನೇ ತೀರ್ಮಾನಿಸುತ್ತಿದ್ದಾನೆ. ಹೀಗಾಗಿ, ಆತನ ಕೃತ್ಯಗಳ ಬಗ್ಗೆ ನಿಖರ ಮಾಹಿತಿ ಲಭ್ಯವಾಗುತ್ತಿಲ್ಲ. ಬಂಧಿತ ಆರೋಪಿಗಳು ಸಹ, ಸಂಕೇತಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡುತ್ತಿಲ್ಲ’ ಎಂದು ತಿಳಿಸಿವೆ.

ಆತನ ಪತ್ತೆಗೆ ಅಧಿಕಾರಿಗಳು ತನಿಖೆ ಮುಂದುವರಿಸಿದ್ದಾರೆ.

11 ಮಂದಿ ಶಂಕಿತರು: ‘ತಮಿಳುನಾಡು, ಕರ್ನಾಟಕ, ತೆಲಂಗಾಣ ಹಾಗೂ ಆಂಧ್ರಪ್ರದೇಶದಲ್ಲಿ ವಿಧ್ವಂಸಕ ಕೃತ್ಯ ಎಸಗಲು ದೊಡ್ಡ ಮಟ್ಟದಲ್ಲಿ ಸಂಚು ನಡೆದಿತ್ತು. 2 ರಾಜ್ಯಗಳ 11 ಮಂದಿ, ವಿಧ್ವಂಸಕ ಕೃತ್ಯ ಎಸಗಲು ಹಣಕಾಸು ಹಾಗೂ ಇತರೆ ಸಹಾಯ ಮಾಡಿದ್ದರು ಎಂಬ ಮಾಹಿತಿ ಲಭ್ಯವಾಗಿದೆ. ಇದನ್ನು ಆಧರಿಸಿಯೇ 11 ಸ್ಥಳಗಳ ಮೇಲೆ ದಾಳಿ ಮಾಡಲಾಯಿತು’ ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

‘ಬಾಂಬ್ ಇರಿಸಲು ತರಬೇತಿ, ಸಿದ್ಧತೆ, ತಯಾರಿ ಹಾಗೂ ಬಾಂಬ್ ಸ್ಫೋಟದ ನಂತರ ಪರಾರಿಯಾಗಲು ಅಗತ್ಯವಿದ್ದ ಹಣಕಾಸು ನೆರವು ನೀಡಲು ಕೆಲವರು ಒಪ್ಪಿಕೊಂಡಿದ್ದರು. ಅದರಂತೆ ಹಣ ಸಹ ನೀಡಿದ್ದರು. ಈ ಪೈಕಿ ಕೆಲವರು ಬೆಂಗಳೂರು ಹಾಗೂ ಹುಬ್ಬಳ್ಳಿಯಲ್ಲಿದ್ದಾರೆ. 11 ಶಂಕಿತರ ಪೈಕಿ ಹಲವರನ್ನು ವಶಕ್ಕೆ ಪಡೆದು ವಿಚಾರಣೆ ಮುಂದುವರಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಶಂಕಿತರು ವಾಸವಿದ್ದ ಸ್ಥಳ ಹಾಗೂ ಕಚೇರಿಗಳಲ್ಲಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಜಪ್ತಿ ಮಾಡಲಾಗಿದೆ. ಜೊತೆಗೆ, ಕೆಲ ದಾಖಲೆಗಳು ಹಾಗೂ ಪುಸ್ತಕಗಳನ್ನು ಸುಪರ್ದಿಗೆ ಪಡೆದು ಪರಿಶೀಲನೆ ನಡೆಸಲಾಗುತ್ತಿದೆ. ಶಂಕಿತ 11 ಮಂದಿಯೂ ಈ ಹಿಂದೆ ಬೆಂಗಳೂರಿನ ಗುರಪ್ಪನಪಾಳ್ಯದಲ್ಲಿ ನಡೆದಿದ್ದ ಸಭೆಗಳಲ್ಲಿ ಪಾಲ್ಗೊಂಡಿದ್ದರೆಂಬ ಮಾಹಿತಿ ಇದೆ’ ಎಂದು ಮೂಲಗಳು ಹೇಳಿವೆ.

ಫಕೀರೇಶ್ವರ ರಥೋತ್ಸವ

ಗದಗ ಜಿಲ್ಲೆ ಶಿರಹಟ್ಟಿ ಪಟ್ಟಣದ ಫಕೀರೇಶ್ವರ ಸಂಸ್ಥಾನ ಮಠದ ಮಹಾ ರಥೋತ್ಸವ ಗುರುವಾರ ಅಪಾರ ಭಕ್ತ ಸಮೂಹದ ಮಧ್ಯೆ ವಿಜೃಂಭಣೆಯಿಂದ ನಡೆಯಿತು. ಪ್ರಜಾವಾಣಿ ಚಿತ್ರ/ ನಿಂಗಪ್ಪ ಹಮ್ಮಿಗಿ

ಭ್ರೂಣಲಿಂಗ ಪತ್ತೆ ತಡೆಗೆ ನಿಯಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಕೊಠಡಿಯೊಳಗೆ ಗರ್ಭಿಣಿಯರನ್ನು ಹೊರತುಪಡಿಸಿ ಇತರೆ ಸಂಬಂಧಿಕರು ಹಾಗೂ ಹೆಚ್ಚುವರಿ ಮಾನಿಟರ್ ಅನ್ನು ನಿಷೇಧಿಸಿ ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.

ಗರ್ಭಪೂರ್ವ ಮತ್ತು ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ಕಾಯ್ದೆಗೆ (ಪಿಸಿಪಿಎನ್‌ಡಿಟಿ) ಸಂಬಂಧಿಸಿದ ಕಾರ್ಯಾಗಾರದಲ್ಲಿ ರೇಡಿಯಾಲಜಿಸ್ಟ್, ಸೋನಾಲಜಿಸ್ಟ್ ಹಾಗೂ ಸ್ತ್ರೀರೋಗ ತಜ್ಞರು ಈ ಬಗ್ಗೆ ಚರ್ಚಿಸಿದ್ದರು. ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಕೊಠಡಿಯೊಳಗೆ ಗರ್ಭಿಣಿಯರ ಜತೆಗೆ ಬರುವ ಸಂಬಂಧಿಗಳು ಅಲ್ಟ್ರಾಸೌಂಡ್ ಕಾರ್ಯವಿಧಾನಗಳ ಫೋಟೊ ಹಾಗೂ ವಿಡಿಯೊ ಸೆರೆಹಿಡಿದು, ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಅಲ್ಲದೆ, ಕೆಲವರು ಈ ವಿಡಿಯೊ ಮತ್ತು ಫೋಟೊಗಳನ್ನು ಭ್ರೂಣ ಲಿಂಗ ಪತ್ತೆಗೆ ಬಳಸಿಕೊಳ್ಳುತ್ತಿರುವ ಬಗ್ಗೆಯೂ ಕಳವಳ ವ್ಯಕ್ತಪಡಿಸಿದ್ದರು. ಹೀಗಾಗಿ, ಈ ಬಗ್ಗೆ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಲಾಗಿದೆ.

ಗರ್ಭಿಣಿಯರಿಗೆ ಅಲ್ಟ್ರಾಸೌಂಡ್ ಕಾರ್ಯವಿಧಾನಗಳನ್ನು ವೀಕ್ಷಿಸಲು ಅನುವು ಮಾಡಿಕೊಡುವ ಉದ್ದೇಶದಿಂದ ಕೊಠಡಿಗಳಲ್ಲಿ ಹೆಚ್ಚುವರಿ ಮಾನಿಟರ್ ಇರಿಸಲಾಗುತ್ತಿತ್ತು. ಈ ರೀತಿ ಮಾನಿಟರ್ ಇರಿಸುವುದು ಹಾಗೂ ಸಂಬಂಧಿಕರಿಗೆ ಕೊಠಡಿಯೊಳಗೆ ಅವಕಾಶ ನೀಡುವುದು ಪಿಸಿಪಿಎನ್‌ಡಿಟಿ ಕಾಯ್ದೆಯ ಉಲ್ಲಂಘನೆಯಾಗಿದೆ. ಈ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಕೊಠಡಿಯೊಳಗೆ ಗರ್ಭಿಣಿಯರನ್ನು ಹೊರತುಪಡಿಸಿ ಇತರರಿಗೆ ಅನುಮತಿಯಿಲ್ಲವೆಂಬ ಫಲಕವನ್ನು ಕೊಠಡಿ ಹೊರಗಡೆ ಕಡ್ಡಾಯವಾಗಿ ಪ್ರದರ್ಶಿಸಬೇಕು ಎಂದು ಆಸ್ಪತ್ರೆಗಳು ಹಾಗೂ ಸ್ಕ್ಯಾನಿಂಗ್ ಕೇಂದ್ರಗಳಿಗೆ ಸೂಚಿಸಲಾಗಿದೆ.

ಪಿಸಿಪಿಎನ್‌ಡಿಟಿ ಕಾಯ್ದೆಯಡಿ ನೋಂದಾಯಿಸಿರುವ ಎಲ್ಲ ಕೇಂದ್ರಗಳು, ಆಸ್ಪತ್ರೆ ಹಾಗೂ ಕ್ಲಿನಿಕ್‌ಗಳು ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಕೊಠಡಿಯೊಳಗೆ ಹೆಚ್ಚುವರಿ ಮಾನಿಟರ್ ಇಡುವುದನ್ನು ನಿಷೇಧಿಸಲಾಗಿದೆ. ಒಂದು ವೇಳೆ ಮಾನಿಟರ್ ಇರಿಸಿರುವುದು ಕಂಡುಬಂದಲ್ಲಿ ಕಾಯ್ದೆಯಡಿ ಕ್ರಮಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ರೈತ ಸಂಪರ್ಕ ಕೇಂದ್ರಕ್ಕೆ ಕೊನೆಗೂ ಶಾಮಿಯಾನ ಅಳವಡಿಕೆ

ಶಿಗ್ಗಾವಿ ತಾಲ್ಲೂಕಿನ ಬಂಕಾಪುರದ ರೈತ ಸಂಪರ್ಕ ಕೇಂದ್ರದಲ್ಲಿ ಗುರುವಾರ ಶಾಮಿಯಾನ ಹಾಕಲಾಗಿತ್ತು

ಪ್ರಜಾವಾಣಿ ವಾರ್ತೆ

ಶಿಗ್ಗಾವಿ: ಬಿತ್ತನೆ ಬೀಜ ಪಡೆಯಲು ರೈತ ಸಂಪರ್ಕ ಕೇಂದ್ರದ ಎದುರು ನಿಲ್ಲುತ್ತಿದ್ದ ರೈತರಿಗೆ ಗುರುವಾರ ಅನುಕೂಲ ಮಾಡಿಕೊಡಲಾಯಿತು. ಶುದ್ಧ ಕುಡಿಯುವ ನೀರಿನ ಸೌಲಭ್ಯದ ಜೊತೆಗೆ ನೆರಳಿಗೆ ಶಾಮಿಯಾನ ವ್ಯವಸ್ಥೆ ಕಲ್ಪಿಸಲಾಯಿತು. ಜೊತೆಗೆ ಬಿತ್ತನೆ ಬೀಜ ಸಂಗ್ರಹದ ಮಾಹಿತಿ, ದರ ಪಟ್ಟಿ ಕೂಡ ಪ್ರದರ್ಶಿಸಲಾಯಿತು.

‘ಮೂರು ದಿನಗಳಿಂದ ಮೂಲಸೌಲಭ್ಯ ಕೊರತೆ ಆರೋಪ ಕೇಳಿ ಬಂದಿತ್ತು. ಎಲ್ಲವನ್ನೂ ಪರಿಶೀಲಿಸಿ, ಸೌಲಭ್ಯ ಒದಗಿಸಲಾಗಿದೆ. ಈಗ ರೈತರಿಗೆ ಯಾವುದೇ ತೊಂದರೆಯಿಲ್ಲ’ ಎಂದು ಬಂಕಾಪುರ ರೈತ ಸಂಪರ್ಕ ಕೇಂದ್ರದ ಅಧಿಕಾರಿ ಶ್ರೀಧರ ದಾಸರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮೇಲಧಿಕಾರಿಗಳ ಮಾರ್ಗದರ್ಶನದಂತೆ ಗೊಬ್ಬರ ಅಂಗಡಿಗಳಿಗೆ ಭೇಟಿ ನೀಡಿ, ಪರಿಶೀಲಿಸಲಾಗಿದೆ. ಸರ್ಕಾರ ನಿಗದಿಪಡಿಸಿದ ದರದಲ್ಲೇ ಗೊಬ್ಬರ ಮಾರುವಂತೆ ವ್ಯಾಪಾರಸ್ಥರಿಗೆ ಸೂಚಿಸಲಾಗಿದೆ’ ಎಂದರು.

‘ರೈತರಿಗೆ ಸರಿಯಾಗಿ ಬಿತ್ತನೆ ಬೀಜ ವಿತರಿಸಲಾಗುತ್ತಿದೆ. ಗೊಬ್ಬರ ದರದಲ್ಲಿ ಹೆಚ್ಚು ಹಣ ಪಡೆಯುವುದನ್ನು ತಡೆಯಲಾಗಿದೆ. ರೈತರಿಗೆ ಬಿತ್ತನೆ ಮಾಡಲು ಅನುಕೂಲವಾಗಿದೆ’ ಎಂದು ರೈತ ಮುಖಂಡರಾದ ದೇವಣ್ಣ ಹಳವಳ್ಳಿ, ಅಶೋಕ ಹಳವಳ್ಳಿ, ಬಸವರಾಜ ಮಲ್ಲೂರ, ಗಿರೀಶ ನಗಾರಹಳ್ಳಿ ತಿಳಿಸಿದರು.

ಕೆಪಿಟಿಸಿಎಲ್‌ನಲ್ಲಿ 902 ಹುದ್ದೆಗಳ ನೇಮಕಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು (ಕೆಪಿಟಿಸಿಎಲ್) 902 ಹುದ್ದೆಗಳಿಗೆ ನೇಮಕಾತಿ ಆದೇಶ ಹೊರಡಿಸಿದೆ. ಮಾರ್ಚ್‌ನಲ್ಲಿ ನೇಮಕ ಪ್ರಕ್ರಿಯೆ ಅಂತಿಮಗೊಂಡ 368 ಸಹಾಯಕ ಎಂಜಿನಿಯರ್ (ವಿದ್ಯುತ್), 17 ಸಹಾಯಕ ಎಂಜಿನಿಯರ್ (ಸಿವಿಲ್), 15 ಕಿರಿಯ ಎಂಜಿನಿಯರ್ (ಸಿವಿಲ್) ಅಭ್ಯರ್ಥಿಗಳಿಗೆ ಕೌನ್ಸೆಲಿಂಗ್ ನಡೆಸಿ ನೇಮಕಾತಿ ಆದೇಶ ನೀಡಲಾಗಿದೆ. 535 ಅಭ್ಯರ್ಥಿಗಳ ಪೈಕಿ 502 (ಕಿರಿಯ ಎಂಜಿನಿಯರ್) ಅಭ್ಯರ್ಥಿಗಳಿಗೆ ಬುಧವಾರ ಮತ್ತು ಗುರುವಾರ ಕೌನ್ಸೆಲಿಂಗ್ ನಡೆಸಿ ನೇಮಕ ಆದೇಶ ನೀಡಲಾಗಿದೆ. ಈ ಪೈಕಿ 73 ಅಭ್ಯರ್ಥಿಗಳು ಕಲ್ಯಾಣ ಕರ್ನಾಟಕ ಪ್ರದೇಶ ವೃಂದಕ್ಕೆ ಸೇರಿದವರಾಗಿದ್ದು, ಉಳಿದ 429 ಅಭ್ಯರ್ಥಿಗಳು ಇತರೆ ವೃಂದದವರು.

ಇನ್ನುಳಿದಂತೆ, 360 ಕಿರಿಯ ಸಹಾಯಕ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಶುಕ್ರವಾರ (ಮೇ 24, 2024) ಕಡೆಯ ದಿನವಾಗಿದೆ. ಸ್ವೀಕರಿಸಿದ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲು ಕ್ರಮ ವಹಿಸಲಾಗುವುದು. ಆಯ್ಕೆ ಪಟ್ಟಿ ಪ್ರಕಟಗೊಂಡ ನಂತರ, ಎಲ್ಲಾ ಅಭ್ಯರ್ಥಿಗಳ ವಿದ್ಯಾರ್ಹತೆ ಹಾಗೂ ಮೀಸಲು ಕೋರಿರುವ ದಾಖಲೆಗಳ ಬಗ್ಗೆ ಸಂಬಂಧಿಸಿದ ಪ್ರಾಧಿಕಾರದಿಂದ ದೃಢೀಕರಣ ಪಡೆದು ತ್ವರಿತವಾಗಿ ಸ್ಥಳ ನಿಯುಕ್ತಿ ಹಾಗೂ ನೇಮಕಾತಿ ಆದೇಶ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಕೆಪಿಟಿಸಿಎಲ್ ಪ್ರಕಟಣೆ ತಿಳಿಸಿದೆ.

ಬಂಡಾಯ: ಐವರ ಉಚ್ಚಾಟನೆ

ಬೆಂಗಳೂರು: ಶಿಕ್ಷಕರು ಹಾಗೂ ಪದವೀಧರರ ಕ್ಷೇತ್ರಗಳಿಂದ ವಿಧಾನ ಪರಿಷತ್‌ಗೆ ನಡೆಯುತ್ತಿರುವ ಚುನಾವಣೆಯಲ್ಲಿ ಪಕ್ಷದ ಅಧಿಕೃತ ಅಭ್ಯರ್ಥಿಗಳ ವಿರುದ್ಧ ಸ್ಪರ್ಧಿಸಿರುವ ಐವರು ಮುಖಂಡರನ್ನು 6 ವರ್ಷಗಳ ಅವಧಿಗೆ ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವದಿಂದ ಕೆಪಿಸಿಸಿ ಉಚ್ಚಾಟಿಸಿದೆ.

ನೈರುತ್ಯ ಪದವೀಧರ ಕ್ಷೇತ್ರದಿಂದ ಸ್ಪರ್ಧಿಸಿರುವ ಎಸ್.ಪಿ. ದಿನೇಶ್, ನೈರುತ್ಯ ಶಿಕ್ಷಕರ ಕ್ಷೇತ್ರದ ಬಿ.ಆರ್. ನಂಜೇಶ್, ಬೆಂಗಳೂರು ಪದವೀಧರ ಕ್ಷೇತ್ರದ ಫರ್ನಾಂಡಿಸ್ ಲಾರೆನ್ಸ್, ಆಗ್ನೇಯ ಶಿಕ್ಷಕರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಗಳಾದ ಲೋಕೇಶ್ ತಾಳಿಕಟ್ಟೆ ಹಾಗೂ ವಿನೋದ್ ಶಿವರಾಜ್ ಅವರನ್ನು ಉಚ್ಚಾಟಿಸಲಾಗಿದೆ.

ರೇವ್ ಪಾರ್ಟಿ: ‘ಡ್ರಗ್ಸ್ ಗ್ರಾಹಕರಿಗೆ’ ನೋಟಿಸ್ ಸಾಧ್ಯತೆ

ಹೇಮಾ, 86 ಮಂದಿ ಡ್ರಗ್ಸ್ ಸೇವನೆ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೆಬ್ಬಗೋಡಿ ಬಳಿಯ ಹುಸ್ಕೂರು ಸಮೀಪದ ಜಿ.ಆರ್. ಫಾರ್ಮ್ ಹೌಸ್‌ನಲ್ಲಿ ನಡೆದಿದ್ದ ರೇವ್ ಪಾರ್ಟಿಯಲ್ಲಿ ಪಾಲ್ಗೊಂಡಿದ್ದ 86 ಮಂದಿ ಡ್ರಗ್ಸ್ ಸೇವನೆ ಮಾಡಿದ್ದರು’ ಎಂಬ ಮಾಹಿತಿ ವೈದ್ಯಕೀಯ ವರದಿಯಿಂದ ಗೊತ್ತಾಗಿದೆ.

‘ಸನ್‌ಸೆಟ್ ಟು ಸನ್‌ರೈಸ್ ವಿಕ್ಟರಿ’ ಹೆಸರಿನಲ್ಲಿ ಮೇ 19ರಂದು ರೇವ್ ಪಾರ್ಟಿ ಆಯೋಜಿಸಲಾಗಿತ್ತು. ತೆಲುಗು ಸಿನಿಮಾ ನಟಿ ಹೇಮಾ ಸೇರಿ ಹಲವರು ಪಾರ್ಟಿಯಲ್ಲಿ ಪಾಲ್ಗೊಂಡಿದ್ದರು. ಸಿಸಿಬಿ ಪೊಲೀಸರು ದಾಳಿ ಮಾಡಿ, 103 ಮಂದಿಯನ್ನು ವಶಕ್ಕೆ ಪಡೆದಿದ್ದರು. ಡ್ರಗ್ಸ್ ಸಹ ಜಪ್ತಿ ಮಾಡಿದ್ದರು.

ರೇವ್ ಪಾರ್ಟಿ ಕುರಿತು ಎಲೆಕ್ಟ್ರಾನಿಕ್ ಸಿಟಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಆದರೆ, ರೇವ್ ಪಾರ್ಟಿ ನಡೆಸಿದ್ದ ಫಾರ್ಮ್ ಹೌಸ್ ಹೆಬ್ಬಗೋಡಿ ಠಾಣೆ ವ್ಯಾಪ್ತಿಯಲ್ಲಿರುವುದು ಪರಿಶೀಲನೆಯಿಂದ ಗೊತ್ತಾಗಿತ್ತು. ಹೀಗಾಗಿ, ಪ್ರಕರಣವನ್ನು ಹೆಬ್ಬಗೋಡಿ ಠಾಣೆಗೆ ವರ್ಗಾಯಿಸಲಾಗಿತ್ತು.

ಪ್ರಕರಣದ ಬಗ್ಗೆ ಮಾಹಿತಿ ಪಡೆದಿದ್ದ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ‘ರೇವ್ ಪಾರ್ಟಿ ಸಂಬಂಧ ಬೆಂಗಳೂರು ಸಿಸಿಬಿ ಪೊಲೀಸರು ತನಿಖೆ ಮುಂದುವರಿಸಬೇಕು’ ಎಂದು ಆದೇಶ ಹೊರಡಿಸಿದ್ದಾರೆ. ಹೀಗಾಗಿ, ಪ್ರಕರಣದ ತನಿಖೆಯನ್ನು ಸಿಸಿಬಿ ಪೊಲೀಸರು ಕೈಗೆತ್ತಿಕೊಂಡಿದ್ದಾರೆ.

ಸಿಂಥೆಟಿಕ್ ಡ್ರಗ್ಸ್ ಸೇವನೆ ವರದಿ: ‘ಪಾರ್ಟಿಯಲ್ಲಿ ಪಾಲ್ಗೊಂಡಿದ್ದ 103 ಮಂದಿಯನ್ನು ವಶಕ್ಕೆ ಪಡೆದು, ಸಿಂಥೆಟಿಕ್ ಡ್ರಗ್ಸ್ ತೆಗೆದುಕೊಂಡಿದ್ದ ಅನುಮಾನದಡಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿತ್ತು. ವೈದ್ಯರು, ಎಲ್ಲರ ರಕ್ತದ ಮಾದರಿ ಸಂಗ್ರಹಿಸಿದ್ದರು. ವಿಶೇಷ ಪ್ರಕರಣವೆಂದು ಪರಿಗಣಿಸಿದ್ದ ವೈದ್ಯರು, ತ್ವರಿತಗತಿಯಲ್ಲಿ ವರದಿ ಸಿದ್ಧಪಡಿಸಿ ಸಿಸಿಬಿಗೆ ಸಲ್ಲಿಸಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘103 ಜನರ ಪೈಕಿ ನಟಿ ಹೇಮಾ ಸೇರಿ 86 ಮಂದಿ ಡ್ರಗ್ಸ್ ತೆಗೆದುಕೊಂಡಿದ್ದರು’ ಎಂಬುದು ವೈದ್ಯಕೀಯ ಪರೀಕ್ಷೆಯಲ್ಲಿ ದೃಢಪಟ್ಟಿದೆ. 73 ಪುರುಷರ ಪೈಕಿ 59 ಪುರುಷರಲ್ಲಿ ಹಾಗೂ 30 ಮಹಿಳೆಯರ ಪೈಕಿ 27 ಮಹಿಳೆಯರ ರಕ್ತದ ಮಾದರಿಯಲ್ಲಿ ಡ್ರಗ್ಸ್ ಅಂಶ ಪತ್ತೆಯಾಗಿರುವುದಾಗಿ ವೈದ್ಯರು ಮಾಹಿತಿ ನೀಡಿದ್ದಾರೆ’ ಎಂದು ತಿಳಿದುಬಂದಿದೆ.

‘ಡ್ರಗ್ಸ್ ಗ್ರಾಹಕ’ರೆಂದು ಎಫ್‌ಐಆರ್: ‘ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ಜೊತೆಯಲ್ಲಿ ಸೇವನೆಯೂ ಅಪರಾಧವಾಗಿದೆ. ವೈದ್ಯಕೀಯ ವರದಿ ಆಧರಿಸಿ ನಟಿ ಹೇಮಾ, 86 ಮಂದಿಯನ್ನು ‘ಡ್ರಗ್ಸ್ ಗ್ರಾಹಕರು’ ಎಂಬುದಾಗಿ ಪರಿಗಣಿಸಿ ಎಫ್‌ಐಆರ್‌ನಲ್ಲಿ ಹೆಸರು ನಮೂದಿಸಲಾಗುವುದು. ಎಲ್ಲರ ವಿಚಾರಣೆ ನಡೆಸಲಾಗುವುದು’ ಎಂದು ಮೂಲಗಳು ಹೇಳಿವೆ.

ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012. ದೂರವಾಣಿ: 080–23460460 (5 ಲೈನ್ಸ್),
ಇ–ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್–05/2024 ದಿನಾಂಕ: 22–05–2024

ಎಂಬಿಎ/ಎಂಸಿಎ/ಎಂಇ/ಎಂ.ಟೆಕ್/ಎಂ.ಆರ್ಕಿಟೆಕ್ಚರ್ ಕೋರ್ಸುಗಳ ಮೊದಲನೆ ವರ್ಷದ/ 1ನೇ ಸೆಮಿಸ್ಟರ್‌ಗಳ ಪ್ರವೇಶಕ್ಕೆ ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆ – PGCET-2024

1) ಕರ್ನಾಟಕ ಮತ್ತು ಕರ್ನಾಟಕೇತರ ಅಭ್ಯರ್ಥಿಗಳಿಂದ 2024–25ನೇ ಸಾಲಿನ ಮೊದಲನೇ ವರ್ಷದ / 1ನೇ ಸೆಮಿಸ್ಟರ್‌ಗಳ (ಪೂರ್ಣಾವಧಿ / ಅರೆಕಾಲಿಕ) ಎಂಬಿಎ / ಎಂಸಿಎ / ಎಂಇ / ಎಂ.ಟೆಕ್ / ಎಂ.ಆರ್ಕಿಟೆಕ್ಚರ್ ಕೋರ್ಸುಗಳ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಮೇಲಿನ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಪಿಜಿಸಿಇಟಿ ನಿಯಮಗಳು 2005 ಮತ್ತು 2011 ರ ಅನ್ವಯ ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆ – 2024 ಕ್ಕೆ ಹಾಜರಾಗಬೇಕು.
2) **ಇಂಜಿನಿಯರಿಂಗ್ ಹಾಗೂ ಟೆಕ್ನಾಲಜಿ ವಿಭಾಗದಲ್ಲಿ GATE ಪರೀಕ್ಷೆಯಲ್ಲಿ ಅರ್ಹತೆ ಪಡೆದಿರುವ ಅಭ್ಯರ್ಥಿಗಳು ಮಾತ್ರ ವಿಟಿಯು, ಬೆಳಗಾವಿ ಅಡಿಯಲ್ಲಿನ ವಿವಿಧ ಎಂ.ಟೆಕ್ ಕೋರ್ಸುಗಳಿಗೆ ಪ್ರವೇಶ ಪಡೆಯಲು ಅರ್ಹರಾಗುತ್ತಾರೆ.** ಗೇಟ್ ಪರೀಕ್ಷೆಯಲ್ಲಿ ಮಾನ್ಯತೆ ಅಂಕಗಳನ್ನು ಹೊಂದಿರುವವರು (Valid GATE Score) ಎಂಇ / ಎಂ.ಟೆಕ್ / ಎಂ.ಆರ್ಕ್ ಕೋರ್ಸ್‌ಗಳ ಪ್ರವೇಶಕ್ಕಾಗಿ, **ಪಿಜಿಸಿಇಟಿ–2024 ಕ್ಕೆ ಹಾಜರಾಗಬೇಕಾಗಿರುವುದಿಲ್ಲ,** ಆದರೆ ಅಂತಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಭರ್ತಿ ಮಾಡಿ ಶುಲ್ಕವನ್ನು ಪಾವತಿಸಿ ಪ್ರವೇಶಕ್ಕೆ ಅರ್ಹರಾಗಬಹುದು.
3) ಕರ್ನಾಟಕೇತರ ಅಭ್ಯರ್ಥಿಗಳು ಎಂಬಿಎ ಮತ್ತು ಎಂಸಿಎ ಪ್ರವೇಶಕ್ಕೆ ಆಡಳಿತ ಮಂಡಳಿಯವರು ಸರ್ಕಾರಕ್ಕೆ ಬಿಟ್ಟುಕೊಡುವ ಸೀಟುಗಳನ್ನು ಮಾತ್ರ ಆಯ್ಕೆ ಮಾಡಲು ಅರ್ಹತೆ ಪಡೆಯುತ್ತಾರೆ.
4) SC/ST/OBC ಅರ್ಹತಾ ಮಾನದಂಡಗಳು ಕರ್ನಾಟಕದ SC/ST/OBC ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.
5) **ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆ – PGCET-2024 – ಪರೀಕ್ಷಾ ವೇಳಾಪಟ್ಟಿ ಮತ್ತು ವಿಧಾನ**

ದಿನಾಂಕ	ಸಮಯ	ಮೊದಲನೇ ವರ್ಷದ / ಮೊದಲನೇ ಸೆಮಿಸ್ಟರ್ ಪ್ರವೇಶ	ಒಟ್ಟು ಪ್ರಶ್ನೆಗಳು	ಒಟ್ಟು ಅಂಕಗಳು
13–07–2024 ಶನಿವಾರ	ಮಧ್ಯಾಹ್ನ 2.30 ರಿಂದ ಸಂಜೆ 4.30 ಗಂಟೆಯವರೆಗೆ	ಎಂಇ/ಎಂ.ಟೆಕ್/ಎಂ.ಆರ್ಕಿಟೆಕ್ಚರ್	100	100
14–07–2024 ಭಾನುವಾರ	ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.30 ಗಂಟೆಯವರೆಗೆ	ಎಂಸಿಎ	100	100
	ಮಧ್ಯಾಹ್ನ 2.30 ರಿಂದ ಸಂಜೆ 4.30 ಗಂಟೆಯವರೆಗೆ	ಎಂಬಿಎ	100	100

(Non-programmable calculators are allowed for M.E. / M.Tech / M.Arch examination only)

6) ಪಠ್ಯಕ್ರಮ: PGCET-2024 ರ ನೂತನ ಪಠ್ಯಕ್ರಮವನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ. **URL: https://cetonline.karnataka.gov.in/kea/pgcet24.**
7) ಆಸಕ್ತ ಅಭ್ಯರ್ಥಿಗಳು **ಪಿಜಿಸಿಇಟಿ–2024 ಕ್ಕೆ ದಿನಾಂಕ: 27–05–2024 ರಂದು ಬೆಳಿಗ್ಗೆ 11.00 ರಿಂದ ದಿನಾಂಕ: 17–06–2024 ರಂದು ರಾತ್ರಿ 11.59 ರೊಳಗಾಗಿ** ಆನ್‌ಲೈನ್ ಮೂಲಕ ನೋಂದಣಿ ಮಾಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ದಿನಾಂಕ: **18–06–2024 ರಂದು ಸಂಜೆ 6.00 ರೊಳಗೆ** ಶುಲ್ಕವನ್ನು ಪಾವತಿಸಬಹುದಾಗಿರುತ್ತದೆ. ಪಾವತಿಸಿರುವ ಶುಲ್ಕ ರಸೀದಿಯು ಧೃಡಪಟ್ಟ ನಂತರವೇ ಅಭ್ಯರ್ಥಿಗಳಿಗೆ ಪಿಜಿಸಿಇಟಿ – 2024 ಪರೀಕ್ಷೆಗೆ ಅಡ್ಮಿಶನ್ ಟಿಕೆಟ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅನುಮತಿಸಲಾಗುವುದು.
8) ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿರುವ ಮಾಹಿತಿ ಪುಸ್ತಕ, ಶೈಕ್ಷಣಿಕ ಅರ್ಹತೆ, ವಿವಿಧ ವರ್ಗಗಳ ಸೀಟುಗಳಿಗೆ ನಿಗದಿಪಡಿಸಿರುವ ಅರ್ಹತಾ ಮಾನದಂಡಗಳು ಮತ್ತು ಅಂತಹ ಸೀಟುಗಳಿಗೆ ನಿಗದಿಪಡಿಸಿರುವ ಅಭ್ಯರ್ಥಿಯ ಅರ್ಹತೆ ಹಾಗೂ ಇತ್ಯಾದಿ ಮಾನದಂಡಗಳನ್ನು ಕಡ್ಡಾಯವಾಗಿ ಓದಿಕೊಂಡು ನೋಂದಣಿ ಮಾಡಿಕೊಳ್ಳಲು ಸೂಚಿಸಿದೆ.
9) ಅಭ್ಯರ್ಥಿಗಳು ಹೊಂದಿರುವ ಯುಜಿ ಪದವಿಗಳ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳುವ ಸ್ನಾತಕೋತ್ತರ ಪದವಿಗಳು ಮತ್ತು ಪ್ರಾಧಿಕಾರವು ನೀಡುವ ಎಲ್ಲಾ ಪ್ರವೇಶಗಳು; ಸರ್ಕಾರ, ಸಂಬಂಧಿಸಿದ ವಿಶ್ವವಿದ್ಯಾನಿಲಯಗಳ ಹಾಗೂ ಅಪೆಕ್ಸ್ ಸಂಸ್ಥೆಗಳು ನೀಡುವ ಅನುಮೋದನೆಗೆ ಒಳಪಟ್ಟಿರುತ್ತದೆ.
10) ಪ್ರವೇಶಾತಿ ನಿಯಮಾವಳಿಗಳು, ವಿವರವಾದ ಅಧಿಸೂಚನೆ, ಅರ್ಹತಾ ಕಂಡಿಕೆಗಳು, ವಿವಿಧ ವೇಳಾಪಟ್ಟಿ ಇತ್ಯಾದಿಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಕೆಇಎ ವೆಬ್‌ಸೈಟ್: **https://kea.kar.nic.in** ಗೆ ಭೇಟಿ ನೀಡುವುದು.

ಸಹಿ/–
(ಹೆಚ್. ಪ್ರಸನ್ನ, ಭಾ.ಆ.ಸೇ)
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾ.ಪ್ರ/103/2024–25

ವಿಕೃತ ಕಾಯಿಲೆ ನಿರ್ನಾಮಕ್ಕೆ ಸಂಘಟಿತ ಕಾರ್ಯ ಯೋಜನೆ ರೂಪಿತವಾಗಲಿ

ನೊಂದವರಿಗೆ ಸಿಗಲಿ ಸಮಾಜದ ಸಾಂತ್ವನ

● ಸಂಧ್ಯಾ ಹೆಗಡೆ

ಹಾಸನ: ಹಳೆಬೀಡು, ಬೇಲೂರಿನಂತಹ ಐತಿಹಾಸಿಕ ಕ್ಷೇತ್ರಗಳ ಮೂಲಕ ಹೆಸರುವಾಸಿಯಾಗಿದ್ದ ಹಾಸನ ಜಿಲ್ಲೆ, ಘೋರ ಲೈಂಗಿಕ ದೌರ್ಜನ್ಯ ಪ್ರಕರಣದೊಂದಿಗೆ ನಾಡಿನಾದ್ಯಂತ ಗಮನ ಸೆಳೆದಿರುವುದು ಜಿಲ್ಲೆಯ ಜನರು ತಲೆತಗ್ಗಿಸುವಂತೆ ಮಾಡಿದೆ.

ಅಷ್ಟೇ ಇಲ್ಲ, ಇಡೀ ಸಾಮಾಜಿಕ, ರಾಜಕೀಯ ವ್ಯವಸ್ಥೆಯ ಮೇಲಿನ ನಂಬಿಕೆಯನ್ನೇ ಅಲ್ಲಾಡಿಸಿದೆ. ಕ್ಷೇತ್ರದ ಸಂಸದರಿಂದ ನಡೆದಿದೆ ಎನ್ನಲಾದ ಲೈಂಗಿಕ ದೌರ್ಜನ್ಯ ಪ್ರಕರಣವು ಅಧಿಕಾರಸ್ಥ ಎಲ್ಲರ ಮೇಲೆ ಅನುಮಾನ ಮೂಡಿಸುವ ವಾತಾವರಣ ಸೃಷ್ಟಿಸಿದೆ. ಈ ಹೊತ್ತಿನಲ್ಲಿ, ಇಡೀ ಪ್ರಕರಣವನ್ನು ರಾಜಕೀಯ ಮೇಲಾಟಕ್ಕೆ ಬಲಿಯಾಗಲು ಬಿಡದೆ, ಅಪರಾಧಿಯು ಶಿಕ್ಷೆಯ ಕುಣಿಕೆಯಿಂದ ತಪ್ಪಿಸಿಕೊಳ್ಳದಂತೆ ಆಡಳಿತ ವರ್ಗ ಪಾರದರ್ಶಕ ತನಿಖೆ ನಡೆಸಿ, ಸಂತ್ರಸ್ತರಾದವರಿಗೆ ನ್ಯಾಯ ಒದಗಿಸಬೇಕಾಗಿದೆ.

ಪ್ರಕರಣದಿಂದ ಸಂತ್ರಸ್ತರಾಗಿರುವ ಹೆಣ್ಣು ಜೀವಗಳು, ಅವರ ಕುಟುಂಬದವರು, ಒಡನಾಡಿಗಳು ಹಾಗೂ ಇಡೀ ಸಮಾಜ ದಲ್ಲಿ ವಿಶ್ವಾಸದ ಬೇರನ್ನು ಬಲಗೊಳಿಸಿ ಮತ್ತೆ ಅವರಲ್ಲಿ ಜೀವಚೈತನ್ಯ ತುಂಬಿ, ಭರವಸೆ ಬಿತ್ತಬೇಕಾದ ಹೊಣೆಗಾರಿಕೆ ಪ್ರಜ್ಞಾವಂತರ ಮೇಲಿದೆ. ಈ ನಿಟ್ಟಿನಲ್ಲಿ ನಾಡಿನ ವಿವಿಧ ಕ್ಷೇತ್ರಗಳ ಪ್ರಮುಖರು 'ಪ್ರಜಾವಾಣಿ' ಜೊತೆ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಧೈರ್ಯವೊಂದೇ ಮಾರ್ಗ: ಮೂಲತಃ ಹೆಣ್ಣು ಮಕ್ಕಳು ತಾವಾಗಿ ದಾರಿ ತಪ್ಪುವವರಲ್ಲ, ಅಪವಾದಗಳು ಇದ್ದೇ ಇರುತ್ತವೆ, ಬಿಡಿ. ಅವರ ಬದುಕಿನ ನೂರಾರು ಬಗೆಯ ಒತ್ತಡ ಅನಿವಾರ್ಯತೆ ಕಷ್ಟ, ಕಾರ್ಪಣ್ಯಗಳ ಪರಿಹಾರ ಮಾರ್ಗದಲ್ಲಿ ಅವರು ಸುಳಿಯೊಳಗೆ ಸಿಕ್ಕಿಬೀಳುವ ಪ್ರಸಂಗಗಳು ಉದ್ದಕ್ಕೂ ಎಷ್ಟು ಬೇಕು! ಅಂದಿನಿಂದಲೂ ಲಜ್ಜೆಗೇಡಿ ಪುರುಷರ ವಿಕೃತ ಪೈಶಾಚಿಕ ವರ್ತನೆಗಳ ಎದುರು ನಲುಗುವವಳು ಹೆಣ್ಣು, ಜೀವ ತೆರುವವಳು ಹೆಣ್ಣು, ಒಂದಿಷ್ಟೂ ಪರಿತಾಪ ಪಡದೆ ಮೆರೆಯುವವನು, ಸಿಕ್ಕಿಬಿದ್ದೂ ತಪ್ಪಿಸಿಕೊಳ್ಳುವವನು ಗಂಡು. ಸಮಾಜ ಹೆಣ್ಣನ್ನು ಬಗ್ಗುಬಡಿಯುವುದರಲ್ಲಿ ಮೈ ಮರೆಯುತ್ತಿದೆ ಎನ್ನುತ್ತಾರೆ ಸಾಹಿತಿ ವೈದೇಹಿ

'ಮಾನವೀಯ ಸ್ಪರ್ಶ ಇರಲಿ'

ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಾ, ಆ ಪೆನ್‌ಡ್ರೈವ್ ಹುಟ್ಟು ಪಡೆದ ಜಾಗದಿಂದಲೇ ದೂರ ದೂರ ಹೋಗುತ್ತ ದಿಕ್ಕು ತಪ್ಪುತ್ತಿದೆ, ಇದಾಗಬಾರದಿತ್ತು. ಎಲ್ಲಕ್ಕಿಂತ ಮೊದಲು ಪ್ರಜ್ವಲ್ ಭಾರತಕ್ಕೆ ಬರಬೇಕು. ಆತನ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದು ಹಾಗೂ ರೆಡ್ ಕಾರ್ನರ್ ನೋಟಿಸ್ ನೀಡುವುದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಬೇಕಿದೆ. ಕೇಂದ್ರ ಸರ್ಕಾರ ಇನ್ನೂ ವಿಳಂಬಿಸಿದರೆ, ಅದರ ನಡೆ ಅನುಮಾನಕ್ಕೆಡೆಗೊಡುತ್ತದೆ.

ಮನೋವಿಕಾರದ ಚಟಕಾಮದ ದೌರ್ಜನ್ಯಕ್ಕೆ ಬಲಿಪಶುಗಳಾದ ಕುಟುಂಬಗಳಲ್ಲಿ ಅಲ್ಲೋಲ ಕಲ್ಲೋಲ ಆಗುತ್ತಿರುವಾಗ, ಇದಕ್ಕೆಲ್ಲ ಮೂಲ ಕಾರಣನಾದವನು ಸಂಸದ ಪ್ರಜ್ವಲ್ ಎನ್ನುವುದನ್ನು ಗೌಣ ಮಾಡಿ, ಆತನ ಕುಟುಂಬದವರು- 'ಇದೆಲ್ಲಾ ತಮ್ಮ ಕುಟುಂಬದ ವಿರುದ್ಧ ಷಡ್ಯಂತ್ರ' ಎಂದು ಗೋಳಾಡುವುದು ಕ್ರೂರ ನಡೆ.

ನಾವು ಈ ಕ್ಷಣದಲ್ಲಿ ಬಲಿಪಶುಗಳಾದ, ಬೇಯುತ್ತಿರುವ ನೊಂದ ಜೀವಿಗಳು ಯಾರೇ ಆಗಿರಲಿ, ಅವರು ನಮ್ಮ ಕುಟುಂಬದಲ್ಲೇ ಒಬ್ಬರು ಎಂದು ಭಾವಿಸಿ, ನಮ್ಮ ನೋಟ, ನುಡಿ, ನಡೆಗಳಲ್ಲಿ ಮಾನವೀಯತೆ, ಅಂತಃಕರಣವನ್ನು ಪಳಗಿಸಿಕೊಳ್ಳಬೇಕಾಗಿದೆ.

ದೇವನೂರ ಮಹಾದೇವ, ಸಾಹಿತಿ

'ಗಂಡು ಮಕ್ಕಳಿಗೂ ನೈತಿಕ ಶಿಕ್ಷಣ ಅಗತ್ಯ'

ಸಂತ್ರಸ್ತೆಯರ ಸಂಕಟ

'ಜನರು ಬಟ್ಟೆ ಬದಲಾಯಿಸುವಾಗ ಇಣುಕುವುದು, ಲೈಂಗಿಕ ಕ್ರಿಯೆಯನ್ನು ಕದ್ದು ನೋಡುವುದು, ಲೈಂಗಿಕ ಕ್ರಿಯೆ ವಿಡಿಯೊ, ಚಿತ್ರಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದು ಕ್ರಿಮಿನಲ್ ಅಪರಾಧ. ಇದಕ್ಕೆ ಕ್ಷಮೆ ಇರುವುದಿಲ್ಲ. ವೈದ್ಯಕೀಯ ವಿಜ್ಞಾನದಲ್ಲಿ ಇಂತಹ ದುರಭ್ಯಾಸಕ್ಕೆ ವೋಯೆರಿಸ್ಟಿಕ್ ಡಿಸ್‌ಆರ್ಡರ್ (voyeuristic disorder) ಎನ್ನುತ್ತಾರೆ. ಆತ್ಮವಿಶ್ವಾಸ, ಆತ್ಮಗೌರವದ ಕೊರತೆ, ಸಮಾಜ ಘಾತುಕ ವ್ಯಕ್ತಿತ್ವದಿಂದಲೂ ಇಂತಹ ಕಾಯಿಲೆ ಬರಬಹುದು' ಎನ್ನುತ್ತಾರೆ ಬೆಂಗಳೂರಿನ ಮಣಿಪಾಲ ಆಸ್ಪತ್ರೆಯ ಕನ್ಸಲ್ಟೆಂಟ್ ಕ್ಲಿನಿಕಲ್ ಸೈಕಾಲಜಿಸ್ಟ್ ಡಾ. ಸಿ.ಆರ್. ಸತೀಶ್ ಕುಮಾರ್.

ಅರಿವು ಮೂಡುವ ಮುನ್ನ, ಚಿಕ್ಕಂದಿನಲ್ಲಿ ಲೈಂಗಿಕ ಕ್ರಿಯೆ, ನಗ್ನ ಚಿತ್ರಗಳ ವೀಕ್ಷಣೆ, ದೈಹಿಕ ದೌರ್ಜನ್ಯಕ್ಕೆ ಒಳಗಾದರೂ ಇಂತಹ ಕಾಯಿಲೆ ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಇದಕ್ಕೆ ಕೌನ್ಸೆಲಿಂಗ್ ಜೊತೆಗೆ ವೈದ್ಯಕೀಯ ಚಿಕಿತ್ಸೆ ಅಗತ್ಯವಿರುತ್ತದೆ ಎಂಬುದು ಅವರ ಸಲಹೆ.ನೈತಿಕ, ಮೌಲಿಕ ಶಿಕ್ಷಣ ಹೆಣ್ಣು ಮಕ್ಕಳಿಗೆ ಸೀಮಿತವಲ್ಲ, ಇದೇ ಶಿಕ್ಷಣವನ್ನು ಪಾಲಕರು ಗಂಡು ಮಕ್ಕಳಿಗೂ ನೀಡಬೇಕು. ಅತಿಯಾದ ಮುದ್ದು, ಶಿಸ್ತಿಲ್ಲದ ಜೀವನ, ವ್ಯಸನ ಇವೆಲ್ಲ ಹರೆಯದಲ್ಲಿ ಅನಾಹುತಕ್ಕೆ ಎಡೆಮಾಡಿಕೊಡುತ್ತವೆ. ಸಣ್ಣ ವಯಸ್ಸಿನಲ್ಲಿ ಮಕ್ಕಳಿಗೆ ಪಾಲಕರ ಮಾರ್ಗದರ್ಶನದ ಕೊರತೆಯಾದರೆ, ಅಪರಾಧ ಕೃತ್ಯಗಳು ಹೆಚ್ಚುತ್ತವೆ ಎಂದು ಎಚ್ಚರಿಸಿದರು.

'ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು'

ಯಾವ ಸಮಾಜ ದೌರ್ಜನ್ಯಕ್ಕೆ ಒಳಗಾದ ಹೆಣ್ಣುಮಕ್ಕಳನ್ನು ಅರ್ಥ ಮಾಡಿಕೊಂಡಿದೆ? ಆದರದಿಂದ ಕಂಡಿದೆ? ಸ್ತ್ರೀಪರ ಸಮಾಜ ಹುಟ್ಟುವವರೆಗೂ ಇದು ಹೀಗೆಯೇ ನಡೆಯುತ್ತದೆ. ಇದನ್ನು ಅರಿತ ಹೆಣ್ಣು, ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು. ಅವಳು ಧೈರ್ಯ ತಾಳಬೇಕಾದ್ದು ಈ ಸಮಯದ ತುರ್ತು. ಜೀವ ಕಳೆದುಕೊಳ್ಳಬೇಕಾದವರು ನಾಚಿಕೆ, ಮರ್ಯಾದೆ ಇಲ್ಲದೆ ಸರೋವರದಲ್ಲಿ ಅಡಗುತ್ತಾರೆ. ಹೆಣ್ಣು ಧೈರ್ಯವಂತೆ. ಪರಿಸ್ಥಿತಿಯನ್ನು ಸ್ತಬ್ಧ ಮನಸ್ಥಿತಿಯಲ್ಲಿ ಎದುರಿಸಬೇಕು. ತನ್ನೊಳಗೇ ಚಿಂತಿಸಬೇಕು. ತನಗೆ ತಾನೇ ಸಂತೈಸಿಕೊಳ್ಳಬೇಕು. ದುರ್ಬಲ ಗೊಳಿಸುವ ಸಮಾಜದ ಬಗ್ಗೆ ನಿರ್ಲಿಪ್ತವಾಗಿರಬೇಕಾದ ಸದ್ಯಸ್ಥಿತಿ ಅವಳದು. ...ಇದು ಸುಲಭವಲ್ಲ, ನಿಜ. ಆದರೆ ಹೆಣ್ಣಿನ ಬದುಕೇ ಸುಲಭವಲ್ಲವಲ್ಲ?

ವೈದೇಹಿ, ಸಾಹಿತಿ

'ಮನೆತನದ ಎಚ್ಚರ ಇರಲಿ'

ಇಂತಹ ಪ್ರಸಂಗಗಳು ಹಿಂದೆಯೂ ಸಾಕಷ್ಟು ನಡೆದಿವೆ. ಕೆಲವು ದಿನ ಬಾಯಲ್ಲಿ ಹರಿದಾಡಬಹುದು, ಜನರು ಬೇಗ ಮರೆಯುತ್ತಾರೆ. ಚಿಕ್ಕವಯಸ್ಸಿನಲ್ಲಿ ಅಧಿಕಾರ, ದುಡ್ಡು ಸಿಕ್ಕಿದರೆ ದಾರಿ ತಪ್ಪುವ ಸಾಧ್ಯತೆ ಇರುತ್ತದೆ. ಅಧಿಕಾರದ ದರ್ಪದಲ್ಲಿ ಮುಳುಗಿದರೆ ಅನಾಹುತಗಳು ಸಂಭವಿಸುತ್ತವೆ. ಅಧಿಕಾರದಲ್ಲಿದ್ದವರು ಮೈಯೆಲ್ಲ ಕಣ್ಣಾಗಿದ್ದು ತಪ್ಪು ಹೆಜ್ಜೆ ಇಡದಂತೆ ಎಚ್ಚರವಹಿಸಬೇಕು. ಇದಕ್ಕಿಂತ ಮುಖ್ಯವಾಗಿ ತಮ್ಮ ಮನೆತನದ ಪ್ರಜ್ಞೆ ಸದಾ ಜಾಗೃತವಾಗಿದ್ದರೆ, ತಮ್ಮ ತಪ್ಪಿನಿಂದ ಹಿರಿಯರು ನೊಂದುಕೊಳ್ಳಬಹುದೆಂಬ ಅರಿವಿದ್ದರೆ, ಇಂತಹ ಕೃತ್ಯಗಳು ಘಟಿಸುತ್ತಿರಲಿಲ್ಲ.

ಲೀಲಾದೇವಿ ಪ್ರಸಾದ್, ರಾಜಕಾರಣಿ

'ಕಾರುಣ್ಯದ ನೋಟ ಸಮಾಜಕ್ಕೆ ಬರಲಿ'

ಪ್ರಕೃತಿಯ ಮನೋರಚನೆಗೆ ಹತ್ತಿರದ, ಚಲನಶೀಲ, ಸಶಕ್ತ ಸೃಷ್ಟಿ- ಹೆಣ್ಣು! ಗಾಸಿಗೊಳಗಾದಾಗಲೂ, ನಿಧಾನವಾಗಿಯಾದರೂ ತನ್ನಷ್ಟಕ್ಕೇ ಅದಮ್ಯ ಶಕ್ತಿಯಿಂದ ಪುಟಿದೇಳಲು ಶಕ್ತಳು. ಆದರೆ ಅನಾದಿಯಿಂದ ಪುರುಷಾಹಂಕಾರಕ್ಕೆ ಸಿಕ್ಕು ರೋಗಗ್ರಸ್ತವಾಗಿರುವ ನಮ್ಮ ಸಮಾಜದ ಹಲವು ವಿಕೃತ ಕಾಯಿಲೆ ನಿರ್ನಾಮ ಮಾಡಲು- ಸರ್ಕಾರ, ನ್ಯಾಯಾಂಗ, ಆಡಳಿತ ವ್ಯವಸ್ಥೆ, ಸಂಘಟನೆಗಳು... ಇನ್ನಾದರೂ ಹಲವು ಆಯಾಮಗಳಲ್ಲಿ ಸಶಕ್ತ ಕಾರ್ಯಯೋಜನೆ ರೂಪಿಸಬೇಕು. ಲೈಂಗಿಕ ದೌರ್ಜನ್ಯಗಳು ಘಟಿಸದಂತೆ ತಡೆಯಲು, ಈಗಾಗಲೇ ಇರುವ ಸರ್ಕಾರಿ ಆದೇಶಗಳು, ನಿಯಮಗಳು ವಿಕೇಂದ್ರೀಕೃತವಾಗಿ ಕಡ್ಡಾಯವಾಗಿ ಜಾರಿಯಾಗಬೇಕು. ಶಿಕ್ಷಣದಲ್ಲಿ ಲಿಂಗ ಸಮಾನತೆ, ಸೂಕ್ಷ್ಮತೆ, ಸಂವೇದನೆಗಳ ಪರಿಣಾಮಕಾರಿ ಅಳವಡಿಕೆಯಾಗಬೇಕು. ದೌರ್ಜನ್ಯಕ್ಕೆ ಒಳಗಾದ ಹೆಣ್ಣು ನಿರ್ಭೀತಿಯಿಂದ ಪ್ರಕರಣ ದಾಖಲಿಸುವ ವಾತಾವರಣ ಉಂಟುಮಾಡಿ, ತುರ್ತಾಗಿ ನಿಷ್ಪಕ್ಷಪಾತ ವಿಚಾರಣೆ ನಡೆದು, ಅಪರಾಧಿಗೆ ಶಿಕ್ಷೆಯಾಗಬೇಕು. ಲೈಂಗಿಕ ದೌರ್ಜನ್ಯಕ್ಕೊಳಗಾದವರನ್ನು ಕಾರುಣ್ಯದಿಂದ ನೋಡುವ ನೋಟ, ಮೊದಲಿಗೆ ಸಮಾಜಕ್ಕೆ ಬರಬೇಕು.

ರೂಪ ಹಾಸನ, ಹೋರಾಟಗಾರ್ತಿ

ಶರಣಾಗು: ಗೌಡರ ತಾಕೀತು

ಒಂದನೇ ಪುಟದಿಂದ..

'ನಾನು ಅಥವಾ ನನ್ನ ಕುಟುಂಬ ವಿಚಾರಣೆಯಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಯಾವುದೇ ಭಾವನೆಗೆ ಸಿಲುಕದೆ, ಅವನು ಎಸಗಿದ್ದಾನೆ ಎನ್ನಲಾದ ಕೃತ್ಯಗಳು ಮತ್ತು ತಪ್ಪುಗಳಿಂದ ನೊಂದಿರುವ, ಅನ್ಯಾಯಕ್ಕೆ ಒಳಗಾಗಿರುವ ಎಲ್ಲರಿಗೂ ನ್ಯಾಯ ಸಿಗಬೇಕು. ಜನರ ವಿಶ್ವಾಸವನ್ನು ಮರಳಿ ಪಡೆಯುವುದಷ್ಟೆ ನನ್ನ ಗುರಿ. ಜನರು ಆರು ದಶಕಗಳ ಕಾಲ ನನ್ನ ರಾಜಕೀಯ ಜೀವನದುದ್ದಕ್ಕೂ ಜತೆಗೆ ನಿಂತಿದ್ದಾರೆ. ಅವರಿಗೆ ನಾನು ಸದಾ ಋಣಿ. ಬದುಕಿರುವವರೆಗೂ ಅವರ ಹಿತದ ವಿರುದ್ಧ ನಡೆದುಕೊಳ್ಳುವುದಿಲ್ಲ' ಎಂದಿದ್ದಾರೆ.

'ಆತ ನನಗೆ, ನನ್ನ ಕುಟುಂಬಕ್ಕೆ, ನನ್ನ ಸಹೋದ್ಯೋಗಿಗಳಿಗೆ,ಸ್ನೇಹಿತರಿಗೆಮತ್ತು ಪಕ್ಷದ ಕಾರ್ಯಕರ್ತರಿಗೆ ತಂದೊಡ್ಡಿರುವ ಆಘಾತ ಮತ್ತು ನೋವಿನಿಂದ ಹೊರಬಂದು ಮಾತನಾಡಲು ಕೊಂಚ ಸಮಯ ಹಿಡಿಯಿತು. ನಾನು ಈಗಾಗಲೇ ಸ್ಪಷ್ಟಪಡಿಸಿರುವ ಹಾಗೆ ಕಾನೂನಿನ ಪ್ರಕಾರ ಅವನು ತಪ್ಪಿತಸ್ಥನೆಂದಾದರೆ, ಅತ್ಯಂತ ಕಠಿಣ ಶಿಕ್ಷೆ ವಿಧಿಸಬೇಕು. ನನ್ನ ಈ ನಿಲುವನ್ನು ಎಚ್. ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

'ಕೆಲವು ದಿನಗಳಿಂದ ಜನರು ನನ್ನ ಮತ್ತು ನನ್ನ ಕುಟುಂಬದ ಕುರಿತು ಅತ್ಯಂತ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ನಾನು ಅವರ ಮಾತುಗಳನ್ನು ನಿಲ್ಲಿಸುವ ಪ್ರಯತ್ನ ಮಾಡುವುದಿಲ್ಲ. ಟೀಕಿಸುವುದಿಲ್ಲ. ಈ ಹಗರಣದ ಎಲ್ಲಾ ಸತ್ಯಾಂಶಗಳು ಹೊರಬರುವವರೆಗೂ ಅವರು ತಾಳ್ಮೆಯಿಂದ ಕಾಯಬೇಕಿತ್ತು ಎಂದು ವಾದಕ್ಕೆ ಇಳಿಯುವುದಿಲ್ಲ. ಆದರೆ, ಪ್ರಜ್ವಲ್ ಚಟುವಟಿಕೆಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇರಲಿಲ್ಲ. ಈಗಿನ ಚಲನವಲನ ಮತ್ತು ಅವನ ವಿದೇಶ ಯಾತ್ರೆಯ ಬಗ್ಗೆಯೂ ತಿಳಿದಿಲ್ಲ. ಈ ಕುರಿತು ನನ್ನ ಆತ್ಮಸಾಕ್ಷಿಗೆ ಮಾತ್ರ ಉತ್ತರಿಸಬಲ್ಲೆ. ಆ ದೇವರಿಗೆ ಎಲ್ಲಾ ಸತ್ಯ ತಿಳಿದಿದೆ ಎನ್ನುವ ನಂಬಿಕೆ ಇದೆ' ಎಂದಿದ್ದಾರೆ.

'ಘಟನೆಯ ನಂತರ ನಡೆದ ರಾಜಕೀಯ ಪಿತೂರಿಗಳು, ಚಿತಾವಣೆ, ಉತ್ಪ್ರೇಕ್ಷೆ ಮತ್ತು ಮಿಥ್ಯಾರೋಪಗಳ ಬಗ್ಗೆ ಈಗ ವಿಶ್ಲೇಷಣೆ ಬೇಡ, ಅವುಗಳನ್ನು ಮಾಡಿದವರು ದೇವರಿಗೆ ಉತ್ತರಿಸಬೇಕಾಗುತ್ತದೆ. ಎಸಗಿದ ಕೃತ್ಯಗಳಿಗೆ ಸೂಕ್ತ ಬೆಲೆ ತೆರಬೇಕಾಗುತ್ತದೆ. ನನ್ನ ಸತ್ಯ ಮತ್ತು ನೋವಿನ ಹೊರೆಯನ್ನು ಭಗವಂತನ ಪದತಲದಲ್ಲಿ ಇರಿಸಿದ್ದೇನೆ' ಎಂದು ಹೇಳಿದ್ದಾರೆ.

ಭವಾನಿ ಕಾರು ಚಾಲಕನಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಹೊಳೆನರಸೀಪುರ (ಹಾಸನ): ಶಾಸಕ ಎಚ್.ಡಿ. ರೇವಣ್ಣ ವಿರುದ್ಧ ದಾಖಲಾಗಿರುವ ಮಹಿಳೆಯೊಬ್ಬರ ಅಪಹರಣ ಪ್ರಕರಣದಲ್ಲಿ ಬಳಸಿದ್ದ ಕಾರಿನ ಚಾಲಕ ಅಜಿತ್‌ಗೆ ಎಸ್‌ಐಟಿ ಅಧಿಕಾರಿಗಳು ನೋಟೀಸ್ ಜಾರಿ ಮಾಡಿದ್ದಾರೆ.

'ಭವಾನಿ ರೇವಣ್ಣ ಅವರ ಕಾರಿನ ಚಾಲಕನಾಗಿದ್ದ' ಎಂದು ಹೇಳಲಾಗುತ್ತಿರುವ ಅಜಿತ್ ಅವರ ಮೂಡಲಹಿಪ್ಪೆ ಮನೆಗೆ ತೆರಳಿದ ಎಸ್.ಐ.ಟಿ ಅಧಿಕಾರಿಗಳು, ನೋಟಿಸ್ ಜಾರಿ ಮಾಡಿದ್ದಾರೆ. ಈಗಾಗಲೇ ಅಜಿತ್ ಅವರ ಮನೆಗೆ ಒಂದು ಬಾರಿ ನೋಟೀಸ್ ನೀಡಲಾಗಿತ್ತು.

ಅಜಿತ್

ಆದರೆ, ಆತ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದಾನೆ ಎನ್ನಲಾಗುತ್ತಿದೆ.

'ಮಹಿಳೆ ಅಪಹರಣ ಪ್ರಕರಣದ ತನಿಖೆ ಚುರುಕುಗೊಂಡಿದ್ದು, ಇನ್ನೂ ಅನೇಕರಿಗೆ ಎಸ್‌ಐಟಿ ನೋಟೀಸ್ ನೀಡಲು ಸಿದ್ಧತೆ ನಡೆಸಿದೆ' ಎಂದು ಮೂಲಗಳು ತಿಳಿಸಿದೆ.

ಅಂತರ್ಜಾತಿ ವಿವಾಹಿತರ ವೆಬ್‌ಸೈಟ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಮೈಸೂರು: ರಾಜ್ಯದ ಅಂತರ್ಜಾತಿ ವಿವಾಹಿತರನ್ನು ಒಂದೇ ವೇದಿಕೆಯಡಿ ತರಲು ರೂಪಿಸಲಾದ ವೆಬ್‌ಸೈಟ್ www.janaspandana.org.in ಉದ್ಘಾಟನೆಗೆ ನಗರದಲ್ಲಿ ಗುರುವಾರ ನೂರಾರು ವಿವಾಹಿತರು ಸಾಕ್ಷಿಯಾದರು.

ಕುವೆಂಪುನಗರದ ಚಿಕ್ಕಮ್ಮ ನಿಕೇತನ ಕಲ್ಯಾಣ ಮಂಟಪದಲ್ಲಿ ಜನಸ್ಪಂದನಾ ಟ್ರಸ್ಟ್ ಹಾಗೂ ಮಾನವ ಮಂಟಪ ವೇದಿಕೆ ಆಯೋಜಿಸಿದ್ದ ಅಂತರ್ಜಾತಿ ವಿವಾಹಿತರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿವಾಹಿತರ ನೋಂದಣಿ ಮಾಡುವ ವೆಬ್ ಸೈಟ್ ಲೋಕಾರ್ಪಣೆ ಮಾಡಿದರು.

ನಂತರ ಮಾತನಾಡಿ, 'ಇಲ್ಲಿ ಸೇರಿರುವ ಎಲ್ಲರನ್ನೂ ನೋಡುತ್ತಿದ್ದರೆ ಸಂತೋಷವಾಗುತ್ತದೆ. ಸಮಸಮಾಜ ನಿರ್ಮಿಸುವ ಮನಸ್ಸಿರುವ ನಿಮಗೆ ನನ್ನ ಧನ್ಯವಾದ' ಎಂದು ಕೈ ಮುಗಿದರು.

'ನಾನೂ ಅಂತರ್ಜಾತಿ ಮದುವೆ ಆಗಬೇಕೆಂದಿದ್ದೆ. ಸ್ನೇಹಿತೆ ಹಾಗೂ ಅವರ ಮನೆಯವರು ಒಪ್ಪಲಿಲ್ಲ. ಅನಿವಾರ್ಯವಾಗಿ ಜಾತಿಯಲ್ಲೇ ಮದುವೆಯಾಗಬೇಕಾಯಿತು. ಹೀಗಾಗಿ, ಈ ವೇದಿಕೆಯಲ್ಲಿ ಮಾತನಾಡುವ ನೈತಿಕತೆ ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ, ಅಂತರ್ಜಾತಿ ಮದುವೆಗಳಿಗೆ ಸರ್ಕಾರದ ಸಂಪೂರ್ಣ ಬೆಂಬಲವಿದೆ' ಎಂದರು.

'ಪ್ರೀತಿಸಿ ಮದುವೆಯಾಗುವವರಿಗೆ ಸಾಮಾಜಿಕ ಹಾಗೂ ಆರ್ಥಿಕ ಸಬಲತೆ ಬರಬೇಕು. ಶಿಕ್ಷಣ ಪಡೆದು ವಿದ್ಯಾವಂತರಾಗಬೇಕು. ವಿಶ್ವಮಾನವರಾಗಲು ಪ್ರಯತ್ನಿಸಬೇಕು. ಅಲ್ಪಮಾನವರಾಗಬಾರದು. ಆಗ, ಈ ಜಡವಾದ ಸಮಾಜಕ್ಕೆ ಚಲನೆ ಸಿಗುತ್ತದೆ' ಎಂದರು.

ಮೈಸೂರಿನಲ್ಲಿ ಅಂತರ್ಜಾತಿ ವಿವಾಹಿತರನ್ನು ಒಂದೇ ವೇದಿಕೆಯಡಿ ತರಲು ರೂಪಿಸಲಾದ ವೆಬ್‌ಸೈಟ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಚಾಲನೆ ನೀಡಿದರು. ಕೆಪಿಸಿಸಿ ವಕ್ತಾರ ಎಚ್.ಎ.ವೆಂಕಟೇಶ್, ಲೇಖಕ ಪ್ರೊ.ಕಾಳೇಗೌಡ ನಾಗವಾರ, ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ಲೇಖಕ ಜಿ.ಪಿ.ಬಸವರಾಜು, ಜನಸ್ಪಂದನ ಟ್ರಸ್ಟ್ ಅಧ್ಯಕ್ಷ ಎಂ.ಕೆ.ಸೋಮಶೇಖರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್‌.ಸಿ.ಮಹದೇವಪ್ಪ, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್ ಹಾಜರಿದ್ದರು —ಪ್ರಜಾವಾಣಿ ಚಿತ್ರ

ಲೆಕ್ಕ ಸಿಕ್ಕಿಲ್ಲ: 'ರಾಜ್ಯದಲ್ಲಿ ಎಷ್ಟು ಅಂತರ್ಜಾತಿ ವಿವಾಹಿತರಿದ್ದಾರೆಂಬ ಲೆಕ್ಕವಿಲ್ಲ. ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿಕೊಳ್ಳುವುದರಿಂದ ನಮ್ಮದೇ ಸಮಾಜ ರೂಪುಗೊಳ್ಳಲು ಸಾಧ್ಯ. ತಿಂಗಳಲ್ಲಿಯೇ ರಾಜ್ಯ ಮಟ್ಟದ ಸಮಾವೇಶ ಮಾಡಲಾಗುವುದು' ಎಂದು ಮಾನವಮಂಟಪ ವೇದಿಕೆ ಅಧ್ಯಕ್ಷ ಪ್ರೊ.ಕಾಳಚನ್ನೇಗೌಡ ಹೇಳಿದರು.

'ಅಂತರ್ಜಾತಿ ವಿವಾಹಿತರ ಮಕ್ಕಳಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ವಿಶೇಷ ಮೀಸಲಾತಿ ನೀಡಬೇಕು' ಎಂದೂ ಆಗ್ರಹಿಸಿದರು.

ನಿವೃತ್ತ ಪ್ರಾಂಶುಪಾಲ ವಜ್ರಪ್ಪ ಮಾತನಾಡಿ, 'ಆರ್ಥಿಕ, ಸಾಮಾಜಿಕ ಭದ್ರತೆಯಿಲ್ಲದೇ ಅಂತರ್ಜಾತಿ ವಿವಾಹಿತರು ಸತ್ತುಹೋಗಿದ್ದಾರೆ. ಮರ್ಯಾದೆಗೇಡು ಹತ್ಯೆಗೀಡಾಗಿದ್ದಾರೆ. ಮಕ್ಕಳನ್ನು ಶಾಲೆಗೆ ಸೇರಿಸುವಾಗ ತಮ್ಮ ಜಾತಿಯ ಹೆಸರು ಬರೆಯುವುದಿಲ್ಲ ಎಂಬ ಹಕ್ಕು ಇಲ್ಲವಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್. ಸಿ.ಮಹದೇವಪ್ಪ, ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕೆಪಿಸಿಸಿ ವಕ್ತಾರ ಎಚ್.ಎ.ವೆಂಕಟೇಶ್, ಜನಸ್ಪಂದನ ಟ್ರಸ್ಟ್ ಅಧ್ಯಕ್ಷ ಎಂ.ಕೆ. ಸೋಮಶೇಖರ್, ಲೇಖಕ ಜಿ.ಪಿ. ಬಸವರಾಜ್, ಪ್ರೊ.ಕಾಳೇಗೌಡ ನಾಗವಾರ, ಸ್ವಾಮಿ ಆನಂದ, ಸಿ.ಬಸವಲಿಂಗಯ್ಯ, ಧನಂಜಯ ಎಲಿಯೂರು, ಉಗ್ರನರಸಿಂಹೇಗೌಡ, ಸಬಿಹಾ ಭೂಮಿಗೌಡ, ಕಮಲ್ ಗೋಪಿನಾಥ್, ಎನ್.ಎಸ್.ಗೋಪಿನಾಥ್, ಎಚ್. ಜನಾರ್ಧನ್ ಹಾಜರಿದ್ದರು.

8 ದಿನ ಕತ್ತೆ ಕಾಯುತ್ತಿದ್ದರಾ: ಜೋಶಿ ತರಾಟೆ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾದ ಪೆನ್‌ಡ್ರೈವ್ ಹೊರಬಂದಿದ್ದು ಏಪ್ರಿಲ್ 21ಕ್ಕೆ. ಪ್ರಜ್ವಲ್ ಅವರು ದೇಶ ಬಿಟ್ಟು ಹೋಗಿದ್ದು ಏ.28 ಅಥವಾ 29ಕ್ಕೆ. ಈ ಎಂಟು ದಿನಗಳವರೆಗೆ ಇವರೇನು ಕತ್ತೆ ಕಾಯುತ್ತಿದ್ದರಾ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾನು ಕೇಳುವ ಪ್ರಶ್ನೆಗೆ ಇದುವರೆಗೂ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ, ಗೃಹ ಸಚಿವ ಜಿ.ಪರಮೇಶ್ವರ ಅವರು ಉತ್ತರ ಕೊಟ್ಟಿಲ್ಲ. ಪೆನ್‌ಡ್ರೈವ್ ಹೊರಬಂದ ತಕ್ಷಣವೇ ಪ್ರಕರಣವನ್ನು ದಾಖಲಿಸಿಕೊಂಡು, ಏಕೆ ಬಂಧಿಸಲಿಲ್ಲ' ಎಂದು ಪ್ರಶ್ನಿಸಿದರು.

'ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದತಿಗೆ ಅದರದ್ದೇ ಆದ ಪ್ರಕ್ರಿಯೆಗಳಿವೆ. ನ್ಯಾಯಾಲಯಕ್ಕೆ ಈಗಾಗಲೇ ಅರ್ಜಿ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರ ಕಾನೂನು ಪ್ರಕಾರ ಏನೆಲ್ಲ ಮಾಡಬೇಕೋ ಅದೆಲ್ಲವನ್ನೂ ಮಾಡುತ್ತಿದೆ. ರಾಜ್ಯ ಸರ್ಕಾರಕ್ಕೆ ಸಹಕಾರ ನೀಡಲು ತಯಾರಿದೆ' ಎಂದು ಹೇಳಿದರು.

ರಾಜೀನಾಮೆ ಕೊಟ್ಟು ಚುನಾವಣೆಗೆ ಬನ್ನಿ: ಪೂಂಜಗೆ ಕಾಂಗ್ರೆಸ್ ಸವಾಲು

ಪ್ರಜಾವಾಣಿ ವಾರ್ತೆ

ಮಂಗಳೂರು: 'ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದ್ದ ಮತ್ತು ಸ್ಫೋಟಕಗಳನ್ನು ಇರಿಸಿಕೊಂಡಿದ್ದ 'ರೌಡಿ ಶೀಟರ್' ಪರವಾಗಿ ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಬೀದಿಗೆ ಇಳಿದಿದ್ದಾರೆ' ಎಂದು ಆರೋಪಿಸಿರುವ ಕಾಂಗ್ರೆಸ್, ರಾಜಿನಾಮೆ ಕೊಟ್ಟು ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಅವರಿಗೆ ಸವಾಲು ಹಾಕಿದೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹರೀಶ್ ಕುಮಾರ್, 'ಹರೀಶ್ ಪೂಂಜ ಅಧಿಕಾರಿಗಳ ಕೆಲಸಕ್ಕೆ ಅಡ್ಡಿಪಡಿಸಿದ್ದಾರೆ. ಪೊಲೀಸರು ನೋಟಿಸ್ ಕೊಡಲು ಹೋದಾಗ ಬಂಧಿಸಲು ಬಂದಿದ್ದಾರೆ ಎಂದು ಸುಳ್ಳು ಸುದ್ದಿ ಹಬ್ಬಿದ್ದಾರೆ' ಎಂದು ದೂರಿದರು.

'ಠಾಣೆಯಲ್ಲಿ ಹರೀಶ್ ಪೂಂಜ ಪ್ರಚೋದನಕಾರಿ ಮಾತುಗಳನ್ನಾಡಿದ್ದಾರೆ. ಆ ಮೂಲಕ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವಂತೆ ಮಾಡಿದ್ದಾರೆ. ಬೆಳ್ತಂಗಡಿ ಕ್ಷೇತ್ರಕ್ಕೇ ಕಪ್ಪು ಮಸಿ ಬಳಿದಿದ್ದಾರೆ' ಎಂದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ ಮಾತನಾಡಿ, 'ಹರೀಶ್ ಪೂಂಜ ಅವರ ಬೇಜವಾಬ್ದಾರಿ ವರ್ತನೆಗೆ ರಾಜ್ಯದ ಬಿಜೆಪಿ ನಾಯಕರು ಬೆಂಬಲ ನೀಡಿರುವುದು ಬೇಸರದ ವಿಷಯ' ಎಂದರು.

ಬೆಂಗಳೂರಿಗೆ ತೆರಳಿದ ಶಾಸಕ

ಬೆಳ್ತಂಗಡಿ: ಪೊಲೀಸರ ಕರ್ತವ್ಯಕ್ಕೆ ಅಡ್ಡಿ, ಬೆದರಿಕೆ ಮತ್ತು ಅನುಮತಿ ಪಡೆಯದೇ ಪ್ರತಿಭಟನೆ ನಡೆಸಿದ ಆರೋಪಕ್ಕೆ ಗುರಿಯಾಗಿರುವ ಹರೀಶ್ ಪೂಂಜ ಮೇಲೆ ದಾಖಲಾಗಿರುವ ಪ್ರಕರಣಗಳು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ವರ್ಗವಾಗಿವೆ. ಇದೇ ವೇಳೆ ಶಾಸಕರು ಗುರುವಾರ ಬೆಂಗಳೂರಿಗೆ ತೆರಳಿದ್ದಾರೆ.

ಹರೀಶ್ ಪೂಂಜ

'ವೈಯಕ್ತಿಕ ಕಾರಣಕ್ಕೆ ಬೆಂಗಳೂರಿಗೆ ಬಂದಿದ್ದೇನೆ' ಎಂದು ಹರೀಶ್ ಪೂಂಜ 'ಪ್ರಜಾವಾಣಿ'ಗೆ ತಿಳಿಸಿದರು.

ಅಕ್ರಮ ಗಣಿಗಾರಿಕೆ ಹಿನ್ನೆಲೆಯಲ್ಲಿ ಬಂಧನಕ್ಕೆ ಒಳಗಾಗಿದ್ದ ಬಿಜೆಪಿ ಮಂಡಲ ಅಧ್ಯಕ್ಷ ಶಶಿರಾಜ್ ಶೆಟ್ಟಿ ಬಿಡುಗಡೆಗೆ ಒತ್ತಾಯಿಸಿ ಹರೀಶ್ ಪೂಂಜ ಪೊಲೀಸರಿಗೆ ಬೆದರಿಕೆ ಒಡ್ಡಿದ್ದರು ಎಂದು ಆರೋಪಿಸಿ ಅವರ ಮೇಲೆ ಮೇ 19 ಮತ್ತು 20ರಂದು ಎರಡು ಪ್ರಕರಣಗಳು ದಾಖಲಾಗಿದ್ದವು. ಶಾಸಕರನ್ನು ವಿಚಾರಣೆಗೆ ಕರೆತರಲು ಪೊಲೀಸರು ಬುಧವಾರ ಅವರ ಮನೆಗೆ ತೆರಳಿದ ನಂತರ ದಿನವಿಡೀ ನಾಟಕೀಯ ಬೆಳವಣಿಗೆಗಳು ನಡೆದಿದ್ದವು. ಕೊನೆಯಲ್ಲಿ ಶಾಸಕರು ಪೊಲೀಸ್ ಠಾಣೆಗೆ ಹಾಜರಾಗಿದ್ದರು. ಅವರನ್ನು ಠಾಣಾ ಜಾಮೀನು ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಎಸ್ಪಿ ತಿಳಿಸಿದ್ದರು.

> ರಾಜ್ಯದಲ್ಲಿ ಪೊಲೀಸರು ಅಕ್ರಮವಾಗಿ ಪ್ರಕರಣ ದಾಖಲಿಸಿದರೂ ಪ್ರಶ್ನೆ ಮಾಡುವಂತಿಲ್ಲವೇ?
> **ಕೋಟ ಶ್ರೀನಿವಾಸ ಪೂಜಾರಿ,** ವಿಧಾನ ಪರಿಷತ್ ವಿಪಕ್ಷ ನಾಯಕ

'ಪ್ರಕರಣಗಳು ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ವರ್ಗ ಆಗಲಿವೆ. ಇದರಲ್ಲಿ ನಮ್ಮ ಪಾತ್ರವೇನೂ ಇಲ್ಲ' ಎಂದು ಬೆಳ್ತಂಗಡಿ ಠಾಣೆಯ ಇನ್‌ಸ್ಪೆಕ್ಟರ್ ಸುಬ್ಬಾಪುರ್ ಮಠ 'ಪ್ರಜಾವಾಣಿ'ಗೆ ತಿಳಿಸಿದರು.

ಕಲ್ಲಿನ ಅಕ್ರಮ ಗಣಿಗಾರಿಕೆ ಹಾಗೂ ಸ್ಫೋಟಕಗಳ ದಾಸ್ತಾನು ಪ್ರಕರಣದಲ್ಲಿ ಮೇ 18ರಂದು ಶಶಿರಾಜ್ ಶೆಟ್ಟಿಯನ್ನು ಬಂಧಿಸಲಾಗಿತ್ತು. ಆತನನ್ನು ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ಪೊಲೀಸರಿಗೆ ಬೆದರಿಕೆ ಒಡಿದ್ದಾರೆ ಎಂದು ಆರೋಪಿಸಿ 19ರಂದು ಪೂಂಜ ಮೇಲೆ ಐಪಿಸಿ ಸೆಕ್ಷನ್ 353 ಮತ್ತು 504ರ ಪ್ರಕಾರ ಪ್ರಕರಣ ದಾಖಲಿಸಲಾಗಿತ್ತು. 20ರಂದು ಅನುಮತಿ ಪಡೆಯದೆ ಪ್ರತಿಭಟನೆ ನಡೆಸಿದ್ದಲ್ಲದೇ, ಸರ್ಕಾರಿ ಅಧಿಕಾರಿಯ ಕರ್ತವ್ಯಕ್ಕೆ ಅಡ್ಡಿಯನ್ನುಂಟು ಮಾಡಿದ್ದಾರೆ ಎಂಬ ಆರೋಪದಡಿ ಐಪಿಸಿ ಸೆಕ್ಷನ್ 143, 147, 341, 504, 506 ಮತ್ತು 149ರಡಿ ಪ್ರಕರಣ ದಾಖಲಿಸಲಾಗಿತ್ತು.

ಕೊಡಗಿನಲ್ಲಿ 12 ಸೆಂ. ಮೀ, ಕೊಣನೂರಿನಲ್ಲಿ ಧಾರಾಕಾರ ಮಳೆ

ರಾಜ್ಯದ ಕೆಲವೆಡೆ ಬಿರುಗಾಳಿ, ವರ್ಷಧಾರೆ

ಹುಬ್ಬಳ್ಳಿ/ಮಡಿಕೇರಿ: ಧಾರವಾಡ, ಬೆಳಗಾವಿ, ಉತ್ತರ ಕನ್ನಡ, ಗದಗ ಮತ್ತು ವಿಜಯಪುರ ಜಿಲ್ಲೆಯ ಹಲವಡೆ ಗುರುವಾರ ಧಾರಾಕಾರ ಮಳೆಯಾಯಿತು. ಬಹುತೇಕ ಕಡೆ ಮರಗಳು ಉರುಳಿಬಿದ್ದವು. ಇದರ ಪರಿಣಾಮ ಕೆಲ ಕಡೆ ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯಾದರೆ, ಕೆಲ ಕಡೆ ವಿದ್ಯುತ್ ಪೂರೈಕೆ ಕಡಿತವಾಗಿತ್ತು.

ಕೊಡಗು ಜಿಲ್ಲೆಯಲ್ಲಿ ಗುರುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ 24 ಗಂಟೆ ಅವಧಿಯಲ್ಲಿ ಬಾಳೆಲೆ ಹೋಬಳಿ ವ್ಯಾಪ್ತಿಯಲ್ಲಿ 12 ಸೆಂ.ಮೀನಷ್ಟು ಮಳೆ ಸುರಿದಿದೆ.

ಮಡಿಕೇರಿ ನಗರದಲ್ಲಿ ಬುಧವಾರ ರಾತ್ರಿ ಭಾರಿ ಶಬ್ದದ ಗುಡುಗು, ಸಿಡಿಲುಗಳು ಕೇಳಿ ಬಂದವು. ಮಳೆ ಸಾಧಾರಣವಾಗಿ ಸುರಿಯಿತು. ವಿರಾಜಪೇಟೆಯಿಂದ ಕಾಕೋಟುಪರಂಬುವರೆಗೆ ಹಾಗೂ ಮಡಿಕೇರಿ ತಾಲ್ಲೂಕಿನ ಕಾಟಕೇರಿ ಸೇರಿದಂತೆ ಅನೇಕ ಭಾಗಗಳಲ್ಲಿ ಗುರುವಾರ ಸಂಜೆ ಎದುರಿನಿಂದ ಬರುವ ವಾಹನಗಳು ಕಾಣಿಸದಷ್ಟು ದಟ್ಟವಾದ ಮಂಜು ಕವಿದಿತ್ತು.

ಧಾರವಾಡದ ನಗರ ಬಸ್ ನಿಲ್ದಾಣದ (ಸಿಬಿಟಿ) ಬಳಿ ಆಲದ ಮರ ದೊಡ್ಡ ಟೊಂಗೆ ಮುರಿದು ಬಿದ್ದು ಸರಕುಸಾಗಣೆ ವಾಹನ ಮತ್ತು ಎರಡು ದ್ವಿಚಕ್ರ ವಾಹನಗಳು ಜಖಂಗೊಂಡವು. ಹುಬ್ಬಳ್ಳಿ ನಗರದಲ್ಲಿ ಸಾಧಾರಣ ಮಳೆಯಾಯಿತು.

ಬೆಳಗಾವಿ ನಗರ ಸೇರಿದಂತೆ ಜಿಲ್ಲೆಯ ಮೂಡಲಗಿ, ಮುನವಳ್ಳಿಯಲ್ಲಿ ಜೋರಾಗಿ ಮಳೆ ಸುರಿಯಿತು. ಉತ್ತರ ಕನ್ನಡ ಜಿಲ್ಲೆಯ ಭಟ್ಕಳ, ಕುಮಟಾ, ಅಂಕೋಲಾ, ಶಿರಸಿ, ಸಿದ್ದಾಪುರ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಯಿತು.

ಗಜೇಂದ್ರಗಡದ ತಹಶೀಲ್ದಾರ್ ಕಚೇರಿ ಆವರಣದಲ್ಲಿದ್ದ ಬೃಹತ್ ಮರದ ಕೊಂಬೆ ಬಿರುಗಾಳಿಗೆ ಬೈಕ್‌ಗಳ ಮೇಲೆ ಮುರಿದು ಬಿದ್ದಿದೆ

ರಾಯಬಾಗ ವರದಿ (ಬೆಳಗಾವಿ): ಪಟ್ಟಣದ ಹೊರ ವಲಯದಲ್ಲಿ ಗುರುವಾರ ಸಂಜೆ ಸಿಡಿಲು ಬಡಿದು ರೈತ ಮಹಿಳೆ ಶೋಭಾ ಕೃಷ್ಣಾ ಕುಲಗುಡೆ (43) ಸಾವನ್ನಪ್ಪಿದ್ದಾರೆ.

ವಿಜಯಪುರ ಜಿಲ್ಲೆ ಮುದ್ದೇಬಿಹಾಳ ಪಟ್ಟಣ ಸೇರಿ ತಾಲ್ಲೂಕಿನ ವಿವಿಧೆಡೆ ಬೀಸಿದ ಬಿರುಗಾಳಿ ಹಾಗೂ ಮಳೆಗೆ ಹಲವು ಮರಗಳು ಧರೆಗೆ ಉರುಳಿದವು.

ಗದಗ ಜಿಲ್ಲೆ ಗಜೇಂದ್ರಗಡ ಪಟ್ಟಣ ಸೇರಿ ಸುತ್ತಲಿನ ಗ್ರಾಮಗಳಲ್ಲಿ ಸಂಜೆ ಸುರಿದ ಬಿರುಗಾಳಿ ಸಹಿತ ಮಳೆಗೆ ನೂರಾರು ಮರಗಳ ಕೊಂಬೆಗಳು ಧರೆಗುರುಳಿದರೆ, ಪಟ್ಟಣದ ತಹಶೀಲ್ದಾರ್ ಕಚೇರಿ ಆವರಣದಲ್ಲಿನ ಬೃಹತ್ ಮರದ ಕೊಂಬೆ ಮುರಿದು ಬಿದ್ದು ಹಲವು ಬೈಕ್‌ಗಳು ಜಖಂಗೊಂಡವು.

ಯಲಬುರ್ಗಾ ವರದಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಕಾತ್ರಾಳ ಗ್ರಾಮದ ವ್ಯಾಪ್ತಿಯಲ್ಲಿ ಗುರುವಾರ ಸಂಜೆ ಬೀಸಿದ ಬಿರುಗಾಳಿಗೆ ಹಾರಿ ಹೋದ ತಗಡು ಹಾಗೂ ರಾಡ್ ಕಾರಿನಲ್ಲಿದ್ದ ವ್ಯಕ್ತಿಗೆ ಬಲವಾಗಿ ಹೊಡೆದಿದ್ದು, ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಾರು ಚಾಲಕ ಬಾಗಲಕೋಟೆ ಜಿಲ್ಲೆಯ ಬಾದಾಮಿಯ ಖಾದರಸಾಬ್ ಬವುಕಾನ್ (50) ಮೃತಪಟ್ಟವರು.

ಗಾಳಿಯ ವೇಗಕ್ಕೆ ಡಾಬಾದ ತಗಡು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದು, ಡಾಬಾದ ಒಳಗಡೆ ಇದ್ದ ಆರು ಜನರಿಗೂ ಗಾಯಗಳಾಗಿವೆ. ಇವರೆಲ್ಲರೂ ಬಾದಾಮಿಯವರು. ಈ ಕುರಿತು ಯಲಬುರ್ಗಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಳೆ: ಮೀನುಗಾರರಿಗೆ ಎಚ್ಚರಿಕೆ

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರವೂ ಮಳೆ ಮುಂದುವರಿಯಲಿದ್ದು, ಕರಾವಳಿಯಲ್ಲಿ ಮಳೆಯ ಜತೆಗೆ ಬಿರುಗಾಳಿಯು 55 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಮಂಡ್ಯ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳ ಜತೆಗೆ ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯ ಪ್ರತ್ಯೇಕ ಸ್ಥಳಗಳಲ್ಲಿ 40 ಕಿ.ಮೀ.ನಿಂದ 50 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕೆಲ ಸ್ಥಳಗಳಲ್ಲಿ ಗುಡುಗುಸಹಿತ ಭಾರಿ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಉತ್ತರ ಕನ್ನಡ ಜಿಲ್ಲೆಯ ಹೆಚ್ಚಿನ ಸ್ಥಳಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಹಾಗೂ ಶಿವಮೊಗ್ಗದ ಹೆಚ್ಚಿನ ಸ್ಥಳಗಳಲ್ಲಿ ಗುಡುಗು ಸಹಿತ 40 ಕಿ.ಮೀ.ನಿಂದ 50 ಕಿ.ಮೀ. ಗಾಳಿಯೊಂದಿಗೆ ಸಾಧಾರಣ ಮಳೆಯಾಗಲಿದೆ. ಉಳಿದ ಜಿಲ್ಲೆಗಳಲ್ಲಿ ಸಾಧಾರಣಕ್ಕಿಂತ ಕಡಿಮೆ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಇದೇ 30ರವರೆಗೂ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳು ಮತ್ತು ಉತ್ತರ ಒಳನಾಡಿನ ಕೆಲ ಜಿಲ್ಲೆಗಳಲ್ಲಿ ಮಳೆ ಮುಂದುವರಿಯಲಿದೆ ಎಂದು ಇಲಾಖೆ ತಿಳಿಸಿದೆ.

ಯಾದಗಿರಿ ನಗರದಲ್ಲಿ ಬಿರುಗಾಳಿ ಸಹಿತ ಆಲಿಕಲ್ಲು ಮಳೆಯಾಗಿದ್ದು, ತಗ್ಗು ಪ್ರದೇಶಗಳಲ್ಲಿ ನೀರು ನುಗ್ಗಿದೆ. ಕಲಬುರಗಿ ನಗರದಲ್ಲಿ ಸಂಜೆ ಕೆಲ ಕಾಲ ಗುಡುಗು ಸಹಿತ ಮಳೆಯಾಗಿದೆ.

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಕೊಣನೂರು ಪಟ್ಟಣ ಸೇರಿದಂತೆ ಸರಗೂರು, ಸಿದ್ದಾಪುರ ಸುತ್ತಲಿನ ಕೆಲ ಗ್ರಾಮಗಳಲ್ಲಿ ಗುರುವಾರ ಸಂಜೆ ಧಾರಾಕಾರ ಮಳೆ ಸುರಿಯಿತು.

ಚಾಮರಾಜನಗರ ಜಿಲ್ಲೆಯಾದ್ಯಂತ ಬುಧವಾರ ರಾತ್ರಿ ಗುಡುಗು ಮಿಂಚು ಸಹಿತ ಭರ್ಜರಿ ಮಳೆಯಾಗಿದೆ. ಗುಂಡ್ಲುಪೇಟೆ ತಾಲ್ಲೂಕಿನ ಬಂಡೀಪುರ ಕಾಡಂಚಿನ ಬೇರಂಬಾಡಿ ಕೆಂಪು ಸಾಗರ ಕೆರೆ, ಹೊನ್ನೇಗೌಡನಹಳ್ಳಿ ವಡ್ಡರಗಟ್ಟೆ ಕೆರೆ ಹಾಗೂ ಹಾಲಹಳ್ಳಿ ಅಣೆಕಟ್ಟೆ ತುಂಬಿ ಕೋಡಿ ಬಿದ್ದಿವೆ.

ಚಿಕ್ಕಮಗಳೂರು ವರದಿ: ಜಿಲ್ಲೆಯಲ್ಲಿ ಒಂದು ದಿನ ಬಿಡುವು ನೀಡಿದ್ದ ಮುಂಗಾರು ಪೂರ್ವ ಮಳೆ, ಗುರುವಾರ ಅಲ್ಲಲ್ಲಿ ಸಾಧಾರಣವಾಗಿ ಮಳೆಯಾಗಿದೆ.

ಕಳಸ ಸುತ್ತಮುತ್ತ ಗುಡುಗು ಸಹಿತ ಮಳೆಯಾಗಿದೆ. ನರಸಿಂಹರಾಜಪುರ ತಾಲ್ಲೂಕಿನಲ್ಲಿ ಸಾಧಾರಣ ಮಳೆ ಸುರಿದಿದೆ. ತರೀಕೆರೆ ತಾಲೂಕಿನಲ್ಲೂ ಹಲವೆಡೆ ಸಂಜೆ ಬಳಿಕ ಉತ್ತಮ ಮಳೆಯಾಗಿದೆ.

ಮಹದೇಶ್ವರ ಬೆಟ್ಟದಲ್ಲಿ 9 ಸೆಂ.ಮೀ. ಮಳೆ

ಗುರುವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳಲ್ಲಿ ಕರಾವಳಿಯ ಹಲವು ಕಡೆ, ದಕ್ಷಿಣ ಒಳನಾಡಿನ ಕೆಲವು ಕಡೆ ಮತ್ತು ಉತ್ತರ ಒಳನಾಡಿನ ಒಂದೆರಡು ಕಡೆ ಮಳೆಯಾಗಿದೆ. ಚಾಮರಾಜನಗರದ ಮಲೆ ಮಹದೇಶ್ವರ ಬೆಟ್ಟದಲ್ಲಿ 9 ಸೆಂ. ಮೀ., ಮೈಸೂರಿನ ಸರಗೂರಿನಲ್ಲಿ 7 ಸೆಂ.ಮೀ. ಮಳೆ ಸುರಿದಿದೆ.

ಚಾಮರಾಜನಗರದ ಬಂಡೀಪುರದಲ್ಲಿ 6 ಸೆಂ.ಮೀ., ಬೇಗೂರು, ಗುಂಡ್ಲುಪೇಟೆ, ಉಡುಪಿಯ ಸಿದ್ಧಾಪುರ, ಕೊಡಗಿನ ಮೂರ್ನಾಡು ಹಾಗೂ ಮೈಸೂರಿನ ಎಚ್‌ಡಿ ಕೋಟೆಯಲ್ಲಿ ತಲಾ 5 ಸೆಂ.ಮೀ. ಮಳೆಯಾಗಿದೆ. ಉಳಿದೆಡೆ ಇದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮಳೆ ಸುರಿದಿದೆ.

'ದೇವೇಗೌಡರ ಸಾವನ್ನು ಬಯಸಿದವನಲ್ಲ ನಾನು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಜಿ ಪ್ರಧಾನಿ ಎಚ್. ಡಿ.ದೇವೇಗೌಡ ಅವರ ಸಾವನ್ನು ನಾನೆಂದೂ ಬಯಸಿದವನಲ್ಲ. ಅವರು ಶತಾಯುಷಿಯಾಗಲೆಂದು ಪ್ರಾರ್ಥಿಸುತ್ತೇನೆ' ಎಂದು ಮಾಜಿ ಸಂಸದ ಎಲ್. ಆರ್.ಶಿವರಾಮೇಗೌಡ ಹೇಳಿದ್ದಾರೆ.

ಫೇಸ್‌ಬುಕ್ ಮೂಲಕ ಸ್ಪಷ್ಟೀಕರಣ ನೀಡಿರುವ ಅವರು, 'ರಾಜಕಾರಣದಲ್ಲಿ ಟೀಕೆ–ಟಿಪ್ಪಣಿಗಳು ಸಾಮಾನ್ಯ. ದೇವೇಗೌಡರ ಸಾವನ್ನು ಬಯಸುವ ಕೆಟ್ಟ ಸ್ವಭಾವ ನನ್ನದಲ್ಲ. ಆದರೆ ನನ್ನ ರಾಜಕೀಯ ವಿರೋಧಿಗಳು ನನ್ನ ಹೇಳಿಕೆಯನ್ನು ತಿರುಚಿದ್ದಾರೆ. ನನ್ನ ಮೂಲಕ ₹100 ಕೋಟಿ ಹಣದ ಪ್ರಸ್ತಾಪ ಮತ್ತು ದೇವರಾಜೇಗೌಡರಿಗೆ ಕ್ಯಾಬಿನೆಟ್ ದರ್ಜೆ ನೀಡುವ ಕುರಿತು ನನ್ನ ಧ್ವನಿಯನ್ನು ಮಾರ್ಪಡಿಸಿ ಆಡಿಯೊ ಹರಿಬಿಡಲಾಗಿದೆ' ಎಂದಿದ್ದಾರೆ.

'ನನ್ನ 40 ವರ್ಷಗಳ ರಾಜಕಾರಣದಲ್ಲಿ ಎಚ್.ಡಿ.ದೇವೇಗೌಡರು ಮತ್ತು ಎಚ್.ಡಿ.ಕುಮಾರಸ್ವಾಮಿ ಅವರನ್ನು ಎಂದೂ ನಿಂದಿಸಿಲ್ಲ. ನಾನು ಸತ್ಯಹರಿಶ್ಚಂದ್ರನ ತುಂಡು ಅಲ್ಲದಿದ್ದರೂ, ಬೇರೆಯವರಿಗೆ ಹೋಲಿಸಿದರೆ ನಾನೊಬ್ಬ ಪ್ರಾಮಾಣಿಕ ರಾಜಕಾರಣಿ' ಎಂದು ಹೇಳಿಕೊಂಡಿದ್ದಾರೆ.

'ಈ ಪಿತೂರಿ ಹಿಂದೆ ಇರುವ ಕಾಣದ ಕೈಗಳು ಯಾರದೆಂಬುದು ನನಗೆ ಗೊತ್ತಿದೆ. ಸೂಕ್ತ ಸಮಯದಲ್ಲಿ ಆ ವ್ಯಕ್ತಿ ಯಾರೆಂದು ನಿಮಗೆ ಆಧಾರ ಸಮೇತ ತಿಳಿಸುತ್ತೇನೆ. ಏನೆಲ್ಲಾ ರಾಜಕೀಯ ನಡೆಯುತ್ತಿದೆ ಎಂಬುದು ಆಗ ಗೊತ್ತಾಗುತ್ತದೆ. ನನ್ನ ಹೆಸರಿನಲ್ಲಿ ಆಡಿಯೊ ಮಾಡಿ ಹರಿಬಿಟ್ಟ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುತ್ತೇನೆ' ಎಂದು ಶಿವರಾಮೇಗೌಡ ಹೇಳಿದ್ದಾರೆ.

'ರಾಜ್ಯದಲ್ಲಿ ಏ.26ರಂದು ಲೋಕಸಭಾ ಮತದಾನ ನಡೆಯಿತು. ದೇವರಾಜೇಗೌಡ ಏ.29ರಂದು ಪ್ರಥಮವಾಗಿ ನನ್ನನ್ನು ಭೇಟಿಯಾದರು. ಆ ವೇಳೆಗಾಗಲೇ ಪೆನ್‌ಡ್ರೈವ್ ಪ್ರಕರಣ ರಾಜ್ಯದಾದ್ಯಂತ ಸುದ್ದಿಯಾಗಿತ್ತು. ಪೆನ್‌ಡ್ರೈವ್‌ಗೂ ನನಗೂ ಸಂಬಂಧವಿಲ್ಲ. ಆದರೂ ವಿರೋಧಿಗಳು ಬಿಡದೇ ನನಗೆ ಸಂಬಂಧ ಕಲ್ಪಿಸುತ್ತಿದ್ದಾರೆ' ಎಂದಿದ್ದಾರೆ.

ಅಂಜಲಿ ಕೊಲೆ; ಆರೋಪಿ ಸಿಐಡಿ ವಶಕ್ಕೆ

ಹುಬ್ಬಳ್ಳಿ: ಇಲ್ಲಿನ ವೀರಾಪುರ ಓಣಿಯಲ್ಲಿ ಅಂಜಲಿ ಅಂಬಿಗೇರ ಅವರನ್ನು ಹತ್ಯೆ ಮಾಡಿದ ಆರೋಪಿ ಗಿರೀಶ ಸಾವಂತನನ್ನು ಎಂಟು ದಿನ ಸಿಐಡಿ ವಶಕ್ಕೆ ನೀಡಿ, ಜೆಎಂಎಫ್‌ಸಿ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಗುರುವಾರ ಆದೇಶಿಸಿದೆ.

ಆರೋಪಿಯನ್ನು ಬುಧವಾರ ವಶಕ್ಕೆ ಪಡೆದ ಸಿಐಡಿ ಅಧಿಕಾರಿಗಳು, ಸುದೀರ್ಘ ವಿಚಾರಣೆ ನಡೆಸಿದ್ದರು. ಗುರುವಾರ ನ್ಯಾಯಾಲಯಕ್ಕೆ ಹಾಜರುಪಡಿಸಿ, 15 ದಿನ ತಮ್ಮ ವಶಕ್ಕೆ ನೀಡಲು ಕೋರಿದ್ದರು.

ವಿಚಾರಣೆ ನಡೆಸಿರುವ ಅಧಿಕಾರಿಗಳು, ಬೆಂಡಿಗೇರಿ ಪೊಲೀಸ್ ಠಾಣೆಯಿಂದ ಅಗತ್ಯ ದಾಖಲೆಪತ್ರ ಪಡೆದು, ತನಿಖೆ ಇನ್ನಷ್ಟು ಚುರುಕುಗೊಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಗೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಪ್ರಶ್ನೆ

ನನ್ನ ತಂದೆ–ತಾಯಿಯನ್ನು ಗುರಿ ಮಾಡಿದ್ದೇಕೆ?

ನವದೆಹಲಿ(ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮನ್ನು ಮಣಿಸುವ ಉದ್ದೇಶದಿಂದ ತಮ್ಮ ವಯೋವೃದ್ಧ ತಂದೆ–ತಾಯಿಯನ್ನು ಗುರಿಯಾಗಿಸಿಕೊಂಡಿದ್ದಾರೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಗುರುವಾರ ಆರೋಪಿಸಿದ್ದಾರೆ. ಅಲ್ಲದೆ, ಮೋದಿ ಅವರು ಎಲ್ಲ ಮಿತಿಗಳನ್ನೂ ಮೀರಿದ್ದಾರೆ ಎಂದು ದೂರಿದ್ದಾರೆ.

ವರ್ಚುವಲ್ ಆಗಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಕೇಜ್ರಿವಾಲ್, ಪ್ರಧಾನಿ ಮೋದಿ ಅವರಿಗೆ ಸಂದೇಶವೊಂದನ್ನು ರವಾನಿಸುತ್ತಿರುವುದಾಗಿ ಹೇಳಿದರು. 'ಪ್ರಧಾನಿ ಮೋದಿ ಅವರಿಗೆ ನನ್ನದೊಂದು ಸಂದೇಶ, ಮನವಿ ಇದೆ. ನೀವು ನನ್ನ ಶಾಸಕರನ್ನು ಬಂಧಿಸಿದಿರಿ. ಆದರೆ ನಾನು ಮಣಿಯಲಿಲ್ಲ. ನೀವು ನನ್ನ ಸಚಿವರನ್ನು ಬಂಧಿಸಿದಿರಿ, ಆದರೆ ನಾನು ಬಾಗುವಂತೆ ಮಾಡಲು ಆಗಲಿಲ್ಲ. ನೀವು ನನ್ನನ್ನು ಬಂಧಿಸಿದಿರಿ, ನನಗೆ ಜೈಲಿನಲ್ಲಿ ಕಿರುಕುಳ ನೀಡಲಾಯಿತು' ಎಂದು ಕೇಜ್ರಿವಾಲ್ ವಿವರಿಸಿದರು.

'ಆದರೆ ಇಂದು ನೀವು ಎಲ್ಲ ಮಿತಿಗಳನ್ನೂ ಮೀರಿದಿರಿ. ನನ್ನನ್ನು ಮಣಿಸಲು ನೀವು ನನ್ನ ವಯೋವೃದ್ಧ, ಅನಾರೋಗ್ಯಕ್ಕೆ ತುತ್ತಾಗಿರುವ ಪಾಲಕರನ್ನು ಗುರಿಯಾಗಿಸಿಕೊಂಡಿದ್ದೀರಿ. ನನ್ನ ತಾಯಿ ಹಲವು ಕಾಯಿಲೆಗಳಿಂದ ಬಳಲುತ್ತಿದ್ದಾರೆ. ನನ್ನ ಬಂಧನ ಆದ ದಿನ (ಮಾರ್ಚ್ 21) ಆಕೆ ಆಸ್ಪತ್ರೆಯಿಂದ ವಾಪಸ್ ಆಗಿದ್ದಳು. ನನ್ನ ತಂದೆಗೆ 85 ವರ್ಷ ವಯಸ್ಸು, ಅವರಿಗೆ ಶ್ರವಣ ಸಮಸ್ಯೆ ಇದೆ. ನನ್ನ ತಂದೆ–ತಾಯಿ ದೋಷಿಗಳು ಎಂದು ನೀವು ಭಾವಿಸಿದ್ದೀರಾ? ನನ್ನ ತಂದೆ–ತಾಯಿಗೆ ಕಿರುಕುಳ ನೀಡುತ್ತಿರುವುದು ಏಕೆ? ದೇವರು ನಿಮ್ಮನ್ನು ಕ್ಷಮಿಸುವುದಿಲ್ಲ' ಎಂದು ಕೇಜ್ರಿವಾಲ್ ಹೇಳಿದರು.

ದೆಹಲಿ ಪೊಲೀಸರು ತಮ್ಮ ತಂದೆ–ತಾಯಿಯನ್ನು ಗುರುವಾರ ವಿಚಾರಣೆಗೆ ಗುರಿಪಡಿಸಲಿದ್ದಾರೆ ಎಂದು ಕೇಜ್ರಿವಾಲ್ ಅವರು ಬುಧವಾರ ಹೇಳಿದ್ದರು. ಆದರೆ, ಮೂಲಗಳ ಪ್ರಕಾರ, ದೆಹಲಿ ಪೊಲೀಸರು, ರಾಜ್ಯಸಭಾ ಸದಸ್ಯೆ ಸ್ವಾತಿ ಮಾಲಿವಾಲ್ ಮೇಲಿನ ಹಲ್ಲೆ ಪ್ರಕರಣದಲ್ಲಿ ಕೇಜ್ರಿವಾಲ್ ಅವರ ತಂದೆ–ತಾಯಿಯನ್ನು ವಿಚಾರಣೆಗೆ ಗುರಿಪಡಿಸಲು ಗುರುವಾರ ಅವರ ನಿವಾಸಕ್ಕೆ ತೆರಳಿದ ಬಗ್ಗೆ ವರದಿಯಾಗಿಲ್ಲ.

ಸ್ವಾತಿ ಅವರ ಮೇಲೆ ಕೇಜ್ರಿವಾಲ್ ನಿವಾಸದಲ್ಲಿ ಮೇ 13ರಂದು ಹಲ್ಲೆ ನಡೆದಿದೆ ಎಂಬ ದೂರು ದಾಖಲಾಗಿದೆ. ಈ ಪ್ರಕರಣದಲ್ಲಿ ಕೇಜ್ರಿವಾಲ್ ಅವರ ಆಪ್ತ ಬಿಭವ್ ಕುಮಾರ್ ಅವರನ್ನು ಬಂಧಿಸಲಾಗಿದೆ.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತಮ್ಮ ತಂದೆ– ತಾಯಿಯೊಂದಿಗೆ ನಿವಾಸದ ಹೊರಗಡೆ ಸುತ್ತಾಡಿದರು. ಕೇಜ್ರಿವಾಲ್ ಪತ್ನಿ ಸುನೀತಾ ಅವರು ಜೊತೆಗಿದ್ದರು – ಪಿಟಿಐ ಚಿತ್ರ

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ

ಪಿಟಿಐ ಸುದ್ದಿಸಂಸ್ಥೆಗೆ ಸಂದರ್ಶನ ನೀಡಿರುವ ಅರವಿಂದ ಕೇಜ್ರಿವಾಲ್, ತಮ್ಮ ಬಂಧನ ಸೇರಿದಂತೆ ಹಲವು ಸಂಗತಿಗಳ ಬಗ್ಗೆ ಮಾತನಾಡಿದ್ದಾರೆ. ಅವರ ಮಾತುಗಳಲ್ಲಿ ಕೆಲವು ಇಲ್ಲಿವೆ...

- ದೆಹಲಿ ಮುಖ್ಯಮಂತ್ರಿ ಸ್ಥಾನಕ್ಕೆ ನಾನು ರಾಜೀನಾಮೆ ನೀಡುವುದಿಲ್ಲ. ಏಕೆಂದರೆ, ಹಾಗೆ ಮಾಡಿದರೆ, ಕೇಂದ್ರ ಸರ್ಕಾರಕ್ಕೆ ಬಿಜೆಪಿಯನ್ನು ರಾಜಕೀಯವಾಗಿ ವಿರೋಧಿಸುವ ಮಮತಾ ಬ್ಯಾನರ್ಜಿ, ಎಂ.ಕೆ. ಸ್ಟಾಲಿನ್ ಅವರಂತಹ ಮುಖ್ಯಮಂತ್ರಿಗಳನ್ನು ಗುರಿಯಾಗಿಸಿಕೊಳ್ಳಲು ಪೂರ್ವನಿದರ್ಶನ ಹಾಕಿಕೊಟ್ಟಂತೆ ಆಗುತ್ತದೆ.
- ದೆಹಲಿ ಮುಖ್ಯಮಂತ್ರಿಯಾಗಿ ನನ್ನ ಜವಾಬ್ದಾರಿಗಳನ್ನು ಜೈಲಿನಿಂದಲೇ ನಿಭಾಯಿಸಲು ಅವಕಾಶ ಕಲ್ಪಿಸುವಂತೆ ನ್ಯಾಯಾಲಯವನ್ನು ಕೋರಲಿದ್ದೇನೆ.
- ನಾನು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ, ನನ್ನ ನೇತೃತ್ವದ ಸರ್ಕಾರ ಉರುಳುತ್ತದೆ ಎಂದು ಮೋದಿ ಅವರು ನನ್ನ ಬಂಧನ ಆಗುವಂತೆ ನೋಡಿಕೊಂಡರು. ಆದರೆ ಅವರ ಪಿತೂರಿಗೆ ಯಶಸ್ಸು ಸಿಗಲು ನಾನು ಬಿಡುವುದಿಲ್ಲ. ಅಬಕಾರಿ ನೀತಿಗೆ ಸಂಬಂಧಿಸಿದ ಪ್ರಕರಣವು ಸಂಪೂರ್ಣವಾಗಿ ಸುಳ್ಳು.
- ನಾನು ಹಣ ಪಡೆದಿದ್ದರೆ ಒಳಗೊಳಗೇ ದುರ್ಬಲನಾಗುತ್ತಿದ್ದೆ. ಬಹುಶಃ, ಬಿಜೆಪಿ ಸೇರುತ್ತಿದ್ದೆ; ನನ್ನೆಲ್ಲ ಪಾಪಗಳನ್ನು ಕ್ಷಮಿಸಲಾಗುತ್ತಿತ್ತು.
- ಅಬಕಾರಿ ನೀತಿಗೆ ಸಂಬಂಧಿಸಿದ ಹಗರಣವು ₹1,100 ಕೋಟಿ ಮೌಲ್ಯದ್ದು ಎಂದು ಬಿಜೆಪಿಯವರು ಕಳೆದ ಕೆಲವು ವಾರಗಳಿಂದ ಹೇಳಲು ಆರಂಭಿಸಿದ್ದಾರೆ. ಇಷ್ಟೆಲ್ಲ ಹಣ ಎಲ್ಲಿ ಹೋಗಿದೆ? ಒಂದು ಪೈಸೆಯನ್ನಾದರೂ ವಶಪಡಿಸಿಕೊಳ್ಳಲಾಗಿದೆಯೇ? ಚಿನ್ನಾಭರಣ ವಶಪಡಿಸಿಕೊಳ್ಳಲಾಯಿತೇ? ಪುರಾವೆಯೇ ಇಲ್ಲ. ನಮ್ಮನ್ನು ಬಂಧಿಸಲಿಕ್ಕಾಗಿಯೇ ಈ ಪ್ರಕರಣ ಸೃಷ್ಟಿಸಲಾಗಿದೆ.
- ತಿಹಾರ್ ಜೈಲಿಗೆ ಮರಳಬೇಕಾದ ಬಗ್ಗೆ ನನಗೆ ತಲೆಬಿಸಿ ಅಥವಾ ಆತಂಕ ಇಲ್ಲ. ಇದು ದೇಶವನ್ನು ಉಳಿಸಲು ನನ್ನ ಹೋರಾಟದ ಒಂದು ಭಾಗ. ಜೈಲಿನಲ್ಲಿ ಇದ್ದಾಗ ಭಗವದ್ಗೀತೆಯನ್ನು ಎರಡು ಬಾರಿ ಓದಿದೆ. ಅದು ನನ್ನ ದೃಷ್ಟಿಕೋನವನ್ನು ಬದಲಾಯಿಸಿತು.
- ತಿಹಾರ್ ಜೈಲಿನಲ್ಲಿ ಇದ್ದಾಗ ಸಿಸಿಟಿವಿ ಕ್ಯಾಮೆರಾ ಮೂಲಕ ನನ್ನ ಮೇಲೆ ನಿರಂತರ ನಿಗಾ ಇರಿಸಲಾಗಿತ್ತು. ಜೈಲಿನ 13 ಮಂದಿ ಅಧಿಕಾರಿಗಳು, ಪ್ರಧಾನಿ ಕಚೇರಿ ನನ್ನನ್ನು ಗಮನಿಸುತ್ತಿತ್ತು.

ಸಾಮೂಹಿಕ ಅತ್ಯಾಚಾರ ಮೂರು ದಶಕ ಬಳಿಕ ಶಿಕ್ಷೆ

ಶಾಜಹಾನಪುರ (ಪಿಟಿಐ): 12 ವರ್ಷ ವಯಸ್ಸಿನ ಬಾಲಕಿಯೊಬ್ಬಳ ಮೇಲೆ ಅತ್ಯಾಚಾರ ನಡೆಸಿ, ಆಕೆ ಗರ್ಭಿಣಿಯಾಗಲು ಕಾರಣರಾಗಿದ್ದ ಇಬ್ಬರು ಸಹೋದರರು ಮೂರು ದಶಕಗಳ ನಂತರ ಶಿಕ್ಷೆಗೆ ಗುರಿಯಾಗಿದ್ದಾರೆ. ಇಬ್ಬರು ಅಪರಾಧಿಗಳಿಗೆ ತಲಾ 10 ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ.

ಸಂತ್ರಸ್ತೆಯ ಪುತ್ರ ತನ್ನ ತಂದೆ ಯಾರು ಎಂದು ಪ್ರಶ್ನಿಸಿದಾಗ ಈ ಪ್ರಕರಣವು ಬಯಲಿಗೆ ಬಂದಿತ್ತು. 'ಗುಡ್ಡು ಹಸನ್ ಮತ್ತು ನಾಕಿ ಹಸನ್ ಎನ್ನುವವರು ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಅಪರಾಧಿಗಳು ಎಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರು ಘೋಷಿಸಿದ್ದಾರೆ' ಎಂದು ಸರ್ಕಾರಿ ವಕೀಲ ರಾಜೀವ್ ಅವಸ್ಥಿ ಗುರುವಾರ ತಿಳಿಸಿದ್ದಾರೆ.

ಸದರ್ ಬಜಾರ್ ಪೊಲೀಸ್ ಠಾಣೆಯಲ್ಲಿ 2021ರ ಮಾರ್ಚ್‌ನಲ್ಲಿ ದೂರು ದಾಖಲಾದ ನಂತರ ನಾಕಿ ಮತ್ತು ಗುಡ್ಡು ಸಹೋದರರನ್ನು 2022ರಲ್ಲಿ ಬಂಧಿಸಲಾಗಿತ್ತು. ಸಂತ್ರಸ್ತೆ, ಆಕೆಯ ಪುತ್ರ ಹಾಗೂ ಈ ಸಹೋದರರ ಡಿಎನ್‌ಎ ಪರೀಕ್ಷೆಗೆ ಆದೇಶಿಸಲಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ.

ಸಂತ್ರಸ್ತೆಯು 1994ರಲ್ಲಿ ಶಾಜಹಾನಪುರದ ಸದರ್ ಬಜಾರ್ ಪ್ರದೇಶದಲ್ಲಿ ತನ್ನ ಸಹೋದರಿ ಮತ್ತು ಬಾವನ ಜೊತೆ ವಾಸಿಸುತ್ತಿದ್ದಳು. ಅದೇ ಪ್ರದೇಶದಲ್ಲಿ ಇದ್ದ ನಾಕಿ ಹಸನ್ ಸಂತ್ರಸ್ತೆಯು ಒಬ್ಬಳೇ ಇದ್ದ ಸಂದರ್ಭದಲ್ಲಿ ಮನೆಗೆ ನುಗ್ಗಿ ಆಕೆಯ ಮೇಲೆ ಅತ್ಯಾಚಾರ ಎಸಗಿದ್ದ.

ಆತನ ತಮ್ಮ ಗುಡ್ಡು ಕೂಡ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ್ದ. ಆಕೆಯು ಮಗುವಿಗೆ ಜನ್ಮ ನೀಡಿದ್ದಳು. ನಂತರ ಆ ಮಗುವನ್ನು ಸಂಬಂಧಿಕರ ಬಳಿ ಬಿಟ್ಟಿದ್ದಳು. ಆಕೆಗೆ ಮದುವೆ ಆಯಿತು. ಆದರೆ, ಸಾಮೂಹಿಕ ಅತ್ಯಾಚಾರದ ಬಗ್ಗೆ ತಿಳಿದ ಪತಿ ಆಕೆಯನ್ನು ಬಿಟ್ಟುಹೋಗಿದ್ದ.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು–2,ರವರ ಕಛೇರಿ, ಬೆಂಘತ್ಯಾನಿನಿ, 1ನೇ ಮಹಡಿ, ಯುಎನ್ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560 052

ಸಂ: ಉಪ್ರವ್ಯ–2/ಬೆಂಘತ್ಯಾನಿನಿ/ತಿದ್ದುಪಡಿ–02/24–25 ದಿನಾಂಕ: 23.05.2024

ತಿದ್ದುಪಡಿ–2

ವಿಷಯ: ವಿದ್ಯುತ್, ನೀರು ಮತ್ತು ಇತರ ಸೇವೆಗಳು ಸೇರಿದಂತೆ ಆಯ್ದ ಸ್ಥಳದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಕೇಂದ್ರಕ್ಕಾಗಿ ಪ್ರಿ–ಫ್ಯಾಬ್ರಿಕೇಟೆಡ್ ಶೆಡ್ ಸ್ಥಾಪನೆಯ ಕೆಲಸಕ್ಕಾಗಿ ಟೆಂಡರ್ ಅಧಿಸೂಚನೆಯನ್ನು ರದ್ದುಗೊಳಿಸುವುದು.

ಉಲ್ಲೇಖ: ಈ ಕಛೇರಿ ಟೆಂಡರ್ ಅಧಿಸೂಚನೆ ಸಂಖ್ಯೆ:ಉಪ್ರವ್ಯ–2/ಬೆಂಘತ್ಯಾನಿನಿ/ಟೆಂಡ್/01/23–24, ದಿನಾಂಕ: 15.03.2024. (ಕ್ರಮ ಸಂಖ್ಯೆ 2)

ಮೇಲಿನ ವಿಷಯ ಮತ್ತು ಉಲ್ಲೇಖದ ಪ್ರಕಾರ, ಮೇಲಿನ ಉಲ್ಲೇಖದ ಅಡಿಯಲ್ಲಿ ಆಹ್ವಾನಿಸಲಾದ ಟೆಂಡರ್ ಅಧಿಸೂಚನೆ ಮತ್ತು ಟೆಂಡರ್ ನಂ.01 ಕ್ರಮ ಸಂಖ್ಯೆ. 02 ಅನ್ನು ಕೆಲವು ಆಡಳಿತಾತ್ಮಕ ಮತ್ತು ತಾಂತ್ರಿಕ ಕಾರಣಗಳಿಂದ ರದ್ದುಗೊಳಿಸಲಾಗಿದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–2
ಬೆಂಘತ್ಯಾನಿನಿ

ವಾಸಾಸಂಇ/ವಾಪ್ರ/112/2024–25

ಸ್ನೇಹಿತನಿಂದಲೇ ಅನಾರ್ ಹತ್ಯೆ: ಸಿಐಡಿ

ಬಾಂಗ್ಲಾದೇಶದ ಸಂಸದನ ಹತ್ಯೆಗೆ ಅಮೆರಿಕ ಪ್ರಜೆಯಿಂದ ₹5 ಕೋಟಿ ಪಾವತಿ

ಕೋಲ್ಕತ್ತ (ಪಿಟಿಐ): ಬಾಂಗ್ಲಾದೇಶದ ಅವಾಮಿ ಲೀಗ್ ಪಕ್ಷದ ಸಂಸದ ಅನ್ವರುಲ್ ಅಜೀಂ ಅನಾರ್ ಹತ್ಯೆಗೆ ಅವರ ಆಪ್ತ ಸ್ನೇಹಿತನೇ ₹5 ಕೋಟಿ ಹಣ ಪಾವತಿಸಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಒಬ್ಬನನ್ನು ಬಂಧಿಸಲಾಗಿದ್ದು, ವಿಚಾರಣೆ ನಡೆಯುತ್ತಿದೆ ಎಂದು ಪಶ್ಚಿಮ ಬಂಗಾಳ ಸಿಐಡಿಯ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪ್ರಕರಣದ ತನಿಖೆಯನ್ನು ರಾಜ್ಯ ಸಿಐಡಿ ಕೈಗೆತ್ತಿಕೊಂಡಿದೆ. 'ಇದೊಂದು ಯೋಜಿತ ಹತ್ಯೆ. ಅನ್ವರುಲ್ ಅವರ ಆಪ್ತರಾದ ಅಮೆರಿಕದಲ್ಲಿರುವ ವ್ಯಕ್ತಿಯೊಬ್ಬರು ಸುಮಾರು ₹5 ಕೋಟಿ ಹಣ ನೀಡಿ ಅನ್ವರುಲ್ ಅವರನ್ನು ಹತ್ಯೆ ಮಾಡಿಸಿದ್ದಾರೆ. ಹನಿಟ್ರ್ಯಾಪ್ ಮಾಡಿ ಹತ್ಯೆ ಮಾಡಿರುವ ಸಾಧ್ಯತೆ ಇದೆ' ಎಂದು ಅವರು ಸುದ್ದಿಸಂಸ್ಥೆಗೆ ತಿಳಿಸಿದರು.

ಬಂಧಿತನ ಬಗ್ಗೆ ವಿವರಗಳನ್ನು ಸಿಐಡಿ ಬಹಿರಂಗಪಡಿಸಿಲ್ಲ ಎಂದು ಅವರು ಹೇಳಿದರು.

ಅನ್ವರುಲ್ ಅವರ ಸ್ನೇಹಿತ, ಅಮೆರಿಕದಲ್ಲಿ ನೆಲೆಸಿರುವ ವ್ಯಕ್ತಿ ಕೋಲ್ಕತ್ತದ ನ್ಯೂ ಟೌನ್ ಪ್ರದೇಶದಲ್ಲಿ ಫ್ಲ್ಯಾಟ್ ಹೊಂದಿದ್ದಾರೆ. ಚಿಕಿತ್ಸೆ ಪಡೆಯುವ ಸಲುವಾಗಿ ಕೋಲ್ಕತ್ತಕ್ಕೆ ಬಂದಿದ್ದ ಅನ್ವರುಲ್ ಕೊನೆ ಬಾರಿಗೆ ಈ ಫ್ಲ್ಯಾಟ್‌ನ ಒಳಗೆ ಪ್ರವೇಶಿಸಿದ್ದನ್ನು ಕಂಡವರಿದ್ದಾರೆ. ಈ ಫ್ಲ್ಯಾಟ್ ಅನ್ನು ಅಮೆರಿಕದಲ್ಲಿರುವ ವ್ಯಕ್ತಿಯು, ಪಶ್ಚಿಮ ಬಂಗಾಳದ ಅಬಕಾರಿ ಇಲಾಖೆಯಲ್ಲಿ ಉದ್ಯೋಗಿಯಾಗಿರುವ ತನ್ನ ಸ್ನೇಹಿತನಿಗೆ ಬಾಡಿಗೆಗೆ ನೀಡಿದ್ದರು ಎಂದು ಅವರು ಮಾಹಿತಿ ನೀಡಿದರು.

'ಅನ್ವರುಲ್ ಕೊಲೆಯಾಗಿರುವ ಬಗ್ಗೆ ಪೊಲೀಸರಿಗೆ ವಿಶ್ವಾಸಾರ್ಹ ಮಾಹಿತಿ ಲಭಿಸಿದೆ. ಆದರೆ, ಮೃತ ದೇಹ ಇನ್ನೂ ಸಿಕ್ಕಿಲ್ಲ' ಎಂದು ಸಿಐಡಿ ಐಜಿ ಅಖಿಲೇಶ್ ಚತುರ್ವೇದಿ ಅವರು ಬುಧವಾರ ಹೇಳಿಕೆ ನೀಡಿದ್ದರು.

ಉಸಿರುಗಟ್ಟಿಸಿ ಕೊಂದು, ತುಂಡು ಮಾಡಿ ಎಸೆದ ಶಂಕೆ

ಸಂಸದ ಅನಾರ್ ಅವರನ್ನು ಹಂತಕರು ಮೊದಲು ಕತ್ತು ಹಿಸುಕಿ ಕೊಂದು, ನಂತರ ಅವರ ಮೃತ ದೇಹವನ್ನು ವಿರೂಪಗೊಳಿಸಿ ಹಲವು ತುಂಡುಗಳಾಗಿ ಕತ್ತರಿಸಿರುವುದು ಪುರಾವೆಗಳಿಂದಾಗಿ ಗೊತ್ತಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ನ್ಯೂ ಟೌನ್‌ನ ಐಷಾರಾಮಿ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ರಕ್ತದ ಕಲೆಗಳನ್ನು ಸಿಐಡಿಯು ಪತ್ತೆಹಚ್ಚಿದೆ. ಶವದ ತುಂಡುಗಳ ವಿಲೇವಾರಿಗೆ ಬಳಸಿರುವ ಶಂಕೆ ಇರುವ ಹಲವು ಪ್ಲಾಸ್ಟಿಕ್ ಚೀಲಗಳನ್ನು ಸಹ ಸಿಐಡಿ ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

'ಶವವನ್ನು ತುಂಡುತುಂಡಾಗಿಸಿ ಬಹುಶಃ ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿ ವಿವಿಧ ಸ್ಥಳಗಳಲ್ಲಿ ವಿಲೇವಾರಿ ಮಾಡಿರುವ ಶಂಕೆ ಇದೆ. ಇನ್ನು ಕೆಲವು ಭಾಗಗಳನ್ನು ರೆಫ್ರಿಜರೇಟರ್‌ನಲ್ಲಿ ಇರಿಸಿರುವ ಅನುಮಾನವೂ ಇದೆ. ನಾವು ಅವುಗಳ ಮಾದರಿಗಳನ್ನು ಸಂಗ್ರಹಿಸಿದ್ದೇವೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

> **ಮೇ 13ರಂದು ಕೋಲ್ಕತ್ತದಲ್ಲಿ ನಾಪತ್ತೆಯಾಗಿದ್ದ ಅನ್ವರುಲ್ ಅಜೀಂ ಅನಾರ್ ಹತ್ಯೆಯಾಗಿದ್ದು, ಪ್ರಕರಣ ಸಂಬಂಧ ಮೂವರನ್ನು ಬಂಧಿಸಲಾಗಿದೆ**
>
> **ಅಸಾದುಝ್ಜಮಾನ್ ಖಾನ್,** ಬಾಂಗ್ಲಾದೇಶದ ಗೃಹ ಸಚಿವ

ಪರಿಚಯಸ್ಥ ದೂರು ನೀಡಿದ ಮೇಲೆ ಶೋಧ

ವೈದ್ಯಕೀಯ ಚಿಕಿತ್ಸೆಗಾಗಿ ಮೇ 12ರಂದು ಕೋಲ್ಕತ್ತಗೆ ಬಂದಿದ್ದ ಬಾಂಗ್ಲಾದೇಶದ ಸಂಸದ ಅನಾರ್ ಅವರು ನಾಪತ್ತೆಯಾಗಿದ್ದಾರೆ ಎಂದು ಉತ್ತರ ಕೋಲ್ಕತ್ತದ ಬಾರಾನಗರ ನಿವಾಸಿ ಮತ್ತು ಅನಾರ್ ಅವರ ಪರಿಚಯಸ್ಥ ಗೋಪಾಲ್ ಬಿಸ್ವಾಸ್ ಅವರು ಸ್ಥಳೀಯ ಪೊಲೀಸರಿಗೆ ಮೇ 18 ರಂದು ದೂರು ನೀಡಿದ ನಂತರ ಅವರಿಗಾಗಿ ಹುಡುಕಾಟ ಶುರುವಾಯಿತು.

ಕೋಲ್ಕತ್ತಕ್ಕೆ ಬಂದ ದಿನ ಅನಾರ್ ಅವರು ಬಿಸ್ವಾಸ್ ಅವರ ಮನೆಯಲ್ಲಿ ತಂಗಿದ್ದರು. ಮೇ 13ರಂದು ಮಧ್ಯಾಹ್ನ ವೈದ್ಯರನ್ನು ಕಾಣಲು ಅನಾರ್ ಅವರು ತಮ್ಮ ಬಾರಾನಗರ ನಿವಾಸದಿಂದ ನಿರ್ಗಮಿಸಿದರು. ರಾತ್ರಿ ಊಟಕ್ಕೆ ಮನೆಗೆ ಬರುವುದಾಗಿ ತಿಳಿಸಿದ್ದರು. ಮೇ 17ರವರೆಗೂ ಅವರು ಸಂಪರ್ಕಕ್ಕೆ ಸಿಗದಿದ್ದಾಗ 18ರಂದು ಠಾಣೆಗೆ ಬಂದು ದೂರು ನೀಡಬೇಕಾಯಿತು ಎಂದು ಬಿಸ್ವಾಸ್ ಅವರು ದೂರಿನಲ್ಲಿ ತಿಳಿಸಿದ್ದಾರೆ.

'ರಾಜ್ಯಪಾಲ ಆರಿಫ್‌ರಿಂದ ವಿ.ವಿಗಳ ಕೇಸರೀಕರಣ'

ಆರಿಫ್ ಖಾನ್

ತಿರುವನಂತಪುರ (ಪಿಟಿಐ): ರಾಜ್ಯದ ವಿಶ್ವವಿದ್ಯಾಲಯಗಳ ಕುಲಾಧಿಪತಿಯೂ ಆಗಿರುವ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಕೇರಳದ ವಿಶ್ವವಿದ್ಯಾಲಯಗಳನ್ನು ಕೇಸರೀಕರಣ ಗೊಳಿಸಲು ದೊಡ್ಡ ಮಟ್ಟದಲ್ಲಿ ಪ್ರಯತ್ನ ಮಾಡುತ್ತಿದ್ದಾರೆ ಎಂದು ಉನ್ನತ ಶಿಕ್ಷಣ ಸಚಿವೆ ಆರ್. ಬಿಂದು ಅವರು ಗುರುವಾರ ಆರೋಪಿಸಿದ್ದಾರೆ.

ವಿಶ್ವವಿದ್ಯಾಲಯಗಳ ಸೆನೆಟ್‌ಗೆ ಆರಿಫ್ ಅವರು ಮಾಡಿದ್ದ ನಾಮನಿರ್ದೇಶನಗಳನ್ನು ರದ್ದುಗೊಳಿಸಿ, ಆರು ವಾರಗಳಲ್ಲಿ ಹೊಸದಾಗಿ ನಾಮನಿರ್ದೇಶನ ಮಾಡುವಂತೆ ಕೇರಳ ಹೈಕೋರ್ಟ್ ಈಚೆಗೆ ನೀಡಿದ ಆದೇಶವನ್ನು ಉಲ್ಲೇಖಿಸಿ ಬಿಂದು ಅವರು ಆರೋಪ ಮಾಡಿದ್ದಾರೆ.

ಹೈಕೋರ್ಟ್ ತೀರ್ಪನ್ನು ಸ್ವಾಗತಿಸಿದ ಬಿಂದು, 'ಕುಲಾಧಿಪತಿ ನಾಮನಿರ್ದೇನ ಮಾಡಿರುವ ವಿದ್ಯಾರ್ಥಿಗಳು ಉತ್ತಮ ಶೈಕ್ಷಣಿಕ ಹಿನ್ನೆಲೆಯನ್ನು ಹೊಂದಿಲ್ಲ. ಅವರು ಕಲೆ, ವಿಜ್ಞಾನ ಹಾಗೂ ಕ್ರೀಡೆ ಸೇರಿದಂತೆ ಇತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿಲ್ಲ. ಎಬಿವಿಪಿ ಸದಸ್ಯರೆಂಬ ಕಾರಣಕ್ಕೆ ಅವರನ್ನು ನಾಮನಿರ್ದೇಶನ ಮಾಡಲಾಗಿತ್ತು' ಎಂದರು. ಆರಿಫ್ ಅವರು ಹಲವು ವಿಷಯಗಳಲ್ಲಿ ಮಧ್ಯಪ್ರವೇಶ ಮಾಡುತ್ತಿರುವುದು ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆ ಹಾಳಾಗಲು ಕಾರಣವಾಗಿದೆ. ಅವರು ಮಧ್ಯಪ್ರವೇಶ ಮಾಡುತ್ತಿರುವುದು ಸರಿಯಲ್ಲ ಎಂಬುದನ್ನು ನ್ಯಾಯಾಲಯದ ಆದೇಶಗಳು ಸಾಬೀತುಪಡಿಸಿವೆ ಎಂದರು.

ಛತ್ತೀಸಗಢ: ಏಳು ಮಂದಿ ನಕ್ಸಲರ ಹತ್ಯೆ

ನಾರಾಯಣಪುರ (ಪಿಟಿಐ): ಛತ್ತೀಸಗಢದ ನಾರಾಯಣಪುರ–ಬಿಜಾಪುರ ಜಿಲ್ಲೆಗಳ ಗಡಿಯಲ್ಲಿ ನಕ್ಸಲರು ಮತ್ತು ಭದ್ರತಾ ಪಡೆಗಳ ನಡುವೆ ಗುರುವಾರ ನಡೆದ ಗುಂಡಿನ ಚಕಮಕಿಯಲ್ಲಿ ಏಳು ಮಂದಿ ನಕ್ಸಲರು ಹತರಾಗಿದ್ದಾರೆ.

'ಇಂದ್ರಾವತಿ ಪ್ರದೇಶ ಸಮಿತಿ ಮತ್ತು ಪ್ಲಟೂನ್ ನಂಬರ್ 16 ಸಂಘಟನೆಗಳ ನಕ್ಸಲರ ಬಗ್ಗೆ ದೊರೆತ ಖಚಿತ ಮಾಹಿತಿಯ ಆಧಾರದಲ್ಲಿ ಭದ್ರತಾ ಸಿಬ್ಬಂದಿಯ ತಂಡವು ಗುರುವಾರ ನಕ್ಸಲ್ ನಿಗ್ರಹ ಕಾರ್ಯಾಚರಣೆ ಆರಂಭಿಸಿತ್ತು' ಎಂದು ನಾರಾಯಣಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರಭಾತ್ ಕುಮಾರ್ ತಿಳಿಸಿದ್ದಾರೆ.

'ನಕ್ಸಲರು ಮತ್ತು ಭದ್ರತಾ ಸಿಬ್ಬಂದಿ ನಡುವಿನ ಗುಂಡಿನ ಚಕಮಕಿ ಇನ್ನೂ ಮುಂದುವರಿದಿದ್ದು, ನಕ್ಸಲರ ಮೃತದೇಹವನ್ನು ವಶಕ್ಕೆ ಪಡೆಯಲಾಗಿದೆ. ಹೆಚ್ಚಿನ ಮಾಹಿತಿಯನ್ನು ನಿರೀಕ್ಷಿಸುತ್ತಿದ್ದೇವೆ' ಎಂದು ಮಾಹಿತಿ ನೀಡಿದ್ದಾರೆ.

ಮಹಾನಗರ ಪಾಲಿಕೆ, ವಿಜಯಪುರ

ಸಂಖ್ಯೆ: ಮನಪಾ/ಲೋವಿ/ಕಾಅ/ಡಿಎಮ್ಎ/ಟಿಎನ್‌ಡಿ/ಇಪ್ರೊ/2024–25

ದಿನಾಂಕ: 21.05.2024

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ ಸನ್ 2022–23 ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನದಲ್ಲಿ 01 ಕಾಮಗಾರಿ ಮತ್ತು ಸನ್ 2023–24 ನೇ ಸಾಲಿನ ಮಹಾನಗರ ಪಾಲಿಕೆಯ ಅನುದಾನದಲ್ಲಿ 02 ಕಾಮಗಾರಿಗಳು ಕೆ.ಪಿ.ಡಬ್ಲ್ಯೂ.ಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಲಾಗಿದೆ.

ಸೂಚನೆ: 1) ಟೆಂಡರ್ ತಿದ್ದುಪಡಿ ಹಾಗೂ ದಿನಾಂಕ ವಿಸ್ತರಣೆ kppp.karnataka.gov.in ಪೋರ್ಟಲ್‌ನಲ್ಲಿ ನಮೂದಿಸಲಾಗುವುದು.

ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 26–06–2024.**

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/008/ಕೆಎಸ್‌ಎಂಸಿಎ/2024–25

NOTICE INVITING APPLICATIONS FOR ALLOTMENT OF VARIOUS REGIMENTAL SHOPS AT TRAINING BATTALION-I, MADRAS ENGINEER GROUP & CENTRE, BANGALORE

1. Commanding Officer, Training Battalion-I, Madras Engineer Group & Centre, Bangalore -42 invites applications for allotment of five Regimental shops on rental basis at this Battalion. Shops would be allotted to the highest bidder based on **undermentioned priority in descending order** of applications:-
   (a) **War Widows / Widows of def personnel killed while on duty.**
   (b) **Disabled Soldiers (Battle casualty)**
   (c) **Ex-Servicemen**
   (d) **Spouse / Widow of Ex-Servicemen**
2. Details of Shops are as under :-

Ser No.	Building No.	Category of Shop	Area in Square Feet
(a)	P-260/1	Bakery	552
(b)	P-260/4	Photo Studio	363
(c)	P-260/7	Mobile Sales Service and Recharge (incl Xerox, Lamination, Stationery)	398.42
(d)	P-260/8	General Store (Army store)	501.49
(e)	P-260/9	Bootmaker	131.67

3) The license fees, rebate and other terms & conditions will be intimated during collection of application form.
4) Application forms will be available at **'Subedar Adjutant (SA) Office' at Training Battalion-I** The date wise timelines are as under:-
   (a) **Issue of Application form to be collected by applicants.** : **30 May to 04 Jun 2024 (0900h to 1300h daily for above mentioned six days).**
   (b) **Date of receipt of application** : **06 Jun 2024 (0001 hours) to 09 Jun 2024 (2359 hours)**
   (c) **Proposed date of auction** : **15 Jun 2024 (1000hrs)**
   (d) **DD in favour of** : **REGT FUND ACCOUNT TB-I payable at SBI MEG & Centre, Bangalore**
   (e) **DD Amount: 500/- (refundable to those, who will not be allotted shop & will be adjusted towards security deposit of those who will be allotted shop).**
5) **Allotment of shop will be for the period of 11 months.**

ಬುದ್ಧ ಪೂರ್ಣಿಮಾ ಹರಿದ್ವಾರದಲ್ಲಿ ಗುರುವಾರ ನಡೆದ ಬುದ್ಧ ಪೂರ್ಣಿಮಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ – ಪಿಟಿಐ ಚಿತ್ರ

ಎವರೆಸ್ಟ್ ಏರಿದ ಭಾರತದ ಬಾಲಕಿ

ಜಮ್‌ಶೆಡ್‌ಪುರ (ಪಿಟಿಐ): ಮೌಂಟ್ ಎವರೆಸ್ಟ್ ಪರ್ವತವನ್ನು ನೇಪಾಳದ ದಿಕ್ಕಿನಿಂದ ಏರಿದ ಭಾರತ ಮೂಲದ ಅತಿ ಕಿರಿಯ ಪರ್ವತಾರೋಹಿ ಎಂಬ ಹಿರಿಮೆಗೆ 16 ವರ್ಷ ವಯಸ್ಸಿನ ಕಾಮ್ಯಾ ಕಾರ್ತಿಕೇಯನ್ ಭಾಜನರಾಗಿದ್ದಾರೆ. ಟಾಟಾ ಸ್ಟೀಲ್ ಅಡ್ವೆಂಚರ್ ಫೌಂಡೇಷನ್ (ಟಿಎಸ್‌ಎಎಫ್) ಈ ಕುರಿತು ಹೇಳಿಕೆ ನೀಡಿದೆ.

ಪರ್ವತಾರೋಹಣದ ಅವಧಿಯಲ್ಲಿ ಕಾಮ್ಯಾ ಅವರ ಜೊತೆಗೆ ಅವರ ತಂದೆ, ನೌಕಾಪಡೆಯ ಕಮಾಂಡರ್ ಎಸ್. ಕಾರ್ತಿಕೇಯನ್ ಅವರೂ ಇದ್ದರು.

ಮೌಂಟ್ ಎವರೆಸ್ಟ್ ಏರಿದ ವಿಶ್ವದ ಎರಡನೇ ಕಿರಿಯ, ಭಾರತ ಪ್ರಥಮ ಸಾಹಸಿಗ ಎಂಬ ಹಿರಿಮೆ ಕಾಮ್ಯಾದ್ದಾಗಿದೆ ಎಂದು ನೌಕಾಪಡೆಯ ಪಶ್ಚಿಮ ಕಮಾಂಡ್ ತಿಳಿಸಿದೆ.

ಬಂಗಾಳ: ಬಿಜೆಪಿ ಕಾರ್ಯಕರ್ತೆ ಹತ್ಯೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಮತದಾನಕ್ಕೆ ಎರಡು ದಿನ ಬಾಕಿ ಇರುವ ಬೆನ್ನಲ್ಲೇ ನಂದಿಗ್ರಾಮದಲ್ಲಿ ಬಿಜೆಪಿ ಕಾರ್ಯಕರ್ತೆಯ ಹತ್ಯೆಯಾಗಿದ್ದು, ಇದನ್ನು ಖಂಡಿಸಿ ಪಕ್ಷದ ಕಾರ್ಯಕರ್ತರು ಗುರುವಾರ ಬೃಹತ್ ಪ್ರತಿಭಟನೆ ನಡೆಸಿದರು.

ಪಂಚಾಯಿತಿ ಜಗಳ ಕೋರ್ಟ್‌ಗೆ?

ಒಂದನೇ ಪುಟದಿಂದ..

ಚುನಾವಣೆಯನ್ನು ಶೀಘ್ರ ನಡೆಸುವುದಾಗಿ ರಾಜ್ಯ ಸರ್ಕಾರ ಹೇಳುತ್ತಾ ಬಂದಿದೆಯಾದರೂ, ಚುನಾವಣೆ ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಂಡಿಲ್ಲ. ಕ್ಷೇತ್ರಗಳ ಪುನರ್‌ವಿಂಗಡಣೆ ಹಾಗೂ ಸದಸ್ಯರ ಸಂಖ್ಯೆ ನಿಗದಿಪಡಿಸಲು ಸರ್ಕಾರ ರಚಿಸಿದ್ದ ಆಯೋಗವು, ಮಾಡಿದ್ದ ಶಿಫಾರಸು ಗಳನ್ನು ಅಂಗೀಕರಿಸಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಡಿಸೆಂಬರ್‌ನಲ್ಲೇ ಅಧಿಸೂಚನೆ ಹೊರಡಿಸಿತ್ತು. ಆದರೆ, ಕ್ಷೇತ್ರವಾರು ಮೀಸಲಾತಿ ನಿಗದಿ ಮಾಡದೇ ಕಾಲಹರಣ ಮಾಡಿಕೊಂಡು ಬರುತ್ತಿದೆ ಎನ್ನುವುದು ಚುನಾವಣಾ ಆಯೋಗದ ಆರೋಪ.

ಜಿಲ್ಲೆ ಹಾಗೂ ತಾಲ್ಲೂಕು ಪಂಚಾಯಿತಿ ಚುನಾಯಿತ ಸದಸ್ಯರ ಅವಧಿ ಪೂರ್ಣಗೊಳ್ಳುವ ಮೊದಲೇ ಚುನಾವಣೆ ನಡೆಸಲು ಚುನಾವಣಾ ಆಯೋಗ 2021ರ ಫೆಬ್ರುವರಿಯಲ್ಲೇ ಅಧಿಸೂಚನೆ ಹೊರಡಿಸಿತ್ತು. ಆದರೆ, ಅಂದು ಅಧಿಕಾರ ದಲ್ಲಿದ್ದ ಬಿಜೆಪಿ ಸರ್ಕಾರ, ಜಿಲ್ಲಾ–ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಗಡಿ ನಿರ್ಣಯ ಮತ್ತು ಮೀಸಲಾತಿ ನಿಗದಿಪಡಿಸುವ ಅಧಿಕಾರವನ್ನು ರಾಜ್ಯ ಚುನಾವಣಾ ಆಯೋಗದಿಂದ ಹಿಂಪಡೆದಿತ್ತು. ಅದಕ್ಕಾಗಿ, ಕರ್ನಾಟಕ ಪಂಚಾಯತ್ ರಾಜ್ ಮತ್ತು ಗ್ರಾಮ ಸ್ವರಾಜ್ ಕಾಯ್ದೆಗೆ ತಿದ್ದುಪಡಿ ತಂದು 'ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ'ಕ್ಕೆ ನೀಡಿತ್ತು. ನಿವೃತ್ತ ಐಎಎಸ್ ಅಧಿಕಾರಿ ಎಂ. ಲಕ್ಷ್ಮೀನಾರಾಯಣ್ ಅಧ್ಯಕ್ಷರಾಗಿ ನೇಮಕವಾಗಿದ್ದರು. ಕಳೆದ ಜುಲೈನಿಂದ ನಿವೃತ್ತ ಐಎಎಸ್ ಅಧಿಕಾರಿ ಎಂ.ಆರ್. ಕಾಂಬ್ಳೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸರ್ಕಾರದ ನಡೆ ಪ್ರಶ್ನಿಸಿ ರಾಜ್ಯ ಚುನಾವಣಾ ಆಯೋಗ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಎರಡು ವರ್ಷಗಳ ವಿಚಾರಣೆ ಬಳಿಕ ಡಿಸೆಂಬರ್‌ನಲ್ಲಿ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿದ್ದ ಸರ್ಕಾರ, 'ತಕ್ಷಣ ಕ್ಷೇತ್ರ ಪುನರ್ ವಿಂಗಡಣೆ ಅಧಿಸೂಚನೆ ಪ್ರಕಟಿಸಲಾಗುವುದು. ನಂತರದ 7 ದಿನಗಳಲ್ಲಿ ಮೀಸಲಾತಿ ಕರಡು ಅಧಿಸೂಚನೆ ಹೊರಡಿಸಲಾಗುವುದು. ಮೀಸಲಾತಿ ಕರಡು ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಲು 10 ದಿನಗಳ ಕಾಲಾವಕಾಶ ನೀಡಲಾಗುವುದು. 2 ವಾರಗಳಲ್ಲಿ ಸಂಬಂಧಿಸಿದ ಪ್ರಾಧಿಕಾರಗಳು ಮೀಸಲು ನಿಗದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಿವೆ' ಎಂದಿತ್ತು.

'ನೀತಿ ಸಂಹಿತೆ ಮುಗಿದ ಕೂಡಲೇ ಕ್ರಮ'

'ಕ್ಷೇತ್ರ ಪುನರ್ ವಿಂಗಡಣೆ ವರದಿ ಅಂಗೀಕರಿಸಿ, ಅಧಿಸೂಚನೆ ಹೊರಡಿಸಲಾಗಿದೆ. ನೀತಿ ಸಂಹಿತೆ ಮುಗಿದ ನಂತರ ಮೀಸಲು ನಿಗದಿ ಪ್ರಕ್ರಿಯೆ ಆರಂಭಿಸಲಾಗುವುದು. ಆಕ್ಷೇಪಣೆಗಳ ಅವಧಿ ಮುಗಿದ ತಕ್ಷಣ ಚುನಾವಣಾ ಪ್ರಕ್ರಿಯೆ ಆರಂಭವಾಗಲಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

'ಪ್ರಜಾವಾಣಿ' ಜತೆ ಮಾತನಾಡಿದ ಅವರು, 'ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಅವಧಿ ಮುಗಿಯುವ ಮೊದಲೇ ಅಂದಿನ ಬಿಜೆಪಿ ಸರ್ಕಾರ ಕ್ರಮ ಕೈಗೊಳ್ಳಬೇಕಿತ್ತು. ಅವಧಿ ಮುಗಿದ ನಂತರ ಕುಂಟು ನೆಪ ಹೇಳಿಕೊಂಡು ಸೀಮಾ ನಿರ್ಣಯ ಆಯೋಗ ರಚಿಸಿತ್ತು. ನಂತರ ಮೀಸಲು ವಿಷಯಕ್ಕಾಗಿ ವಿಳಂಬ ಮಾಡಿತು. ಇದರಿಂದ ಸ್ಥಳೀಯ ಚುನಾಯಿತ ಪ್ರತಿನಿಧಿಗಳಿಗಿದ್ದ ಅವಕಾಶ ಕಿತ್ತುಕೊಂಡಿತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಎಲ್ಲ ಕೆಲಸಗಳನ್ನೂ ವೇಗವಾಗಿ ಮುಗಿಸಿದೆ. ಚುನಾವಣೆ ನಡೆಸಲು ಎಲ್ಲ ಸಿದ್ಧತೆ ಮಾಡಿಕೊಂಡಿದೆ' ಎಂದು ಅವರು ವಿವರಿಸಿದರು.

ಪೋಶೆ ಕಾರು ಅಪಘಾತ ಪ್ರಕರಣ: ಬಾಲ ನ್ಯಾಯ ಮಂಡಳಿ ಆದೇಶ

ಜೂ. 5ರವರೆಗೆ ಬಾಲಕ ವೀಕ್ಷಣಾ ಕೇಂದ್ರಕ್ಕೆ

ಪುಣೆ (ಪಿಟಿಐ): ಐಶಾರಾಮಿ ಕಾರು 'ಪೋಶೆ' ಚಲಾಯಿಸಿ ಬೈಕ್‌ಗೆ ಡಿಕ್ಕಿಹೊಡೆಸಿದ ಪರಿಣಾಮ ಇಬ್ಬರು ಟೆಕಿಗಳು ಮೃತಪಟ್ಟ ಪ್ರಕರಣದಲ್ಲಿ ಕಾನೂನು ಸಂಘರ್ಷಕ್ಕೆ ಸಿಲುಕಿರುವ (ಸಿಸಿಎಲ್) 17 ವರ್ಷದ ಬಾಲಕನನ್ನು ಬಾಲ ನ್ಯಾಯ ಮಂಡಳಿಯ (ಜೆಜೆಬಿ) ಆದೇಶದ ನಂತರ ವೀಕ್ಷಣಾ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಪಾನಮತ್ತನಾಗಿ ಕಾರು ಚಲಾಯಿಸಿ ಅಪಘಾತ ಮಾಡಿದ ಬಾಲಕನನ್ನು ಪೊಲೀಸರು ಹಾಜರುಪಡಿಸಿದ ಒಂದೇ ತಾಸಿನಲ್ಲಿ ಜೆಜೆಬಿಯು ಜಾಮೀನು ನೀಡಿ ಬಿಡುಗಡೆ ಮಾಡಿತ್ತು. 15 ದಿನಗಳೊಳಗೆ ರಸ್ತೆ ಸುರಕ್ಷತಾ ನಿಯಮಗಳು ಮತ್ತು ಮೋಟಾರು ವಾಹನ ಕಾಯ್ದೆ ಬಗ್ಗೆ ಅರಿತು 300 ಪದಗಳ ಪ್ರಬಂಧ ಸಲ್ಲಿಸಲು ಬಾಲಕನಿಗೆ ಸೂಚಿಸಿತ್ತು. ಈ ಆದೇಶವು ವ್ಯಾಪಕ ಟೀಕೆ ಮತ್ತು ಆಕ್ರೋಶಕ್ಕೆ ಗುರಿಯಾಗಿತ್ತು.

ಜಾಮೀನು ರದ್ದುಪಡಿಸಲು ಮತ್ತು ಘೋರ ಅಪರಾಧ ಎಸಗಿರುವ ಬಾಲಕನನ್ನು ವಯಸ್ಕನಂತೆ ಪರಿಗಣಿಸಿ ವಿಚಾರಣೆ ನಡೆಸಲು ಅನುಮತಿಸುವಂತೆ ಪೊಲೀಸರು ಜೆಜೆಬಿ ಮುಂದೆ ಮರುಪರಿಶೀಲನಾ ಅರ್ಜಿ ಸಲ್ಲಿಸಿದ್ದರು. ಬಾಲಕನಿಗೆ ನೋಟಿಸ್ ಜಾರಿ ಮಾಡಿ, ಬುಧವಾರ ವಿಚಾರಣೆ ನಡೆಸಿದ ಜೆಜೆಬಿ, ಆತನನ್ನು ಜೂನ್ 5ರವರೆಗೆ ಬಾಲ ವೀಕ್ಷಣಾ ಕೇಂದ್ರಕ್ಕೆ ಕಳುಹಿಸಲು ಆದೇಶಿಸಿತು.

30ಕ್ಕೂ ಹೆಚ್ಚು ಮಂದಿ ಅಪ್ರಾಪ್ತರನ್ನು ಇರಿಸಲಾಗಿರುವ, ಯರವಾಡದಲ್ಲಿರುವ ನೆಹರೂ ಉದ್ಯೋಗ ಕೇಂದ್ರದ ಬಾಲ ವೀಕ್ಷಣಾ ಕೇಂದ್ರಕ್ಕೆ ಈ ಬಾಲಕನನ್ನು ಕಳುಹಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

'ಪರಿವೀಕ್ಷಣಾ ಕೇಂದ್ರದಲ್ಲಿ ತಂಗಿರುವಾಗ ಬಾಲಕನ ಮಾನಸಿಕ ಸ್ಥಿತಿಗತಿಯ ಮೌಲ್ಯಮಾಪನ ನಡೆಯಲಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜೆಜೆಬಿ ವಿಚಾರಣೆಯಲ್ಲಿ ಬಾಲಕನನ್ನು ಪ್ರತಿನಿಧಿಸಿದ ವಕೀಲ ಪ್ರಶಾಂತ್ ಪಾಟೀಲ್, 'ಬಾಲಕನನ್ನು ವಯಸ್ಕನೆಂದು ಪರಿಗಣಿಸಬೇಕೇ ಎಂಬುದನ್ನು ನಿರ್ಧರಿಸುವ ಪ್ರಕ್ರಿಯೆಯು ಮನೋವೈದ್ಯರು ಮತ್ತು ಆಪ್ತ ಸಮಾಲೋಚಕರು ನೀಡುವ ವರದಿಗಳನ್ನು ಆಧರಿಸಿದೆ. ಇದಕ್ಕೆ ಕನಿಷ್ಠ ಎರಡು ತಿಂಗಳು ಬೇಕಾಗಲಿದ್ದು, ನಂತರ ಜೆಜೆಬಿಯು ತನ್ನ ನಿರ್ಧಾರ ಪ್ರಕಟಿಸುತ್ತದೆ' ಎಂದು ಹೇಳಿದ್ದಾರೆ.

ಬಾಲಕನ ತಾತನ ವಿಚಾರಣೆ

'ಪೋಶೆ' ಕಾರು ಅಪಘಾತ ಪ್ರಕರಣದಲ್ಲಿ ಭಾಗಿಯಾಗಿರುವ ಬಾಲಕನ ತಾತನನ್ನು ಪುಣೆ ಪೊಲೀಸರು ಗುರುವಾರ ವಿಚಾರಣೆ ನಡೆಸುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಾಲಕನಿಗೆ ಕಾರು ಚಲಾಯಿಸಲು ಅನುಮತಿಸಿದ ಅಪರಾಧದಲ್ಲಿ ಆತನ ತಂದೆ, ರಿಯಲ್ ಎಸ್ಟೇಟ್ ಉದ್ಯಮಿ ವಿಶಾಲ್ ಅಗರ್‌ವಾಲ್, ಬಾಲಕನಿಗೆ ಮದ್ಯ ಪೂರೈಸಿದ ಅಪರಾಧದಲ್ಲಿ ಎರಡು ಮದ್ಯ ಮಾರಾಟ ಸಂಸ್ಥೆಗಳ ಮಾಲೀಕರು ಹಾಗೂ ಸಿಬ್ಬಂದಿ ವಿರುದ್ಧ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿ, ಬಾಲಕನ ತಾತನನ್ನು ಪೊಲೀಸರು ವಿಚಾರಣೆಗೆ ಕರೆಸಿದ್ದಾರೆ ಎಂದು ಅಪರಾಧ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

'ಬಾಲಕನ ತಾತನ ವಿಚಾರಣೆಯನ್ನು ಪುಣೆ ಪೊಲೀಸ್ ಕಮಿಷನರೇಟ್‌ನಲ್ಲಿ ಅಪರಾಧ ವಿಭಾಗದ ಪೊಲೀಸರು ನಡೆಸುತ್ತಿದ್ದಾರೆ' ಎಂದು ಅವರು ಹೇಳಿದರು.

ಬಾಲಕನಿಗೆ ₹7,500 ಶ್ಯೂರಿಟಿ ಮತ್ತು ಆತನನ್ನು ಕೆಟ್ಟವರ ಸಹವಾಸದಿಂದ ದೂರವಿಡುವುದಾಗಿ ಆತನ ತಾತ ನೀಡಿದ ಭರವಸೆ ಮೇಲೆ ಜೆಜೆಬಿ ಭಾನುವಾರ ಜಾಮೀನು ನೀಡಿತ್ತು.

'ಬಾಲಕನಿಗೆ ನೀಡಿದ್ದ ಜಾಮೀನು ರದ್ದಾಗಿಲ್ಲ'

ಬಾಲಕನಿಗೆ ಭಾನುವಾರ ನೀಡಿದ್ದ ಜಾಮೀನನ್ನು ಬುಧವಾರ ಸಂಜೆ ಜೆಜೆಬಿ ರದ್ದುಗೊಳಿಸಿದೆ ಎಂದು ಪೊಲೀಸರು ಹೇಳಿದ್ದಾರೆ, ಅವರ ವಕೀಲರು 'ಜಾಮೀನು ರದ್ದಾಗಿಲ್ಲ' ಎಂದು ಪ್ರತಿಪಾದಿಸಿದ್ದು, ವಯಸ್ಕನೆಂದು ಪರಿಗಣಿಸಲು ಪೊಲೀಸರು ಸಲ್ಲಿಸಿರುವ ಅರ್ಜಿ ಬಗ್ಗೆ ಜೆಜೆಬಿ ಯಾವುದೇ ಆದೇಶ ನೀಡಿಲ್ಲ ಎಂದು ಹೇಳಿದ್ದಾರೆ.

'ಜೆಜೆಬಿ ಹೊರಡಿಸಿದ ಕಾರ್ಯಾದೇಶದ ಪ್ರಕಾರ, ಬಾಲಕನನ್ನು ಜೂನ್ 5ರವರೆಗೆ ವೀಕ್ಷಣಾ ಕೇಂದ್ರಕ್ಕೆ ಕಳುಹಿಸಲಾಗಿದೆ. ಅವನನ್ನು ವಯಸ್ಕನೆಂದು ಪರಿಗಣಿಸಲು ಕೋರಿರುವ ಅರ್ಜಿ ಬಗ್ಗೆ ಜೆಜೆಬಿಯಿಂದ ಇನ್ನೂ ಆದೇಶ ಬಂದಿಲ್ಲ' ಎಂದು ಪೊಲೀಸ್ ಆಯುಕ್ತ ಅಮಿತೇಶ್ ಕುಮಾರ್ ಬುಧವಾರ ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯ

NAAC Accredited with 'A' GRADE

ಜ್ಞಾನಭಾರತಿ ಆವರಣ, ಬೆಂಗಳೂರು – 560 056.

ಸಂಖ್ಯೆ: ಎಸಿಎ–1/ಸ್ನಾತಕ ಪದವಿಗೆ ಅರ್ಜಿ/2024–25 ದಿನಾಂಕ: 20.05.2024

ತಿದ್ದುಪಡಿ

ಬೆಂಗಳೂರು ವಿಶ್ವವಿದ್ಯಾಲಯ 2024–25ನೇ ಸಾಲಿಗೆ ಈ ಕೆಳಕಂಡ ಸ್ನಾತಕ ಪದವಿ (ಹಾನರ್ಸ್) ಕೋರ್ಸುಗಳಿಗೆ ಅರ್ಜಿ ಆಹ್ವಾನಿಸಲಾಗಿರುತ್ತದೆ, ಸದರಿ ಅಧಿಸೂಚನೆಯನ್ನು ಬಿ.ಎ., ಬಿ.ಕಾಂ, ಬಿ.ಎಸ್ಸಿ (ಹಾನರ್ಸ್) ಎಂಬುದರ ಬದಲಿಗೆ ಬಿ.ಎ., ಬಿ.ಕಾಂ ಹಾಗೂ ಬಿ.ಎಸ್ಸಿ ಸ್ನಾತಕ ಪದವಿ ಕೋರ್ಸ್ ಎಂದು ಓದಿಕೊಳ್ಳುವಂತೆ ತಿಳಿಸಲಾಗಿದೆ.

(1) ಬಿ.ಎ. ಪದವಿ ಪ್ರೋಗ್ರಾಮ್: ಬಿ.ಕಾಂ.–NISM ಮೌಲ್ಯವರ್ಧಿತ ಪ್ರಮಾಣ ಪತ್ರದೊಂದಿಗೆ. ಎರಡು ವರ್ಷದ ಪಿ.ಯು.ಸಿ. ಅಥವಾ ತತ್ಸಮಾನ ಕಲೆ/ವಿಜ್ಞಾನ/ವಾಣಿಜ್ಯ ವಿಷಯಗಳ ಐಚ್ಛಿಕ ಮತ್ತು ಕನಿಷ್ಠ 50% ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. **(2) ಬಿ.ಎಸ್ಸಿ. ಪದವಿ ಪ್ರೋಗ್ರಾಮ್ :** ಎರಡು ವರ್ಷದ ಪಿ.ಯು.ಸಿ. ಅಥವಾ ತತ್ಸಮಾನವನ್ನು ಕಡ್ಡಾಯವಾಗಿ, ಗಣಿತ ಮತ್ತು ವಿಜ್ಞಾನ ವಿಷಯಗಳ ಐಚ್ಛಿಕ ಮತ್ತು ಕನಿಷ್ಠ 50% ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಕರ್ನಾಟಕ ರಾಜ್ಯ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡ ಹಾಗೂ ಪ್ರವರ್ಗ–1ರ ಅಭ್ಯರ್ಥಿಗಳಿಗೆ ಪ್ರತಿಶತ 45%ರಷ್ಟು ಅಂಕಗಳು. ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ಅವರು ಗಳಿಸಿದ ಅಂಕಗಳ ಜೇಷ್ಠತಾ ಆಧಾರದ ಮೇಲೆ ನಿರ್ಧರಿಸಲಾಗುವುದು.

ಟಿಪ್ಪಣಿ: • ಅಭ್ಯರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ಸಂಯೋಜಕರ ಕಚೇರಿ, ಸ್ನಾತಕ ಪದವಿ ಕೋರ್ಸ್ ಕಚೇರಿ, ಇತಿಹಾಸ ವಸ್ತು ಸಂಗ್ರಹಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–56 ಇವರಿಗೆ ಸಲ್ಲಿಸಲು ಕೋರಲಾಗಿದೆ. ಪ್ರವೇಶಾತಿಯ ವಿವರಗಳಿಗಾಗಿ ಸಂಪರ್ಕಿಸುವ **ದೂರವಾಣಿ: 98442 73465** • ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್‌ಗೆ: **https://bangaloreuniversity.karnataka.gov.in/** ಭೇಟಿ ನೀಡಿ • ಮೇಲಿನ ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ ಹಾಸ್ಟಲ್ ಸೌಲಭ್ಯವಿರುವುದಿಲ್ಲ, ಸ್ಥಳೀಯ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು • ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **31.05.2024.**

ಸಹಿ/–
ಕುಲಸಚಿವರು

DIPR/CP/RO108/AAPL/2024-25

ಸುಭಾಷಿತ

ಸತ್ಯವು ತಾತ್ಕಾಲಿಕವಾಗಿ ನೋವುಂಟು ಮಾಡಬಹುದು, ಆದರೆ ಸುಳ್ಳು ಎಂಬುದು ಶಾಶ್ವತವಾಗಿ ಕಲೆಗಳನ್ನು ಉಳಿಸಿಬಿಡುತ್ತದೆ.

–ಶಿವ್ ಖೇರಾ

ನೀತಿ ಸಂಹಿತೆ ಉಲ್ಲಂಘನೆ ತಡೆಯುವ ಛಾತಿ ಆಯೋಗಕ್ಕೆ ಇಲ್ಲ

ಆಡಳಿತಾರೂಢ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ವಿರೋಧ ಪಕ್ಷ ಕಾಂಗ್ರೆಸ್‌ನ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಚುನಾವಣಾ ಆಯೋಗವು ಈ ಪಕ್ಷಗಳ ತಾರಾ ಪ್ರಚಾರಕರ ದ್ವೇಷ ಭಾಷಣಕ್ಕೆ ಸಂಬಂಧಿಸಿ ನಿರ್ದೇಶನಗಳನ್ನು ನೀಡಿದೆ. 'ವಿಭಜನಕಾರಿ ಮಾತು'ಗಳಿಂದ ತಾರಾ ಪ್ರಚಾರಕರು ದೂರ ಇರುವಂತೆ ನೋಡಿಕೊಳ್ಳಿ ಎಂದು ಇಬ್ಬರೂ ಅಧ್ಯಕ್ಷರಿಗೆ ಸೂಚಿಸಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ದೂರು ಸಲ್ಲಿಕೆಯಾದ 27 ದಿನಗಳ ಬಳಿಕ ಚುನಾವಣಾ ಆಯೋಗವು ಕ್ರಮ ಕೈಗೊಂಡಿದೆ. ಬಹುಪಾಲು ಮತದಾನ ಮುಗಿದಿದೆ. 115 ಕ್ಷೇತ್ರಗಳಷ್ಟೇ ಬಾಕಿ ಇವೆ. ಆದರೆ, ಆರನೇ ಹಂತದ ಮತದಾನಕ್ಕೆ ಬಹಿರಂಗ ಪ್ರಚಾರ ಗುರುವಾರ ಮುಗಿದಿದೆ. ಕೊನೆಯ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಮಾತ್ರ ಪ್ರಚಾರ ಇದೆ. ಇಷ್ಟು ವಿಳಂಬ ಧೋರಣೆ ಅನುಸರಿಸಲು ಕಾರಣವೇನು? ಆಯೋಗವು ತಡವಾಗಿಯಾದರೂ ಕ್ರಮ ಕೈಗೊಂಡಿದೆ ಎಂದು ಸಮಾಧಾನಪಡುವಂತಹ ವಿಚಾರವೂ ಅಲ್ಲ ಇದು. ಏಕೆಂದರೆ, ಚುನಾವಣಾ ಆಯೋಗವು ನೀತಿ ಸಂಹಿತೆ ಪಾಲನೆ ಆಗುವಂತೆ ನೋಡಿಕೊಳ್ಳುವ, ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸುವ, ಎಲ್ಲ ಪಕ್ಷಗಳಿಗೂ ಸಮಾನ ಅವಕಾಶ ದೊರಕುವಂತೆ ಮಾಡುವ ತನ್ನ ಹೊಣೆಗಾರಿಕೆಯನ್ನು ಈಡೇರಿಸುವಲ್ಲಿ ವಿಫಲವಾಗಿದೆ ಎಂದೇ ಹೇಳಬೇಕಾಗುತ್ತದೆ. ಈ ಬಾರಿಯ ಚುನಾವಣಾ ಪ್ರಚಾರವೇ ಅದಕ್ಕೆ ಪುರಾವೆಯಾಗಿದೆ. ರಾಜಕೀಯ ಸಂವಾದ, ಚರ್ಚೆ ಮತ್ತು ಚುನಾವಣಾ ಪ್ರಚಾರದ ಗುಣಮಟ್ಟ ಚುನಾವಣೆಯಿಂದ ಚುನಾವಣೆಗೆ ಕುಸಿಯುತ್ತಲೇ ಸಾಗಿರುವುದಕ್ಕೆ ಆಯೋಗವೂ ಕಾರಣವಾಗಿದೆ.

ರಾಜಕೀಯ ಸಂವಾದ, ಚರ್ಚೆ ಮತ್ತು ಚುನಾವಣಾ ಪ್ರಚಾರದ ಗುಣಮಟ್ಟವು ಚುನಾವಣೆಯಿಂದ ಚುನಾವಣೆಗೆ ಕುಸಿಯುತ್ತಲೇ ಸಾಗಿರುವುದಕ್ಕೆ ಚುನಾವಣಾ ಆಯೋಗ ಸಹ ಕಾರಣವಾಗಿದೆ

ಚುನಾವಣಾ ಪ್ರಚಾರದಲ್ಲಿ ದ್ವೇಷ ಭಾಷಣ, ಕೋಮು ಧ್ರುವೀಕರಣದ ಹೇಳಿಕೆಗಳ ಮೇಲಾಟವೇ ನಡೆದಿದೆ. ಎಲ್ಲ ಪಕ್ಷಗಳ ಹಲವು ನಾಯಕರು ಇಂತಹ ಹೇಳಿಕೆಗಳನ್ನು ನೀಡಿದ್ದಾರೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರೇ ಚುನಾವಣಾ ಪ್ರಚಾರವನ್ನು ಇಷ್ಟೊಂದು ಕೀಳು ಮಟ್ಟಕ್ಕೆ ಇಳಿಸುವಲ್ಲಿ ಮುಂಚೂಣಿಯಲ್ಲಿದ್ದರು ಎಂಬುದು ಶೋಚನೀಯ ವಿಚಾರವು. ಮುಸ್ಲಿಮರ ಕುರಿತಂತೆ ಅವರು ದ್ವೇಷ ಭಾಷಣ ಮಾಡಿದ್ದಾರೆ. ಚುನಾವಣಾ ಪ್ರಚಾರ ಆರಂಭವಾದಾಗಿನಿಂದ ಪ್ರತಿ ದಿನವೂ ಕೋಮು ಧ್ರುವೀಕರಣದ ಮಾತುಗಳನ್ನು ಆಡಿದ್ದಾರೆ. ಆಧಾರವಿಲ್ಲದ ಹಲವು ಆರೋಪಗಳನ್ನು ಮಾಡಿದ್ದಾರೆ. ಕೋಲ್ಕತ್ತ ಹೈಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಮತ್ತು ತಮ್ಲುಕ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅಭಿಜಿತ್ ಗಂಗೋಪಾಧ್ಯಾಯ ಅವರು ಮಮತಾ ಬ್ಯಾನರ್ಜಿ ಅವರ ಕುರಿತು ಅವಹೇಳನಕಾರಿಯಾಗಿ ಮಾತನಾಡಿದ್ದರು. ಆಯೋಗವು ಮಂಗಳವಾರ ಕ್ರಮ ಕೈಗೊಂಡಿತು. ಅವರಿಗೆ 24 ತಾಸು ಪ್ರಚಾರ ನಿಷೇಧ ಹೇರಿತ್ತು. ಅದಕ್ಕೂ ಹಿಂದೆಯೂ ಕಾಂಗ್ರೆಸ್‌ನ ರಣದೀಪ್ ಸುರ್ಜೇವಾಲಾ, ಬಿಜೆಪಿಯ ಶೋಭಾ ಕರಂದ್ಲಾಜೆ ಮತ್ತು ದಿಲೀಪ್ ಘೋಷ್, ಬಿಆರ್‌ಎಸ್‌ನ ಕೆ.ಚಂದ್ರಶೇಖರ ರಾವ್, ವೈಎಸ್‌ಆರ್ ಕಾಂಗ್ರೆಸ್‌ನ ಜಗನ್ ಮೋಹನ್ ರೆಡ್ಡಿ ಮುಂತಾದವರ ವಿರುದ್ಧವೂ ಕ್ರಮ ಕೈಗೊಳ್ಳಲಾಗಿದೆ. ಮೋದಿ ಮತ್ತು ರಾಹುಲ್ ಅವರ ವಿರುದ್ಧ ಕೈಗೊಂಡ ಕ್ರಮದ ಹಿಂದೆ ಸಮಾನತೆಯನ್ನು ಸಾರುವ ಉದ್ದೇಶವನ್ನು ಆಯೋಗವು ಹೊಂದಿರಬಹುದು. ಆದರೆ, ವಿವಿಧ ಸಮುದಾಯಗಳ ಬದುಕಿನ ಮೇಲೆ ಪರಿಣಾಮ ಬೀರಬಲ್ಲ ವಿಚಾರಗಳ ವಿಮರ್ಶೆ ಹಾಗೂ ಜನಾಂಗೀಯ ದ್ವೇಷಕ್ಕೆ ಕಾರಣವಾಗಬಹುದಾದ ಕೋಮು ಧ್ರುವೀಕರಣದ ಭಾಷಣವನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗುವುದು ಸರಿಯಲ್ಲ. ಮಾದರಿ ನೀತಿ ಸಂಹಿತೆಯನ್ನು ಯಾವುದೇ ಪಕ್ಷ ಅಥವಾ ನಾಯಕ ಪಾಲಿಸುತ್ತಿಲ್ಲ ಎಂಬುದು ಸ್ಪಷ್ಟ. ಅದನ್ನು ಪಾಲಿಸುವಂತೆ ಮಾಡುವ ಛಾತಿಯನ್ನು ಚುನಾವಣಾ ಆಯೋಗವು ಕಳೆದುಕೊಂಡಿದೆ ಎಂಬುದೂ ಸ್ಪಷ್ಟ. ಏಕೆಂದರೆ, ಕೋಮು ಧ್ರುವೀಕರಣದ ಮಾತುಗಳನ್ನು ಆಡಬಾರದು ಎಂದು ಮೋದಿ ಅವರಿಗೆ ಆಯೋಗ ಸೂಚಿಸಿದೆ. ಆದರೆ, ಈ ಸೂಚನೆ ನೀಡಿದ ದಿನ ಮತ್ತು ಅದರ ಮರುದಿನ ಕೂಡ ಮೋದಿ ಅವರು ಕೋಮು ಧ್ರುವೀಕರಣದ ಮಾತುಗಳನ್ನು ಆಡಿದ್ದಾರೆ. ಸಂವಿಧಾನ ಕುರಿತಂತೆ ಮಾತನಾಡಬಾರದು ಎಂದು ರಾಹುಲ್ ಅವರಿಗೆ ಹೇಳಲಾಗಿದೆ. ಅವರು ಕೂಡ ಸಂವಿಧಾನವನ್ನು ಬಿಜೆಪಿ ಬದಲಿಸಲಿದೆ ಎಂದಿದ್ದಾರೆ. ನಿಷ್ಪಕ್ಷಪಾತ ಚುನಾವಣೆ ನಡೆಸುವ ಹೊಣೆ ಹೊತ್ತಿರುವ ಸಾಂವಿಧಾನಿಕ ಸಂಸ್ಥೆಯಾದ ಚುನಾವಣಾ ಆಯೋಗದ ಮೇಲೆ ದೇಶದ ಪ್ರಧಾನಿಗೇ ಗೌರವ ಇಲ್ಲ ಎಂಬುದನ್ನು ಇದು ತೋರಿಸುತ್ತದೆ. ಇದು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ.

ಪೆನ್‌ಡ್ರೈವ್ ಪ್ರಕರಣ ಕರ್ನಾಟಕದ ರಾಜಕಾರಣ ತಲುಪಿರುವ ಅಧಃಪತನದ ಪ್ರತೀಕದಂತಿದೆ

ಕೊಳಕಿನ ಮಸಿ ನಮ್ಮ ಮುಖದಲ್ಲಿಲ್ಲವೇ?

ಪಡಸಾಲೆ

ರಘುನಾಥ ಚ.ಹ.

ಬೆಳುಗೊಳದ ಗೊಮ್ಮಟ ಕರ್ನಾಟಕದ ಮೂಲಕ ವಿಶ್ವಕ್ಕೆ ಸಂದಿರುವ ವಿರಾಗದ ಬಹು ದೊಡ್ಡ ಸಂಕೇತ. ಗೊಮ್ಮಟನಿಗೆ ವಿರುದ್ಧ ಪದದಂತೆ, ಕೊಳಕು, ಕ್ರೌರ್ಯವನ್ನೊಳಗೊಂಡ ವಿಕೃತ ಭೋಗದ ಶೃಂಗ ಮಾದರಿಯೂ ಕನ್ನಡದ ಮಣ್ಣಿನಿಂದಲೇ ಪ್ರಕಟಗೊಂಡಿದೆ– ಹಾಸನದ ಸಂಸದನ ಮೂಲಕ.

ಹುಯಿಲಗೋಳ ನಾರಾಯಣ ರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಕವಿತೆಯಲ್ಲಿ 'ಓಜೆಯಿಂ ಮೆರೆದರಸುಗಳ ಸಾಹಸದ ಸೂಡು' ಎನ್ನುವ ಸಾಲಿದೆ. 'ಓಜೆ' ಎಂದರೆ 'ಕ್ರಮ'ವೂ ಹೌದು, ಶಕ್ತಿ–ಸಾಮರ್ಥ್ಯವೂ ಹೌದು. ಹಾಸನದ ಸಂಸದನ ಕಾಮಕಾಂಡ ಪ್ರಕರಣದ ಹಿನ್ನೆಲೆಯಲ್ಲಿ 'ಓಜೆಯ ಸಾಹಸ ಪ್ರದರ್ಶನ'ದ ಸಮಕಾಲೀನತೆಯನ್ನು ಹೇಗೆ ಅರ್ಥ ಮಾಡಿಕೊಳ್ಳುವುದು?

ಯುವ ಸಂಸದ ತನ್ನ ಅಧಿಕಾರ ಮತ್ತು ಕುಟುಂಬದ ವರ್ಚಸ್ಸನ್ನು ದುರುಪಯೋಗ ಮಾಡಿಕೊಂಡು ಎಸಗಿದ್ದಾರೆ ಎನ್ನಲಾದ ಲೈಂಗಿಕ ದೌರ್ಜನ್ಯಗಳ ಆರೋಪವನ್ನು ವೈಯಕ್ತಿಕ ನೆಲೆಗಟ್ಟಿನಲ್ಲಿ ನೋಡಬೇಕೆನ್ನುವ ಅಭಿಪ್ರಾಯವಿದೆ. ಇದಕ್ಕೆ ತಕ್ಕನಾಗಿ, 'ಪ್ರಜ್ವಲ್‌ಗೂ ನನಗೂ ಸಂಬಂಧವಿಲ್ಲ' ಎಂದು ಎಚ್‌.ಡಿ. ಕುಮಾರಸ್ವಾಮಿ ಹೇಳಿದ್ದಾರೆ. ಸ್ವಂತ ಚಿಕ್ಕಪ್ಪನೇ ಹೀಗೆ ಹೇಳುವಾಗ, ಪ್ರಜ್ವಲ್ ಪಾಪಕೃತ್ಯದ ನೈತಿಕ ಹೊಣೆಗಾರಿಕೆಯನ್ನು ಕುಟುಂಬ, ಸಮುದಾಯ ಇಲ್ಲವೇ ನಾಡಿನ ನೆಲೆಗಟ್ಟಿನಲ್ಲಿ ನೋಡುವುದು ಸಾಧ್ಯವಿಲ್ಲ. ಕಳಂಕದ ಹೊಣೆಗಾರಿಕೆಗೆ ಅಪ್ಪಂದಿರಿರುವುದಿಲ್ಲ ಎನ್ನುವುದನ್ನು ಕುಮಾರಸ್ವಾಮಿ ಅವರು ಸಾಬೀತುಪಡಿಸಿದಂತಿದೆ. ಆದರೆ, ಪ್ರಜ್ವಲ್‌ಗೇನಾದರೂ ಒಲಿಂಪಿಕ್ ಪದಕ ಬಂದಿದ್ದಲ್ಲಿ ಕುಮಾರಸ್ವಾಮಿ ಹೀಗೆಯೇ ಹೇಳುತ್ತಿದ್ದರೆ? ಕುಮಾರಸ್ವಾಮಿ ಮಾತನ್ನು ಹಿಂಜಿ ನೋಡಿದರೆ, ದೇವೇಗೌಡರ ಕುಟುಂಬಕ್ಕೂ ತಮಗೂ ಸಂಬಂಧವಿಲ್ಲ ಎನ್ನುವ ಅರ್ಥವನ್ನೂ ಅವರ ಹೇಳಿಕೆಗೆ ಹಚ್ಚಲು ಸಾಧ್ಯವಿದೆ. ಆದರೆ, ಯಾರೊಬ್ಬರೂ ಹೊಣೆಗಾರಿಕೆಯಿಂದ ಇಷ್ಟು ಸುಲಭವಾಗಿ ನುಣುಚಿಕೊಳ್ಳುವುದು ಸಾಧ್ಯವಿಲ್ಲ. ಕುಮಾರಸ್ವಾಮಿ ಮಾತ್ರವಲ್ಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಅಥವಾ ಪ್ರಧಾನಿ ನರೇಂದ್ರ ಮೋದಿ ಅವರು ಹೀಗೆ ಹೇಳಿದರೂ ಅದನ್ನು ಒಪ್ಪುವುದು ಸಾಧ್ಯವಿಲ್ಲ. ಪ್ರಜ್ವಲ್ ಎಸಗಿದ್ದಾರೆನ್ನಲಾದ ಪಾಪಕೃತ್ಯಗಳಲ್ಲಿ ಇವರುಗಳ ನೇರ ಪಾತ್ರವಿಲ್ಲದಿರಬಹುದು. ಆದರೆ, ಅದರ ಮಸಿ ಅವರ ಮುಖಕ್ಕೂ ಅಂಟಿಕೊಂಡಿರುವುದನ್ನು ನಿರಾಕರಿಸುವುದು ಸಾಧ್ಯವಿಲ್ಲ.

ಪ್ರಜ್ವಲ್ ಪ್ರಕರಣದಲ್ಲಿ ಎಲ್ಲ ಪಕ್ಷಗಳ ರಾಜಕಾರಣಿಗಳೂ ಸೋಗಲಾಡಿತನದಿಂದ ವರ್ತಿಸಿದ್ದಾರೆ. ಈ ಸೋಗಲಾಡಿತನ ಬಿಜೆಪಿಯಿಂದಲೇ ಆರಂಭವಾಗುತ್ತದೆ. ಪ್ರಜ್ವಲ್‌ರ ಕೊಳಕುತನದ ಬಗ್ಗೆ ಚುನಾವಣೆಗೆ ಮೊದಲೇ ಪಕ್ಷದ ವರಿಷ್ಠರಿಗೆ ಪತ್ರ ಬರೆದು ತಿಳಿಸಿದ್ದುದಾಗಿಯೂ ಕಳಂಕಿತನ ಜೊತೆಗೆ ರಾಜಕೀಯವಾಗಿ ಗುರುತಿಸಿಕೊಳ್ಳುವುದು ಬೇಡವೆಂದು ಸಲಹೆ ನೀಡಿದ್ದಾಗಿಯೂ ಬಿಜೆಪಿ ಮುಖಂಡ ದೇವರಾಜೇಗೌಡ ಹೇಳಿದ್ದಾರೆ. ಹೀಗಿದ್ದೂ ಪ್ರಜ್ವಲ್ ಜೊತೆ ಬಿಜೆಪಿ ಗುರುತಿಸಿಕೊಂಡಿದ್ದು ಮಾತ್ರವಲ್ಲ, ಕಳಂಕಿತ ವ್ಯಕ್ತಿಯ ಪರವಾಗಿ ಖುದ್ದು ಪ್ರಧಾನಿಯೇ ಮತ ಕೇಳಿದ್ದಾರೆ. ಪ್ರಕರಣ ಬೆಳಕಿಗೆ ಬಂದ ನಂತರ, ಪ್ರಜ್ವಲ್ ಜೊತೆ ತಮಗೆ ಸಂಬಂಧವಿಲ್ಲವೆಂದು ಬಿಜೆಪಿ ಹೇಳಿದರೆ ಅದನ್ನು ಯಾರಾದರೂ ನಂಬುವುದು ಸಾಧ್ಯವೇ? ಪ್ರಕರಣವನ್ನು ನಿಭಾಯಿಸುವಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಮುಖಂಡರ ವರ್ತನೆಯೂ ಪ್ರಶ್ನಾರ್ಹ. ಸಂತ್ರಸ್ತೆಯರ ಹಿತಾಸಕ್ತಿ ರಕ್ಷಣೆಗಿಂತಲೂ ರಾಜಕೀಯ ಎದುರಾಳಿಗಳನ್ನು ಇಕ್ಕಟ್ಟಿಗೆ ಸಿಲುಕಿಸುವುದರಲ್ಲೇ ಅಧಿಕಾರದಲ್ಲಿ ಇರುವವರಿಗೆ ಹೆಚ್ಚು ಉತ್ಸಾಹ ಇರುವಂತಿದೆ.

ಬಿಜೆಪಿ, ಕಾಂಗ್ರೆಸ್‌ಗಿಂತಲೂ ಪೆನ್‌ಡ್ರೈವ್ ಪ್ರಕರಣ ಹೆಚ್ಚು ಬಾಧಿಸಬೇಕಾದುದು ಜೆಡಿಎಸ್ ನಾಯಕರನ್ನು. ಜೆಡಿಎಸ್ ಕೌಟುಂಬಿಕ ಪಕ್ಷ ಎನ್ನುವುದನ್ನು ಆ ಪಕ್ಷದ ಕೇಂದ್ರದಲ್ಲಿರುವವರೇ ಮತ್ತೆ ಮತ್ತೆ ಸಾಬೀತುಪಡಿಸಿದ್ದಾರೆ. ಹಾಗಾಗಿ, ಮನೆಯ ಸದಸ್ಯನೊಬ್ಬ ಕಳಂಕ ಮೆತ್ತಿಕೊಂಡಾಗ ಆತನನ್ನು ದೂರ ಇಡುವ ಮೂಲಕ ಕುಟುಂಬದ ಪಾವಿತ್ರ್ಯ ಕಾಪಾಡಿಕೊಳ್ಳುವುದು ಸಾಧ್ಯವಿಲ್ಲ. ಪೆನ್‌ಡ್ರೈವ್‌ನಲ್ಲಿರುವ ದೃಶ್ಯಗಳು ಎರಡು- ಮೂರು ವರ್ಷಗಳಷ್ಟು ಹಳೆಯವು ಎಂದು ಆರೋಪಿಯ ತಂದೆ ಹೇಳಿದರು. 'ಪ್ರಜ್ವಲ್ ವಿದೇಶಿ ಯಾತ್ರೆ ನನಗೆ ತಿಳಿದಿರಲಿಲ್ಲ ಎನ್ನುವುದನ್ನು ನಾನು ಜನರಿಗೆ ಅರ್ಥ ಮಾಡಿಸುವುದು ಸಾಧ್ಯವಿಲ್ಲ. ನಾನು ನನ್ನ ಆತ್ಮಸಾಕ್ಷಿಗೆ ಮಾತ್ರ ಉತ್ತರಿಸಬಲ್ಲೆ' ಎಂದು ತಾತ ಹೇಳಿದ್ದಾರೆ. ಪ್ರಸಕ್ತ ಘಟನೆಯ ಹಿಂದೆ ಕುಟುಂಬವನ್ನು ಗುರಿಯಾಗಿಸಿಕೊಂಡ ರಾಜಕೀಯ ಷಡ್ಯಂತ್ರವಿದೆ ಎನ್ನುವ ಅರ್ಥದಲ್ಲೂ ಮಾತನಾಡಿದ್ದಾರೆ. ಈ ಮಾತುಗಳನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? ಸಾರ್ವಜನಿಕ ಜೀವನದಲ್ಲಿ ತೊಡಗಿಕೊಂಡ ವ್ಯಕ್ತಿಗೆ ಜನರಿಗಿಂತಲೂ ಮಿಗಿಲಾದ ಆತ್ಮಸಾಕ್ಷಿ ಅಥವಾ ದೈವವುಂಟೆ?

ಪ್ರಜ್ವಲ್ ಪ್ರಕರಣವನ್ನು ಲೈಂಗಿಕ ದೌರ್ಜನ್ಯದ ಪ್ರಕರಣವಾಗಿಯಷ್ಟೇ ನೋಡಲಾಗದು. ಅದು, ಕಳೆದೊಂದು ದಶಕದಲ್ಲಿ ಕರ್ನಾಟಕದ ರಾಜಕಾರಣ ತಲುಪಿರುವ ಅಧಃಪತನದ ಆಳವೂ ಹೌದು. ಕೊಳಕು ಮೆತ್ತಿಕೊಳ್ಳುವುದನ್ನು ಕರ್ನಾಟಕದ ರಾಜಕಾರಣ ಇತ್ತೀಚಿನ ವರ್ಷಗಳಲ್ಲಿ ರೂಢಿ ಮಾಡಿಕೊಂಡಂತಿದೆ. ಅಧಿಕಾರ ಪಡೆಯುವ ಉದ್ದೇಶವೇ ಹಣ ಮಾಡುವುದು ಹಾಗೂ ತೆವಲುಗಳನ್ನು ತೀರಿಸಿಕೊಳ್ಳುವುದು ಎನ್ನುವಂತಾಗಿದೆ. ಐಪಿಎಲ್ ಕ್ರಿಕೆಟಿಗರೇ ನಾಚಿಕೊಳ್ಳುವಂತೆ ಜನಪ್ರತಿನಿಧಿಗಳು ತಮ್ಮನ್ನು ತಾವು ಬಿಕರಿಗಿಟ್ಟುಕೊಂಡ ನಾಡಿದು. ಒಂದು ಪಕ್ಷದಿಂದ ಚುನಾಯಿತರಾದ ಶಾಸಕರನ್ನು ಮತ್ತೊಂದು ಪಕ್ಷ 'ಆಪರೇಷನ್' ಹೆಸರಿನಲ್ಲಿ ಕೊಂಡುಕೊಳ್ಳುವುದು ಸಾಧ್ಯ ಎನ್ನುವುದಕ್ಕೂ ಕರ್ನಾಟಕ ಪ್ರಯೋಗಶಾಲೆಯಾಯಿತು. ವಿಧಾನಸಭೆಯು ಅಸಭ್ಯ ಚಿತ್ರಗಳನ್ನು ನೋಡುವ ತಾಣವಾಯಿತು. ಸಚಿವರೊಬ್ಬರ ಲೈಂಗಿಕ ಸಾಹಸದ ವಿಡಿಯೊ ಬಹಿರಂಗಗೊಂಡಿತು. ಧರ್ಮವನ್ನು ಕಾರಣವಾಗಿಟ್ಟುಕೊಂಡು ಹೆಣ್ಣುಮಕ್ಕಳನ್ನು ಶಾಲೆಯಿಂದ ದೂರವಿಡಲಾಯಿತು; ವ್ಯಾಪಾರಿಗಳ ಹಕ್ಕನ್ನು ಧರ್ಮ ಸಂರಕ್ಷಣೆ ಹೆಸರಿನಲ್ಲಿ ಕಸಿದುಕೊಳ್ಳಲಾಯಿತು. ಪರಧರ್ಮ ಪರವಿಚಾರ ಸಹಿಷ್ಣು ಪರಂಪರೆಯ ಈ ಹೊತ್ತಿನ ಸಾಹಸಗಳು ಒಂದೇ ಎರಡೇ... ಈ ಪಟ್ಟಿಗೆ ಹೊಸ ಸೇರ್ಪಡೆ: ಕೊಲೆಗೀಡಾದ ಯುವತಿಯರ ಸಾವುಗಳು ಉಂಟುಮಾಡಬಹುದಾದ ಸ್ಪಂದನಗಳೂ ಧರ್ಮಾಧಾರಿತ ಎನ್ನುವಂತಾಗಿರುವುದು.

ಧರ್ಮದಲ್ಲಿ ತ್ಯಾಗವನ್ನೂ ರಾಜಕಾರಣದಲ್ಲಿ ನೀತಿಯನ್ನೂ ಗಾಂಧೀಜಿ ಅಪೇಕ್ಷಿಸುತ್ತಾರೆ. ನೈತಿಕತೆ ಹಾಗೂ ಮೌಲ್ಯ ವ್ಯವಸ್ಥೆಯನ್ನು ಸಮಾಜದಲ್ಲಿ ನೆಲೆಗೊಳಿಸುವ ದಿಸೆಯಲ್ಲಿ ಧರ್ಮ ಮತ್ತು ರಾಜಕಾರಣಕ್ಕೆ ವಿಶೇಷ ಸ್ಥಾನವಿದೆ. ಪ್ರತ್ಯೇಕ ನೆಲೆಗಳಲ್ಲಿ ಕಾರ್ಯನಿರ್ವಹಿಸಬೇಕಾದ ಇವೆರಡರ ಅಂತಿಮ ಉದ್ದೇಶ ಸಮಾಜದ ಆರೋಗ್ಯವಾಗಿದೆ. ದುರದೃಷ್ಟವಶಾತ್, ಧರ್ಮ ಹಾಗೂ ರಾಜಕಾರಣದ ನಡುವಿನ ಗೆರೆ ದೇಶದಲ್ಲಿ ಹೆಚ್ಚೂಕಡಿಮೆ ಅಳಿಸಿಹೋಗಿದೆ ಹಾಗೂ ಎರಡೂ ಕ್ಷೇತ್ರಗಳು ತಮ್ಮದಲ್ಲದ ಕಾರ್ಯವನ್ನು ನಿರ್ವಹಿಸಲು ಉತ್ಸಾಹ ತೋರುತ್ತಿರುವುದಕ್ಕಾಗಿ ಜನರ ಗೌರವ ಕಳೆದುಕೊಳ್ಳುತ್ತಿವೆ. ಈ ಕುಖ್ಯಾತಿಗೆ ಕರ್ನಾಟಕ ಮಾದರಿಗಳನ್ನು ಒದಗಿಸಿರುವುದು ಕನ್ನಡಿಗರ ಭಾಗ್ಯವಿಶೇಷವೆಂದೇ ತಿಳಿಯಬೇಕಾಗಿದೆ. ಚಿತ್ರದುರ್ಗ ಬೃಹನ್ಮಠದ ಸ್ವಾಮೀಜಿ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯವೆಸಗಿರುವ ಆರೋಪದ ವಿಚಾರಣೆ ನಡೆಯುತ್ತಿರುವ ಸಂದರ್ಭದಲ್ಲೇ, ರಾಜಕಾರಣಿಯ ಲೈಂಗಿಕ ಹಗರಣ ಬೆಳಕಿಗೆ ಬಂದಿದೆ. ಈ ಎರಡು ಪ್ರಕರಣಗಳು ಸಾಲವೇ ಕನ್ನಡಿಗರು ತಲೆ ತಗ್ಗಿಸಲು, ನಾಡಿನ ಮಾನ ನೆರೆಹೊರೆಯವರ ಎದುರು ಹಗುರಾಗಲು.

ವೈಯಕ್ತಿಕ ಬದುಕಿನಲ್ಲೂ, ಸಾರ್ವಜನಿಕ ಬದುಕಿನಲ್ಲೂ ಲಜ್ಜೆಯನ್ನು ಹೊರದೂಡಿ, ಸಿ.ಡಿ.–ಪೆನ್‌ಡ್ರೈವ್‌ಗಳನ್ನು ಜೊತೆಗಿಟ್ಟುಕೊಂಡು ಓಡಾಡುತ್ತಿರುವ ರಾಜಕಾರಣಿಗಳು ನಮ್ಮನ್ನು ಪ್ರತಿನಿಧಿಸುತ್ತಿದ್ದಾರೆ. ಒಬ್ಬರ ಬೆತ್ತಲೆಯನ್ನು ನೋಡಿ ಮತ್ತೊಬ್ಬರು ನಗುತ್ತಾ, ಜನರಿಗೆ ವಿಶ್ವಾಸದ್ರೋಹ ಎಸಗುತ್ತಿದ್ದಾರೆ. ತನ್ನ ಕೊಳಕು ಹೊರಬರಬಾರದೆಂದು ಮತ್ತೊಬ್ಬರ ಕೊಳಕನ್ನು ಗುಟ್ಟಾಗಿಡುವವರೇ ಹೆಚ್ಚಾಗಿರುವ ರಾಜಕಾರಣದಲ್ಲಿ ಯಾರೂ ಸುಭಗರಿದ್ದಂತಿಲ್ಲ. ಯಾರು ಯಾರನ್ನು ಯಾವಾಗ ಬೆತ್ತಲು ಮಾಡುವರೋ ತಿಳಿಯದು. ಗಂಡಸರ ಈ ಬೆತ್ತಲೆಯಾಟದಲ್ಲಿ ಅಸಹಾಯಕ ಹೆಣ್ಣುಮಕ್ಕಳು ಬಲಿಪಶುಗಳಾಗುತ್ತಿರುವುದು ಯಾವ ರಾಜಕಾರಣಿಯನ್ನೂ ಕಸಿವಿಸಿಗೊಳಿಸಿದಂತಿಲ್ಲ.



ಪ್ರಜ್ವಲ್ ಪ್ರಕರಣ ಬೆಳಕಿಗೆ ಬಂದ ತಕ್ಷಣ ಅವರ ಕುಟುಂಬ ರಾಜ್ಯದ ಕ್ಷಮೆ ಕೇಳಬೇಕಿತ್ತು. ಎದೆಯೊಳಗೆ ಕೊಂಚವಾದರೂ ಮಾನವೀಯತೆಯ ಪಸೆ ಉಳಿಸಿಕೊಂಡಿರುವ ರಾಜಕಾರಣಿ ಇದ್ದಿದ್ದಲ್ಲಿ ಲಜ್ಜೆಯಿಂದ ತಲೆ ತಗ್ಗಿಸಬೇಕಾಗಿತ್ತು. ಆದರೆ, ಪಾಪಪ್ರಜ್ಞೆಯ ಸುಳಿವೇ ಎಲ್ಲೂ ಕಾಣಿಸುತ್ತಿಲ್ಲ. ರಾಜಕಾರಣಿಗಳು ನಾಡಿನ ಕ್ಷಮೆ ಕೇಳುವುದಿರಲಿ, ಇಂಥವರನ್ನು ಚುನಾಯಿಸಿದ್ದಕ್ಕಾಗಿ ಚುನಾಯಿಸುತ್ತಿರುವುದಕ್ಕಾಗಿ ನಾಗರಿಕರು ಲಜ್ಜೆಯಿಂದ ತಲೆ ತಗ್ಗಿಸಬೇಕಾಗಿದೆ; ತಮ್ಮ ಮನಸ್ಸಾಕ್ಷಿಯ ಕ್ಷಮೆ ಕೋರಬೇಕಾಗಿದೆ.

ಚುರುಮುರಿ

ಭಕ್ತನಾದ ಭಗವಂತ!

● ಬಿ.ಎನ್.ಮಲ್ಲೇಶ್

ಗಾಢ ನಿದ್ರೆಯಲ್ಲಿದ್ದ ಪತ್ರಕರ್ತ ತೆಪರೇಸಿಯನ್ನು ಮಧ್ಯರಾತ್ರಿ ಯಾರೋ ಕೂಗಿ ಕರೆದಂತಾಯಿತು. ಆರ್‌ಸಿಬಿ ಸೋತದ್ದಕ್ಕೆ ಬ್ಯಾಸರಾಗಿ ಟೈಟಾಗಿ ಮಲಗಿದ್ದ ತೆಪರೇಸಿಗೆ ಸಿಟ್ಟು ಬಂತು. 'ಯಾರು ಕರೆದದ್ದು?' ಎಂದ.

'ನಾನು ದೇವರು!'

'ವ್ಹಾಟ್! ದೇವರಾ? ಸರಿ, ಏನು ಇಷ್ಟೊತ್ತಲ್ಲಿ?'

'ನಾನು ನಿನ್ನ ಭಕ್ತ, ದರ್ಶನಕ್ಕೆ ಬಂದಿದ್ದೇನೆ'.

'ನಾನ್‌ಸೆನ್ಸ್... ದೇವರು, ಭಕ್ತ ಇಬ್ರೂ ಒಬ್ರೇನಾ? ನೀನೇ ಭಕ್ತ ಆದ್ರೆ ನಾನ್ಯಾರು?'

'ನೀನೂ ದೇವರೇ... ಮನುಷ್ಯರು ದೇವರಾಗಿ, ದೇವರು ಭಕ್ತರಾಗೋ ಕಾಲ ಇದು'.

'ಕುಡಿದಿದೀನಿ ಅಂತ ಕಿಂಡಲ್ಲಾ? ನಾನು ದೇವರಾಗಿದ್ರೆ ಆರ್‌ಸಿಬಿ ಗೆಲ್ಲಿಸ್ತಿದ್ದೆ. ಸೋತಿದ್ದೇಕೆ?'

'ಆರ್‌ಸಿಬಿದು ಈಗ ಮುಗಿದ ಅಧ್ಯಾಯ. ಆದ್ರೂ ಮುಂದಿನ ಸಲ ಕಪ್ ನಿಮ್ದೇ...'

'ಜೋಕಾ? ಈಗ ನೀನು ದೇವರಾಗಿದ್ರೆ ಮೇಲ್ಮನಿ ಚುನಾವಣೆಗೆ ಯಾರ್‍ಯಾರಿಗೆ ಟಿಕೆಟ್ ಸಿಗುತ್ತೆ ಹೇಳು ನೋಡಾಣ'.

'ಅದು ಮೇಲ್ಮನಿ ಅಲ್ಲ, 'ಮೇಲ್ Money', ದುಡ್ಡಿದ್ದೋರಿಗಷ್ಟೇ ಸಿಗೋದು'.

'ಕರೆಕ್ಟ್, ಆಮೇಲೆ ಡಿಕೆಶಿ ಯಾಕೆ ಕೆಪಿಸಿಸಿ ಕುರ್ಚಿ ಬಿಡೋ ಮಾತಾಡ್ತಿದಾರೆ?'

'ಅವ್ರು ಬೇರೆ ಕುರ್ಚಿ ಮೇಲೆ ಟವೆಲ್ ಹಾಕಿದಾರೆ'.

'ಕರೆಕ್ಟ್, ಆಮೇಲೆ ತಟ್ಟೆ ಬಾರಿಸಿದ್ರೆ ವೋಟ್ ಬೀಳುತ್ತಾ?'

'ತಟ್ಟೆ ಬಾರಿಸಿದ್ರೆ ಕಪಾಳಕ್ಕೆ ಬೀಳುತ್ತೆ, ಅಡುಗೆ ಆಗಿಲ್ಲ ತಡ್ಕಾ ಅಂತಾಳೆ ಹೆಂಡ್ತಿ'.

'ಸರಿ, ಈಗ ಬೇಗ ಎಸ್ಕೇಪ್ ಆಗ್ಬಿಡು, ನಮ್ಮನೇಲಿ ಸದಾ ಸೌಟು, ಲಟ್ಟಣಿಗೆ ಹಿಡ್ಕಂಡಿರೋ ಒಂದು ಹೆಣ್ಣು ದೇವರಿದೆ' ತೆಪರೇಸಿ ಎಚ್ಚರಿಸಿದ. ಅಷ್ಟರಲ್ಲಿ ಯಾರೋ ಮೈಮೇಲೆ ನೀರು ಸುರಿದಂತಾಗಿ ತೆಪರೇಸಿ ಕಣ್ಣು ಬಿಟ್ಟ. ಎದುರಿಗೆ ಮಡದಿ ಪಮ್ಮಿ! 'ಏನ್ರಿ ಅದು ಸೌಟು, ಲಟ್ಟಣಿಗೆ?'

'ಅದೂ... ಕನಸಲ್ಲಿ ದೇವರು ಬಂದಿತ್ತು' ತೆಪರೇಸಿ ತಡವರಿಸಿದ.

'ಏನು, ದೇವರಾ?' ಪಮ್ಮಿ ಕೊಡದಲ್ಲಿ ಉಳಿದಿದ್ದ ಇನ್ನಷ್ಟು ನೀರನ್ನು ತೆಪರೇಸಿ ಮೇಲೆ ಸುರಿದು 'ಏಳ್ರಿ ಮೇಲೆ' ಎಂದು ಅಬ್ಬರಿಸಿದಳು.

ದಿನದ ಟ್ವೀಟ್

ವರದಕ್ಷಿಣೆ ಪಿಡುಗು: ಸ್ಪಷ್ಟ ನಿಲುವಿರಲಿ

ವರದಕ್ಷಿಣೆ ಕೇಳುವವರು ಮತ್ತು ಕೊಡುವವರು ಇಬ್ಬರ ಬಗ್ಗೆಯೂ ನನಗೆ ಗೌರವ ಇಲ್ಲ. ವರದಕ್ಷಿಣೆಯ ವಿಷಯವನ್ನು ಚರ್ಚಿಸದೆ ಮತ್ತು ಈ ಬಗ್ಗೆ ನಿಮ್ಮ ನಿಲುವನ್ನು ಸ್ಪಷ್ಟಪಡಿಸದೆ ಮದುವೆಯ ವಿಷಯದಲ್ಲಿ ನೀವು ಮುಂದುವರಿಯುವುದು ಸರಿಯಲ್ಲ. ಅನಿಶ್ಚಿತತೆಯು ಸಮಸ್ಯೆಗಳಿಗೆ ಎಡೆಮಾಡುತ್ತದೆ. ನಂತರ ಗೋಳಾಡುವುದರಿಂದ ಪ್ರಯೋಜನವಿಲ್ಲ.

ಫರ್ಹಾಸ್ ದಾರೂವಾಲಾ, ಉದ್ಯಮಿ

ಕಿಡಿನುಡಿ

ಇದಕ್ಕೆ ಬದಲಾಗಿ, ಪ್ರಜ್ವಲ್ ರೇವಣ್ಣ ಅವರ ಪಾಸ್‌ಪೋರ್ಟ್ ರದ್ದುಪಡಿಸುವಂತೆ ನೀವು ಮೋದಿ ಅವರನ್ನು ಕೇಳಬಹುದಿತ್ತು. ಆತನನ್ನು ವಾಪಸ್ ಕರೆತರಲು ಅಷ್ಟು ಮಾಡಿದರೆ ಸಾಕು.

(ಎಲ್ಲಿದ್ದರೂ ಬಂದು ಪೊಲೀಸರಿಗೆ ಶರಣಾಗಿ ವಿಚಾರಣೆ ಎದುರಿಸುವಂತೆ, ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ ಹಾಗೂ ತಮ್ಮ ಮೊಮ್ಮಗ ಪ್ರಜ್ವಲ್ ರೇವಣ್ಣ ಅವರಿಗೆ ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಅವರು ತಾಕೀತು ಮಾಡಿರುವುದಕ್ಕೆ ಪ್ರತಿಕ್ರಿಯೆ)

ಭೈರಪ್ಪ ಎಚ್‌.ಎಂ.

25 ವರ್ಷಗಳ ಹಿಂದೆ

ಸೋಮವಾರ, 24-5-1999

● **ಪ್ರಾಣಿ ಪ್ರದರ್ಶನ ನಿಷೇಧ ಸರ್ಕಸ್ ಕಂಪನಿಗಳಲ್ಲಿ ಕಂಪನ**

ಬೆಂಗಳೂರು, ಮೇ 23– ರಾಜ್ಯದ ವಿವಿಧ ಸರ್ಕಸ್ ತಂಡಗಳಲ್ಲಿರುವ 25 ಪ್ರಾಣಿಗಳ ಭವಿಷ್ಯ ಈಗ ತೂಗುಯ್ಯಾಲೆಯಲ್ಲಿದೆ. ಐದು ಪ್ರಕಾರದ ಸರ್ಕಸ್ ಪ್ರಾಣಿಗಳ ಪ್ರದರ್ಶನವನ್ನು ನಿಷೇಧಿಸಿ ದೆಹಲಿ ಹೈಕೋರ್ಟ್ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಈ ಪ್ರಾಣಿಗಳ ಪುನರ್ವಸತಿಗೆ ಸ್ಪಷ್ಟ ಯೋಜನೆ ಇಲ್ಲದಿರುವುದೇ ಇದಕ್ಕೆ ಕಾರಣ.

ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆ ಸಲ್ಲಿಸಿದ ಅರ್ಜಿಯನ್ನು ಎತ್ತಿಹಿಡಿದ ನ್ಯಾಯಾಲಯ, ಕಳೆದ ಡಿಸೆಂಬರ್‌ನಲ್ಲಿ (1998) ಹುಲಿ, ಸಿಂಹ, ಮಂಗ, ಚಿರತೆ ಮತ್ತು ಕರಡಿಗಳನ್ನು ಸರ್ಕಸ್‌ನಲ್ಲಿ ಬಳಸುವುದಕ್ಕೆ ನಿಷೇಧ ವಿಧಿಸಿತು.

ನಾಲ್ಕುನೂರರಷ್ಟಿದ್ದ ಈ ವರ್ಗದ ಪ್ರಾಣಿಗಳು ತಂಡಕ್ಕೆ ಆದಾಯ ತರುವುದನ್ನು ನಿಲ್ಲಿಸಿದ್ದು, ರಾಷ್ಟ್ರದಾದ್ಯಂತ ಇರುವ ಸುಮಾರು 64 ಸರ್ಕಸ್ ತಂಡಗಳಿಗೆ ಇವುಗಳ ನಿರ್ವಹಣೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ.

● **ನಂಜನಗೂಡಿನಲ್ಲಿ ಡಕಾಯಿತಿ ರೂ. 3 ಲಕ್ಷ ಲೂಟಿ**

ನಂಜನಗೂಡು, ಮೇ 23– ಪಟ್ಟಣದ ಹೊರ ವಲಯದಲ್ಲಿ ಊಟಿ ರಸ್ತೆಯಲ್ಲಿನ, ನಿರ್ಮಾಣ ಹಂತದಲ್ಲಿರುವ ಶ್ರೀಪತಿ ಬಡಾವಣೆಯ ಮೇಲೆ ದಾಳಿ ನಡೆಸಿದ ನಾಲ್ವರು ಡಕಾಯಿತರ ತಂಡವೊಂದು, ಎರಡು ಮನೆಗಳಿಗೆ ನುಗ್ಗಿ ಸುಮಾರು 3 ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣ ಹಾಗೂ ನಗದು ದೋಚಿ ಪರಾರಿಯಾಗಿದೆ.

ಜಿಲ್ಲೆಯ ಹುಣಸೂರು ಭಾಗದಲ್ಲಿ ಕೆಲ ದಿನಗಳ ಹಿಂದೆ ನಡೆದ ಡಕಾಯಿತಿ ಮಾದರಿಯಲ್ಲೇ ಲೂಟಿ ಮಾಡಲಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 24-5-1974

● **ರಾಷ್ಟ್ರೀಯ ಯೋಜನೆಯಾಗಿ ಕೃಷ್ಣಾ ಮೇಲ್ದಂಡೆ: ಕೇಂದ್ರಕ್ಕೆ ರಾಜ್ಯದ ಒತ್ತಾಯ**

ಬೆಂಗಳೂರು, ಮೇ 23– ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಕೈಗೊಳ್ಳಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳಲಾಗಿದೆ ಎಂದು ಕಂದಾಯ ಸಚಿವರಾದ ಎನ್. ಹುಚ್ಚಮಾಸ್ತಿ-ಗೌಡ ಅವರು ಇಂದು ವಿಧಾನಪರಿಷತ್ತಿನಲ್ಲಿ ತಿಳಿಸಿದರು.

ಗೋವಿಂದ ಪಿ. ಒಡೆಯರಾಜ್ ಅವರ ಪ್ರಶ್ನೆಗಳಿಗೆ ಮುಖ್ಯಮಂತ್ರಿ ಅವರ ಗೈರು ಹಾಜರಿಯಲ್ಲಿ ಉತ್ತರ ನೀಡಿದ ಸಚಿವರು, ಈ ಸಂಬಂಧ ಕೇಂದ್ರ ತನ್ನ ನಿರ್ಧಾರವನ್ನು ತಿಳಿಸಿಲ್ಲ ಎಂದು ಹೇಳಿ, ರಾಜ್ಯದ 5ನೇ ಯೋಜನೆಯಲ್ಲಿ ಈ ಯೋಜನೆಗಾಗಿ 67 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ ಎಂದರು.

● **ವಿಶೇಷ ರೈಲಿನಲ್ಲಿ ರಾಜ್ಯಕ್ಕೆ ಹತ್ತು ಸಾವಿರ ಟನ್ ಕಲ್ಲಿದ್ದಲು**

ಬೆಂಗಳೂರು, ಮೇ 23– ಹತ್ತು ಸಾವಿರ ಟನ್ ಕಲ್ಲಿದ್ದಲು ಹೊತ್ತ ವಿಶೇಷ ರೈಲು ರಾಜ್ಯಕ್ಕೆ ಬರುತ್ತಿದೆ ಎಂದು ಕೈಗಾರಿಕಾ ಸಚಿವ ಎಸ್‌.ಎಂ. ಕೃಷ್ಣ ಅವರು ಇಂದು ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

ಎಂ.ವಿ. ವೆಂಕಟಪ್ಪ ಅವರ ಅಲ್ಪ ಕಾಲಾವಧಿ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಭದ್ರಾವತಿಯಲ್ಲಿನ ಕಬ್ಬಿಣ ಹಾಗೂ ಉಕ್ಕಿನ ಕಾರ್ಖಾನೆ ಸೇರಿದಂತೆ ಹಲವು ಕಾರ್ಖಾನೆಗಳು ಕಲ್ಲಿದ್ದಲಿನ ತೀವ್ರ ಕೊರತೆಯನ್ನು ಎದುರಿಸುತ್ತಿರುವುದು ನಿಜ ಎಂದರು.

ಸಂಗತ

ತಾಯಂದಿರಿಗೆ ಸಾಂತ್ವನ ಹೇಳಬಲ್ಲಿರಾ?

21ನೆಯ ಶತಮಾನದ ಭಾರತೀಯ ಸಮಾಜವು ಪ್ರೀತಿಯನ್ನು ನಿರಾಕರಿಸುವ ಹಕ್ಕನ್ನೂ ಮಹಿಳೆಯಿಂದ ಕಸಿದುಕೊಂಡಿದೆಯೇ ಎಂಬ ಪ್ರಶ್ನೆ ಈಗ ಎದುರಾಗಿದೆ

● ನಾ.ದಿವಾಕರ

ದೇಶದ ಆಡಳಿತ ವ್ಯವಸ್ಥೆಯಲ್ಲಿ ಹಾಗೂ ನ್ಯಾಯ ವ್ಯವಸ್ಥೆಯಲ್ಲಿ ಮಹಿಳಾ ಸಬಲೀಕರಣದ ಧ್ವನಿ ಗಟ್ಟಿಯಾಗಿ ಕೇಳುತ್ತಲೇ ಇದ್ದರೂ, ದಿನದಿಂದ ದಿನಕ್ಕೆ ಮಹಿಳೆಯೇ ಏಕೆ ಪಾತಕ ಕೃತ್ಯಗಳಿಗೆ ಬಲಿಯಾಗುತ್ತಿದ್ದಾಳೆ? ಈ ಪ್ರಶ್ನೆಯನ್ನು ನಮಗೆ ನಾವೇ ಹಾಕಿಕೊಳ್ಳದೇ ಹೋದರೆ ಬಹುಶಃ ನಮ್ಮ ಪ್ರಜ್ಞೆ ಸತ್ತಿದೆ ಎಂದೇ ಹೇಳಬೇಕು.

ಲೈಂಗಿಕ ದೌರ್ಜನ್ಯ, ತಾರತಮ್ಯ, ಅತ್ಯಾಚಾರಗಳನ್ನು ದಿನನಿತ್ಯ ವರದಿ ಮಾಡುವ ಸರ್ಕಾರದ ಅಧಿಕೃತ ಸಂಸ್ಥೆಗಳನ್ನೂ ಕಾಡಬೇಕಾದ ಪ್ರಶ್ನೆ ಇದು. ಎಲ್ಲಕ್ಕಿಂತಲೂ ಮಿಗಿಲಾಗಿ ಬೇಟಿ ಪಢಾವೋ ಬೇಟಿ ಬಚಾವೋ ಘೋಷಣೆಯಿಂದ ಗೃಹಲಕ್ಷ್ಮಿ, ಶಕ್ತಿ ಯೋಜನೆಗಳವರೆಗೆ ವಿಸ್ತರಿಸಿರುವ ಆಳ್ವಿಕೆಯ ಅಂಗಳದಲ್ಲಿ ಧ್ವನಿಸಲೇಬೇಕಾದ ಗಹನವಾದ ಪ್ರಶ್ನೆ ಇದು.

ರಾಜ್ಯ ಸರ್ಕಾರದ ಗೃಹಲಕ್ಷ್ಮಿ ಯೋಜನೆಯಡಿ ಮಹಿಳೆಯರಿಗೆ ಕೊಡಲಾಗುವ ಹಣವನ್ನೂ ತಮ್ಮ ಧಾರ್ಮಿಕ ಚಟುವಟಿಕೆಗಳಿಗಾಗಿ ಕಸಿದುಕೊಳ್ಳುವ ಒಂದು ಪುರುಷಾಧಿಪತ್ಯದ ಸಮಾಜದ ನಡುವೆ ಈ ಸೂಕ್ಷ್ಮವಾದ ಪ್ರಶ್ನೆಗೆ ಉತ್ತರ ದೊರೆಯಲು ಸಾಧ್ಯವೇ?

ಹಿಂದಿನ ಎರಡು ತಿಂಗಳ ಅವಧಿಯಲ್ಲಿ ರಾಜ್ಯದ ಮೂವರು ಯುವತಿಯರು ಹತ್ಯೆಗೀಡಾಗಿದ್ದಾರೆ. ಈ ಮೂವರಲ್ಲಿ ಇಬ್ಬರು ಮಾಡಿದ ದೊಡ್ಡ 'ಅಪರಾಧ' ಎಂದರೆ ಪ್ರೀತಿಸಲು ನಿರಾಕರಿಸಿದ್ದು! ಅಂದರೆ, 21ನೆಯ ಶತಮಾನದ ಭಾರತೀಯ ಸಮಾಜವು ಪ್ರೀತಿಯನ್ನು ನಿರಾಕರಿಸುವ ಹಕ್ಕನ್ನೂ ಮಹಿಳೆಯಿಂದ ಕಸಿದುಕೊಂಡಿದೆಯೇ? ನೇಹಾ, ಮೀನಾ, ಅಂಜಲಿ ಈ ಮೂವರೂ ಹೆಣ್ಣುಮಕ್ಕಳು ಬಲಿಯಾಗಿರುವುದು ಒಂದು ಕ್ರೂರ, ವಿಕೃತ ಮನಃಸ್ಥಿತಿಗೆ ಅಥವಾ ಕಾನೂನು ಪರಿಭಾಷೆಯಲ್ಲಿ ಪಾತಕಿ ಕೃತ್ಯಕ್ಕೆ ಎಂದು ಹೇಳಿದರೆ ಅದು ಅರ್ಧಸತ್ಯವಾದೀತು. ಈ ಮನಃಸ್ಥಿತಿಯ ಹಿಂದಿರುವ ಒಂದು ಸಾಮಾಜಿಕ ಆಯಾಮವನ್ನು ಗಮನಿಸದೇ ಹೋದರೆ ಕಲಿತ ಪ್ರಜ್ಞಾವಂತ ಸಮಾಜ ಇನ್ನೂ ಅಂಧಕಾರದಲ್ಲಿದೆ ಎಂದೇ ಅರ್ಥಮಾಡಿಕೊಳ್ಳಬಹುದು.

ಏಕೆಂದರೆ ಈ ಮೂರೂ ಹೀನ, ಹೇಯ, ಅಮಾನುಷ ಕೃತ್ಯಗಳನ್ನೂ ಮೀರಿಸುವಂತಹ ಪ್ರಕರಣ ಹಾಸನದಲ್ಲಿ ನಡೆದಿದೆ. ಮಹಿಳೆಯರ ಘನತೆಯ ಬದುಕಿನ ಹಕ್ಕನ್ನೇ ಕಸಿದುಕೊಂಡಿರುವ ಕಿರಾತಕ ಕೃತ್ಯಗಳು ಅಲ್ಲಿ ನಡೆದಿವೆ. ಪುರುಷಾಧಿಪತ್ಯಕ್ಕೆ ಮೂವರು ಯುವತಿಯರು ಜೀವ ತೆತ್ತಿದ್ದರೆ, ಹಾಸನದ ಪ್ರಕರಣದಲ್ಲಿ ಕಾಮತೃಷೆಯ ಪರಾಕಾಷ್ಠೆಗೆ ಅನೇಕ ಮಹಿಳೆಯರು ತಮ್ಮ ಘನತೆಯ ಬದುಕನ್ನು ಕಳೆದುಕೊಳ್ಳುವಂತಾಗಿದೆ. ಈ ಎಲ್ಲ ಸಂದರ್ಭಗಳಲ್ಲಿ ನಾಗರಿಕ ಸಮಾಜ ಯೋಚಿಸಬೇಕಿರುವುದು, ಸಮಾಜದಲ್ಲಿ ಮಹಿಳೆ ಹೊಂದಿರುವ ಸ್ಥಾನಮಾನಗಳ ಬಗ್ಗೆ. ಮಹಿಳಾ ಸಮೂಹಕ್ಕೆ ನೀಡಲಾಗುವ ಸಾಂವಿಧಾನಿಕ, ಕಾನೂನಾತ್ಮಕ ರಕ್ಷಣಾ ಕವಚಗಳನ್ನು ಸುಲಭವಾಗಿ ಭೇದಿಸುವ ತಂತ್ರಗಾರಿಕೆಯನ್ನು ಪುರುಷ ಸಮಾಜ ರೂಢಿಸಿಕೊಂಡಿರುವುದು ಈ ಪ್ರಕರಣಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ.

ಸಮಾಜದಲ್ಲಿ ನಡೆಯುವ ಪ್ರತಿಯೊಂದು ಅಪರಾಧವನ್ನೂ ಪಾತಕಿಗಳ ಮತೀಯ ಅಸ್ಮಿತೆಗೆ ಅನುಗುಣವಾಗಿ ಪರಾಮರ್ಶಿಸುವ ಒಂದು ವಿಕೃತ ರಾಜಕೀಯ ಪರಂಪರೆಯ ನಡುವೆಯೇ ನಾವು ಗಮನಿಸಬೇಕಾಗಿದೆ. ಈ ಪ್ರಕರಣಗಳಲ್ಲಿ ಮಹಿಳಾ ಸಂಕುಲದ ಅಸ್ತಿತ್ವ, ಅಸ್ಮಿತೆ ಹಾಗೂ ಹೆಣ್ತನದ ಘನತೆಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ನೇಹಾ, ಮೀನಾ ಮತ್ತು ಅಂಜಲಿ ಮೂವರೂ ತಮ್ಮ ಸಾಂವಿಧಾನಿಕ ಹಕ್ಕುಗಳಿಂದ ವಂಚಿತರಾಗಿರುವುದು ಸ್ಪಷ್ಟವಾಗಿದೆ. ತನ್ನ ಬದುಕನ್ನು ರೂಪಿಸಿಕೊಳ್ಳಲು ಸ್ವಇಚ್ಛೆಯಂತೆ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಮೂಲಭೂತ ಹಕ್ಕು ಸಾಂವಿಧಾನಿಕವಾಗಿ ಪ್ರಾಪ್ತವಾಗಿದೆ. ಆದರೆ ಈ ಗ್ರಾಂಥಿಕ ಹಕ್ಕುಗಳನ್ನು ನಿರಾಕರಿಸಿದ ಪಕ್ಷದಲ್ಲಿ ಬದುಕುವ ಹಕ್ಕನ್ನೂ ಕಸಿದುಕೊಳ್ಳುವಂತಹ ಒಂದು ಸಮಾಜ ನಮ್ಮ ನಡುವೆ ಇರುವುದು ಏನನ್ನು ಸೂಚಿಸುತ್ತದೆ?

ಇದೇ ಪ್ರಶ್ನೆಯನ್ನು ಹಾಸನ ಪ್ರಕರಣಕ್ಕೆ ವಿಸ್ತರಿಸಿದಾಗ, ತಮ್ಮ ನಿತ್ಯ ಬದುಕಿನ ಜೀವನಾವಶ್ಯಕತೆಗಳನ್ನು ಪೂರೈಸಿಕೊಳ್ಳಲು ಅಧಿಕಾರ ಕೇಂದ್ರಗಳನ್ನು, ಆಡಳಿತ ಕೇಂದ್ರಗಳನ್ನು ಸಂಪರ್ಕಿಸುವ ಹೆಣ್ಣುಮಕ್ಕಳೂ ತಮ್ಮ ಘನತೆಯ ಬದುಕಿನ ಹಕ್ಕುಗಳನ್ನು ಕಳೆದುಕೊಂಡಿರುವುದು ಕಂಡುಬರುತ್ತದೆ.

ಸರ್ಕಾರವು ಮಹಿಳೆಯರ ಜೀವನೋಪಾಯಕ್ಕಾಗಿ ನೀಡುವ ಅಲ್ಪಹಣವನ್ನು ಕಸಿದುಕೊಳ್ಳುವುದಕ್ಕೂ ತಮ್ಮ ವೈಯಕ್ತಿಕ ಕೆಲಸ ಕಾರ್ಯಗಳಿಗಾಗಿ ಅಧಿಕಾರಸ್ಥರನ್ನು ಸಂಪರ್ಕಿಸುವ ಮಹಿಳೆಯರನ್ನು ಸರಕುಗಳಂತೆ ಬಳಸಿಕೊಳ್ಳುವುದಕ್ಕೂ ತಾತ್ವಿಕವಾಗಿ ಯಾವ ವ್ಯತ್ಯಾಸವನ್ನು ಕಾಣಲು ಸಾಧ್ಯ? ಇವು ಮಹಿಳೆಯನ್ನು ವ್ಯಕ್ತಿಗತವಾಗಿ, ಸಾಮೂಹಿಕವಾಗಿ ಅಧೀನದಲ್ಲಿರಿಸುವ ಒಂದು ಪಿತೃಪ್ರಧಾನ ತಂತ್ರಗಾರಿಕೆಯಾಗೇ ಕಾಣುವುದಿಲ್ಲವೇ? ಒಂದರಲ್ಲಿ ಜೀವ ಹರಣವಾಗುತ್ತದೆ ಮತ್ತೊಂದರಲ್ಲಿ ಜೀವನದ ಹರಣವಾಗುತ್ತದೆ.

ಒಂದು ಮಾನಗೆಟ್ಟ ಪುರುಷಾಧಿಪತ್ಯ ವ್ಯವಸ್ಥೆಯಲ್ಲಿ ಮಾತ್ರ ಇಂತಹ ಹೇಯ ಕೃತ್ಯ, ಅಮಾನುಷ ನಡೆಯನ್ನು ಸಹಿಸಿಕೊಳ್ಳಲು ಸಾಧ್ಯ. ಈ ನೊಂದ ಮಹಿಳೆಯರಿಗೆ, ಮಕ್ಕಳನ್ನು ಕಣ್ಣೆದುರಿನಲ್ಲೇ ಕಳೆದುಕೊಂಡ ತಾಯಂದಿರಿಗೆ ಸಾಂತ್ವನ ಹೇಳುವ ಕ್ಷಮತೆ ಅಥವಾ ನೈತಿಕ ಅರ್ಹತೆ ನಮ್ಮ ಸಮಾಜಕ್ಕಿದೆಯೇ? ಈ ಪ್ರಶ್ನೆ ನಾಗರಿಕರನ್ನು ಕಾಡಲೇಬೇಕಿದೆ.

ಇದು ಬರೀ ಕಾನೂನು, ಪೊಲೀಸು, ತನಿಖಾ ವಲಯವನ್ನು ಕಾಡುವ ಅಥವಾ ನ್ಯಾಯ ವ್ಯವಸ್ಥೆಯ ನಿಷ್ಕರ್ಷೆಗೆ ಒಳಗಾಗಬೇಕಾದ ಪ್ರಶ್ನೆಯಲ್ಲ. ಇದು ಆಧುನಿಕ ಸಮಾಜವನ್ನು ನಿರಂತರವಾಗಿ ಕಾಡಬೇಕಾದ ನೈತಿಕತೆ ಮತ್ತು ಮಾನವೀಯತೆಯ ಪ್ರಶ್ನೆ. ರಾಜಕೀಯ ಪಕ್ಷಗಳಿಗೆ ಇದು ಮಾರುಕಟ್ಟೆಯ ಸರಕು. ಆದರೆ ನಾಗರಿಕರಿಗೆ ಇದು ಮನೆಯೊಳಗಿನ ಒಂದು ಬಿಕ್ಕಟ್ಟು ಎಂದೇ ತೋರಬೇಕು. ಆಗ ಮಾತ್ರವೇ ನಾಗರಿಕತೆಗೂ ಒಂದು ಅರ್ಥ ಬರುತ್ತದೆ.

ವಾಚಕರ ವಾಣಿ

ಅಪರಿಚಿತ ತಾಣ ಹುಡುಕುವ ಉಮೇದೇಕೆ?

ಮೈಸೂರಿನ ಜಿಲ್ಲಾಡಳಿತ ಮತ್ತು ಪ್ರವಾಸೋದ್ಯಮ ಇಲಾಖೆ ಜಂಟಿಯಾಗಿ ಮೈಸೂರಿನ ಸುತ್ತಮುತ್ತ ಇರುವ ಅಪರಿಚಿತ ಪ್ರವಾಸಿ ತಾಣಗಳ ಫೋಟೊ ಮತ್ತು ವಿಡಿಯೊ ಸ್ಪರ್ಧೆಯನ್ನು ಆಸಕ್ತರಿಗಾಗಿ ಏರ್ಪಡಿಸಿವೆ. ಈವರೆಗೆ ಪ್ರವಾಸಿಗರ ಕಾಕದೃಷ್ಟಿಗೆ ಬೀಳದೆ ಎಲ್ಲೋ ಪ್ರಶಾಂತವಾಗಿ ಹರಿಯುತ್ತಿರುವ ನೀರಿನ ಹಳ್ಳ, ಒಂಟಿಯಾಗಿ ನಿಂತಿರುವ ಗುಡ್ಡ, ಸಣ್ಣ ಹಳ್ಳಿಯಲ್ಲಿ ಇರಬಹುದಾದ ಒಂದು ಸುಂದರ ದೇವಸ್ಥಾನ ಇವೆಲ್ಲವೂ ಈ ಸ್ಪರ್ಧೆಯಿಂದಾಗಿ ನಮ್ಮ ಉತ್ಸಾಹಿ ಛಾಯಾಗ್ರಾಹಕರ ಬಲೆಗೆ ಬೀಳುತ್ತವೆ. ಅವು ಸಾಮಾಜಿಕ ಜಾಲತಾಣದಲ್ಲಿ ಹರಿದಾಡತೊಡಗುತ್ತವೆ. ಕಾಲಿಗೆ ಚಕ್ರ ಕಟ್ಟಿಕೊಂಡಿರುವ ತಿರುಗು ಚಪಲಿಗರು ಆ ಸ್ಥಳಗಳಿಗೆ ನುಗ್ಗಲು ಪ್ರಾರಂಭಿಸುತ್ತಾರೆ. ವಾಹನ ಸಂಚಾರ, ಗೂಡಂಗಡಿಗಳು ಆರಂಭವಾಗಿ, ತಲೆತಲಾಂತರಗಳಿಂದ ನೆಮ್ಮದಿಯಿಂದ ಕೂಡಿದ್ದ ಆ ಸ್ಥಳವನ್ನು ಹಾಳು ಮಾಡುತ್ತಾ ಮತ್ತಷ್ಟು ಪರಿಸರ ನಾಶಕ್ಕೆ ಕಾರಣರಾಗುತ್ತಾರೆ. ಈಗಾಗಲೇ ತಮ್ಮ ಸುಪರ್ದಿಯಲ್ಲಿರುವ ತಾಣಗಳನ್ನೇ ಸರಿಯಾಗಿ ನಿರ್ವಹಿಸಲಾರದ ಪ್ರವಾಸೋದ್ಯಮ ಇಲಾಖೆಗೆ ಮಾಲಿನ್ಯಕ್ಕೆ ಕಾರಣವಾಗುವ ಇಂತಹ ಯೋಚನೆಗಳು ಮಾತ್ರ ಸಲೀಸಾಗಿ ಹೊಳೆಯುತ್ತವೆ. ಆಳದಲ್ಲಿ ಹಣದ ಲಾಭ ಮತ್ತು ಪರಿಸರ ನಾಶಕ್ಕೆ ಕಾರಣವಾಗುವ ಈ ಸ್ಪರ್ಧೆಯನ್ನು ಇಲಾಖೆ ಕೈಬಿಡಬೇಕು.

ಸಂತೋಷ ಕೌಲಗಿ, ಮೇಲುಕೋಟೆ

ರಾಜಕೀಯ ಕುಟುಂಬವೇನೂ ನ್ಯಾಯದಿಂದ ಹೊರತಲ್ಲ

ಪೆನ್‌ಡ್ರೈವ್ ಪ್ರಕರಣ ಬಹಿರಂಗವಾಗುತ್ತಲೇ ಎಚ್‌.ಡಿ.ಕುಮಾರಸ್ವಾಮಿ ಅವರು, 'ನಮ್ಮ ಕುಟುಂಬವೇ ಬೇರೆ, ಎಚ್‌.ಡಿ.ರೇವಣ್ಣ ಅವರ ಕುಟುಂಬವೇ ಬೇರೆ' ಅಂದರು. ತನಿಖೆ ಪ್ರಾರಂಭವಾದಾಗಿನಿಂದ ಹಲವಾರು ವಿಷಯಗಳು ಬೆಳಕಿಗೆ ಬರುತ್ತಲೇ 'ಇದು ಕಾಂಗ್ರೆಸ್ಸಿನವರು ನಮ್ಮ ಕುಟುಂಬವನ್ನು, ಜೆಡಿಎಸ್ ಪಕ್ಷವನ್ನು ಮುಗಿಸಲು ಮಾಡಿರುವ ತಂತ್ರ' ಎನ್ನುತ್ತಿದ್ದಾರೆ. ಈಗ ಪದೇಪದೇ 'ಪೆನ್‌ಡ್ರೈವ್ ಹಂಚಿದವರು ಯಾರು? ಅವರಿಗೂ ಶಿಕ್ಷೆ ಆಗಬೇಕಲ್ಲವೇ?' ಎಂದು ಹೇಳುತ್ತಿದ್ದಾರೆ. ಹಾಗೆಂದಮೇಲೆ ಅತ್ಯಾಚಾರ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ತಪ್ಪಿತಸ್ಥರು ಎಂದು ಅವರು ಒಪ್ಪಿಕೊಂಡಂತೆ ಆಗುವುದಿಲ್ಲವೇ? ಎಚ್‌.ಡಿ.ರೇವಣ್ಣ ಅವರು 'ಇದು ಕೆಲವು ವರ್ಷಗಳ ಹಿಂದಿನದು' ಎಂದು ಹೇಳುವ ಮೂಲಕ, ಪ್ರಕರಣ ನಡೆದಿರುವುದನ್ನು ಖುದ್ದಾಗಿ ಒಪ್ಪಿಕೊಂಡಂತಾಗಿದೆ. ವಿಷಯ ಹೀಗಿರುವಾಗ, ಪೆನ್‌ಡ್ರೈವ್ ಹಂಚಿದವರ ಬಗ್ಗೆ ಮಾತ್ರ ಮಾತನಾಡುವುದು ಎಷ್ಟು ಸರಿ? ಅಕೃತ್ಯ ಸಾಬೀತಾಗಿ ಅಪರಾಧಿಗೆ ಶಿಕ್ಷೆಯಾದರೆ ನೊಂದ ಮಹಿಳೆಯರಿಗೆ ಒಂದಿಷ್ಟು ಸಮಾಧಾನವಾದರೂ ಸಿಗುತ್ತದಲ್ಲವೇ? ಸಾಮಾನ್ಯರಿಗೆ ಒಂದು ನ್ಯಾಯ, ರಾಜಕೀಯ ಕುಟುಂಬಕ್ಕೆ ಒಂದು ನ್ಯಾಯವೇ?

ಹನಮಂತಪ್ಪ ಬಿ.ಎಸ್., ನರಗುಂದ

ವಾಜಪೇಯಿ, ಯಡಿಯೂರಪ್ಪ ಮಾದರಿಯಾಗಲಿ

'ಪ್ರಧಾನಿ ಮಾತು ಹಾಗೂ ರಾಜಧರ್ಮ' ಎಂಬ ಲೇಖನದಲ್ಲಿ (ಪ್ರ.ವಾ., ಮೇ 29) ಎಸ್‌.ಆರ್.ವಿಜಯಶಂಕರ ಅವರು ಧರ್ಮದ್ವೇಷದ ಮಾತುಗಳ ಬಗ್ಗೆ ವಸ್ತುನಿಷ್ಠವಾಗಿ ವಿಶ್ಲೇಷಿಸಿದ್ದಾರೆ. ನಮ್ಮೂರಿನ ಪಕ್ಕದ ಗ್ರಾಮವಾದ ತಿಂಥಿಣಿಯ ಮೌನೇಶ್ವರ ಎಂಬ 15ನೇ ಶತಮಾನದ ಸಂತರು ಹಿಂದೂ, ಮುಸಲ್ಮಾನರ ನಡುವೆ ಭಾವೈಕ್ಯ ಮೂಡಿಸಿದರು. ಇವರ ಸಮಕಾಲೀನರಾದ ಕೊಡೇಕಲ್ಲ ಬಸವಣ್ಣನವರೂ ಇದೇ ತತ್ವವನ್ನು ಸಾರಿದರು. ಇಂಥ ಪರಿಸರದಲ್ಲಿ ಬೆಳೆದ ನನ್ನಂಥವರಿಗೆ ಕೋಮುವಾದದ ಮಾತುಗಳನ್ನು ಅರಗಿಸಿಕೊಳ್ಳಲಾಗುತ್ತಿಲ್ಲ. ದೇಶದಾದ್ಯಂತ ಇಂಥ ಮಾನವತಾವಾದಿಗಳು ಆಗಿಹೋಗಿದ್ದರೂ 'ದೀಪದ ಬುಡದಲ್ಲೇ ಕತ್ತಲೆ' ಎಂಬಂತೆ, ನಮ್ಮನ್ನು ಆಳುವವರು ಇಂದಿನ 'ಪ್ರಜಾಪ್ರಭುತ್ವ'ದಲ್ಲೂ ಧರ್ಮದ್ವೇಷವನ್ನು ಹರಡುತ್ತಿರುವುದು ದುರಂತದ ಸಂಗತಿ.

ಅಟಲ್ ಬಿಹಾರಿ ವಾಜಪೇಯಿ ಅವರು ಉದಾರವಾದಿ ನಾಯಕರಾಗಿದ್ದರು. ಬಿ.ಎಸ್.ಯಡಿಯೂರಪ್ಪ ಅವರು ಸಂಘಪರಿವಾರದಿಂದಲೇ ಬಂದವರಾಗಿದ್ದರೂ ರಾಜಕೀಯ ಜೀವನದಲ್ಲಿ ಒಮ್ಮೆಯೂ ಕೋಮುವಾದದ ಮಾತನಾಡಲಿಲ್ಲ. ಇವರು ಹಿನ್ನೆಲೆಗೆ ಸರಿದು ಮುಂದಿನ ಮುಖ್ಯಮಂತ್ರಿಯ ಆಡಳಿತದಲ್ಲಿ 'ಕ್ರಿಯೆಗೆ ಪ್ರತಿಕ್ರಿಯೆ' ಎಂಬ ಮಾತು ಮುನ್ನೆಲೆಗೆ ಬಂದಿತು. ಹಲಾಲ್ ಕಟ್, ಜಟ್ಕಾ ಕಟ್, ಉರಿಗೌಡ, ನಂಜೇಗೌಡ ಎಂದೆಲ್ಲ ಅಸಹಿಷ್ಣು ಮನೋಭಾವ ಬೆಳೆದು, ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕನ್ನಡಿಗರು ಬಿಜೆಪಿಯನ್ನು ತಿರಸ್ಕರಿಸಲು ಕಾರಣವಾಯಿತು. ಬಿಜೆಪಿ ನಾಯಕರಿಗೆ ವಾಜಪೇಯಿ ಹಾಗೂ ಯಡಿಯೂರಪ್ಪ ಅವರು ಮಾದರಿ ಆಗಲಿ.

ಶಿವಕುಮಾರ ಬಂಡೋಳಿ, ಹುಣಸಗಿ, ಯಾದಗಿರಿ

ಶಿಕ್ಷಕರ ಮನೋಸ್ಥೈರ್ಯ ಕುಗ್ಗಿಸದಿರಿ

ಈ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಕುಸಿತಕ್ಕೆ ಶಿಕ್ಷಕರನ್ನು ಹೊಣೆ ಮಾಡಲಾಗುತ್ತಿದೆ. ಒಂದೆರಡು ದಶಕಗಳ ಹಿಂದೆ ಎಸ್‌ಎಸ್‌ಎಲ್‌ಸಿ ಫಲಿತಾಂಶ ಶೇ 40-50ರ ಆಸುಪಾಸಿನಲ್ಲಿ ಇರುತ್ತಿತ್ತು. ಆನಂತರದ ದಿನಗಳಲ್ಲಿ ಫಲಿತಾಂಶ ಏರುಗತಿಯಲ್ಲಿ ಸಾಗಿತು. ಇಂಥ ಒಂದು ಜಾದೂ ಹೇಗೆ ಸಾಧ್ಯವಾಯಿತು ಎಂಬುದು, ಈ ಎರಡು ದಶಕಗಳಲ್ಲಿ ಎಸ್‌ಎಸ್‌ಎಲ್‌ಸಿ ದಾಟಿ ಬಂದವರಿಗೆಲ್ಲ ತಿಳಿದ ಸತ್ಯವೇ ಆಗಿದೆ. ಈ ಮೊದಲು ಕಡಿಮೆ ಫಲಿತಾಂಶ ಪಡೆದ ಶಾಲೆಗಳ ಶಿಕ್ಷಕರು ಅಧಿಕಾರಿಗಳ ನಿಂದನೆಯಿಂದ ರೋಸಿಹೋಗಿ, ಉತ್ತಮ ಫಲಿತಾಂಶಕ್ಕಾಗಿ ನಕಲು ಮಾಡಿಸುವ ಸರಳ ಹಾದಿ ಹಿಡಿದರು. ಜಿಲ್ಲಾವಾರು ಸ್ಥಾನಗಳಿಗೆ ಪೈಪೋಟಿ ಶುರುವಾದ ನಂತರ ಈ ಪ್ರವೃತ್ತಿ ಇನ್ನೂ ಹೆಚ್ಚಾಯಿತು. ಶೇ 70- 80ರಷ್ಟು ಫಲಿತಾಂಶ ಪಡೆದ ಶಾಲೆಗಳನ್ನು 'ಶೇ 100 ಏಕೆ ಬಂದಿಲ್ಲ' ಎಂದು ಕೇಳುವುದು, ಶೇ 100ರಷ್ಟು ಫಲಿತಾಂಶ ಬಂದಿದ್ದರೆ 'ಡಿಸ್ಟಿಂಕ್ಷನ್ ಎಷ್ಟು?' ಎಂದು ಕೇಳುವುದು ಶುರುವಾದ ನಂತರ ನಕಲು ಇನ್ನೂ ಉತ್ತುಂಗಕ್ಕೆ ಏರಿತು. ಕೆಲವು ವರ್ಷಗಳ ಫಲಿತಾಂಶಗಳಲ್ಲಿ ಸರಿಯಾಗಿ ಓದಲು, ಬರೆಯಲು ಬಾರದ ವಿದ್ಯಾರ್ಥಿಗಳು ಸಹ 600ಕ್ಕೂ ಹೆಚ್ಚು ಅಂಕ ಗಳಿಸಿ ಅಚ್ಚರಿ ಮೂಡಿಸಿದರು. ಇಂತಹ ನಿದರ್ಶನಗಳ ಪರಿಣಾಮವಾಗಿ, ಶಿಕ್ಷಕರಿಗೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳನ್ನು ತರಗತಿಯಲ್ಲಿ ನಿಯಂತ್ರಿಸುವುದು ಕಷ್ಟವಾಗತೊಡಗಿತ್ತು.

ಪ್ರಸಕ್ತ ವರ್ಷ ವೆಬ್‌ಕಾಸ್ಟಿಂಗ್ ಅಳವಡಿಸಿ ಪರೀಕ್ಷೆಯನ್ನು ಕಟ್ಟುನಿಟ್ಟಾಗಿ ನಡೆಸಲಾಗುತ್ತದೆ ಎಂದು ಮಂಡಳಿ ಪ್ರಕಟಿಸಿದಾಗ ಹೆಚ್ಚು ಸಂತಸಗೊಂಡವರು ಶಿಕ್ಷಕರೇ. ಒಂದು ವರ್ಷ ಪ್ರಾಮಾಣಿಕವಾಗಿ ಪರೀಕ್ಷೆ ನಡೆಯಲಿ, ಆಗ ವಿದ್ಯಾರ್ಥಿಗಳಿಗೂ ತಮ್ಮ ಜವಾಬ್ದಾರಿಯ ಅರಿವಾಗುತ್ತದೆ, ಆನಂತರದ ವರ್ಷಗಳಲ್ಲಿ ಫಲಿತಾಂಶ ತಾನೇ ತಾನಾಗಿ ಸುಧಾರಣೆಯಾಗುತ್ತದೆ ಎಂದು ಹೆಚ್ಚಿನ ಶಿಕ್ಷಕರು ಮಾತನಾಡಿಕೊಂಡರು. ಈಗ ಅಂದುಕೊಂಡಂತೆ ಆಗಿದೆ. ಕಡಿಮೆ ಫಲಿತಾಂಶಕ್ಕೆ ಕಾರಣವೇನು ಎಂಬ ಬಗ್ಗೆ ಶಿಕ್ಷಣ ಇಲಾಖೆ ಸೂಕ್ತ ಅಧ್ಯಯನ ಕೈಗೊಳ್ಳಬೇಕಾಗಿದೆ. ಅದನ್ನು ಬಿಟ್ಟು ಮತ್ತೆ ಶಿಕ್ಷಕರ ಮೇಲೆ ಮುಗಿಬಿದ್ದು ಅವರ ಮನೋಸ್ಥೈರ್ಯವನ್ನು ಕುಗ್ಗಿಸಹೊರಟರೆ ಪುನ ಅವರು ನಕಲಿಗೆ ಪರ್ಯಾಯ ಮಾರ್ಗ ಹುಡುಕುವುದು ಸ್ವಾಭಾವಿಕ.

ಪುಟ್ಟದಾಸು, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಇನ್ನಷ್ಟು ಪ್ರತಿಭಾವಂತ ನಾಮನಿರ್ದೇಶಿತರು

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ಎರಡನೇ ಆವೃತ್ತಿಗೆ ದಿನಗಣನೆ ಶುರುವಾಗಿದೆ. 2023ನೇ ಸಾಲಿನ ಸಿನಿಮಾಗಳ ಪೈಕಿ ಪ್ರಶಸ್ತಿಗೆ ನಾಮನಿರ್ದೇಶಿತರನ್ನು ತಿಳಿಸುವ ಸಮಯ ಇದಾಗಿದೆ. ಮೇ 23ರಂದು ಐದು ವಿಭಾಗಗಳಲ್ಲಿ ನಾಮನಿರ್ದೇಶಿತರಾದವರನ್ನು ಇಲ್ಲಿ ಪ್ರಕಟಿಸಲಾಗಿತ್ತು. ಪ್ರಸ್ತುತ ಐದು ವಿಭಾಗಗಳ ನಾಮನಿರ್ದೇಶಿತರ ವಿವರ ಇಲ್ಲಿದೆ. ಇನ್ನಷ್ಟು ವಿಭಾಗಗಳಲ್ಲಿ ನಾಮನಿರ್ದೇಶಿತರಾದವರ ಹೆಸರುಗಳು ಹಂತ ಹಂತವಾಗಿ ಪ್ರಕಟಿಸಲಾಗುವುದು.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಅತ್ಯುತ್ತಮ ಪೋಷಕ ನಟ

- ನಾಗಭೂಷಣ — ಚಿತ್ರ: ಕೌಸಲ್ಯ ಸುಪ್ರಜಾ ರಾಮ
- ಜೆ.ಪಿ ತುಮ್ಮಿನಾಡು — ಚಿತ್ರ: ಸ್ವಾತಿ ಮುತ್ತಿನ ಮಳೆ ಹನಿಯೇ
- ಪೂರ್ಣಚಂದ್ರ ಮೈಸೂರು, ಶೋಭರಾಜ್ ಪಾವೂರು — ಚಿತ್ರ: ಡೇರ್ ಡೆವಿಲ್ ಮುಸ್ತಾಫಾ
- ರಮೇಶ್ ಇಂದಿರಾ — ಚಿತ್ರ: ಸಪ್ತ ಸಾಗರದಾಚೆ ಎಲ್ಲೋ Side A
- ರಂಗಾಯಣ ರಘು — ಚಿತ್ರ: ಟಗರು ಪಲ್ಯ

ಅತ್ಯುತ್ತಮ ಪೋಷಕ ನಟಿ

- ವೆನ್ಯಾ ರೈ — ಚಿತ್ರ: ಭಾವಪೂರ್ಣ
- ಗುಂಜಾಲಮ್ಮ — ಚಿತ್ರ: ಪಿಂಕಿ ಎಲ್ಲಿ?
- ತಾರಾ ಅನುರಾಧ — ಚಿತ್ರ: ಟಗರು ಪಲ್ಯ
- ಉಮಾಶ್ರೀ — ಚಿತ್ರ: ಕಾಸಿನ ಸರ
- ಪವಿತ್ರಾ ಲೋಕೇಶ್ — ಚಿತ್ರ: ಸಪ್ತ ಸಾಗರದಾಚೆ ಎಲ್ಲೋ Side A

ಅತ್ಯುತ್ತಮ ಸಂಗೀತ ನಿರ್ದೇಶನ

- ಮಣಿಕಾಂತ್ ಕದ್ರಿ — ಚಿತ್ರ: ವಿರಾಟಪುರ ವಿರಾಗಿ
- ಮಿದುನ್ ಮುಕುಂದನ್ — ಚಿತ್ರ: ಸ್ವಾತಿ ಮುತ್ತಿನ ಮಳೆ ಹನಿಯೇ
- ಬಿಂದುಮಾಲಿನಿ — ಚಿತ್ರ: ಆಚಾರ್ ಆಂಡ್ ಕೋ
- ವಿ.ಹರಿಕೃಷ್ಣ — ಚಿತ್ರ: ಕಾಟೇರ
- ರಘು ದೀಕ್ಷಿತ್ — ಚಿತ್ರ: ಆರ್ಕೆಸ್ಟ್ರಾ ಮೈಸೂರು

ಅತ್ಯುತ್ತಮ ಛಾಯಾ ಚಿತ್ರಗ್ರಹಣ



- ಪ್ರವೀಣ್ ಶ್ರೀಯಾನ್ — ಚಿತ್ರ: ಸ್ವಾತಿ ಮುತ್ತಿನ ಮಳೆ ಹನಿಯೇ
- ಸುಧಾಕರ್ ಎಸ್.ರಾಜು — ಚಿತ್ರ: ಕಾಟೇರ
- ಅಶೋಕ್ ವಿ.ರಾಮನ್ — ಚಿತ್ರ: ವಿರಾಟಪುರ ವಿರಾಗಿ
- ಶಿವ ಬಿ.ಕೆ ಕುಮಾರ್ — ಚಿತ್ರ: 19.20.21
- ಅಭಿಮನ್ಯು ಸದಾನಂದನ್ — ಚಿತ್ರ: ಆಚಾರ್ ಆಂಡ್ ಕೋ

ಅತ್ಯುತ್ತಮ ಸಂಕಲನ

ದೀಪು ಎಸ್.ಕುಮಾರ್
ಚಿತ್ರ: ಘೋಸ್ಟ್

ಸುನೀಲ್ ಭಾರದ್ವಾಜ್, ಹೇಮಂತ್ ರಾವ್
ಚಿತ್ರ:ಸಪ್ತ ಸಾಗರದಾಚೆ ಎಲ್ಲೋ Side A

ಸುರೇಶ್ ಆರ್ಮುಗಂ
ಚಿತ್ರ: 19.20.21

ಆಶಿಕ್ ಕುಸುಗೊಳ್ಳಿ
ಚಿತ್ರ: ಆಚಾರ್ ಆಂಡ್ ಕೋ

ಶರತ್ ವಸಿಷ್ಠ, ಹರೀಶ್ ಕೊಮ್ಮೆ, ರಾಹುಲ್ ರಾಯ್
ಚಿತ್ರ: ಡೇರ್ ಡೆವಿಲ್ ಮುಸ್ತಾಫಾ

ಕಥೆ ಅಲ್ಪ, ಆ್ಯಕ್ಷನ್ ಸರ್ವತ್ರ!

ಕಾಮಿಡಿ–ಆ್ಯಕ್ಷನ್‌ನ ಸಮಾಗಮ ಈ ‘ಟರ್ಬೊ’. ಕಥೆ ಕೇರಳ–ತಮಿಳುನಾಡಿನಲ್ಲಿ ನಡೆಯುತ್ತದೆ. ಜೋಸ್(ಮಮ್ಮುಟ್ಟಿ) ತನ್ನ ಊರಿನಲ್ಲಿ ‘ಟರ್ಬೊ ಜೋಸ್’ ಎಂದೇ ಖ್ಯಾತಿ ಪಡೆದಾತ. ಊರಿನ ಜಾತ್ರೆಯಲ್ಲಿ ಜೋಸ್ ಸಮ್ಮುಖದಲ್ಲಿ ಒಂದು ಹೊಡೆದಾಟ ನಿಶ್ಚಿತ. ಇಂತಹ ಸಂದರ್ಭದಲ್ಲಿ ಅದೇ ಊರಿನ ‘ಜೆರ್ರಿ’ ಎಂಬ ಕ್ರಿಶ್ಚಿಯನ್ ಹುಡುಗನಿಗೆ ‘ಇಂದುಲೇಖ’ ಎನ್ನುವ ಹಿಂದೂ ಹುಡುಗಿಯ ಮೇಲೆ ಪ್ರೀತಿ. ‘ಜೆರ್ರಿ’ಯನ್ನು ತನ್ನ ತಮ್ಮನಂತೆ ಪರಿಗಣಿಸಿರುವ ಜೋಸ್, ಈ ಪ್ರೇಮಕಥೆಯನ್ನು ಪೂರ್ಣಗೊಳಿಸಲು ಹೋಗಿ ತಾನೇ ಸಮಸ್ಯೆಗೆ ಸಿಲುಕಿಕೊಳ್ಳುತ್ತಾನೆ. ಇದರಿಂದಾಗಿ ಊರು ತೊರೆದು ತಮಿಳುನಾಡು ಸೇರುವ ಸ್ಥಿತಿಗೆ ಜೋಸ್ ತಲುಪುತ್ತಾನೆ. ಅಲ್ಲಿ ‘ವೆಟ್ರಿವೇಲ್ ಶಣ್ಮುಗ ಸುಂದರಂ’(ರಾಜ್ ಬಿ.ಶೆಟ್ಟಿ) ಎಂಬ ಪಾತ್ರದ ಪ್ರವೇಶದಿಂದ ‘ಜೆರ್ರಿ’, ‘ಇಂದುಲೇಖ’ ಹಾಗೂ ‘ಜೋಸ್’ ಜೀವನದಲ್ಲಿ ತಿರುವು, ಕಥೆಗೆ ವೇಗ. ಎಪ್ಪತ್ತರ ಹೊಸ್ತಿಲು ದಾಟಿರುವ ಮಮ್ಮುಟ್ಟಿ ಇಲ್ಲಿ ಯುವನಟರೂ ನಾಚುವಂತೆ ಫೈಟ್ಸ್ ಮಾಡಿದ್ದಾರೆ. ಅಮ್ಮನಿಗಷ್ಟೇ ಹೆದರುವ ಮುದ್ದಿನ ಮಗನಾಗಿ, ಅಮ್ಮನ ಪ್ರೀತಿಯನ್ನು ‘ಜೋಸ್’ ವಿವರಿಸುವಾಗ ಕಣ್ಣಂಚು ಒದ್ದೆಯಾಗುತ್ತದೆ. ಆ್ಯಕ್ಷನ್ ದೃಶ್ಯಗಳಲ್ಲಿ ಎಲ್ಲಿಯೂ ಮಮ್ಮುಟ್ಟಿ ಮುಖ ಮರೆಯಾಗುವುದಿಲ್ಲ. ಮಲಯಾಳ ಚಿತ್ರರಂಗಕ್ಕೆ ಮೊದಲ ಹೆಜ್ಜೆ ಇಟ್ಟಿರುವ ರಾಜ್ ಬಿ.ಶೆಟ್ಟಿ ಹೊಸ ಸ್ಟೈಲ್‌ನಲ್ಲಿ ಪ್ರೇಕ್ಷಕರೆದುರಿಗೆ ಬಂದಿದ್ದಾರೆ. ತಮಿಳು–ಮಲಯಾಳ–ಇಂಗ್ಲಿಷ್ ಮಿಶ್ರಿತ ಭಾಷೆಯಲ್ಲಿ ಗಮನಸೆಳೆಯುತ್ತಾರೆ. ಅವರ ದೈಹಿಕ ರೂಪಕ್ಕೆ ತದ್ವಿರುದ್ಧವಾದ ಶಕ್ತಿಯುಳ್ಳ ಪಾತ್ರ ಇದರಲ್ಲಿದೆ. ಆಧುನಿಕ ಯುಗದ ಅಮ್ಮನಾಗಿ ಬಿಂದು ಪಣಿಕ್ಕರ್ ಪ್ರೇಕ್ಷಕರನ್ನು ನಗಿಸುತ್ತಾರೆ. ಚಿತ್ರಕಥೆಯಲ್ಲಿ ಕೆಲವೆಡೆ ಲಾಜಿಕ್ ಇಲ್ಲದ ದೃಶ್ಯಗಳಿವೆ. ಕಥೆಯ ಎಳೆ ಸಣ್ಣದಾಗಿದೆ. ಹೀರೊನ ಪ್ರತಿ ಫೈಟ್‌ನಲ್ಲಿ ಟರ್ಬೊ ಎಂಜಿನ್‌ನ ಹಿನ್ನೆಲೆ ಸಂಗೀತ ಕೊಂಚ ಹೊತ್ತು ಸಹಿಸಿಕೊಳ್ಳಬಹುದಾದರೂ ನಂತರ ಕಿರಿಕಿರಿಯಾಗುತ್ತದೆ. ಸಿದ್ಧಸೂತ್ರವನ್ನು ಬಿಟ್ಟು ಕಥೆ ಹೆಣೆಯಲಾಗಿದ್ದು, ಸಿನಿಮಾದಲ್ಲಿ ಹಾಡಿಲ್ಲ, ಹೀರೊಯಿನ್ ಇಲ್ಲ. ಕ್ಲೈಮ್ಯಾಕ್ಸ್‌ನ ಫೈಟ್ ದೃಶ್ಯಗಳನ್ನು ಎಳೆದಾಡಿದಂತಿದೆ. ಆದರೂ ಮಮ್ಮುಟ್ಟಿ ಫ್ಯಾನ್ಸ್‌ಗೆ ‘ಟರ್ಬೊ’ ಹಬ್ಬವಾಗಲಿದೆ ಎಂದರೆ ಅತಿಶಯೋಕ್ತಿಯಲ್ಲ. ‘ಟರ್ಬೊ–2’ ಸೆಟ್ಟೇರುವ ಮುನ್ಸೂಚನೆ ಕ್ಲೈಮ್ಯಾಕ್ಸ್‌ನಲ್ಲಿದ್ದು, ಅದರ ಖಳನಾಯಕ ಯಾರೆಂಬುದನ್ನು ಧ್ವನಿಯಲ್ಲೇ ಊಹಿಸಿಕೊಳ್ಳಬಹುದು.

ಅಭಿಲಾಷ್ ಪಿ.ಎಸ್.

ನಾವು ನೋಡಿದ ಸಿನಿಮಾ

ಟರ್ಬೊ (ಮಲಯಾಳ)

- ನಿರ್ಮಾಣ: ಮಮ್ಮುಟ್ಟಿ ಕಂಪನಿ
- ನಿರ್ದೇಶನ: ವೈಶಾಖ್
- ತಾರಾಗಣ: ಮಮ್ಮುಟ್ಟಿ, ರಾಜ್ ಬಿ.ಶೆಟ್ಟಿ, ಸುನೀಲ್ ಮತ್ತಿತರರು.

ಗುಂಡಣ್ಣ



ಕತ್ತಿ ಸಿಕ್ಕ ಮೇಲೆ...

ನುಡಿ ಬೆಳಗು



ಪ್ರೊ.ಎಂ. ಕೃಷ್ಣೇಗೌಡ

ಸನ್ಯಾಸಿಯೊಬ್ಬ ಕಾಡಿನಲ್ಲಿ ಸಣ್ಣದೊಂದು ಪರ್ಣಕುಟಿ ಕಟ್ಟಿಕೊಂಡು ವಾಸವಾಗಿದ್ದ. ಕಾಡಿನಲ್ಲಿ ಸಿಗುವ ಕಂದಮೂಲಾದಿಗಳನ್ನು ತಿಂದುಕೊಂಡು, ಧ್ಯಾನ ತಪಸ್ಸುಗಳಲ್ಲಿ ಕಾಲ ಕಳೆಯುತ್ತಾ ಆನಂದವಾಗಿದ್ದ.

ಅದೊಂದು ದಿನ ಮಧ್ಯಾಹ್ನ ಸಮೀಪದ ತಿಳಿನೀರ ತೊರೆಯಲ್ಲಿ ನೀರು ಕುಡಿದುಕೊಂಡು ಕುಟೀರಕ್ಕೆ ಮರಳುವಾಗ ಪೊದೆಯಾಚೆಗೆ ಏನೋ ಫಳ್ ಅಂತ ಹೊಳೆದಂತಾಯಿತು. ಸನ್ಯಾಸಿ ಕುತೂಹಲದಿಂದ ಪೊದೆಯ ಆಚೆಬದಿಗೆ ಹೋಗಿ ನೋಡಿದ. ಅದೊಂದು ಅದ್ಭುತವಾದ ಕತ್ತಿ. ಬಿಸಿಲಿಗೆ ಫಳಫಳ ಹೊಳೆಯುತ್ತಿತ್ತು. ಅದರ ಬಾಯಿಧಾರೆಯನ್ನು ಮುಟ್ಟಿ ನೋಡಿದ. ಆಹ್! ತುಂಬಾ ಹರಿತವಾಗಿತ್ತು. ಸನ್ಯಾಸಿ ಕತ್ತಿಯನ್ನು ಕೈಗೆತ್ತಿಕೊಂಡು ಪೊದೆಯ ಕಡೆ ಬೀಸಿದ. ಚರಕ್ಕನೆ ಕಡಿದು ಬಿತ್ತು ಪೊದೆ. ಸನ್ಯಾಸಿಗೆ ರೋಮಾಂಚನವಾಯಿತು. ಆ ಕತ್ತಿಯನ್ನು ತೆಗೆದುಕೊಂಡು ಕುಟೀರಕ್ಕೆ ಹೋದ.

ಕತ್ತಿಯ ಹೊಳಪಿಗೆ, ಅದರ ಹರಿತಕ್ಕೆ ಸನ್ಯಾಸಿ ಎಷ್ಟು ಮೋಹಿತನಾದ ಅಂದರೆ ಆ ರಾತ್ರಿ ನಿದ್ದೆಯಲ್ಲೂ ಒಂದೆರಡು ಬಾರಿ ಎಚ್ಚರವಾಗಿ ಕತ್ತಿಯನ್ನು ನೋಡಿ, ಮುತ್ತಿಟ್ಟು, ಅದರ ಬಾಯಿಧಾರೆಯ ಮೇಲೆ ಬೆರಳಾಡಿಸಿದ.

ಅಂದಿನಿಂದ ಕತ್ತಿ ಸನ್ಯಾಸಿಯ ಜೊತೆಯಾಯಿತು. ದಾರಿಯಲ್ಲಿ ಹೋಗುವಾಗ ಬರುವಾಗ ಕತ್ತಿಯನ್ನು ಬೀಸಿ ಮರ ಗಿಡ ಬಳ್ಳಿಗಳನ್ನು, ಹೂ ಚಿಗುರುಗಳನ್ನು ಚರಕ್ ಚರಕ್ ಅಂತ ಕತ್ತರಿಸುವುದು ಅವನಿಗೊಂದು ಆಟವಾಯಿತು.

ಕತ್ತಿ ಇನ್ನಷ್ಟು ಮತ್ತಷ್ಟು ಹರಿತವಾಗಲೆಂದು ಅದನ್ನು ಆಗಾಗ ಮಸೆಯುವುದಕ್ಕೂ ಶುರು ಮಾಡಿದ.

ಒಂದು ದಿನ ಸನ್ಯಾಸಿ ತೊರೆಯ ಕಡೆಗೆ ಹೋಗುವಾಗ ಒಂದು ಕಾಡುನಾಯಿ ಬೊಗಳುತ್ತಾ ಬಂತು. ಸಿಟ್ಟಾದ ಸನ್ಯಾಸಿ ತನ್ನ ಕತ್ತಿಯನ್ನು ಬೀಸಿದ.

ಚರ್ರಕ್ ಅಂತ ನಾಯಿಯ ಬಾಲ ಕತ್ತರಿಸಿಹೋಗಿ ನಾಯಿ ಜೋರಾಗಿ ಬೊಗಳುತ್ತಾ ಓಡಿಹೋಯಿತು. ಬೊಗಳುವ ನಾಯಿಗಳ ಬಾಲ ಕತ್ತರಿಸಿಬಿಟ್ಟರೆ ಅವು ಓಡಿಹೋಗುತ್ತವೆ ಅಂತ ಆಗ ಸನ್ಯಾಸಿಗೆ ಅರಿವಾಯಿತು.

ಆಮೇಲೆ ಸಿಕ್ಕಸಿಕ್ಕಲೆಲ್ಲಾ ಕತ್ತಿಯನ್ನು ಝಳಪಿಸುತ್ತಾ, ಯಾವುದಾದರೂ ದುಷ್ಟಮೃಗ ಅಡ್ಡವಾದರೆ ಅದನ್ನು ಕಚಕ್ ಎಂದು ಕತ್ತರಿಸುತ್ತಾ ಓಡಾಡುತ್ತಿದ್ದ. ಈ ಕತ್ತಿಯ ಆಟ ಸನ್ಯಾಸಿಗೆ ಎಷ್ಟು ಪ್ರಿಯವಾಯಿತೆಂದರೆ ಆಮೇಲಾಮೇಲೆ ಸಾಧು ಪ್ರಾಣಿಗಳ ಮೇಲೂ ಕತ್ತಿಯನ್ನು ಬೀಸಿ, ಖುಷಿಪಡುತ್ತಿದ್ದ...

ಈ ಕತೆಯನ್ನು ಹೇಳಿದ ನಮ್ಮ ಗುರುಗಳು ಕಡೆಯಲ್ಲಿ ಒಂದು ಮಾತು ಹೇಳಿದರು- ‘ಆ ಕತ್ತಿಯ ಹಾಗೇ ಕಣೋ, ಅಧಿಕಾರ ಅನ್ನುವುದು...’ ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶುಕ್ರವಾರ ಮೇ 24, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣಪ್ರತಿಪದ್ ಗಂ. 19-25 ನಕ್ಷತ್ರ: ಅನುರಾಧ ಗಂ. 10-10 ಯೋಗ: ಶಿವ ಗಂ. 11-21 ಕರಣ: ಬಾಲವ ಗಂ. 7-28, ವೃಷಭ ಮಾಸದ ನೇ 11 ದಿನ, ಮಳೆನಕ್ಷತ್ರ: ಕೃತ್ತಿಕಾ 4.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-07 **ಸೂರ್ಯಾಸ್ತ :** 06-48
ಮುಸ್ಲಿಂ ದಿನಾಂಕ : 15 ಜುಲ್ಖಾಯದ್
ಅದೃಷ್ಟ ಸಂಖ್ಯೆ : 2, 4

ಮೇಷ: ಹೊರಗುತ್ತಿಗೆ ವ್ಯವಹಾರಗಳಲ್ಲಿ ಶ್ರಮ, ಒತ್ತಡ ಹೆಚ್ಚಲಿದೆ ಹಾಗೂ ಅವುಗಳಿಂದ ವರಮಾನ ಹೆಚ್ಚಲಿದೆ. ನಿಮ್ಮ ಸಮಸ್ಯೆಗಳನ್ನು ಸ್ನೇಹಿತರೊಂದಿಗೆ ಚರ್ಚಿಸಿದಲ್ಲಿ ಪರಿಹಾರವಾಗುವುದು. ಇಂದು ನಿಮಗೆ ಕಠಿಣ ದಿನವಾಗಿರುತ್ತದೆ.

ವೃಷಭ: ಯಾರಾದರೂ ಆತ್ಮಹತ್ಯೆಯ ಪ್ರಯತ್ನದಲ್ಲಿದ್ದರೆ ನಿಮ್ಮಿಂದ ತಡೆಯಲು ಸಾಧ್ಯ. ನಿಮ್ಮ ದೌರ್ಬಲ್ಯವನ್ನು ನೀವಾಗಿಯೇ ಇತರರ ಮುಂದೆ ಪ್ರದರ್ಶಿಸಿ ಕಷ್ಟಕ್ಕೊಳಗಾಗಬೇಡಿ. ಕೃಷ್ಣನನ್ನು ಸ್ಮರಿಸುವುದರಿಂದ ಸತ್ಫಲ ಸಿಗಲಿದೆ.

ಮಿಥುನ: ಬರವಣಿಗೆಯಿಂದಾಗಿ ಜೀವನವನ್ನು ನಡೆಸುತ್ತಿರುವವರು ವಿವಾದಾತ್ಮಕ ಬರಹಗಳನ್ನು ಕೈಗೆತ್ತಿಕೊಳ್ಳದಿರಿ. ಇಂಧನ ವ್ಯಾಪಾರಸ್ಥರಿಗೆ ಬಹಳಷ್ಟು ಬೇಡಿಕೆ ಹೆಚ್ಚಲಿದೆ. ಸಂಗಾತಿಯೊಂದಿಗೆ ವಿರುದ್ಧ ಅಭಿಪ್ರಾಯ ಬೇಡ.

ಕರ್ಕಾಟಕ: ನಿಮ್ಮ ಮುಂದಿನ ಪೀಳಿಗೆಯವರಿಗೆ ನಿಮ್ಮ ಪೀಳಿಗೆಯ ವಿಷಯವನ್ನು ಸರಿಯಾಗಿ ತಿಳಿಸದೆ ಇದ್ದಲ್ಲಿ ಅವರು ಪದ್ಧತಿಗಳನ್ನು ಮುಂದುವರೆಸಲು ಕಷ್ಟಸಾಧ್ಯವಾಗುತ್ತದೆ. ರೈತಾಪಿ ವರ್ಗದವರ ಕೆಲಸಗಳು ಸರಾಗವಾಗಿ ನೆರವೇರುವುದು.

ಸಿಂಹ: ಪುರುಷ ಪ್ರಧಾನ ಕುಟುಂಬದಲ್ಲಿ ವಾಸಿಸುತ್ತಿರುವ ಮಹಿಳೆಯರಿಗೆ ನಿಮ್ಮ ಗೌರವವು ತೀರ ಕಡಿಮೆಯಾದಂತೆ ಅನ್ನಿಸಬಹುದು. ಕೃತಕವಾದ ನಗುವಿನ ಮುಖವಾಡವು ಇಂದು ಕಳಚುವ ಸಾಧ್ಯತೆ ಇದೆ.

ಕನ್ಯಾ: ಉಪಯುಕ್ತ ಮಾಹಿತಿಗಳನ್ನು ಬಂಧು ಮಿತ್ರರೊಂದಿಗೆ ಹಂಚಿಕೊಳ್ಳುವುದರಿಂದ ಪ್ರಶಂಸೆಗೆ ಪಾತ್ರರಾಗುವಿರಿ. ಸಾಮರಸ್ಯದ ಬದುಕನ್ನು ಮಕ್ಕಳಿಗೆ ಮನವರಿಕೆ ಮಾಡದ ಹೊರತು ಕುಟುಂಬದ ಕಲಹಗಳಿಗೆ ಇತ್ಯರ್ಥವಿಲ್ಲ.

ತುಲಾ: ಕರಗತವಾಗಿರುವ ಕೆಲಸವನ್ನೇ ಇಂದು ನಿಮಗೆ ಮಾಡಲು ಹೇಳಿದಾಗ ಗಡಿಬಿಡಿಯ ಕಾರಣವಾಗಿ ವ್ಯತ್ಯಾಸಗಳಾಗಬಹುದು. ಮನೆ ಶುದ್ಧೀಕರಣ ಪ್ರಕ್ರಿಯೆಯಲ್ಲಿ ಹಳೆ ನೆನಪನ್ನು ಮರುಕಳಿಸುವಂತಹ ವಸ್ತುಗಳು ಲಭ್ಯವಾಗುತ್ತವೆ.

ವೃಶ್ಚಿಕ: ಸುಖಕರವಾದ ಜೀವನವನ್ನು ನಡೆಸುತ್ತಿರುವಾಗ ಸಣ್ಣ ಪುಟ್ಟ ಕಷ್ಟಗಳು ಬಂದದ್ದೇ ಹೆಚ್ಚಾಗಿ ಕಾಣಬಹುದು. ಮನೋನಿಯಂತ್ರಣದಿಂದಾಗಿ ಮನಸ್ಸಿನ ಅಸಮಾಧಾನಗಳನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯ.

ಧನು: ಅಪರಾತ್ರಿಯ ವೇಳೆ ಸಂಚರಿಸುವಾಗ ನಿಶಾಚರಿಗಳಿಂದ ತೊಂದರೆ ಆಗುವ ಸಾಧ್ಯತೆಗಳು ಇವೆ. ನಿಮ್ಮ ಕುಟುಂಬದ ಭಿನ್ನಾಭಿಪ್ರಾಯಗಳನ್ನು ಬೇರೆಯವರಲ್ಲಿ ಹೇಳಿಕೊಳ್ಳಬೇಡಿ. ದುರುಪಯೋಗಗೊಳ್ಳಬಹುದು.

ಮಕರ: ಉನ್ನತ ವ್ಯಾಸಂಗದ ವಿಚಾರದಲ್ಲಿ ನಿಮ್ಮ ನಿಲುವನ್ನು ನಿಮ್ಮ ನಿಕಟವರ್ತಿ ಉಪಾಧ್ಯಾಯರಲ್ಲಿ ತಿಳಿಸಿ ಅವರ ಅಭಿಪ್ರಾಯವನ್ನು ಪಡೆದುಕೊಳ್ಳಿ. ಸ್ವತ್ತು ಕೊಳ್ಳುವ ವಿಚಾರದಲ್ಲಿ ಕಾನೂನಿನ ಸಲಹೆ ಅವಶ್ಯವಾಗಿ ಪಡೆಯಿರಿ.

ಕುಂಭ: ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ ಎನ್ನುವಂತೆ ಬೇರೊಬ್ಬರ ನಿತ್ಯ ಚಟುವಟಿಕೆಗಳು ನಿಮ್ಮ ಕಲ್ಪನೆಯ ವಿರುದ್ಧ ರೀತಿಯಲ್ಲಿರುವುದನ್ನು ಕಂಡು ಆಶ್ಚರ್ಯ ಪಡುವಿರಿ. ಭಗವಂತನ ಕೆಲವು ಮುನ್ಸೂಚನೆಗಳನ್ನು ಪರಾಮರ್ಶಿಸಿ.

ಮೀನ: ನೀವು ಶಿಕ್ಷಕರಾಗಿದ್ದರೆ ಗಿಳಿ ಪಾಠದಿಂದ ಯಾವುದೇ ಪ್ರಯೋಜನವಿಲ್ಲ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ಅನ್ನ ಸಂತರ್ಪಣೆಯನ್ನು ಮಾಡುವುದರಿಂದ ಸಂತೃಪ್ತಿ. ಹಣಕಾಸಿನ ಪರಿಸ್ಥಿತಿ ಉತ್ತಮವಾಗಿರಲಿದೆ.

ಪದಬಂಧ 5690

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ವಾಯಸದ ಹತ್ತಿರ ಚಿನ್ನವನ್ನಿಟ್ಟರೆ ಅಭ್ರಕವಾಯಿತಲ್ಲಾ! (5)
5.ಆಗಸ ನೋಡುತ್ತಿರುವ ಮಡಿವಾಳ (3)
6. ಇದು ಪ್ರತಿಕೂಲವಾದುದು (3)
9.ಹತೋಟಿ ಅಥವಾ ಸಂಖ್ಯೆ ಎಂದರೂ ಆದೀತು (2)
10.ಶ್ರಮ ನಿರ್ವಹಿಸುವುದು (2)
11.ಹತ್ತು ವರ್ಷಗಳ ಅವಧಿ (3)
12.ಅವಳು ನೋಡಿದ್ದಕ್ಕೇ ಈ ಕಣ್ಣೀರು! (2)
13.ಕೀವು ರಕ್ತದಿಂದ ಕೂಡಿರುವ ಗುಳ್ಳೆ (2)
14.ಕನಸು ಇಲ್ಲಿ ದಿಟವಾಗಿದೆ (3)
15.ಇದು ನಿಸ್ಸಾರವಾದುದು (3)
16.ಸಾಯುವ ಸಮಯವಿದು (5)

ಮೇಲಿಂದ ಕೆಳಕ್ಕೆ
1.ಸಾವಕಾಶವಾಗಿ ಅರಳುವಿಕೆ! (3)
2.ಬಂದನಕ್ಕೊಳಗಾದವ ತಿರುಗಿ ನಿಂತಿದ್ದಾನಲ್ಲಾ! (2)
4.ಕುಪ್ಪಸವನ್ನು ಹೀಗೂ ಹೇಳುವರು (3)
5.ಹೆದರಬೇಡ ರಕ್ಷಿಸುತ್ತೇನೆಂದು ಧೈರ್ಯ ಕೊಡುವುದು (5)
7.ಮಡುವಿನೊಳಗೆ ಕಾಣಿಸಿದ ಮರುಭೂಮಿ (5)
8.ಹಡಗು ನಿಲ್ಲುವ ಸ್ಥಳ (3)
9.ಪತ್ರಿಕೆಯ ಉದ್ದ ಸಾಲು ಅಥವಾ ಕಾಲಂ (3)
13.ನಸುಕು ಇದ್ದಾಗ ಕಿತ್ತಿರುವ ಹೂವು (3)
15.ಬಲ ಭಾಗದ ಕರ! (3)
16.ದುಡ್ಡು ಇಲ್ಲಿ ಉಲ್ಟಾಪಲ್ಟಾ ಆಗಿದೆಯಲ್ಲಾ? (2)



5689ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3. ಜಗ 3.ಅನಾಮಿಕೆ
5.ವಸನ 7.ಕುಡಿನೋಟ
9.ವರದಿ 10.ಕಡಲು
11.ನವೀಕೃತ 13.ಮಣಕ
15.ಅರಸಿಕ 16.ವಪೆ

ಮೇಲಿಂದ ಕೆಳಕ್ಕೆ:
2.ಗಡವ 3.ಆಧ್ವಾನ
4.ಮಿಣುಕು 6.ಸರದಿ
8.ಟಪಾಲು 9.ವಪನ
10.ಕಲ್ಯಾಣ 12.ತತ್ವರ
13.ಮಶಕ 14.ಕರ್ತವ

ಸುಡೊಕು 6075

4		7		8			2	
6		5		9		4	1	
	2		6				3	5
5			2		1	8		
	1				9		4	2
	6			2		3		
		8	9				5	7
	5			3	4		9	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6074 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಸುಧಾ, ಮಯೂರ ಓದಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com or Scan QR code to access booking form

ಸವಿನೆನಪು

ನೀವು ನಮ್ಮನ್ನಗಲಿ ತಂದೆ–40 / ತಾಯಿ–22 ವರ್ಷಗಳು ಕಳೆದರೂ ನಿಮ್ಮ ಸೌಜನ್ಯ, ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಅಚ್ಚಳಿಯದೇ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ

ಶ್ರೀಮತಿ ಕಲ್ಪನ, ಶ್ರೀ ಎಂ. ಗೋಪಾಲ್ ಮತ್ತು ಮಕ್ಕಳು

ದಿ|| ಶ್ರೀಮುನಿಶಾಮಪ್ಪ (ಮೊಟಪ್ಪ) ನಿಧನ: 15-08-1984

ದಿ|| ಶ್ರೀಮತಿ ಮುನಿಯಮ್ಮ ನಿಧನ: 24-05-2002

ಮಾಲೀಕರು, ಮೆ: ವೇಣು ಎಂಟರ್‌ಪ್ರೈಸಸ್, ಗುತ್ತಿಗೆದಾರರು, M.M. Towers, Complex & Farm, ಕುಟುಂಬ ವರ್ಗದವರು ಖಾಜಿಹೊಸಹಳ್ಳಿ, ಹೊಸಕೋಟೆ (ತಾ), ಬೆಂಗಳೂರು ಗ್ರಾಮಾಂತರ ಜಿಲ್ಲೆ.

ನಿಧನ ವಾರ್ತೆ



ಶ್ರೀ ಕೆ.ಹೆಚ್. ತಿಮ್ಮೇಗೌಡರು, ಕಸವನಹಳ್ಳಿ

ಜನನ: 1933 – ನಿಧನ: 23.05.2024

ಅಧ್ಯಕ್ಷರು: ತಾಲ್ಲೂಕು ಬೋರ್ಡ್, ತಿಪಟೂರು. ಅಧ್ಯಕ್ಷರು: ಪಿ.ಎಲ್.ಡಿ. ಬ್ಯಾಂಕ್ ಉಪಾಧ್ಯಕ್ಷರು: ಆಲ್ ಇಂಡಿಯಾ ವ್ಯಯಸ್ಥರ ಶಿಕ್ಷಣ ಸಮಿತಿ. ನಿರ್ದೇಶಕರು: ಡಿ.ಸಿ.ಸಿ. ಬ್ಯಾಂಕ್. ಇವರು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಅಂತ್ಯಕ್ರಿಯೆಯನ್ನು ಸ್ವಗ್ರಾಮ ಕಸವನಹಳ್ಳಿಯಲ್ಲಿ ಇಂದು ಮಧ್ಯಾಹ್ನ 12.00 ಗಂಟೆಗೆ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು: ಪತ್ನಿ, ಮಕ್ಕಳು ಹಾಗೂ ಬಂಧು-ಮಿತ್ರರು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 | Tanveer: +91 9886213331 | Ravichandra: +91 9901641752 | Anitha: +91 9900428036



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,597
ಇಂದಿನ ಅಂತ್ಯ	22,967
▲	369
ದಿನದ ಗರಿಷ್ಠ	22,993

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7800-9100
ಹುಳಿಯಾರು	₹8370-8660
ಕೆ.ಆರ್. ಪೇಟೆ	₹9450-9450
ಪುತ್ತೂರು	₹5500-8700

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹625
12 ಕ್ಕೆ	₹82
ಮೈಸೂರು	
100ಕ್ಕೆ	₹625

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1600-2000
ಮಧ್ಯಮ	₹1000-1600
ಸಣ್ಣ	₹500-1000

ಹೂಡಿಕೆದಾರರ ಸಂಪತ್ತು ₹4.28 ಲಕ್ಷ ಕೋಟಿ ವೃದ್ಧಿ: ಎನ್‌ಎಸ್‌ಇ ಎಂ–ಕ್ಯಾಪ್ 5 ಟ್ರಿಲಿಯನ್ ಡಾಲರ್

ಸೆನ್ಸೆಕ್ಸ್, ನಿಫ್ಟಿ ಸಾರ್ವಕಾಲಿಕ ದಾಖಲೆ

ಮುಂಬೈ (ಪಿಟಿಐ): ದೇಶದ ಷೇರು-ಪೇಟೆಗಳಲ್ಲಿ ಗುರುವಾರವೂ ಗೂಳಿಯ ಓಟ ಮುಂದುವರಿದಿದ್ದು, ಲೋಕಸಭಾ ಚುನಾವಣೆಯ ಫಲಿತಾಂಶಕ್ಕೂ ಮುನ್ನವೇ ಸೂಚ್ಯಂಕಗಳು ಸಾರ್ವಕಾಲಿಕ ಗರಿಷ್ಠ ಮಟ್ಟ ದಾಖಲಿಸಿವೆ.

2023–24ನೇ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರಕ್ಕೆ ₹2.11 ಲಕ್ಷ ಕೋಟಿ ಲಾಭಾಂಶ ಪಾವತಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಒಪ್ಪಿಗೆ ನೀಡಿರುವುದು ಸೂಚ್ಯಂಕಗಳು ಏರಿಕೆಯ ಪಥದಲ್ಲಿ ಸಾಗಲು ಸಹಕಾರಿಯಾಯಿತು. ಬ್ಯಾಂಕಿಂಗ್, ತೈಲ ಹಾಗೂ ಆಟೊ ಷೇರುಗಳ ಖರೀದಿಯೂ ಇದಕ್ಕೆ ನೆರವಾಯಿತು.

ಒಂದೇ ದಿನ ಹೂಡಿಕೆದಾರರ ಸಂಪತ್ತು ₹4.28 ಲಕ್ಷ ಕೋಟಿ ವೃದ್ಧಿಯಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,196 ಅಂಶ ಏರಿಕೆ (ಶೇ 1.61 ರಷ್ಟು) ಕಂಡು 75,418 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ದಿನದ ವಹಿವಾಟಿನ ಒಂದು ಹಂತದಲ್ಲಿ 1,278 ಅಂಶ ಏರಿಕೆ ಕಂಡು, 75,499ಕ್ಕೆ ತಲುಪಿತ್ತು. ಜನವರಿ 29ರಂದು ಸೆನ್ಸೆಕ್ಸ್ 75 ಸಾವಿರದ ಗಡಿ ಮುಟ್ಟಿತ್ತು. ಆ ಬಳಿಕ ಏರಿಳಿತ ಕಂಡಿತ್ತು.

ಗಳಿಕೆ ಕಂಡ ಕಂಪನಿಗಳು (ಶೇಕಡಾವಾರು)	
ಎಲ್ ಆ್ಯಂಡ್ ಟಿ	3.64
ಮಹೀಂದ್ರ ಆ್ಯಂಡ್ ಮಹೀಂದ್ರ	3.55
ಎಕ್ಸಿಸ್ ಬ್ಯಾಂಕ್	3.30
ಮಾರುತಿ ಸುಜುಕಿ	2.82
ಅಲ್ಟ್ರಾಟೆಕ್ ಸಿಮೆಂಟ್	2.74
ಇಂಡಸ್‌ಇಂಡ್ ಬ್ಯಾಂಕ್	2.29
ಎಚ್‌ಡಿಎಫ್‌ಸಿ ಬ್ಯಾಂಕ್	2.22
ಐಸಿಐಸಿಐ ಬ್ಯಾಂಕ್	1.99
ಟೈಟನ್	1.96
ಭಾರ್ತಿ ಏರ್‌ಟೆಲ್	1.96

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 369 ಅಂಶ ಏರಿಕೆಯಾಗಿ (ಶೇ 1.64ರಷ್ಟು) 22,967 ಅಂಶಗಳಲ್ಲಿ ಸ್ಥಿರಗೊಂಡಿತು. ದಿನದ ವಹಿವಾಟಿನಲ್ಲಿ 22,993 ಅಂಶಗಳಿಗೆ ಮುಟ್ಟಿತ್ತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಮಹೀಂದ್ರ ಆ್ಯಂಡ್ ಮಹೀಂದ್ರ, ಎಲ್ ಆ್ಯಂಡ್ ಟಿ, ಎಕ್ಸಿಸ್ ಬ್ಯಾಂಕ್, ಮಾರುತಿ, ಅಲ್ಟ್ರಾಟೆಕ್ ಸಿಮೆಂಟ್, ಇಂಡಸ್‌ಇಂಡ್ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಭಾರ್ತಿ ಏರ್‌ಟೆಲ್, ಐಸಿಐಸಿಐ ಬ್ಯಾಂಕ್, ಟೈಟನ್, ಟಿಸಿಎಸ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಸನ್‌ಫಾರ್ಮಾ, ಪವರ್‌ಗ್ರಿಡ್, ಎನ್‌ಟಿಪಿಸಿ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಬಿಎಸ್‌ಇಯಲ್ಲಿ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯವು ₹420 ಲಕ್ಷ ಕೋಟಿ (5.5 ಟ್ರಿಲಿಯನ್ ಡಾಲರ್) ದಾಟಿದೆ. ಎನ್‌ಎಸ್‌ಇಯಲ್ಲಿ ನೋಂದಾಯಿತ ಕಂಪನಿಗಳ ಮೌಲ್ಯವು ಮೊದಲ ಬಾರಿಗೆ ₹416 ಲಕ್ಷ ಕೋಟಿಗೆ (5 ಟ್ರಿಲಿಯನ್ ಡಾಲರ್) ಮುಟ್ಟಿದೆ.

'ಕೇಂದ್ರಕ್ಕೆ ದಾಖಲೆ ಪ್ರಮಾಣದಲ್ಲಿ ಲಾಭಾಂಶ ನೀಡಲು ಆರ್‌ಬಿಐ ಒಪ್ಪಿಗೆ ನೀಡಿದೆ. ಇದು ಆರ್ಥಿಕ ಸದೃಢತೆಗೆ ಸಾಕ್ಷಿಯಾಗಿದೆ. ಮಾರುಕಟ್ಟೆಯ ನಿರೀಕ್ಷೆಯಂತೆ ಲೋಕಸಭಾ ಚುನಾವಣಾ ಫಲಿತಾಂಶ ಬಂದರೆ ಜೂನ್ ಮೊದಲ ವಾರದಲ್ಲಿ ನಿಫ್ಟಿ ಹೊಸ ದಾಖಲೆ ಬರೆಯುವ ಸಾಧ್ಯತೆಯಿದೆ' ಎಂದು ಆಕ್ಸಿಸ್ ಸೆಕ್ಯುರಿಟೀಸ್‌ನ ಮುಖ್ಯಸ್ಥ ನೀರಜ್ ಚಡಾವರ್ ಹೇಳಿದ್ದಾರೆ.

ಟೋಕಿಯೊ ಷೇರುಪೇಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆದಿದೆ. ಸೋಲ್, ಶಾಂಘೈ, ಹಾಂಗ್‌ಕಾಂಗ್ ಮಾರುಕಟ್ಟೆ ಇಳಿಕೆ ಕಂಡಿವೆ. ಯುರೋಪ್ ಮಾರುಕಟ್ಟೆಗಳು ಏರಿಕೆ ದಾಖಲಿಸಿದ್ದರೆ, ವಾಲ್‌ಸ್ಟ್ರೀಟ್ ಇಳಿಕೆ ಕಂಡಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾತೈಲದ ಬೆಲೆ ಶೇ 0.33ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 82.17 ಡಾಲರ್ ಆಗಿದೆ. ಬುಧವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹686 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಸೆನ್ಸೆಕ್ಸ್ ಗುಚ್ಛಕ್ಕೆ ಅದಾನಿ ಎಂಟರ್‌ಪ್ರೈಸಸ್?

ನವದೆಹಲಿ (ಪಿಟಿಐ): ಅದಾನಿ ಎಂಟರ್‌ಪ್ರೈಸಸ್ ಕಂಪನಿಯು ಬಿಎಸ್‌ಇ ಸೆನ್ಸೆಕ್ಸ್ ಸೂಚ್ಯಂಕಕ್ಕೆ ಸೇರ್ಪಡೆಯಾಗುವ ಸಾಧ್ಯತೆಯಿದೆ ಎಂದು ಐಐಎಫ್‌ಎಲ್ ಅಲ್ಟರ್ನೇಟಿವ್ ರಿಸರ್ಚ್ ಸಂಸ್ಥೆಯ ವರದಿ ಹೇಳಿದೆ.

ಅತಿಹೆಚ್ಚು ಮಾರುಕಟ್ಟೆ ಮೌಲ್ಯ ಹೊಂದಿರುವ 30 ಕಂಪನಿಗಳು ಈ ಗುಚ್ಛದಲ್ಲಿರುತ್ತವೆ. ಸದ್ಯ ಇದರಲ್ಲಿ ವಿಪ್ರೊ ಕೊನೆಯ ಸ್ಥಾನದಲ್ಲಿದೆ. ಅದಾನಿ ಎಂಟರ್‌ಪ್ರೈಸಸ್‌ನ ಮಾರುಕಟ್ಟೆ ಮೌಲ್ಯ ಏರಿಕೆಯಾಗುತ್ತಿದೆ. ಹಾಗಾಗಿ, ಅದಾನಿ ಕಂಪನಿಯು ವಿಪ್ರೊ ಕಂಪನಿಯನ್ನು ಬದಿಗೊತ್ತಿ ಅದರ ಸ್ಥಾನಕ್ಕೇರಬಹುದು ಎಂದು ವರದಿ ಹೇಳಿದೆ.

ಇದರಿಂದ ಬಿಎಸ್‌ಇಯಲ್ಲಿ ಅದಾನಿ ಎಂಟರ್‌ಪ್ರೈಸಸ್ ಷೇರಿನ ಮೌಲ್ಯದಲ್ಲಿ ಶೇ 8.01ರಷ್ಟು ಏರಿಕೆಯಾಗಿದ್ದು, ಪ್ರತಿಷೇರಿನ ಬೆಲೆ ₹3,391.20ಕ್ಕೆ ತಲುಪಿದೆ.

ಎನ್‌ಡಿಟಿವಿ ಷೇರಿನ ಮೌಲ್ಯ ಶೇ 7.56ರಷ್ಟು, ಅದಾನಿ ಪೋರ್ಟ್ಸ್ ಶೇ 4.77, ಎಸಿಸಿ ಶೇ 2.86, ಅದಾನಿ ಪವರ್ ಶೇ 2.97, ಅದಾನಿ ಟೋಟಲ್ ಗ್ಯಾಸ್ ಶೇ 2.30, ಅಂಬುಜಾ ಸಿಮೆಂಟ್ಸ್ ಶೇ 2.09, ಅದಾನಿ ವಿಲ್ಮರ್ ಶೇ 1.85, ಅದಾನಿ ಗ್ರೀನ್ ಎನರ್ಜಿ ಶೇ 1.25ರಷ್ಟು ಹಾಗೂ ಅದಾನಿ ಎನರ್ಜಿ ಸೆಲ್ಯೂಷನ್ಸ್‌ನ ಷೇರಿನ ಮೌಲ್ಯದಲ್ಲಿ ಶೇ 1.17ರಷ್ಟು ಹೆಚ್ಚಳವಾಗಿದೆ. ಈ ಹತ್ತು ಕಂಪನಿಗಳು ಮಾರುಕಟ್ಟೆ ಮೌಲ್ಯವು ₹17.23 ಲಕ್ಷ ಕೋಟಿ ದಾಟಿದೆ.

ಸಂಕ್ಷಿಪ್ತ ಸುದ್ದಿ

ಚಿನ್ನದ ದರ ₹1,050, ಬೆಳ್ಳಿ ₹2,500 ಇಳಿಕೆ

ನವದೆಹಲಿ (ಪಿಟಿಐ): ಸತತ ಎರಡನೇ ದಿನವೂ ಚಿನ್ನ ಮತ್ತು ಬೆಳ್ಳಿ ಬೆಲೆಯಲ್ಲಿ ಭಾರಿ ಇಳಿಕೆಯಾಗಿದೆ.

ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನದ ದರವು 10 ಗ್ರಾಂಗೆ ₹1,050 ಕಡಿಮೆಯಾಗಿ ₹73,550ರಂತೆ ಮಾರಾಟವಾಗಿದೆ. ಬೆಳ್ಳಿಯು ಕೆ.ಜಿಗೆ ₹2,500 ಕುಸಿತವಾಗಿ ₹92,600ಕ್ಕೆ ಇಳಿದಿದೆ. ಹೂಡಿಕೆದಾರರು ಲಾಭ ಗಳಿಸಲು ಮಾರಾಟಕ್ಕೆ ಮುಂದಾಗಿರುವುದರಿಂದ ಚಿನ್ನದ ದ ಬೆಲೆಯಲ್ಲಿ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಪವರ್ ಗ್ರಿಡ್: ಲಾಭ ಇಳಿಕೆ

ನವದೆಹಲಿ (ಪಿಟಿಐ): 2023–24ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಪವರ್ ಗ್ರಿಡ್ ಕಾರ್ಪೊರೇಷನ್ ₹4,166 ಕೋಟಿ ನಿವ್ವಳ ಲಾಭ ಗಳಿಸಿದೆ.

2022–23ನೇ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹4,322 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 4ರಷ್ಟು ಇಳಿಕೆಯಾಗಿದೆ. ವರಮಾನವು ₹12,557 ಕೋಟಿಯಿಂದ ₹12,305 ಕೋಟಿಗೆ ಕಡಿಮೆಯಾಗಿದೆ. ವರಮಾನ ಕುಸಿತದಿಂದ ಲಾಭವೂ ಇಳಿಕೆಯಾಗಿದೆ ಎಂದು ಕಂಪನಿ ತಿಳಿಸಿದೆ.

ಅಡಿಕೆ ಧಾರಣೆ

ಬಂಟ್ವಾಳ	
ಕೋಕ	18000-28500
ಹೊಸತು	28500-38000
ಹಳತು	38000-46500
ಚಿತ್ರದುರ್ಗ	
ಅಪಿ	52619-53029
ಬೆಟ್ಟೆ	37049-37499
ಕೆಂಪುಗೋಟು	29509-29910
ರಾಶಿ	52139-52569
ಕುಮಟ	
ಚಿಪ್ಪು	25011-32099
ಕೋಕ	13711-29199
ಹಳೆಚಾಲಿ	36099-39000
ಹೊಸಚಾಲಿ	32669-36099
ಸಾಗರ	
ಬಿಳಿಗೋಟು	16569-31011
ಚಾಲಿ	26869-36319
ಕೋಕ	13000-29000
ಕೆಂಪುಗೋಟು	24899-34989
ರಾಶಿ	33199-52609
ಸಿಪ್ಪೆಗೋಟು	10112-21269
ಶಿವಮೊಗ್ಗ	
ಬೆಟ್ಟೆ	40069-54899
ಗೊರಬಲು	20009-37799
ರಾಶಿ	29009-52499
ಸರಕು	52000-75069
ಶಿರಸಿ	
ಬೆಟ್ಟೆ	34069-48889
ಬಿಳಿಗೋಟು	23380-31309
ಚಾಲಿ	34039-39058
ಕೆಂಪುಗೋಟು	24899-28199
ರಾಶಿ	44099-50499
ಯಲ್ಲಾಪುರ	
ಅಪಿ	54468-57895
ಬಿಳಿಗೋಟು	22899-33299
ಚಾಲಿ	33719-38599
ಕೋಕ	24899-33960

ಖರೀದಿ ಪ್ರಕ್ರಿಯೆ ಸ್ಥಗಿತ: ತೆಂಗು ಬೆಳೆಗಾರರು ಕಂಗಾಲು

ಕೊಬ್ಬರಿ ಖರೀದಿಗೆ ಚೀಲ ಕೊರತೆ

• ಸಿದ್ದರಾಜು/ಹಿ.ಕೃ. ಚಂದ್ರು

ಚನ್ನರಾಯಪಟ್ಟಣ/ ಹಿರೀಸಾವೆ (ಹಾಸನ ಜಿಲ್ಲೆ): ಕೊಬ್ಬರಿ ಖರೀದಿ ಕೇಂದ್ರಗಳಲ್ಲಿ ಗೋಣಿಚೀಲಗಳ ಕೊರತೆಯಿಂದಾಗಿ ಕನಿಷ್ಠ ಬೆಂಬಲ ಬೆಲೆಯಡಿ ಉಂಡೆ ಕೊಬ್ಬರಿ ಖರೀದಿಸುವ ಪ್ರಕ್ರಿಯೆಯು ಗುರುವಾರ ಸ್ಥಗಿತಗೊಂಡಿದ್ದು, ಬೆಳೆಗಾರರು ತೊಂದರೆಗೆ ಸಿಲುಕಿದ್ದಾರೆ.

ಕೊಬ್ಬರಿ ತುಂಬಿದ ಸುಮಾರು 100 ವಾಹನಗಳು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಆವರಣದಲ್ಲಿಯೇ ಸಾಲುಗಟ್ಟಿ ನಿಂತಿವೆ.

ಪ್ರತಿ ಕ್ವಿಂಟಲ್ ಕೊಬ್ಬರಿಗೆ ಕೇಂದ್ರ ಸರ್ಕಾರದ ₹12 ಸಾವಿರ ಮತ್ತು ರಾಜ್ಯ ಸರ್ಕಾರದ ₹1,500 ಪ್ರೋತ್ಸಾಹಧನ ಸೇರಿ ₹ 13,500 ಬೆಲೆ ಸಿಗುತ್ತಿದೆ.

'ನಿತ್ಯ 30 ರೈತರಿಂದ ಅಂದಾಜು 1,500 ಚೀಲದಷ್ಟು ಕೊಬ್ಬರಿ ಖರೀದಿಸಲಾಗುತ್ತದೆ. ಎಷ್ಟು ಚೀಲ ಬೇಕಾಗುತ್ತವೆ ಎಂಬುದು ಅಧಿಕಾರಿಗಳಿಗೆ ಗೊತ್ತಿರಬೇಕು. ಮುಂಜಾಗ್ರತಾ ಕ್ರಮವಾಗಿ ಚೀಲಗಳನ್ನು ತರಿಸದಿರುವುದರಿಂದ ದಿನಗಟ್ಟಲೇ ಕಾಯುವಂತಾಗಿದೆ' ಎಂದು ರೈತರು ದೂರುತ್ತಿದ್ದಾರೆ.

'ಊರಿನಿಂದ ಟ್ರ್ಯಾಕ್ಟರ್, ಆಟೊ ಮತ್ತು ಸರಕು ಸಾಗಣೆ ಆಟೊಗಳಲ್ಲಿ ಕೊಬ್ಬರಿ ತಂದಿದ್ದೇವೆ. ನಿತ್ಯ ಟ್ರ್ಯಾಕ್ಟರ್‌ಗೆ ₹2,500ರಿಂದ ₹3 ಸಾವಿರ, ಆಟೊಗೆ ₹1,500 ಮತ್ತು ಸರಕು ಸಾಗಣೆ ಆಟೊಗೆ ₹2,500 ಬಾಡಿಗೆ ಕೊಡಬೇಕು. ಕೊಬ್ಬರಿ ಎಷ್ಟು ದಿನ ಗಾಡಿಯಲ್ಲಿ ಉಳಿಯುತ್ತದೆಯೋ ಅಷ್ಟೂ ದಿನದ ಬಾಡಿಗೆ ಹೊರೆ ಹೊರಬೇಕು. ಚಾಲಕರು ಮತ್ತು ನಮ್ಮ ಊಟ, ತಿಂಡಿಯ ಖರ್ಚು ಮಿತಿ ಮೀರುತ್ತಿದೆ' ಎಂದು ಬೆಳೆಗಾರರು ಅಲವತ್ತುಕೊಂಡರು.

'ಮಹಾಮಂಡಳದಿಂದ ಚೀಲಗಳನ್ನು ಪೂರೈಸಿಲ್ಲ. ಸರದಿಯಂತೆ ರೈತರು ಕೊಬ್ಬರಿ ತಂದರೂ ಮಾರುವ ಪರಿಸ್ಥಿತಿ ಇಲ್ಲ. ಲಾರಿಗಳು ಸರಿಯಾದ ಸಮಯಕ್ಕೆ ಬರುತ್ತಿಲ್ಲ' ಎನ್ನುತ್ತಾರೆ ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಕೆ. ರಘು.

'ಎರಡು ತಿಂಗಳ ಹಿಂದೆ ನೂಕುನುಗ್ಗಲಿನಲ್ಲಿ ನೋಂದಣಿ ಮಾಡಿಸಿದ್ದೆವು. ಈಗ ಕೊಬ್ಬರಿಯೊಂದಿಗೆ ದಿನಗಟ್ಟಲೆ ಕಾಯಬೇಕಿದೆ. ನೀರು, ಊಟ, ಶೌಚಾಲಯ, ಬೆಳಕಿನ ವ್ಯವಸ್ಥೆ ಇಲ್ಲ. ಮಳೆ ಬಂದರೆ ಕೊಬ್ಬರಿ ತೇವಗೊಳ್ಳುತ್ತದೆ. ತೂಕ ಆಗುವವರೆಗೆ ರೈತರೇ ಹೊಣೆಗಾರರು. ಸರ್ಕಾರ ಮತ್ತು ಜನಪ್ರತಿನಿಧಿಗಳು ಸೂಕ್ತ ವ್ಯವಸ್ಥೆ ಕಲ್ಪಿಸಿಲ್ಲ' ಎಂದು ರೈತ ಅಂತನಹಳ್ಳಿ ಧರಣೇಶ್ ದೂರಿದರು.

ಪ್ರತಿಭಟನೆಯ ಎಚ್ಚರಿಕೆ: ಹೆಸರು ನೋಂದಣಿಯ ಹಿರಿತನದ ಆಧಾರದಲ್ಲಿ ಕೊಬ್ಬರಿ ಖರೀದಿಸಬೇಕು. ಆದರೆ, ಮಧ್ಯವರ್ತಿಗಳಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ ಎಂಬ ದೂರುಗಳೂ ಇವೆ. ಕೂಡಲೇ ಚೀಲಗಳನ್ನು ತರಿಸಿ ಖರೀದಿಗೆ ಮುಂದಾಗದಿದ್ದರೆ ಶುಕ್ರವಾರ ಪ್ರತಿಭಟನೆ ನಡೆಸಲಾಗುವುದು ಎಂದು ರೈತರು ಎಚ್ಚರಿಸಿದರು.

ಹಿರೀಸಾವೆ ಹೋಬಳಿಯ ಬೂಕನಬೆಟ್ಟದಲ್ಲಿ ಸಾಲುಗಟ್ಟಿ ನಿಂತಿರುವ ಉಂಡೆ ಕೊಬ್ಬರಿ ತುಂಬಿರುವ ಟ್ರ್ಯಾಕ್ಟರ್‌ಗಳು

ಕೋಲ್ಕತ್ತದಿಂದ ಚೀಲ ಬಂದಿಲ್ಲ!

'ಚೀಲಗಳು ಮುಗಿದಿರುವುದರಿಂದ ಬಾಗೂರು, ಹಿರೀಸಾವೆ ಮತ್ತು ಚನ್ನರಾಯಪಟ್ಟಣ ಕೇಂದ್ರದಲ್ಲಿ ಖರೀದಿಯನ್ನು ಗುರುವಾರ ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ' ಎಂದು ಚನ್ನರಾಯಪಟ್ಟಣದ ಖರೀದಿ ಕೇಂದ್ರದ ಅಧಿಕಾರಿ ಕೆ.ಆರ್. ಕಾವ್ಯಾ ಹೇಳಿದರು.

'ಕೋಲ್ಕತ್ತದಿಂದ ಚೀಲಗಳನ್ನು ತರಿಸಲು ಇಂಡೆಂಟ್ ಹಾಕಲಾಗಿದೆ. ಅದುವರೆಗೆ ಸ್ಥಳೀಯವಾಗಿ ಗಂಡಸಿಯಿಂದ ಎರಡು ಸಾವಿರ ಮತ್ತು ಕುಶಾಲನಗರದಿಂದ 15 ಸಾವಿರ ಚೀಲಗಳನ್ನು ತರಿಸಲಾಗುವುದು. ನಂತರ ಖರೀದಿ ಆರಂಭಿಸಲಾಗುವುದು' ಎಂದರು.

ಹೊಸದುರ್ಗ: 20 ಸಾವಿರ ಚೀಲ ಬೇಕು

ಚಿತ್ರದುರ್ಗ: ಜಿಲ್ಲೆಯಲ್ಲಿಯೂ ಕೊಬ್ಬರಿ ಖರೀದಿಸಲು ಚೀಲಗಳ ಕೊರತೆ ಎದುರಾಗಿದೆ. ಖರೀದಿ ಕೇಂದ್ರಗಳಲ್ಲಿರುವ ಚೀಲಗಳು ಶುಕ್ರವಾರದ ವೇಳೆಗೆ ಖಾಲಿಯಾಗುವ ಸಾಧ್ಯತೆ ಇದೆ.

ಜಿಲ್ಲೆಯ ಹಿರಿಯೂರು, ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ ಕೇಂದ್ರಗಳಲ್ಲಿ ಏಪ್ರಿಲ್ 3ರಿಂದ ಖರೀದಿ ಪ್ರಾರಂಭಿಸಲಾಗಿದೆ. ಜೂನ್ 14ಕ್ಕೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಈಗಾಗಲೇ, 90,000 ಚೀಲಗಳು ಖಾಲಿಯಾಗಿವೆ. ಹೊಸದುರ್ಗಕ್ಕೆ ಇನ್ನೂ 20,000 ಚೀಲಗಳ ಅವಶ್ಯಕತೆಯಿದೆ. ಟೆಂಡರ್ ಸಮಸ್ಯೆ ಕಾರಣಕ್ಕೆ ಸರಬರಾಜು ವಿಳಂಬವಾಗಿದೆ ಎಂದು ಖರೀದಿ ಕೇಂದ್ರದ ಸಿಬ್ಬಂದಿ ತಿಳಿಸಿದರು.

'ಜಿಲ್ಲೆಯ ಆರು ಕೇಂದ್ರಗಳಲ್ಲಿ 3,358 ರೈತರು 42,112 ಕ್ವಿಂಟಲ್ ಕೊಬ್ಬರಿ ಮಾರಾಟಕ್ಕೆ ನೋಂದಣಿ ಮಾಡಿಸಿದ್ದಾರೆ. ಈಗಾಗಲೇ, ಶೇ 70ರಷ್ಟು ಖರೀದಿ ಪೂರ್ಣಗೊಂಡಿದೆ. ಚೀಲದ ಸಮಸ್ಯೆ ಒಂದೆರಡು ದಿನದಲ್ಲಿ ಬಗೆಹರಿಯಲಿದೆ' ಎಂದು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಜಿಲ್ಲಾ ಶಾಖಾ ವ್ಯವಸ್ಥಾಪಕ ಬಸವೇಶ ಎಸ್. ನಾಡಿಗರ್ ತಿಳಿಸಿದರು.

ಮೂರು ದಿನದಿಂದ ಕೊಬ್ಬರಿ ಮಾರಲು ಕಾಯುತ್ತಿರುವೆ. ಮಳೆಯಿಂದ ಕೊಬ್ಬರಿ ರಕ್ಷಿಸಿಕೊಳ್ಳಲು ಕಷ್ಟಪಡುತ್ತಿದ್ದೇವೆ. ಊಟ, ನೀರು ಸಹ ಸಿಗುತ್ತಿಲ್ಲ. ನಮ್ಮ ಕಷ್ಟ ಕೇಳುವವರಿಲ್ಲ

ಕೃಷ್ಣಪ್ಪ, ರೈತ, ಹೊಸಹಳ್ಳಿ

ದಿನಕ್ಕೆ 30ರಿಂದ 40 ರೈತರಿಂದ ಕೊಬ್ಬರಿ ತೆಗೆದುಕೊಳ್ಳುತ್ತೇವೆ. ನಿತ್ಯ 1,300 ಚೀಲ ಬೇಕು. ಕೊರತೆ ಬಗ್ಗೆ ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗಿದೆ

ಗಂಗರಾಜು, ಎಪಿಎಂಸಿ ಅಧಿಕಾರಿ, ಹಿರೀಸಾವೆ

ತುಮಕೂರು ಶೇ 62ರಷ್ಟು ಖರೀದಿ ಪೂರ್ಣ

ತುಮಕೂರು: ಜಿಲ್ಲೆಯಲ್ಲಿ ಕೊಬ್ಬರಿ ಖರೀದಿ ಪ್ರಕ್ರಿಯೆಯು ಸ್ವಲ್ಪಮಟ್ಟಿಗೆ ಚುರುಕು ಪಡೆದುಕೊಂಡಿದ್ದು, ಇಲ್ಲಿಯವರೆಗೆ ರೈತರಿಂದ 1,96,541 ಕ್ವಿಂಟಲ್ ಖರೀದಿಸಲಾಗಿದೆ.

ಏಪ್ರಿಲ್ 1ರಿಂದ ಖರೀದಿ ಆರಂಭವಾಗಿದ್ದು, ಏಪ್ರಿಲ್ ಕೊನೆಯ ವೇಳೆಗೆ ಶೇ 30ರಷ್ಟು ಖರೀದಿಸಲಾಗಿತ್ತು.

ಪ್ರಸಕ್ತ ತಿಂಗಳಲ್ಲಿ ಅಲ್ಪ ಪ್ರಮಾಣದಲ್ಲಿ ಚುರುಕು ಪಡೆದುಕೊಂಡಿದ್ದು, ಒಟ್ಟು ನೋಂದಣಿಯಲ್ಲಿ ಶೇ 62ರಷ್ಟು ಖರೀದಿಸಲಾಗಿದೆ. ಇನ್ನೂ 1,21,376 ಕ್ವಿಂಟಲ್ ಖರೀದಿಸಬೇಕಿದೆ. ಜೂನ್ ಅಂತ್ಯದ ವೇಳೆಗೆ ಖರೀದಿ ಪೂರ್ಣಗೊಳ್ಳಬಹುದು ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ.

ಜಿಲ್ಲೆಯಾದ್ಯಂತ 27,212 ರೈತರು, 3,17,917 ಕ್ವಿಂಟಲ್ ಮಾರಾಟಕ್ಕೆ ನೋಂದಣಿ ಮಾಡಿಕೊಂಡಿದ್ದು, 26 ಕೇಂದ್ರಗಳಲ್ಲಿ ಖರೀದಿ ಮಾಡಲಾಗುತ್ತಿದೆ.

ಮುಂಬೈ ಧಾರಣೆ (ಶೇಂಗಾ)

23-5-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1505)
ಒಂದು ವಾರದ ಡೆಲಿವರಿ	1505 (1500)
ಸೋಯಾ ಕಚ್ಚಾ	910 (893)
ಪಾಮ್ ವಾರದ ಡೆಲಿವರಿ	898 (893)
ಸೂರ್ಯಕಾಂತಿ ಎಣ್ಣೆ ಕಚ್ಚಾ	885 (870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹72,600 (73,700)

ಬೆಳ್ಳಿ ಕೆ.ಜಿ ₹90,100 (93,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹181

ಆರ್‌ಎಸ್‌ಎಸ್-5 ₹174

ಗುಡ್ ಲಾಟ್ ₹164

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹266-475

ದ್ವಿತಳಿ (ಬಿ.ವಿ) ₹322-650

ಈರುಳ್ಳಿ ಶೇಖರಣೆಗೆ ವಿಕಿರಣ ತಂತ್ರಜ್ಞಾನದ ಮೊರೆ

ನವದೆಹಲಿ (ಪಿಟಿಐ): ಬಾಬಾ ಪರಮಾಣು ಸಂಶೋಧನಾ ಸಂಸ್ಥೆಯು (ಬಿಎಆರ್‌ಸಿ) ಅಭಿವೃದ್ಧಿಪಡಿಸಿರುವ ವಿಕಿರಣ ತಂತ್ರಜ್ಞಾನದ ಮೂಲಕ ಪ್ರಸಕ್ತ ವರ್ಷದಲ್ಲಿ 1 ಲಕ್ಷ ಟನ್‌ನಷ್ಟು ಈರುಳ್ಳಿ ಕಾಪು ದಾಸ್ತಾನು ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ದೀರ್ಘಕಾಲದವರೆಗೆ ಈರುಳ್ಳಿ ಶೇಖರಿಸಿದರೆ ಮೊಳಕೆಯೊಡೆಯುತ್ತದೆ. ಇದರಿಂದ ಹೆಚ್ಚಿನ ನಷ್ಟವಾಗಲಿದೆ. ಇದನ್ನು ತಪ್ಪಿಸಲು ಸರ್ಕಾರವು ಈ ತಂತ್ರಜ್ಞಾನದಡಿ ಸಂಸ್ಕರಣೆಯ ಪ್ರಮಾಣ ಹೆಚ್ಚಿಸಲು ತೀರ್ಮಾನಿಸಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯವು ತಿಳಿಸಿದೆ.

'ಶೇಖರಣೆ ಸಮಸ್ಯೆ ಹಾಗೂ ಪೂರೈಕೆ ಕೊರತೆಯಿಂದಾಗಿ ಈರುಳ್ಳಿ ಬೆಲೆಯಲ್ಲಿ ಏರಿಳಿತ ಸಹಜ. ಹಾಗಾಗಿ, ದೀರ್ಘಕಾಲದವರೆಗೆ ಕೆಡದಂತೆ ಇಡಲು ಹಾಗೂ ಶೇಖರಣೆ ಸಂದರ್ಭದಲ್ಲಿನ ನಷ್ಟ ತಪ್ಪಿಸಲು ವಿಕಿರಣ ತಂತ್ರಜ್ಞಾನ ನೆರವಾಗಲಿದೆ. ಈರುಳ್ಳಿ ಸಂಗ್ರಹಿಸಲು ಈ ತಂತ್ರಜ್ಞಾನ ಅಳವಡಿಸಿಕೊಂಡಿರುವ 50 ಶೈತ್ಯಾಗಾರಗಳನ್ನು ಗುರುತಿಸಲಾಗಿದೆ' ಎಂದು ಸಚಿವಾಲಯದ ಕಾರ್ಯದರ್ಶಿ ನಿಧಿ ಖರೆ ಅವರು, ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560/ 9731810277/ 9886213331

ಉದ್ಯೋಗಾವಕಾಶ

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/- ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣ ಸಂಪರ್ಕಿಸಿ: 7899235388, 9148525233

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿಯಿದೆ. 13,000-17,000. 8951315839, 7022770052

ಭವಿಷ್ಯ

Astrology

★ಜೀವನದ ಸರ್ವತೋಮುಖ ಅಭಿವೃದ್ಧಿಗಾಗಿ,ನಿಮ್ಮ ಯಾವುದೇ ಹೆಣ್ಣು ಅಥವಾ ಗಂಡು ಸಂಬಂಧಿತ ಸಂಪೂರ್ಣ ಮನಇಚ್ಛ ವಶೀಕರಣ, ದಾಂಪತ್ಯ,ಸಂತಾನ,ಆರೋಗ್ಯ,ಹಣ, ಆಸ್ತಿ,ಮತ್ತು ಇನ್ನಿತರ ನಿಮ್ಮ ಯಾವುದೇ ಇಷ್ಟಾರ್ಥಫಲಪ್ರಾಪ್ತಿ 3ದಿನಗಳಲ್ಲಿ ಲಭ್ಯ. 9845005009*

★||ಸ್ತ್ರೀಪುರುಷ ವಶೀಕರಣ||★ ನಿಮ್ಮ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ, ಇಷ್ಟಪಟ್ಟವರು ನಿಮ್ಮಂತೆ ಆಗಲು, 1ದಿನದಲ್ಲಿ ಪರಿಹಾರ ಶತಸಿದ್ಧ. 9611968471

ವಾಹನ

Four Wheelers Selling

Tractors / Heavy Vehicles

Ashok Leyland 14 Tyres TRUCKS FOR SALE Mfg.Y No.'s Model 2015-10-3718 2016-29-3718 Contact 7997654447 9848996120 9948790011

ಪ್ರವಾಸ

Travel

ದೆಹಲಿ ಯುಮುನೋತ್ರಿ, ಗಂಗೋತ್ರಿ ಕೇದಾರನಾಥ್ ಬದರಿನಾಥ್ ಹರಿದ್ವಾರ್, 09.06.2024 23.06.2024 ರಿಂದ 14 ದಿನಗಳು. ಅಯೋಧ್ಯ,ಪ್ರಯಾಗ್ ಕಾಶಿ,ಗಯಾ,ಬೈಧ್ಯನಾಥಧಾಮ್ 03.06.2024 ರಿಂದ 8 ದಿನಗಳು. ಸ್ವಯಂಭೂ ಅಮರನಾಥ್ ಕಾಶ್ಮೀರ್ ಅಮೃತಸರ್ ಕುರುಕ್ಷೇತ್ರ 14 ದಿನಗಳು. ಮತ್ತು ನೇಪಾಳ ಮುಕ್ತಿನಾಥ, ಜನಕಪುರ್ ಬೈಧ್ಯನಾಥಧಾಮ್ 11 ದಿನಗಳು 03.07.2024 ರಿಂದ ಸಂಪರ್ಕಿಸಿ. 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು.18

ಮೇ ತಿಂಗಳಿಂದ ಪ್ರತಿ ತಿಂಗಳು 8 ದಿನಗಳ ಕಾಶಿ,ಗಯಾ,ಅಯೋಧ್ಯ/ ಚಾರ್‌ಧಾಮ್, ಸಪ್ಟೆಂಬರ್ ತಿಂಗಳಲ್ಲಿ ಮುಕ್ತಿನಾಥ ನೇಪಾಳ ಮನೋಕಾಮನ ಮೌಂಟ್ ಎವರೆಸ್ಟ್ ಜನಕಪುರಿ ಅಯೋಧ್ಯ ಕಾಶಿ,ಗಯಾ. ಸಂಪರ್ಕಿಸಿ 'ಶ್ರೀಸುಧಾ ಟ್ರಾವಲ್ಸ್' 080-22429289 9448119290 9019301300

ಸುವರ್ಣ ಯಾತ್ರ ನೇಪಾಳ ಮುತ್ತಿನಾಥ, ಪಶುಪತಿನಾಥ ಅಯೋಧ್ಯೆ, ಪ್ರವಾಸ 9 ದಿನಗಳು 18/06/24 ಹಾಗೂ 12/7/24. ಪೂರಿಜಗನ್ನಾಥ್ ಪ್ರವಾಸ 19/6/24. 9019462508

ಇಂಡಿಯನ್ ರೈಲ್ವೇಸ್ ಪ್ರೀಮಿಯಂ ಖಾಸಗಿ ಪ್ರವಾಸಿ ರೈಲು ಅಯೋಧ್ಯೆ-ನೈಮಿಷಾರಣ್ಯ ನೇಪಾಳ-ಪೋಖರಾ ಮುಕ್ತಿನಾಥ-ಕಠ್ಮಂಡು ಪಶುಪತಿನಾಥ-ಮನಕಮನ 7JUN|₹54,900|14DAYS 7305078284 8754404260 WWW.TRAINTOUR.IN

08.06.2024, 14.06.2024 ಚಾರ್-ಧಾಮ್ ಸಮೇತಪ್ರವಾಸ. 26.06.2024 ಕಾಶಿ, ಅಯೋಧ್ಯಾ,ಬುದ್ಧಗಯಾ. 28.06.2024, 11.07.2024 ವೈಷ್ಣೋದೇವಿ,ವಾಘಬಾರ್ಡರ್, ಕಾಶ್ಮೀರ, ಗುಲ್ಮಾರ್ಗ್,ಅಮರನಾಥ್ ಇತ್ಯಾದಿ.ಸಂಪರ್ಕಿಸಿ. ಏಷ್ಯನ್ ಟ್ರಾವಲ್‌ಏಜೆನ್ಸಿ, ಕೆಳಮಹಡಿ, ಬೆಂಗಳೂರು-4. 26574131, 7204173686, 8431888138

12.07.2024 13/17ದಿನಗಳು ರೈಲು/ವಿಮಾನದಲ್ಲಿ ಅಮರನಾಥ್, ವೈಷ್ಣೋದೇವಿ, ಕಾಶ್ಮೀರ,ಕುರುಕ್ಷೇತ್ರ ಆಗ್ರ,ದೆಹಲಿ ಇತ್ಯಾದಿ 28000/ ಮೇ,ಜುನ್ ನಲ್ಲಿ 5/8ದಿನಗಳು ಹಡಗು/ವಿಮಾನದಲ್ಲಿ ಅಂಡಮಾನ್ ಹವಳದ್ವೀಪ. Royal Package 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'. 9739847429/ 9845560219

ಕ್ಲಾಸಿಫೈಡ್ಸ್ ADMISSION CORNER

B.Com BCA BBA BBA Aviation Management B.Sc. Aircraft Maintenance

Approved by AICTE & Affiliated to Bengaluru North University

Eligibility: 12th Std. or Diploma (DTE approved)

HINDUSTAN AVIATION ACADEMY Approved by Directorate General of Civil Aviation, Govt. of India

Aircraft Maintenance Engineering

• B1.1 Aeroplane Turbine • B2 Avionics • B.Sc. Aircraft Maintenance

Eligibility: 12th Std. with PCM or Diploma (DTE approved)

HINDUSTAN ELECTRONICS ACADEMY Approved by DTE & AICTE

Polytechnic Diploma Engineering Eligibility: 10th Std.

• Aeronautical Engineering • Mechanical Engineering • Computer Science Engineering

97400 37853 / 63645 44814

HBS HINDUSTAN BUSINESS SCHOOL MARATHAHALLI, BENGALURU

Ashwathnagar, Marathahalli, Bengaluru - 560037 Ph: 080-25238650, 25232217 E: admissions@hindustanacademy.edu.in www.hindustanacademy.edu.in

ADMISSIONS ARE OPEN FOR 2024-25 SCAN QR CODE FOR MORE DETAILS

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ ರಿಯಲ್ ಎಸ್ಟೇಟ್ ಪ್ರತಿ ಶನಿವಾರ + ಭಾನುವಾರ ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ @ 2244/-* FOR 15 WORDS *Conditions apply www.dhclassifieds.com ಬುಕ್ ಮಾಡಿ ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: +91 9845114560| +91 9901641752 | 080-45557163/164

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವಿವಾದಕ್ಕೆ ಸಿಲುಕಿದ ಅದಾನಿ ಸಮೂಹ • ಅತಿ ದೊಡ್ಡ ಕಲ್ಲಿದ್ದಲು ಹಗರಣ –ರಾಹುಲ್ ವಾಗ್ದಾಳಿ

ಕಳಪೆ ಕಲ್ಲಿದ್ದಲು ಪೂರೈಕೆ: ಆರೋಪ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಚುನಾವಣೆ ಹೊತ್ತಿನಲ್ಲಿ ವಿವಾದದ ಕೇಂದ್ರದಲ್ಲಿ ಅದಾನಿ ಸಮೂಹ
- ಜಂಟಿ ಸಂಸದೀಯ ಸಮಿತಿಯಿಂದ ತನಿಖೆಗೆ ಪ್ರತಿಪಕ್ಷಗಳ ಆಗ್ರಹ
- ಇಂಡೊನೇಷ್ಯಾದಿಂದ ತರಿಸಿದ್ದ ಕಲ್ಲಿದ್ದಲು, ತಮಿಳು ನಾಡು ಕಂಪನಿಗೆ ಮಾರಾಟ

ನವದೆಹಲಿ: ತಮಿಳುನಾಡು ಸರ್ಕಾರದ ವಿದ್ಯುತ್ ಉತ್ಪಾದನೆ ಮತ್ತು ಪೂರೈಕೆ ಸಂಸ್ಥೆಗೆ ಅದಾನಿ ಸಮೂಹವು ಕಳಪೆ ದರ್ಜೆಯ ಕಲ್ಲಿದ್ದಲು ಪೂರೈಕೆ ಮಾಡಿದೆ ಎಂಬ ಗಂಭೀರ ಆರೋಪ ಕೇಳಿಬಂದಿದ್ದು ಲೋಕಸಭೆ ಚುನಾವಣೆಯ ಹೊತ್ತಿನಲ್ಲಿ ಅದಾನಿ ಸಮೂಹವು ಮತ್ತೊಮ್ಮೆ ವಿವಾದಕ್ಕೀಡಾಗಿದೆ.

ಸಂಘಟಿತ ಅಪರಾಧ ಮತ್ತು ಭ್ರಷ್ಟಾಚಾರ ವರದಿ ಯೋಜನೆಯು (ಒಸಿಸಿಆರ್‌ಪಿ) ಈ ಆರೋಪ ಮಾಡಿದೆ. ಫೈನಾನ್ಷಿಯಲ್ ಟೈಮ್ಸ್ ಈ ಕುರಿತು ಬುಧವಾರ ವರದಿ ಮಾಡಿದೆ.

ವರದಿಯ ಪ್ರಕಾರ, ಒಸಿಸಿಆರ್‌ಪಿಗೆ ಲಭ್ಯವಾದ ದಾಖಲೆಗಳಂತೆ, 2014ರ ಜನವರಿಯಲ್ಲಿ ಅದಾನಿ ಸಮೂಹ ಇಂಡೊನೇಷ್ಯಾದಿಂದ ಹಡಗಿನಲ್ಲಿ ಕಲ್ಲಿದ್ದಲು ತರಿಸಿತ್ತು. ಇದರ ಗುಣಮಟ್ಟ ಪ್ರತಿ ಕೆ.ಜಿಗೆ 3,500 ಕ್ಯಾಲೊರಿ. ಇದನ್ನು ತಮಿಳುನಾಡು ವಿದ್ಯುತ್ ಉತ್ಪಾದನಾ ಮತ್ತು ಸರಬರಾಜು ಕಂಪನಿಗೆ ಮಾರಲಾಗಿತ್ತು. ಆಗ ಇದರ ಗುಣಮಟ್ಟ ಪ್ರತಿ ಕೆ.ಜಿಗೆ 6000 ಕ್ಯಾಲೊರಿ ಎಂದು ತಿಳಿಸಲಾಗಿತ್ತು. ಕ್ಯಾಲೋರಿ ಕಲ್ಲಿದ್ದಲಿನ ಗುಣಮಟ್ಟದ ಉತ್ಕೃಷ್ಟತೆಯಪ್ರತೀಕವಾಗಿದೆ.

ವರದಿಯ ಪ್ರಕಾರ, ಅದಾನಿ ಸಮೂಹವು ಇಂಡೊನೇಷ್ಯಾದ ಕಂಪನಿಯಿಂದ ಕಳಪೆ ಗುಣಮಟ್ಟದ ಕಲ್ಲಿದ್ದಲನ್ನು ಟನ್‌ಗೆ 28 ಡಾಲರ್ ದರದಲ್ಲಿ ತರಿಸಿತ್ತು. ಅದನ್ನೇ ತಮಿಳುನಾಡು ಸರ್ಕಾರದ ಸಂಸ್ಥೆಗೆ ಉತ್ಕೃಷ್ಟ ಗುಣಮಟ್ಟದ್ದು ಎಂದು ಪ್ರತಿ ಟನ್‌ಗೆ 91.91 ಡಾಲರ್ ದರದಲ್ಲಿ ಮಾರಲಾಗಿದೆ.

> **ಅದಾನಿ ಸಮೂಹವು ಈ ವಹಿವಾಟಿನಿಂದ ಹೆಚ್ಚುವರಿಯಾಗಿ ₹3000 ಕೋಟಿ ಲಾಭ ಗಳಿಸಿತು. ಇದರಿಂದ ವಿದ್ಯುತ್ ಶುಲ್ಕವನ್ನು ಪಾವತಿಸಿದ್ದ ಜನಸಾಮಾನ್ಯರು ಪರಿತಪಿಸಿದರು. ಇನ್ನೊಂದೆಡೆ, ಅಗ್ಗದ ಕಲ್ಲಿದ್ದಲು ಬಳಕೆಯಿಂದ ವಾಯುಮಾಲಿನ್ಯವು ಆಯಿತು.**
> **ಜೈರಾಮ್ ರಮೇಶ್,** ಎಐಸಿಸಿ ಪ್ರಧಾನ ಕಾರ್ಯದರ್ಶಿ

ಈ ವಹಿವಾಟಿನ ಮೂಲಕ ಅದಾನಿ ಸಮೂಹವು ದೊಡ್ಡ ಮೊತ್ತದ ಲಾಭ ಪಡೆದುಕೊಂಡಿತು. ಇನ್ನೊಂದೆಡೆ, ಕಳಪೆ ದರ್ಜೆಯ ಕಲ್ಲಿದ್ದಲು ಬಳಕೆಯಿಂದಾಗಿ ಪರಿಸರದ ಮೇಲೂ ಪ್ರತಿಕೂಲ ಪರಿಣಾಮ ಬೀರಲು ಕಾರಣವಾಯಿತು ಎಂದು ವರದಿಯು ಉಲ್ಲೇಖಿಸಿದೆ.

ಆದರೆ, ಈ ಆರೋಪವನ್ನು ಅದಾನಿ ಸಮೂಹವು ನಿರಾಕರಿಸಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿದಂತೆ ಈ ವರದಿಯನ್ನು ಉಲ್ಲೇಖಿಸಿರುವ ವಿರೋಧ ಪಕ್ಷಗಳ ನಾಯಕರು, ಇಡೀ ವಹಿವಾಟಿನ ಕುರಿತಂತೆ ಜಂಟಿ ಸಂಸದೀಯ ಸಮಿತಿಯಿಂದ ತನಿಖೆ ಆಗಬೇಕು ಎಂದು ಆಗ್ರಹಪಡಿಸಿದ್ದಾರೆ.

ರಾಹುಲ್ ಗಾಂಧಿ ಅವರು, 'ಇದು, ಬಿಜೆಪಿ ಸರ್ಕಾರದ ಆಡಳಿತದಲ್ಲಿ ಬಯಲಾದ ಬಹುದೊಡ್ಡ ಕಲ್ಲಿದ್ದಲು ಹಗರಣ. ಈ ಮೂಲಕ ಪ್ರಧಾನಿ ಮೋದಿಯವರ ಆತ್ಮೀಯ ಗೆಳೆಯ ಅದಾನಿ ಅವರು, ಅಗ್ಗದ ದರ್ಜೆ ಕಲ್ಲಿದ್ದಲನ್ನು ಮೂರು ಪಟ್ಟು ಹೆಚ್ಚು ಬೆಲೆಗೆ ಮಾರಿ ಸಾವಿರಾರು ಕೋಟಿ ರೂಪಾಯಿ ಲೂಟಿ ಮಾಡಿದ್ದಾರೆ' ಎಂದು ವಾಗ್ದಾಳಿ ನಡೆಸಿದ್ದಾರೆ.

ಹೀಗೆ ಲೂಟಿ ಮಾಡಲಾದ ಹಣವು ಸಾಮಾನ್ಯ ಜನರು ವಿದ್ಯುತ್ ಖರೀದಿದಾಗಿ ತಮ್ಮ ಜೇಬಿನಿಂದ ಭರಿಸಿದ್ದ ಹಣವಾಗಿದೆ ಎಂದು ಹೇಳಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅದಾನಿ ಸಮೂಹದ ವಕ್ತಾರರು, 'ಕಲ್ಲಿದ್ದಲಿನ ಗುಣಮಟ್ಟವನ್ನು ಹಡಗಿಗೆ ತುಂಬಿಸುವ ಮತ್ತು ಇಳಿಸುವ ಹಂತದಲ್ಲಿ ಮಾಡಲಾಗುತ್ತದೆ. ಕಸ್ಟಮ್ಸ್ ಅಧಿಕಾರಿಗಳು ಹಾಗೂ ತಮಿಳುನಾಡು ಸರ್ಕಾರದ ಕಂಪನಿಯ ಅಧಿಕಾರಿಗಳು ಗುಣಮಟ್ಟ ಪರೀಕ್ಷೆ ನಡೆಸುವರು. ಹೆಚ್ಚಿನದಾಗಿ ಹಣದ ಪಾವತಿಯು ಪೂರೈಕೆ ಮಾಡಲಾದ ವೇಳೆ ಆದ ಕಲ್ಲಿದ್ದಲಿನ ಗುಣಮಟ್ಟವನ್ನು ಆಧರಿಸಿರುತ್ತದೆ' ಎಂದು ಹೇಳಿದ್ದಾರೆ.

ಬಳಕೆದಾರ ಸಂಸ್ಥೆಗೆ ಕಲ್ಲಿದ್ದಲನ್ನು ಪೂರೈಸಿದಾಗ ಮೂರು ಪಟ್ಟು ಹಣ ಪಡೆದಿದೆಯೇ ಎಂಬ ಆರೋಪದ ಕುರಿತು ಕಂದಾಯ ಕಣ್ಗಾವಲು ನಿರ್ದೇಶನಾಲಯವು (ಡಿಆರ್‌ಐ) ದಶಕದ ಹಿಂದೆಯೇ ತನಿಖೆಗೆ ಆದೇಶಿಸಿತ್ತು.

ಆದರೆ, ಕಲ್ಲಿದ್ದಲು ಸಾಗಣೆ ಕುರಿತು ವಿವರ ಪಡೆಯದಂತೆ ಬಾಂಬೆ ಹೈಕೋರ್ಟ್, ಡಿಆರ್‌ಐಗೆ ತಡೆಯಾಜ್ಞೆ ನೀಡಿತ್ತು. ಇದರ ವಿರುದ್ಧ ಡಿಆರ್‌ಐ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಡಿಆರ್‌ಐ ತನಿಖೆಗೆ ಸಂಬಂಧಿಸಿದಂತೆ ಹಳೆಯ ಆರೋಪಗಳನ್ನೇ ಹೊಸದಾಗಿ ಉಲ್ಲೇಖಿಸಲಾಗುತ್ತಿದೆ ಎಂದು ಹೇಳಿದೆ.

ಇಂಡೊನೇಷ್ಯಾದಿಂದ ತರಿಸಲಾದ ಕಲ್ಲಿದ್ದಲಿಗೆ ಅಧಿಕ ಮೌಲ್ಯ ನಿಗದಿ ಕುರಿತ ಆರೋಪ ಕುರಿತು ಡಿಆರ್‌ಐ ಕೋರಿದ್ದ ಮಾಹಿತಿಗಳನ್ನು 4 ವರ್ಷಗಳ ಹಿಂದೆಯೇ ಸಮೂಹವು ನೀಡಿದೆ. ಆ ಬಳಿಕ ಡಿಆರ್‌ಐ ಯಾವುದೇ ಹೆಚ್ಚುವರಿ ಮಾಹಿತಿ ಕೋರಿಲ್ಲ ಅಥವಾ ಆಕ್ಷೇಪವನ್ನೂ ವ್ಯಕ್ತಪಡಿಸಿಲ್ಲ ಎಂದೂ ಅದಾನಿ ಸಮೂಹವು ಪ್ರತಿಕ್ರಿಯಿಸಿದೆ.

ಪಶ್ಚಿಮ ಬಂಗಾಳಕ್ಕೆ ಅಪ್ಪಳಿಸಲಿದೆ 'ರೀಮಲ್'



ಮಹಾರಾಷ್ಟ್ರ: ರಾಸಾಯನಿಕ ಕಾರ್ಖಾನೆಯಲ್ಲಿ ಅವಘಡ

ಸ್ಫೋಟ ಸಂಭವಿಸಿ 8 ಮಂದಿ ಮೃತ

ಠಾಣೆ (ಪಿಟಿಐ): ಮಹಾರಾಷ್ಟ್ರದ ಠಾಣೆ ಜಿಲ್ಲೆಯ ರಾಸಾಯನಿಕ ಕಾರ್ಖಾನೆಯೊಂದರಲ್ಲಿ ಗುರುವಾರ ಮಧ್ಯಾಹ್ನ ಸುಮಾರು 1.40ಕ್ಕೆ ಸಂಭವಿಸಿದ ಬಾಯ್ಲರ್ ಸ್ಫೋಟದಲ್ಲಿ ಕನಿಷ್ಠ ಎಂಟು ಮಂದಿ ಮೃತಪಟ್ಟಿದ್ದು 48 ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಹಾರಾಷ್ಟ್ರ ಕೈಗಾರಿಕಾ ಅಭಿವೃದ್ಧಿ ನಿಗಮದ ಡೋಂಬಿವಿಲ್ ಪ್ರದೇಶದಲ್ಲಿಯ ಅಮುದಾನ್ ಕೆಮಿಕಲ್ಸ್ ಕಾರ್ಖಾನೆಯಲ್ಲಿ ಈ ದುರಂತ ಸಂಭವಿಸಿದೆ. ಪಕ್ಕದ ಕಾರ್ಖಾನೆಗಳಿಗೂ ಬೆಂಕಿ ಆವರಿಸಿದೆ. ಪ್ರಾಥಮಿಕ ಮಾಹಿತಿ ಪ್ರಕಾರ, ದುರಂತದಲ್ಲಿ ಮೃತಪಟ್ಟಿರುವವರು ಅಕ್ಕಪಕ್ಕದ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದವರು ಎಂದು ಮಹಾರಾಷ್ಟ್ರ ಕೈಗಾರಿಕಾ ಸಚಿವ ಉದಯ್ ಸಾಮಂತ್ ಅವರು ತಿಳಿಸಿದ್ದಾರೆ.

ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಡೋಂಬಿವಿಲ್ ಪ್ರದೇಶದಲ್ಲಿಯ ರಾಸಾಯನಿಕ ಕಾರ್ಖಾನೆಯೊಂದರಲ್ಲಿ ಗುರುವಾರ ಸ್ಫೋಟ ಸಂಭವಿಸಿದ್ದು, ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದರು –ಪಿಟಿಐ ಚಿತ್ರ

ಸಾಮಾಜಿಕ ಜಾಲತಾಣ 'ಎಕ್ಸ್‌'ನಲ್ಲಿ ಪೋಸ್ಟ್ ಮಾಡಿರುವ ರಾಜ್ಯದ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, 'ದುರಂತದಲ್ಲಿ ಗಾಯಗೊಂಡಿರುವವರಿಗೆ ಎಐಎಂಎಸ್, ನೆಪ್ಚೂನ್ ಮತ್ತು ಗ್ಲೋಬಲ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ' ಎಂದು ತಿಳಿಸಿದ್ದಾರೆ.

ಅಗ್ನಿಶಾಮಕ ದಳದ ಜೊತೆ ಪೊಲೀಸರು, ಸ್ಥಳೀಯ ಅಧಿಕಾರಿಗಳು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) ಸಿಬ್ಬಂದಿ ಕೂಡಾ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದಾರೆ. ಆ ಪ್ರದೇಶದ ಕೆಲ ಮನೆಗಳ ಕಿಟಕಿ ಗಾಜುಗಳಿಗೆ ಹಾನಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಫೋಟ ಸಂಭವಿಸಿದ ಕೈಗಾರಿಕಾ ಘಟಕವು ಕೆಲವು ತಿಂಗಳ ಹಿಂದೆ ಕಾರ್ಯನಿರ್ವಹಿಸುತ್ತಿರಲಿಲ್ಲ. ಈಚೆಗೆ ಅದನ್ನು ಪುನರಾರಂಭಿಸಲಾಗಿತ್ತು ಎಂದು ಸಾಮಂತ್ ಅವರು ತಿಳಿಸಿದರು. ಸ್ಥಳೀಯ ಶಾಸಕ ಶ್ರೀಕಾಂತ್ ಶಿಂದೆ ಮತ್ತು ಶಾಸಕ ರಾಜು ಪಾಟೀಲ್ ಅವರು ಎಂಐಡಿಸಿಗೆ ಭೇಟಿ ನೀಡಿ ಪರಿಸ್ಥಿತಿ ಪರಿಶೀಲಿಸಿದರು.

ನಿಖಿಲ್ ಗುಪ್ತಾ ಹಸ್ತಾಂತರಕ್ಕೆ ಜೆಕ್ ಅನುಮತಿ

ಪ್ರಾಗ್ (ಎಎಫ್‌ಪಿ): ಸಿಖ್ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆಗೆ ಅಮೆರಿಕದಲ್ಲಿ ನಡೆದಿತ್ತು ಎನ್ನಲಾದ ಯತ್ನದಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ಭಾರತೀಯ ಪ್ರಜೆ ನಿಖಿಲ್ ಗುಪ್ತಾ ಅವರನ್ನು ಅಮೆರಿಕಕ್ಕೆ ಹಸ್ತಾಂತರಿಸಲು ಒಪ್ಪಿಗೆ ನೀಡಲಾಗಿದೆ ಎಂದು ಜೆಕ್ ಗಣರಾಜ್ಯದ ಸಾಂವಿಧಾನಿಕ ನ್ಯಾಯಾಲಯವು ಬುಧವಾರ ಹೇಳಿದೆ.

ಅಮೆರಿಕದಲ್ಲಿ ಪನ್ನೂ ಹತ್ಯೆಗೆ ನಿಖಿಲ್ ಅವರು ಸಂಚು ರೂಪಿಸಿದ್ದರು ಎಂದು ಅಮೆರಿಕದ ಕಾನೂನು ಸಚಿವಾಲಯವು ಕಳೆದ ವರ್ಷದ ನವೆಂಬರ್‌ನಲ್ಲಿ ಆರೋಪಿಸಿದೆ. ಈ ಸಂಚಿನಲ್ಲಿ ಭಾರತದ ಸರ್ಕಾರಿ ಅಧಿಕಾರಿಯೊಬ್ಬರು ಕೂಡ ಭಾಗಿಯಾಗಿದ್ದರು ಎಂದು ಅಮೆರಿಕ ದೂರಿದೆ.

ಅಮೆರಿಕಕ್ಕೆ ಹಸ್ತಾಂತರಿಸಲು ಕೆಳ ಹಂತದ ನ್ಯಾಯಾಲಯಗಳು ಅನುಮತಿ ನೀಡಿದ್ದನ್ನು ನಿಖಿಲ್ ಅವರು ಪ್ರಶ್ನಿಸಿದ್ದರು. ಈ ಅರ್ಜಿಯನ್ನು ತಿರಸ್ಕರಿಸಲಾಗಿದೆ ಎಂದು ಜೆಕ್ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯವು ಹೇಳಿದೆ. ಹಸ್ತಾಂತರ ಪ್ರಕ್ರಿಯೆಗೆ ಜೆಕ್ ರಾಷ್ಟ್ರದ ಕಾನೂನು ಸಚಿವರ ಅನುಮೋದನೆ ಇನ್ನಷ್ಟೇ ಸಿಗಬೇಕಿದೆ. ನಿಖಿಲ್ ಗುಪ್ತಾ ಅವರನ್ನು 2023ರ ಜೂನ್ 30ರಂದು ಪ್ರಾಗ್ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿತ್ತು.

ಬಿಸಿಲಿನ ಝಳಕ್ಕೆ ಒಬ್ಬನ ಸಾವು

ರಾಜಸ್ಥಾನ: ತಾಪಮಾನ 50 ಡಿಗ್ರಿ ತಲುಪುವ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಜೈಪುರ: ರಾಜಸ್ಥಾನದ ಬಲೋತ್ರ ಜಿಲ್ಲೆಯಲ್ಲಿ ಬಿಸಿಲಿನ ಝಳಕ್ಕೆ ವ್ಯಕ್ತಿಯೊಬ್ಬ ಸಾವಿಗೀಡಾಗಿದ್ದು, ರಾಜ್ಯದ ಹಲವೆಡೆ 47 ರಿಂದ 48 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

ಮೇ 25 ಮತ್ತು 26ರಂದು ರೆಡ್ ಅಲರ್ಟ್ ಘೋಷಿಸಿರುವ ಹವಾಮಾನ ಇಲಾಖೆ, 'ಮುಂದಿನ ದಿನಗಳಲ್ಲಿ ಬಿಸಿಲಿನ ತಾಪ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಗಳಿದ್ದು, 49 ರಿಂದ 50 ಡಿಗ್ರಿಯಷ್ಟು ತಾಪಮಾನ ದಾಖಲಾಗಬಹುದು' ಎಂದು ಎಚ್ಚರಿಸಿದೆ.

ಬಲೋತ್ರದಲ್ಲಿ ಕಟ್ಟಡ ನಿರ್ಮಾಣದ ಕೆಲಸ ಮಾಡುತ್ತಿದ್ದ ಇಬ್ಬರು ಕಾರ್ಮಿಕರು ಬಿಸಿಲಿನ ತಾಪಕ್ಕೆ ಕುಸಿದು ಬಿದ್ದಿದ್ದು, ಶಿಂಧರ್ ಸಿಂಗ್ (41) ಸಾವನ್ನಪ್ಪಿದ್ದಾರೆ. ಮತ್ತೊಬ್ಬ ಕಾರ್ಮಿಕ ಸುರೇಶ್ ಯಾದವ್ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಭಾರತದಲ್ಲಿ ಅತ್ಯಂತ ಹೆಚ್ಚು ಉಷ್ಣತೆ ಹೊಂದಿರುವ ಬಾರ್ಮೆರ್ ಜಿಲ್ಲೆಯಲ್ಲಿ 48 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

ಜೈಪುರದಲ್ಲಿ ಬುಧವಾರ 45.4 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದು, ಬಿಸಿಲಿನ ತಾಪಕ್ಕೆ ಜನರು ಮನೆಯಿಂದ ಹೊರಗಡೆ ಬರುತ್ತಿಲ್ಲ. ರಸ್ತೆಗಳಲ್ಲಿ ಸಿಗ್ನಲ್ ಇರುವ ಸ್ಥಳಗಳಲ್ಲಿ ವಾಹನ ಸವಾರರಿಗೆ ಬಿಸಿಲು ಸೋಕದಂತೆ ಜಿಲ್ಲಾಡಳಿತವು ಹಸಿರು ಪರದೆಯನ್ನು ಅಳವಡಿಸಿದೆ.

ಕೇರಳದ ಹಲವೆಡೆ ಭಾರಿ ಮಳೆ

ಒಂದನೇ ಪುಟದಿಂದ...

ಎರ್ನಾಕುಳಂ ಹಾಗೂ ತ್ರಿಶ್ಶೂರ್ ಜಿಲ್ಲೆಗಳಲ್ಲಿ ಇಲಾಖೆಯು ರೆಡ್ ಅಲರ್ಟ್ ಘೋಷಿಸಿದೆ. ಇದಕ್ಕೂ ಮೊದಲು ಇಲಾಖೆ ನೀಡಿದ್ದ ಮುನ್ನೆಚ್ಚರಿಕೆಯಲ್ಲಿ ಈ ಎರಡು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿತ್ತು. ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ಸೂಚನೆ ನೀಡಲಾಗಿದೆ.

ಎರ್ನಾಕುಳಂ ನಗರ ಪ್ರದೇಶದಲ್ಲಿ ಹೆಚ್ಚು ಪ್ರವಾಹ ಉಂಟಾಗಿದ್ದು, ಮನೆಗಳಿಗೆ ಹಾಗೂ ಅಂಗಡಿಗಳಿಗೆ ನೀರು ನುಗ್ಗಿದೆ. ಕಸವನ್ನು ಎಲ್ಲೆಂದರಲ್ಲಿ ಬಿಸಾಡುವುದು ಹಾಗೂ ಸ್ಥಳೀಯಾಡಳಿತ ಕಸ ತೆರವು ಕಾರ್ಯವನ್ನು ಸರಿಯಾಗಿ ನಿರ್ವಹಿಸಿಲ್ಲ. ಇದರಿಂದಾಗಿ ಚರಂಡಿಗಳಲ್ಲಿ ಕಸ ತುಂಬಿಕೊಂಡಿದೆ. ನಗರ ಪ್ರದೇಶಗಳಲ್ಲಿ ಪ್ರವಾಹ ಉಂಟಾಗಲು ಇದೇ ಕಾರಣ ಎನ್ನಲಾಗಿದೆ.

ವಿಮಾನ ಹಾರಾಟದಲ್ಲಿ ವ್ಯತ್ಯಯ: ಕೋಯಿಕ್ಕೋಡ್ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನ ಹಾರಾಟಗಳಲ್ಲಿ ವ್ಯತ್ಯಯವಾಗಿದೆ. ಗಲ್ಫ್ ರಾಷ್ಟ್ರಗಳಿಂದ, ಬೆಂಗಳೂರಿನಿಂದ ಕೋಯಿಕ್ಕೋಡಿಗೆ ಬರಬೇಕಿದ್ದ ವಿಮಾನಗಳ ಸಂಚಾರದಲ್ಲೂ ವ್ಯತ್ಯಯವಾಗಿದೆ. ಇಲ್ಲಿಗೆ ಬಂದಿಳಿಯಬೇಕಿದ್ದ ಕೆಲವು ವಿಮಾನಗಳು ಮಂಗಳೂರು ಹಾಗೂ ಕೊಯಮತ್ತೂರು ವಿಮಾನ ನಿಲ್ದಾಣಗಳಲ್ಲಿ ಇಳಿಸಲಾಗಿದೆ. ಇಲ್ಲಿಂದ ಇತರೆಡೆ ತೆರಳಬೇಕಿದ್ದ ವಿಮಾನ ಸಂಚಾರವನ್ನು ರದ್ದು ಮಾಡಲಾಗಿದೆ.

ಜನಜೀವನ ಅಸ್ತವ್ಯಸ್ತ
- ತಿರುವನಂತಪುರ ಹಾಗೂ ಕೋಟಯಂ ಜಿಲ್ಲೆಗಳಲ್ಲಿ ಎರಡು ನಿರಾಶ್ರಿತ ಶಿಬಿರಗಳನ್ನು ಆರಂಭಿಸಲಾಗಿದೆ. ಆಲಪುಳ ಕುಟ್ಟನಾಡಿನಲ್ಲಿ ಪ್ರವಾಹ ಉಂಟಾಗಿದೆ. ಮಲಪ್ಪುರ ಹಾಗೂ ಕಾಸರಗೋಡಿನಲ್ಲಿ ಭೂಕುಸಿತವೂ ಸಂಭವಿಸಿದೆ
- ಕೋಯಿಕ್ಕೋಡ್‌ನಲ್ಲಿನ ವೈದ್ಯಕೀಯ ಕಾಲೇಜು ಹಾಗೂ ತ್ರಿಶ್ಶೂರ್‌ನ ಖಾಸಗಿ ಆಸ್ಪತ್ರೆಯೊಂದಕ್ಕೆ ನೀರು ನುಗ್ಗಿದೆ
- ಆಲಪುಳದ ತೂರಾವೂರ್ ಪ್ರದೇಶದಲ್ಲಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುರುವಾರ ಮೂರು ಗಂಟೆಗಳ ಸಂಚಾರ ಸ್ಥಗಿತಗೊಂಡಿತ್ತು.

ಸಂಕ್ಷಿಪ್ತ ಸುದ್ದಿ

ಸುನಿತಾ ಅಂತರಿಕ್ಷಯಾನ ಜೂನ್ 1–5ರ ನಡುವೆ?

ಹ್ಯೂಸ್ಟನ್ (ಪಿಟಿಐ): ಭಾರತ ಮೂಲದ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಅವರು ಮೂರನೇ ಬಾರಿಗೆ ಜೂನ್ 1 ಮತ್ತು ಜೂನ್ 5ರ ನಡುವೆ ಅಂತರಿಕ್ಷ ಯಾನ ಕೈಗೊಳ್ಳಲಿದ್ದಾರೆ. ತಾಂತ್ರಿಕ ದೋಷದಿಂದಾಗಿ 'ಸ್ಟಾರ್‌ಲೈನರ್' ಅಂತರಿಕ್ಷ ನೌಕೆಯ ಉಡಾವಣೆಯನ್ನು ಈ ತಿಂಗಳ ಆರಂಭದಲ್ಲಿ ಮುಂದೂಡಲಾಗಿತ್ತು.

58 ವರ್ಷ ವಯಸ್ಸಿನ ಸುನಿತಾ ವಿಲಿಯಮ್ಸ್ ಮೂರನೇ ಬಾರಿಗೆ ಈ ಪರೀಕ್ಷಾರ್ಥ ನೌಕೆಯಲ್ಲಿ ಅಂತರಿಕ್ಷ ತಾಣಕ್ಕೆ ಪ್ರಯಾಣಿಸುವರು. ಈ ಸಂಬಂಧ 'ನಾಸಾ' ಹೇಳಿಕೆಯನ್ನು ನೀಡಿದ್ದು ಬೋಯಿಂಗ್, ನಾಸಾ ಮತ್ತು ಯುನೈಟೆಡ್ ಲಾಂಚ್ ಅಲಯನ್ಸ್‌ನ ಗಗನಯಾತ್ರಿಗಳು ಅಂತರರಾಷ್ಟ್ರೀಯ ಅಂತರಿಕ್ಷ ತಾಣಕ್ಕೆ ಪ್ರಯಾಣಿಸುವರು ಎಂದು ಹೇಳಿದೆ.

ಜೂನ್ 1ರಂದು ಮಧ್ಯಾಹ್ನ 12.25ಕ್ಕೆ ನೌಕೆಯ ಉಡಾವಣೆಯ ಮೊದಲ ಸಾಧ್ಯತೆಗಳಿವೆ. ಉಳಿದಂತೆ ಜೂನ್ 2, 5 ಮತ್ತು 6ರಂದು ಹೆಚ್ಚುವರಿ ಅವಕಾಶಗಳಿವೆ. ಸ್ಟಾರ್‌ಲೈನರ್ ಸಾಮರ್ಥ್ಯದ ಅಂದಾಜು ನಡೆದಿದೆ. ಗಗನಯಾತ್ರಿಗಳ ತಂಡ ಕೂಡಾ ಅಂತರಿಕ್ಷ ನೌಕೆಯ ವಿವಿಧ ತಾಂತ್ರಿಕ ಅಂಶಗಳನ್ನು ಪರಿಶೀಲಿಸುತ್ತಿದ್ದಾರೆ ಎಂದಿದೆ.

ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರನ್ನು 'ಸ್ಟಾರ್‌ಲೈನರ್' ಅಂತರಿಕ್ಷ ನೌಕೆಯು ಅಂತರರಾಷ್ಟ್ರೀಯ ಅಂತರಿಕ್ಷ ತಾಣಕ್ಕೆ ಒಯ್ಯಲಿದೆ. ಫ್ಲಾರಿಡಾದಿಂದ ಈ ನೌಕೆಯ ಉಡಾವಣೆ ಕಾರ್ಯ ನಡೆಯಲಿದೆ.

ಇಸ್ರೇಲ್ ದಾಳಿ: ಇಂದು ಐಸಿಜೆ ಆದೇಶ

ದಿ ಹೇಗ್ (ರಾಯಿಟರ್ಸ್): ಗಾಜಾದ ರಫಾ ನಗರದ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ನಿಲ್ಲಿಸುವಂತೆ ಸೂಚಿಸಬೇಕು ಎಂದು ಕೋರಿ ದಕ್ಷಿಣ ಆಫ್ರಿಕಾ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಇಲ್ಲಿನ ಅಂತರರಾಷ್ಟ್ರೀಯ ನ್ಯಾಯಾಲಯವು (ಐಸಿಜೆ) ಶುಕ್ರವಾರ ಆದೇಶ ನೀಡಲಿದೆ.

ಜನಾಂಗೀಯ ಹತ್ಯಾಕಾಂಡಕ್ಕೆ ಸಂಬಂಧಿಸಿದಂತೆ 1948ರಲ್ಲಿ ಮಾಡಿಕೊಂಡ ಒಪ್ಪಂದವನ್ನು ಇಸ್ರೇಲ್ ಉಲ್ಲಂಘಿಸುತ್ತಿದೆ ಎಂದು ದಕ್ಷಿಣ ಆಫ್ರಿಕಾ ಮಾಡಿರುವ ಆರೋಪವನ್ನು ಇಸ್ರೇಲ್ ಖಂಡಿಸಿದೆ. ದಕ್ಷಿಣ ಆಫ್ರಿಕಾದ ಆರೋಪವು ಜನಾಂಗೀಯ ಹತ್ಯಾಕಾಂಡಗಳನ್ನು ಅಣಕಿಸುವಂತೆ ಇದೆ ಎಂದು ಇಸ್ರೇಲ್ ಹೇಳಿದೆ.

ಅರ್ಜಿಯನ್ನು ತಿರಸ್ಕರಿಸಬೇಕು ಎಂದು ಇಸ್ರೇಲ್ ಮಂಡಿಸಿದ್ದ ಕೋರಿಕೆಯನ್ನು ನ್ಯಾಯಾಲಯವು ಈ ಹಿಂದೆ ಒಪ್ಪಿಲ್ಲ. ಅಲ್ಲದೆ, ಪ್ಯಾಲೆಸ್ಟೀನ್ ನಾಗರಿಕರನ್ನು ಗುರಿಯಾಗಿಸಿಕೊಂಡು ನಡೆಸುವ ಜನಾಂಗೀಯ ಹತ್ಯಾಕಾಂಡದ ಕೃತ್ಯಗಳನ್ನು ತಡೆಯಬೇಕು ಎಂದು ಇಸ್ರೇಲ್‌ಗೆ ಸೂಚಿಸಿದೆ. ಆದರೆ ಮಿಲಿಟರಿ ಕಾರ್ಯಾಚರಣೆ ನಿಲ್ಲಿಸುವಂತೆ ಅದು ಆದೇಶಿಸಿಲ್ಲ.

ಇಸ್ರೇಲ್ ವೈಮಾನಿಕ ದಾಳಿ: 38 ಮಂದಿ ಹತ್ಯೆ

ಕೈರೊ (ರಾಯಿಟರ್ಸ್): ಇಸ್ರೇಲ್ ಪಡೆಗಳು ಗುರುವಾರ ಗಾಜಾ ಪಟ್ಟಿಯಾದ್ಯಂತ ನಡೆಸಿದ ಭೂ ಮತ್ತು ವೈಮಾನಿಕ ಬಾಂಬ್ ದಾಳಿಯಲ್ಲಿ 38 ಮಂದಿ ಪ್ಯಾಲೆಸ್ಟೀನ್ ನಾಗರಿಕರು ಹತರಾಗಿದ್ದಾರೆ. ರಫಾ ನಗರದಲ್ಲಿ ಇಸ್ರೇಲ್ ಸೇನೆ ಮತ್ತು ಹಮಾಸ್ ಬಂಡುಕೋರರ ನಡುವೆ ಕದನ ತೀವ್ರಗೊಂಡಿದೆ ಎಂದು ಅಧಿಕಾರಿಗಳು ಮತ್ತು ಸ್ಥಳೀಯ ಮಾಧ್ಯಮಗಳು ಹೇಳಿವೆ.

ಇಸ್ರೇಲ್‌ನ ಯುದ್ಧ ಟ್ಯಾಂಕ್‌ಗಳು ರಫಾದ ಆಗ್ನೇಯದಲ್ಲಿ ಮುನ್ನುಗ್ಗುತ್ತಿವೆ. ನಗರದ ಪಶ್ಚಿಮ ಜಿಲ್ಲೆಯಿಬ್ನಾದ ಗಡಿಯಂಚಿಗೆ ಬಂದು ಮೂರು ಪೂರ್ವ ಉಪನಗರಗಳಲ್ಲಿ ಕಾರ್ಯಾಚರಣೆ ಮುಂದುವರೆಸಿವೆ ಎಂದು ಸ್ಥಳೀಯ ನಿವಾಸಿಗಳು ತಿಳಿಸಿದ್ದಾರೆ. ಹಮಾಸ್ ಹೋರಾಟಗಾರರ ಕೊನೆಯ ಬೆಟಾಲಿಯನ್‌ಗಳನ್ನು ಬೇರು ಸಮೇತ ಕಿತ್ತೊಗೆಯಲು ರಫಾ ಮೇಲೆ ದಾಳಿ ಬಿಟ್ಟು ತಮಗೆ ಬೇರೆ ದಾರಿಯಿಲ್ಲ ಎಂದು ಇಸ್ರೇಲ್ ಹೇಳಿದೆ.

ಕೆಂಪು ಸಮುದ್ರದ ಮೇಲೆ ಕ್ಷಿಪಣಿ ಹಾರಿಸಿದ ಹೂಥಿ

ದುಬೈ (ಎಪಿ): ಯೆಮನ್‌ನ ಹೂಥಿ ಬಂಡುಕೋರರು ಕೆಂಪು ಸಮುದ್ರದ ಮೇಲೆ ಗುರುವಾರ ಕ್ಷಿಪಣಿ ದಾಳಿ ನಡೆಸಿದ್ದು, ಹಡಗುಗಳಿಗೆ ಯಾವುದೇ ಹಾನಿಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಕ್ಷಿಣ ಕೆಂಪು ಸಮುದ್ರದಲ್ಲಿನ ಬಾಬ್–ಎಲ್–ಮಂಡೆಬ್ ಜಲಸಂಧಿಯನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆದಿದೆ ಎಂದು ಮ್ಯಾರಿಟೈಮ್ ಟ್ರೇಡ್ ಆಪರೇಷನ್ ಸೆಂಟರ್ ತಿಳಿಸಿದೆ.

ಖಾಸಗಿ ಭದ್ರತಾ ಸಂಸ್ಥೆ ಆಂಬ್ರೆ ಇದೇ ರೀತಿಯ ದಾಳಿಯನ್ನು ವರದಿ ಮಾಡಿದೆ. ಆದರೆ ಬಂಡುಕೋರರು ತಕ್ಷಣಕ್ಕೆ ಈ ದಾಳಿಯ ಹೊಣೆಯನ್ನು ಹೊತ್ತುಕೊಂಡಿಲ್ಲ.

ಉಕ್ರೇನ್ ಮೇಲೆ ರಷ್ಯಾ ದಾಳಿ: ಏಳು ಜನ ಸಾವು

ಕೀವ್ (ಎಪಿ): ಉಕ್ರೇನ್‌ನ ಹಾರ್ಕಿವ್ ನಗರದ ಮೇಲೆ ಗುರುವಾರ ರಷ್ಯಾ ನಡೆಸಿರುವ ಕ್ಷಿಪಣಿ ದಾಳಿಯಲ್ಲಿ ಏಳು ನಾಗರಿಕರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಉಕ್ರೇನ್ ಸೇನಾ ಪಡೆಗಳು ರಷ್ಯಾ ದಾಳಿಯನ್ನು ತಡೆಯಲು ಶ್ರಮಿಸುತ್ತಿವೆ.

ಹಾರ್ಕಿವ್ ಮೇಲೆ ರಷ್ಯಾ ನಡೆಸಿದ ಎಸ್–300 ಕ್ಷಿಪಣಿ ದಾಳಿಯಲ್ಲಿ 16 ಜನರು ಗಾಯಗೊಂಡಿದ್ದಾರೆ. ನಗರದ ಸುತ್ತಲೂ ಸುಮಾರು 15 ಸ್ಫೋಟಗಳು ಸಂಭವಿಸಿವೆ ಎಂದು ಪ್ರಾದೇಶಿಕ ಗವರ್ನರ್ ಓಲೆಹ್ ಸಿನಿಹುಬೊವ್ ತಿಳಿಸಿದ್ದಾರೆ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, ರಷ್ಯಾ ದಾಳಿಯನ್ನು 'ಅತ್ಯಂತ ಕ್ರೂರ' ಎಂದು ಕರೆದಿದ್ದಾರೆ.

ಶುದ್ಧ ನೀರು ಕೊಡದಿದ್ದರೆ ಅಮಾನತು: ಸಿ.ಎಂ ಎಚ್ಚರಿಕೆ

ಒಂದನೇ ಪುಟದಿಂದ...

ಬೆಳೆ ವಿಮೆ ಕ್ಲೇಮ್ ಮಾಡುವ ಸಂದರ್ಭದಲ್ಲಿ ಕಂಪೆನಿಗಳ ಸ್ಯಾಂಪಲ್ ಪರಿಶೀಲನೆಗೆ ಸಂಬಂಧಿಸಿದಂತೆ ರೈತರು ಹಲವು ಸಂದೇಹಗಳನ್ನು ಹೊಂದಿದ್ದು, ಈ ಕುರಿತು ಮುಂಚಿತವಾಗಿಯೇ ವಿಮಾ ಕಂಪನಿಗಳೊಂದಿಗೆ ಚರ್ಚಿಸಿ, ರೈತರ ಅನುಮಾನಗಳನ್ನು ಪರಿಹರಿಸಿ, ಅವರಿಗೆ ಅನುಕೂಲವಾಗುವಂತೆ ಕ್ರಮ ತೆಗೆದುಕೊಳ್ಳಬೇಕು ಎಂದರು.

ವಾಡಿಕೆಗಿಂತ ಅಧಿಕ ಮಳೆ: ಮಾರ್ಚ್ ಒಂದರಿಂದ ಈವರೆಗೆ 87 ಮಿ.ಮೀ ವಾಡಿಕೆ ಮಳೆ ಆಗಬೇಕಿತ್ತು. ಈ ವರ್ಷ 123 ಮಿ.ಮೀ ಮಳೆ ಆಗಿದೆ. ಅದರಲ್ಲಿ 8 ಜಿಲ್ಲೆಗಳಲ್ಲಿ ಅತ್ಯಧಿಕ ಮತ್ತು 8 ಜಿಲ್ಲೆಗಳಲ್ಲಿ ವಾಡಿಕೆ ಮಳೆಯಾಗಿದೆ ಎಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

ರಾಜ್ಯದ ಜಲಾಶಯಗಳಲ್ಲಿ ಪ್ರಸ್ತುತ ನೀರಿನ ಸಂಗ್ರಹಣಾ ಸಾಮರ್ಥ್ಯದ ಶೇ 20ರಷ್ಟು ನೀರು ಇದೆ. ರಾಜ್ಯದಾದ್ಯಂತ ಮಳೆ ಆಗುತ್ತಿರುವ ಕಾರಣ ಮುಂದಿನ ದಿನಗಳಲ್ಲಿ ಇದು ಹೆಚ್ಚಳವಾಗುವ ನಿರೀಕ್ಷೆ ಇದೆ. ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಮುಂಗಾರು ಹಂಗಾಮಿನಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದೆ ಎಂದು ಅವರು ವಿವರಿಸಿದರು.

ಕೃಷ್ಣಾ ನದಿ, ಭೀಮಾನದಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಕೊಡಗು ಮೊದಲಾದ ಕಡೆ ಸಾವು ನೋವಿನ ಪ್ರಕರಣಗಳು ಹೆಚ್ಚಾಗಿವೆ. ಮುಂಬರುವ ದಿನಗಳಲ್ಲಿ ಸಾವು ನೋವಿನ ಪ್ರಕರಣಗಳು ಸಂಭವಿಸುವ ಸಾಧ್ಯತೆ ಇರುವ ಜಿಲ್ಲೆಗಳಲ್ಲಿ ಹೆಚ್ಚಿನ ಮುನ್ನೆಚ್ಚರಿಗೆ ವಹಿಸಿ, ಸಾವಿನ ಪ್ರಕರಣಗಳನ್ನು ತಡೆಗಟ್ಟಬೇಕು ಎಂದು ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಂದಾಯ ಸಚಿವ ಕೃಷ್ಣಬೈರೇಗೌಡ, ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಪಾಲ್ಗೊಂಡಿದ್ದರು.

82.4 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಗುರಿ

ಈ ಮುಂಗಾರು ಹಂಗಾಮಿನಲ್ಲಿ 82.4 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ. 2024–25 ನೇ ಸಾಲಿನ ಪೂರ್ವ ಮುಂಗಾರು ಹಂಗಾಮಿನಲ್ಲಿ ಅಂದರೆ ಮೇ 17 ರವರೆಗೆ 2.95 ಲಕ್ಷ ಹೆಕ್ಟೇರು ಪ್ರದೇಶದಲ್ಲಿ ಬಿತ್ತನೆ ಗುರಿಗೆ 68,600 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದು, ಶೇ 23 ರಷ್ಟು ಸಾಧನೆ ಆಗಿದೆ ಎಂದು ಅಧಿಕಾರಿಗಳು ಸಭೆಗೆ ವಿವರ ನೀಡಿದರು.

ಈ ಮುಂಗಾರು ಹಂಗಾಮಿಗೆ ಸಹಾಯಧನದಡಿ 5,52,350 ಕ್ವಿಂಟಲ್ ಬಿತ್ತನೆ ಬೀಜಕ್ಕೆ ಬೇಡಿಕೆ ಇದ್ದು, 9,01,397 ಕ್ವಿಂಟಲ್ ಬೀಜ ಲಭ್ಯವಿದೆ. ಮೇ 22 ರ ವರೆಗೆ 5492.44 ಕ್ವಿಂಟಲ್ ಬಿತ್ತನೆ ಬೀಜ ವಿತರಣೆ ಮಾಡಲಾಗಿದೆ. 14,608.49 ಕ್ವಿಂಟಲ್ ಬಿತ್ತನೆ ಬೀಜ ರೈತ ಸಂಪರ್ಕ ಕೇಂದ್ರದಲ್ಲಿ ದಾಸ್ತಾನು ಲಭ್ಯವಿದೆ. ಬೇಡಿಕೆಗೆ ತಕ್ಕಂತೆ ಸಂಬಂಧಿಸಿದ ಸಂಸ್ಥೆಗಳಿಂದ ಬಿತ್ತನೆ ಬೀಜ ಪೂರೈಕೆ ಮಾಡಲಾಗುತ್ತಿದೆ ಎಂದರು.

ಜೀವನೋಪಾಯ ನಷ್ಟ ಪರಿಹಾರಕ್ಕೆ ₹2,800 ರಂತೆ ಸಣ್ಣ ಮತ್ತು ಅತಿಸಣ್ಣ ರೈತರಿಗೆ ವಿತರಿಸಲು ಕ್ರಮಕೈಗೊಳ್ಳಲಾಗುತ್ತಿದ್ದು, ಇದಕ್ಕಾಗಿ ₹460 ಕೋಟಿಯನ್ನು 20 ಲಕ್ಷ ರೈತರಿಗೆ ಒದಗಿಸಲಾಗುವುದು ಎಂದು ವಿವರಿಸಿದರು.

ಹಾವೇರಿ ಜಿಲ್ಲೆಯಲ್ಲಿ ಮಳೆ ಆರಂಭವಾಗಿದ್ದರಿಂದ ಏಕಾಏಕಿ ರೈತರು ರಸಗೊಬ್ಬರ ಪಡೆಯಲು ಬಂದಿದ್ದರಿಂದ ನೂಕು ನುಗ್ಗಲು ಉಂಟಾಯಿತು. ಏಪ್ರಿಲ್ 1 ರಿಂದ 3.22 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಮಾರಾಟವಾಗಿದ್ದು, ಒಟ್ಟು 14,86,067 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಲಭ್ಯವಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಿದ್ದರಾಮಯ್ಯ, ರಸಗೊಬ್ಬರ ಲಭ್ಯತೆ ಬಗ್ಗೆ ನಿರಂತರವಾಗಿ ಮಾಹಿತಿ ಒದಗಿಸಬೇಕು. ಡಿಸಿ, ಸಿಇಒಗಳು ಜವಾಬ್ದಾರಿ ತೆಗೆದುಕೊಳ್ಳಬೇಕು. ಬರಪರಿಹಾರ ಮತ್ತು ಇತರ ಕಾಮಗಾರಿಗಳ ಬಿಲ್ಲುಗಳ ಪಾವತಿಯನ್ನು ಪ್ರತಿ 15 ದಿನಗಳಿಗೊಮ್ಮೆ ಮಾಡಬೇಕು ಎಂದು ಸೂಚಿಸಿದರು.

'ಚುನಾವಣಾ ನೀತಿ ಸಂಹಿತೆ ಅವಧಿ ಈ ಬಾರಿ ದೀರ್ಘವಾಗಿತ್ತು. ಇದರಿಂದ ಆಡಳಿತ ಯಂತ್ರ ಸ್ಥಗಿತವಾದಂತೆ ಆಗಿತ್ತು. ಅಭಿವೃದ್ಧಿ ಕೆಲಸಗಳಿಗೆ ಗಮನ ಹರಿಸಲು ಅಧಿಕಾರಿಗಳಿಂದ ಸಾಧ್ಯ ಆಗಿರಲಿಲ್ಲ. ನಮ್ಮ ಮನವಿ ಮೇರೆಗೆ ಚುನಾವಣಾ ಆಯೋಗ ನೀತಿ ಸಂಹಿತೆ ಸಡಿಲಿಸಿದೆ. ಆದ್ದರಿಂದ ಅಧಿಕಾರಿಗಳು ಅಭಿವೃದ್ಧಿ ಕಡೆ ಹೆಚ್ಚಿನ ಗಮನ ಹರಿಸಬೇಕು' ಎಂದು ಅವರು ಹೇಳಿದರು.

ಸಿಂಧು, ಅಶ್ಮಿತಾ ಚಾಲಿಹಾ ಕ್ವಾರ್ಟರ್ ಫೈನಲ್‌ಗೆ

ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ: ಕಿರಣ್ ಜಾರ್ಜ್ ನಿರ್ಗಮನ

ಕ್ವಾಲಾಲಂಪುರ (ಪಿಟಿಐ): ಐದನೇ ಶ್ರೇಯಾಂಕದ ಪಿ.ವಿ. ಸಿಂಧು ಮಲೇಷ್ಯಾ ಓಪನ್ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್‌ನಲ್ಲಿ ಕೊರಿಯಾದ ಸಿಮ್ ಯು ಜಿನ್ ಅವರನ್ನು ಮೂರು ಗೇಮ್‌ಗಳ ಹೋರಾಟದಲ್ಲಿ ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ವಿರಾಮದ ನಂತರ ಪುನರಾಗಮನ ಮಾಡಿರುವ ವಿಶ್ವದ 15ನೇ ಕ್ರಮಾಂಕದ ಸಿಂಧು ಅವರಿಗೆ ಎರಡನೇ ಸುತ್ತಿನ ಪಂದ್ಯವನ್ನು 21-13, 12-21, 21-14 ಅಂತರದಲ್ಲಿ ಗೆದ್ದುಕೊಳ್ಳಲು 59 ನಿಮಿಷ ಬೇಕಾಯಿತು.

ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಭಾರತದ ಸಿಂಧು ನಿಖರ ಆಟದ ಮೂಲಕ ಮೊದಲ ಆಟದಲ್ಲಿ ಮೇಲುಗೈ ಸಾಧಿಸಿದರು. ಆದರೆ, ಎರಡನೇ ಗೇಮ್‌ನಲ್ಲಿ ವಿಶ್ವದ 34ನೇ ರ‍್ಯಾಂಕ್‌ನ ಜಿನ್ ಪ್ರತಿರೋಧ ತೋರಿ, ಸ್ಕೋರ್ ಅನ್ನು ಸಮಬಲಗೊಳಿಸಿದರು. ನಿರ್ಣಾಯಕ ಆಟದಲ್ಲಿ ಆರಂಭದಿಂದಲೇ ಮುನ್ನಡೆ ಕಾಯ್ದುಕೊಂಡ ಸಿಂಧು ಗೆಲುವು ಸಾಧಿಸಿದರು.

ಮಾಜಿ ವಿಶ್ವ ಚಾಂಪಿಯನ್ ಸಿಂಧು ಎಂಟರ ಘಟ್ಟದ ಪಂದ್ಯದಲ್ಲಿ ಅಗ್ರ ಶ್ರೇಯಾಂಕದ ಹಾನ್ ಯುವೆ (ಚೀನಾ) ಅವರನ್ನು ಎದುರಿಸಲಿದ್ದಾರೆ. ವಿಶ್ವ ರ‍್ಯಾಂಕಿಂಗ್‌ನಲ್ಲಿ 6ನೇ ಸ್ಥಾನದಲ್ಲಿರುವ ಹಾನ್ ವಿರುದ್ಧ ಸಿಂಧು 5–1ರ ಗೆಲುವಿನ ದಾಖಲೆ ಹೊಂದಿದ್ದಾರೆ.

ಭಾರತದ ಅಶ್ಮಿತಾ ಚಾಲಿಹಾ –ಪಿಟಿಐ ಚಿತ್ರ

ಯುವ ಆಟಗಾರ್ತಿ ಅಶ್ಮಿತಾ ಚಾಲಿಹಾ ಮೂರನೇ ಶ್ರೇಯಾಂಕದ ಅಮೆರಿಕದ ಬೀವೆನ್ ಜಾಂಗ್ ಅವರಿಗೆ ಆಘಾತ ನೀಡಿದರು. ವಿಶ್ವದ 53ನೇ ರ‍್ಯಾಂಕ್‌ನ ಅಶ್ಮಿತಾ 21–19, 16–21, 21–12ರಿಂದ 10ನೇ ಕ್ರಮಾಂಕದ ಆಟಗಾರ್ತಿಯನ್ನು ಹಿಮ್ಮೆಟ್ಟಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಅಶ್ಮಿತಾ ಎರಡನೇ ಬಾರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಗುವಾಹಟಿಯ ಈ ಆಟಗಾರ್ತಿ ಮುಂದಿನ ಪಂದ್ಯದಲ್ಲಿ ಆರನೇ ಶ್ರೇಯಾಂಕದ ಜಾಂಗ್ ಯಿ ಮಾನ್ (ಚೀನಾ) ವಿರುದ್ಧ ಸೆಣಸಲಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಕಣದಲ್ಲಿ ಉಳಿದಿದ್ದ ಭಾರತದ ಏಕೈಕ ಸ್ಪರ್ಧಿ ಕಿರಣ್ ಜಾರ್ಜ್ ನಿರಾಸೆ ಮೂಡಿಸಿದರು. ಅವರು ಎರಡನೇ ಸುತ್ತಿನ ಪಂದ್ಯದಲ್ಲಿ 13–21, 18–21ರಿಂದ ಐದನೇ ಶ್ರೇಯಾಂಕದ ಲೀ ಝಿ ಜಿಯಾ (ಮಲೇಷ್ಯಾ) ಅವರಿಗೆ ಶರಣಾದರು.

ಟ್ರಿಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿಯೂ ಮಹಿಳೆಯರ ಡಬಲ್ಸ್‌ನ ಎರಡನೇ ಸುತ್ತಿನಲ್ಲಿ ಮುಗ್ಗರಿಸಿತು. ಏಳನೇ ಶ್ರೇಯಾಂಕದ ಭಾರತದ ಆಟಗಾರ್ತಿಯರು 18–21, 22–20, 14–21ರಿಂದ ಚೀನಾ ತೈಪೆಯ ಸುಂಗ್ ಶುಯೋ ಯುನ್ ಮತ್ತು ಯು ಚಿಯೆನ್-ಹುಯಿ ಅವರಿಗೆ ತಲೆಬಾಗಿದರು.

ಭಾರತದ ಮತ್ತೊಂದು ಜೋಡಿ ಸಿಮ್ರಾನ್ ಸಿಂಗ್–ರಿತಿಕಾ ಠಕ್ಕರ್ 17-21, 11-21ರಿಂದ ಎರಡನೇ ಶ್ರೇಯಾಂಕದ ಮಲೇಷ್ಯಾದ ಪರ್ಲಿ ಟಾನ್ ಮತ್ತು ಥಿನಾ ಮುರಳೀಧರನ್ ಅವರಿಗೆ ಮಣಿಯಿತು.

ರಾಜ್ಯ ರ‍್ಯಾಂಕಿಂಗ್ ಸಬ್ ಜೂನಿಯರ್ ಬ್ಯಾಡ್ಮಿಂಟನ್ ಟೂರ್ನಿ

ಹದಿನಾರರ ಘಟ್ಟಕ್ಕೆ ಗೌರಿ ಸತೀಶ್ ಲಗ್ಗೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ದಿಟ್ಟ ಆಟ ಆಡಿದ ಬೆಂಗಳೂರಿನ ಗೌರಿ ಸತೀಶ್, ರಾಜ್ಯ ರ‍್ಯಾಂಕಿಂಗ್ ಸಬ್ ಜೂನಿಯರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ 16ರ ಘಟ್ಟಕ್ಕೆ ಲಗ್ಗೆ ಇಟ್ಟರು.

ಇಲ್ಲಿನ ನೇತಾಜಿ ಸುಭಾಷ್‌ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಗುರುವಾರ ನಡೆದ 15 ವರ್ಷದೊಳಗಿನ ಬಾಲಕಿಯರ ವಿಭಾಗದ ಎರಡನೇ ಸುತ್ತಿನ ಹೋರಾಟದಲ್ಲಿ ಗೌರಿ 21–8, 21–15ರಿಂದ ಬೆಂಗಳೂರಿನವರೇ ಆದ ರುತ್ವಾ ಯತೀಶ್ ವಿರುದ್ಧ ಗೆದ್ದರು.

ಇತರ ಪಂದ್ಯಗಳಲ್ಲಿ ಐಕ್ಯಾ ಶೆಟ್ಟಿ 21-7, 21-16ರಿಂದ ಎಸ್.ಸ್ಮೃತಿ ಎದುರು, ಕೀರ್ತಿ ಬಾಲಾಜಿ 21-15, 21-14 ರಿಂದ ಅಕ್ಷರಾ ಶ್ರೀನಿಧಿ ವಿರುದ್ಧ, ನಿಧಿ ಆತ್ಮರಾಮ್ 21-5, 21-13 ರಿಂದ ವೈಷ್ಣವಿ ನಾರಾಯಣನ್ ಎದುರು ಜಯಿಸಿದರು.

ಗೌರಿ ಸತೀಶ್ ಷಟಲ್ ಹಿಂತಿರುಗಿಸಲು ಪ್ರಯತ್ನಿಸಿದರು –ಪ್ರಜಾವಾಣಿ ಚಿತ್ರ/ ಸತೀಶ್ ಬಡಿಗೇರ್

15 ವರ್ಷದೊಳಗಿನ ಬಾಲಕರ ವಿಭಾಗದ ಪಂದ್ಯಗಳಲ್ಲಿ ಶ್ಯಾಮ್ ಬಿಂಡಿಗನವಿಲೆ 21-9, 21-7 ರಿಂದ ವಿ.ಶಿವಾಂಕ್ ಎದುರು, ಅನಿರುದ್ಧ್ ರೆಡ್ಡಿ 21-10, 21-9 ರಿಂದ ಆಯುಷ್ ಆರ್.ಲಾಲ್ ವಿರುದ್ಧ, ಸಾತ್ವಿಕ್ ಎಸ್. ಪ್ರಭು 21-10, 17-21, 21-16 ರಿಂದ ಆದಿತ್ಯ ಜೋಶಿ ಎದುರು, ವಿ.ದುಷ್ಯಂತ್ ಗೌಡ 21-19, 21-12 ರಿಂದ ಗೌತಮ್ ಎಸ್.ನಾಯರ್ ವಿರುದ್ಧ ಗೆಲುವು ಕಂಡರು. ಬಾಲಕರ ಡಬಲ್ಸ್‌ನಲ್ಲಿ ಆರವ್ ಸ್ವಾಮಿನಾಥನ್ ಮತ್ತು ಆಯುಷ್ ಮಿಶ್ರಾ 14-21, 21-16, 21-12 ರಿಂದ ಅವನೀಶ್ ಎಸ್. ಮತ್ತು ವಿಶೃತ್ ಗಣೇಶ್ ಎದುರು, ನೀರವ್ ಜಿ. ಮತ್ತು ವಿವಾನ್ ಆರ್. 21-19, 13-21, 21-13 ರಿಂದ ದೇವಿನ್ ಚಂದ್ರ ಜಿ.ಸಿ. ಮತ್ತು ಹೆಶಾನ್ ಹರೀಶ್ ವಿರುದ್ಧ ಜಯಗಳಿಸಿದರು.

ಬಾಲಕಿಯರ ಡಬಲ್ಸ್‌ನಲ್ಲಿ ಮಾನ್ಯಾ ಶ್ರೀಕಾಂತ್ ಹೊಳ್ಳ ಮತ್ತು ಶ್ರದ್ಧಾ ಮನೋಜ್ 21-16, 21-15 ರಿಂದ ದೇವಾಂಶಿ ಭಾಟಿಯಾ ಮತ್ತು ಕೆ.ಗೆಹ್ನಾ ಭೀಮಯ್ಯ ಎದುರು, ಬಿಂದುಶ್ರೀ ಬಿ.ಎಂ. ಮತ್ತು ಚಿನ್ಮಯಿ ಎಚ್.ಡಿ. 21-13, 21-19 ರಿಂದ ಆಶಿತಾ ಶಾನ್‌ಭಾಗ್ ಮತ್ತು ಸೊನಾಲಿ ಎಸ್. ವಿರುದ್ಧ, ಲೇಖನಿ ಶ್ರೀನಿವಾಸ್ ಮತ್ತು ರಿದ್ಧಿ ದೇವಯ್ಯ ಪಿ. 21-13, 21-13 ರಿಂದ ಜೆಸ್ಸಿ ಭಟ್ ಮತ್ತುಮನಸ್ವಿಜಿ.ಎಸ್.ಎದುರುಗೆದ್ದರು.

ಚೆನ್ನೈನಲ್ಲಿ ಇಂದು ಎರಡನೇ ಕ್ವಾಲಿಫೈಯರ್ • ಉತ್ತಮ ಹೋರಾಟದ ನಿರೀಕ್ಷೆ

‘ಸನ್’ಗೆ ರಾಯಲ್ಸ್ ಸ್ಪಿನ್ ಪರೀಕ್ಷೆ

ಚೆನ್ನೈ (ಪಿಟಿಐ): ಪರಿಣಾಮಕಾರಿ ಪವರ್‌ಹಿಟ್ಟರ್‌ಗಳೆನಿಸಿರುವ ಟ್ರಾವಿಸ್ ಹೆಡ್ ಮತ್ತು ಅಭಿಷೇಕ್ ಶರ್ಮಾ ಅವರಿಗೆ ಐಪಿಎಲ್‌ನ ಎರಡನೇ ಕ್ವಾಲಿಫೈಯರ್‌ನಲ್ಲಿ ಯಜುವೇಂದ್ರ ಚಾಹಲ್ ಮತ್ತು ರವಿಚಂದ್ರನ್ ಅಶ್ವಿನ್ ಅವರಿಂದ ಭಿನ್ನ ರೀತಿಯ ಸವಾಲು ಎದುರಾಗಲಿದೆ. ಸನ್‌ರೈಸರ್ಸ್ ಹೈದರಾಬಾದ್ ಮತ್ತು ರಾಜಸ್ಥಾನ ರಾಯಲ್ಸ್ ನಡುವಣ ಈ ಪಂದ್ಯ ಶುಕ್ರವಾರ ನಡೆಯಲಿದ್ದು ಉತ್ತಮ ಹೋರಾಟ ನಿರೀಕ್ಷಿಸಲಾಗಿದೆ.

ಅಭಿಮಾನಿಗಳಿಂದ ‘ಟ್ರಾವಿಷೇಕ್’ ಎಂದು ಅಕ್ಕರೆಯಿಂದ ಕರೆಸಿಕೊಳ್ಳುವ ಈ ಜೋಡಿ ಶಕ್ತಿಶಾಲಿ ಹೊಡೆತಗಳ ಆಟವನ್ನು ಹೊಸ ಎತ್ತರಕ್ಕೆ ಒಯ್ದಿದೆ. ಆಸ್ಟ್ರೇಲಿಯಾದ ಹೆಡ್ (533 ರನ್, ಸ್ಟ್ರೈಕ್‌ರೇಟ್ 199.62) ಮತ್ತು ಅಭಿಷೇಕ್ (470 ರನ್, 207.04) ಒಟ್ಟು 72 ಸಿಕ್ಸರ್‌ಗಳನ್ನು ಹೊಡೆದಿದ್ದಾರೆ. 96 ಬೌಂಡರಿಗಳು ಹರಿದಿವೆ.

ಇವರಿಬ್ಬರು ಸಾಲದೆಂಬಂತೆ ಕ್ಲಾಸೆನ್ (413 ರನ್, ಸ್ಟ್ರೈಕ್‌ರೇಟ್ 180) ಕೂಡ ಅಬ್ಬರದಾಟ ಆಡುವವರೇ. ಅವರೂ 34 ಸಿಕ್ಸರ್‌ಗಳನ್ನು ಅಟ್ಟಿದ್ದಾರೆ.

ಆದರೆ ಪಂದ್ಯ ನಡೆಯುತ್ತಿರುವುದು ವಾಂಖೆಡೆ ಅಥವಾ ಉಪ್ಪಳದ ರಾಜೀವ ಗಾಂಧಿ ಕ್ರೀಡಾಂಗಣದಲ್ಲಿ ಅಲ್ಲ. ಮಂದಗತಿಯ ಚೆಪಾಕ್ ಪಿಚ್‌ನಲ್ಲಿ. ಚೆಂಡು ಸುಲಭವಾಗಿ ಬ್ಯಾಟರ್‌ಗಳ ಅಂದಾಜಿಗೆ ಸಿಗುವುದಿಲ್ಲ.

ಅಭಿಷೇಕ್ ಶರ್ಮಾ

ರವಿಚಂದ್ರನ್ ಅಶ್ವಿನ್ ಈ ಕ್ರೀಡಾಂಗಣದಲ್ಲಿ ಆಡಿ ಪಳಗಿದವರು. ಟೂರ್ನಿ ಕೊನೆಯ ಹಂತಕ್ಕೆ ಸಾಗುತ್ತಿರುವಂತೆ ಅವರು ಒಳ್ಳೆಯ ಲಯಕ್ಕೆ ಬಂದಿದ್ದಾರೆ. ದೇಶದ ಅತ್ಯುತ್ತಮ ಲೆಗ್‌ಸ್ಪಿನ್ನರ್ ಚಾಹಲ್ ಅವರಿಗೆ ಸಾಥ್ ನೀಡಲಿದ್ದಾರೆ. ಎದುರಾಳಿ ತಂಡದ ಅಪಾಯಕಾರಿ ಆಟಗಾರರಿಗೆ ಮೂಗುದಾರ ಹಾಕಿ ಪಂದ್ಯದಲ್ಲಿ ನಿಯಂತ್ರಣ ಪಡೆಯಬಹುದೆಂಬ ಲೆಕ್ಕಾಚಾರ ಅವರದು.

ಸನ್‌ರೈಸರ್ಸ್ ಬೌಲಿಂಗ್‌ನಲ್ಲಿ ಟಿ.ನಟರಾಜನ್ ಅವರನ್ನು ನೆಚ್ಚಿಕೊಂಡಿದೆ. ಅವರು ತಂಡದ ಪರ ಅತಿ ಹೆಚ್ಚು ವಿಕೆಟ್ ಪಡೆದಿದ್ದಾರೆ. ಇದು ಅವರಿಗೆ ತವರು ನೆಲವಾಗಿದ್ದು ಉತ್ತಮ ಪ್ರದರ್ಶನದ ನಿರೀಕ್ಷೆಯಲ್ಲಿದ್ದಾರೆ. ಭುವನೇಶ್ವರ ಕುಮಾರ್ ಮತ್ತು ಕಮಿನ್ಸ್ ಅನುಭವ ತಂಡದ ನೆರವಿಗಿದೆ. ಕುಮಾರ್ ಎರಡು ಪಂದ್ಯಗಳಿಂದ ವಿಕೆಟ್ ಪಡೆದಿಲ್ಲ. ಆದರೆ ಸ್ಪಿನ್ ದಾಳಿ ಬಲವಾಗಿಲ್ಲ. ಮಯಂಕ್ ಮಾರ್ಕಂಡೆ ಮತ್ತು ಶಾಬಾಜ್ ಅಹ್ಮದ್ ಅವರನ್ನು ನಂಬಿಕೊಳ್ಳಬೇಕಾಗಿದೆ.

ರಾಜಸ್ಥಾನ ರಾಯಲ್ಸ್, ಐದು ಪಂದ್ಯಗಳ ಸೋಲಿನ ಸರಪಣಿಯನ್ನು, ಆರ್‌ಸಿಬಿ ಎದುರು ಎಲಿಮಿನೇಷನ್ ಪಂದ್ಯದಲ್ಲಿ ಕಡಿದುಕೊಂಡಿತ್ತು. ಅದರ ಸರ್ವಾಂಗೀಣ ಪ್ರದರ್ಶನ ಗೆಲುವಿಗೆ ನೆರವಾಗಿತ್ತು.

ಜೈಸ್ವಾಲ್ ಅವರು ಲಯಕ್ಕೆ ಮರಳುತ್ತಿದ್ದಾರೆ. ಸಂಜು ಸ್ಯಾಮ್ಸನ್ ಕಳೆದ ಮೂರು ಪಂದ್ಯಗಳಲ್ಲಿ 20ರ ಗಡಿ ದಾಟಿಲ್ಲ. ನಾಯಕನಾಗಿ ಅವರಿಗೆ ಹೊಣೆಯಿದೆ. ಧ್ರುವ್ ಜುರೇಲ್ ಕೂಡ ಒತ್ತಡದಲ್ಲಿದ್ದಾರೆ. ರೋವ್ಮನ್ ಪೊವೆಲ್ ಮತ್ತು ಶಿಮ್ರಾನ್ ಹೆಟ್ಮೆಯರ್ ಬಿರುಸಿನ ಆಟ ಆಡಬಲ್ಲವರು. ರಿಯಾನ್ ಪರಾಗ್ ಮಾತ್ರ ತಮ್ಮ ಮೇಲಿಟ್ಟ ನಂಬಿಕೆ ಹುಸಿಗೊಳಿಸಿಲ್ಲ.

ಮೇ 2ರಂದು ಹೈದರಾಬಾದಿನಲ್ಲಿ ಇವೆರಡು ತಂಡಗಳು ಮುಖಾಮುಖಿ ಆದಾಗ ಸನ್‌ರೈಸರ್ಸ್ ಒಂದು ರನ್‌ನಿಂದ ಜಯಗಳಿಸಿತ್ತು.

ಈ ಪಂದ್ಯದಲ್ಲಿ ಗೆದ್ದ ತಂಡ ಭಾನುವಾರ ನಡೆಯುವ ಫೈನಲ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಎದುರಿಸಲಿದೆ.

ತಂಡಗಳ ಮುಖಾಮುಖಿ 19
ಹೈದರಾಬಾದ್ ಗೆಲುವು 10
ರಾಜಸ್ಥಾನ ಗೆಲುವು 9

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸಿನಿಮಾ ಆ್ಯಪ್

ರಿಯಾನ್ ಪರಾಗ್ –ಪಿಟಿಐ ಚಿತ್ರ

ಆಟಗಾರರ ಕೌಶಲದಿಂದ ಹೆಚ್ಚಿನ ಮೊತ್ತ: ಅಶ್ವಿನ್

ಅಹಮದಾಬಾದ್ (ಪಿಟಿಐ): ಈ ಬಾರಿಯ ಐಪಿಎಲ್‌ನ ಹೆಚ್ಚಿನ ಪಂದ್ಯಗಳಲ್ಲಿ ದೊಡ್ಡ ಮೊತ್ತಗಳು ದಾಖಲಾಗಲು ಇಂಪ್ಯಾಕ್ಟ್ ಪ್ಲೇಯರ್ ನಿಯಮ ಕಾರಣ ಎಂಬುದನ್ನು ಹಿರಿಯ ಸ್ಪಿನ್ ಬೌಲರ್ ರವಿಚಂದ್ರನ್ ಅಶ್ವಿನ್ ಒಪ್ಪುವುದಿಲ್ಲ. ಬ್ಯಾಟರ್‌ಗಳ ಕೌಶಲಗಳೂ ಇದಕ್ಕೆ ಕಾಣಿಕೆ ನೀಡಿವೆ ಎಂಬುದು ಅವರ ಅಭಿಪ್ರಾಯ.

ಆಟದಲ್ಲಿ ಉಳಿಯಲು ಬೌಲರ್‌ಗಳು ತಮ್ಮ ಬ್ಯಾಟಿಂಗ್ ಸುಧಾರಿಸುವ ಕಡೆಯೂ ಗಮನಹರಿಸಬೇಕು ಎಂದೂ ಅಶ್ವಿನ್ ಕಿವಿಮಾತು ಹೇಳಿದ್ದಾರೆ.

ಈ ಋತುವಿನಲ್ಲಿ ಹಲವು ಬ್ಯಾಟಿಂಗ್ ದಾಖಲೆಗಳು ಮೂಡಿಬಂದಿವೆ. 41 ಬಾರಿ ತಂಡಗಳು 200ರ ಗಡಿ ದಾಟಿವೆ. ಎಂಟು ಬಾರಿ 250ಕ್ಕಿಂತ ಹೆಚ್ಚಿನ ಮೊತ್ತ ಕಲೆಹಾಕಿವೆ. ಐಪಿಎಲ್‌ನ ಸರ್ವಾಧಿಕ ಮೊತ್ತ 287 ಕೂಡ ದಾಖಲಾಗಿದ್ದು ಹಾಲಿ ಆವೃತ್ತಿಯಲ್ಲೇ.

‘ಇಂಪ್ಯಾಕ್ಟ್ ಪ್ಲೇಯರ್ ನಿಯಮ ಇಲ್ಲದಿದ್ದರೂ, ಹೆಚ್ಚಿನ ಮೊತ್ತಗಳು ದಾಖಲಾಗುತ್ತಿದ್ದವು’ ಎಂದು ಬುಧವಾರ ಎಲಿಮಿನೇಟರ್ ಪಂದ್ಯದ ನಂತರ ಜಿಯೊ ಸಿನಿಮಾ ಮ್ಯಾಚ್ ಸೆಂಟರ್ ಲೈವ್‌ನಲ್ಲಿ ಅಶ್ವಿನ್ ತಿಳಿಸಿದ್ದಾರೆ.

‘ನನ್ನ ಅಭಿಪ್ರಾಯದ ಪ್ರಕಾರ ಬ್ಯಾಟರ್‌ಗಳು ಹೆಚ್ಚು ವಿಶ್ವಾಸದಿಂದ ಆಡುತ್ತಿದ್ದಾರೆ. ಎಲ್ಲೆಡೆಯ ಪಿಚ್‌ಗಳೂ ಇದಕ್ಕೆ ಕೊಡುಗೆ ನೀಡಿವೆ’ ಎಂದಿದ್ದಾರೆ.

‘ಭವಿಷ್ಯದಲ್ಲಿ ಬೌಲರ್‌ಗಳೂ ವೇಗವಾಗಿ ರನ್ ಗಳಿಸುವ ಕಲೆ ಸಿದ್ಧಿಸಿಕೊಳ್ಳಬೇಕಾಗಿದೆ. ನಾವು ಎಷ್ಟೇ ಚೆನ್ನಾಗಿ ಬೌಲಿಂಗ್ ಮಾಡಿದರೂ, ಬ್ಯಾಟಿಂಗ್ ಕೂಡ ಗೊತ್ತಿರಬೇಕು. ಆಟ ಆ ದಿಕ್ಕಿನತ್ತ ಸಾಗುತ್ತಿದೆ’ ಎಂಬುದು ಅವರ ಅನಿಸಿಕೆ.

ಹೊಸ ಯುಗಾರಂಭಕ್ಕೆ ಬುನಾದಿ

ಟಿ20 ವಿಶ್ವಕಪ್ ಮೆಲುಕು

2007ರಲ್ಲಿ ನಡೆದ ಮೊಟ್ಟಮೊದಲ ಟಿ20 ವಿಶ್ವಕಪ್ ಟೂರ್ನಿಯನ್ನು ಕ್ರಿಕೆಟ್ ಲೋಕವು ಎರಡು ಕಾರಣಗಳಿಗಾಗಿ ಸದಾ ನೆನಪಿನಲ್ಲಿಟ್ಟುಕೊಳ್ಳುತ್ತದೆ. ಮೊದಲನೇಯದು ಚುಟುಕು ಮಾದರಿ ಬೆಳವಣಿಗೆಗೆ ಬುನಾದಿ ಹಾಕಿದ ಟೂರ್ನಿ ಅದಾಗಿತ್ತು. ಎರಡನೇಯದ್ದು ಮಹೇಂದ್ರಸಿಂಗ್ ಧೋನಿ ಎಂಬ ‘ಮಹಾನಾಯಕ’ನ ಉದಯಕ್ಕೆ ಕಾರಣವಾದ ಟೂರ್ನಿ ಅದಾಯಿತು.

ಅದೇ ವರ್ಷ ವೆಸ್ಟ್‌ಇಂಡೀಸ್‌ನಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ತಂಡವು ಹೀನಾಯವಾಗಿ ಸೋತಿತ್ತು. ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲು ಖ್ಯಾತನಾಮ ಆಟಗಾರರು ಸಿದ್ಧರಾಗಲಿಲ್ಲ. ವಿಶ್ರಾಂತಿಗೆ ತೆರಳಿದರು. ಆಗಿನ್ನೂ ಚುಟುಕು ಮಾದರಿಯು ಹೆಚ್ಚು ಜನಪ್ರಿಯವೂ ಆಗಿರಲಿಲ್ಲ. ದೇಶ ವಿದೇಶಗಳ ದೊಡ್ಡ ಕ್ರಿಕೆಟಿಗರು ಈ ಮಾದರಿಯ ಬಗ್ಗೆ ಟೀಕಿಸಿದ್ದೇ ಹೆಚ್ಚು. ಅದರಿಂದಾಗಿ ವಿಕೆಟ್‌ಕೀಪರ್ ಧೋನಿಗೆ ನಾಯಕತ್ವ ನೀಡಲಾಯಿತು. ರಾಂಚಿಯ ಧೋನಿಯ ದಿಟ್ಟ ನಿರ್ಧಾರಗಳು ತಂಡವನ್ನು ಪ್ರಶಸ್ತಿ ಜಯದತ್ತ ತಂದು ನಿಲ್ಲಿಸಿದ್ದು ಇತಿಹಾಸ.

ಮಹೇಂದ್ರಸಿಂಗ್ ಧೋನಿ

- ಮೊದಲ ವಿಶ್ವಕಪ್: **2007**
- ಆತಿಥ್ಯ: **ದಕ್ಷಿಣ ಆಫ್ರಿಕಾ**
- ವಿಜೇತರು: **ಭಾರತ**
- ರನ್ನರ್ಸ್ ಅಪ್: **ಪಾಕಿಸ್ತಾನ**
- ಸ್ಪರ್ಧಿಸಿದ ತಂಡಗಳು: **12**
- ಪಂದ್ಯಗಳು: **27**
- ಸರಣಿಶ್ರೇಷ್ಠ: **ಶಾಹೀದ್ ಆಫ್ರಿದಿ** (ಪಾಕ್)
- ಶ್ರೇಷ್ಠ ಬ್ಯಾಟರ್: **ಮ್ಯಾಥ್ಯೂ ಹೇಡನ್** (ಆಸ್ಟ್ರೇಲಿಯಾ; 265 ರನ್)
- ಶ್ರೇಷ್ಠ ಬೌಲರ್: **ಉಮರ್ ಗುಲ್** (ಪಾಕ್; 13 ವಿಕೆಟ್)

ಪ್ರಮುಖ ಅಂಶಗಳು

- ಡಿ ಗುಂಪಿನಲ್ಲಿ ಭಾರತ –ಪಾಕಿಸ್ತಾನ ಮುಖಾಮುಖಿಯಾಗಿದ್ದ ಪಂದ್ಯದ ಫಲಿತಾಂಶವು ಬಾಲೌಟ್‌ನಲ್ಲಿ (3–0) ನಿರ್ಧಾರವಾಯಿತು. ಭಾರತ ಜಯಿಸಿತ್ತು.
- ಇ ಗುಂಪು ಸುತ್ತಿನ ಪಂದ್ಯದಲ್ಲಿ ಇಂಗ್ಲೆಂಡ್ ಎದುರು ಭಾರತದ ಯುವರಾಜ್ ಸಿಂಗ್ ಅವರು ಸ್ಟುವರ್ಟ್ ಬ್ರಾಡ್ ಅವರ ಒಂದು ಓವರ್‌ನಲ್ಲಿ ಸತತ ಆರು ಸಿಕ್ಸರ್ ಸಿಡಿಸಿದ್ದರು.
- ಫೈನಲ್‌ನಲ್ಲಿ ಭಾರತ ಮತ್ತು ಪಾಕ್ ಮುಖಾಮುಖಿಯಾಗಿದ್ದವು. ಟಾಸ್ ಗೆದ್ದ ಭಾರತ 20 ಓವರ್‌ಗಳಲ್ಲಿ 5ಕ್ಕೆ157 ರನ್ ಗಳಿಸಿತು. ಪಾಕಿಸ್ತಾನ 19.3 ಓವರ್‌ಗಳಲ್ಲಿ 152 ರನ್ ಗಳಿಸಿತು. ಭಾರತ 5 ರನ್‌ಗಳಿಂದ ಜಯಿಸಿತು.
- ಫೈನಲ್ ಪಂದ್ಯದಲ್ಲಿ ಕೊನೆಯ ಓವರ್ ಬೌಲಿಂಗ್ ಮಾಡಲು ಭಾರತದ ವೇಗಿ ಜೋಗಿಂದರ್ ಶರ್ಮಾ ಅವರಿಗೆ ಧೋನಿ ಅವಕಾಶ ನೀಡಿದ್ದು ಅಚ್ಚರಿಗೆ ಕಾರಣವಾಗಿತ್ತು. ಏಕೆಂದರೆ ಶ್ರೀಶಾಂತ್, ಇರ್ಫಾನ್ ಅವರಂತಹ ಅನುಭವಿಗಳನ್ನು ಬಿಟ್ಟು ಶರ್ಮಾಗೆ ಚೆಂಡು ನೀಡಲಾಗಿತ್ತು. ಆದರೆ, ಆ ಓವರ್‌ನಲ್ಲಿ ಜೋಗಿಂದರ್ ಅವರು ಮಿಸ್ಬಾ ಉಲ್ ಹಕ್ ವಿಕೆಟ್ ಗಳಿಸಿ ಪಾಕ್ ಇನಿಂಗ್ಸ್‌ಗೆ ತೆರೆಯೆಳೆದರು.
- ಎಡಗೈ ವೇಗಿ ಇರ್ಫಾನ್ ಪಠಾಣ್ ಅವರಿಗೆ ಫೈನಲ್ ಪಂದ್ಯಶ್ರೇಷ್ಠ ಗೌರವ ನೀಡಲಾಯಿತು.

ಮೂಲ: ಐಸಿಸಿ ಹಾಗೂ ಕ್ರಿಕೆಟ್ ವೆಬ್‌ಸೈಟ್‌ಗಳು

‘ಮ್ಯಾನ್ ಆಫ್ ಕಮ್‌ಬ್ಯಾಕ್’ ದಿನೇಶ್ ಕಾರ್ತಿಕ್

ನವದೆಹಲಿ (ಪಿಟಿಐ): ವಿಕೆಟ್‌ಕೀಪರ್, ಬ್ಯಾಟರ್ ದಿನೇಶ್ ಕಾರ್ತಿಕ್ ಅವರು ಕ್ರಿಕೆಟ್ ವಲಯದಲ್ಲಿ ‘ಮ್ಯಾನ್ ಆಫ್ ಕಮ್‌ಬ್ಯಾಕ್’ ಎಂದೇ ಪ್ರಸಿದ್ಧರು.

ಅಂತರರಾಷ್ಟ್ರೀಯ, ದೇಶಿ ಅಥವಾ ಐಪಿಎಲ್ ಟೂರ್ನಿಯಲ್ಲಿ ಅವರ ಸಾಧನೆಗಳನ್ನು ಅವಲೋಕಿಸಿದಾಗ ಈ ಮಾತು ನಿಜ ಎನಿಸದಿರದು. ತಮಿಳುನಾಡಿನ ದಿನೇಶ್, ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಛಾಪು ಮೂಡಿಸಲು ಆರಂಭಿಸಿದ್ದರು. ಆ ಹೊತ್ತಿನಲ್ಲಿ ಪ್ರವರ್ಧಮಾನಕ್ಕೆ ಬಂದ ಮಹೇಂದ್ರಸಿಂಗ್ ಧೋನಿಯೊಂದಿಗಿನ ಪೈಪೋಟಿಯಲ್ಲಿ ದಿನೇಶ್ ಹಿಂದೆ ಬಿದ್ದರು. ಆದರೆ, ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಕಳೆದ 17 ವರ್ಷಗಳಿಂದ ತಮ್ಮದೇ ಆದ ಛಾಪು ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆರು ಫ್ರ್ಯಾಂಚೈಸಿಗಳಲ್ಲಿ ಆಡಿದ್ದಾರೆ.

ದಿನೇಶ್ ಕಾರ್ತಿಕ್

ಮಾದರಿ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ	ಕ್ಯಾಚ್	ಸ್ಟಂಪ್
ಟೆಸ್ಟ್	26	1025	129	1	7	57	6
ಏಕದಿನ	94	1752	79	-	9	64	7
ಟಿ20	60	686	55	-	1	30	8
ಐಪಿಎಲ್	257	4842	97	-	22	145	37

ಅಹಮದಾಬಾದಿನಲ್ಲಿ ಬುಧವಾರ ನಡೆದ ಎಲಿಮಿನೇಟರ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ರಾಜಸ್ಥಾನ ರಾಯಲ್ಸ್ ಎದುರು ಸೋಲುವುದರೊಂದಿಗೆ ಡಿ.ಕೆ (ದಿನೇಶ್ ಕಾರ್ತಿಕ್) ವೃತ್ತಿಜೀವನಕ್ಕೂ ತೆರೆಬಿದ್ದಂತಾಗಿದೆ. ಪಂದ್ಯದ ನಂತರ ವಿರಾಟ್ ಕೊಹ್ಲಿ ಸೇರಿದಂತೆ ಆರ್‌ಸಿಬಿ ಆಟಗಾರರು ದಿನೇಶ್ ಅವರನ್ನು ಆಲಂಗಿಸಿಕೊಂಡು ಅಭಿನಂದಿಸಿದರು. ಪ್ರೇಕ್ಷಕರತ್ತ ಕೈಬೀಸುತ್ತಲೇ ದಿನೇಶ್ ಡ್ರೆಸ್ಸಿಂಗ್ ರೂಮ್‌ನತ್ತ ಹೆಜ್ಜೆಹಾಕಿದರು. 20 ವರ್ಷಗಳ ವೃತ್ತಿಜೀವನಕ್ಕೊಂದು ವಿರಾಮ ಬಿದ್ದಿದೆ.

26 ಟೆಸ್ಟ್, 94 ಏಕದಿನ ಹಾಗೂ 60 ಟಿ20 ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದಾರೆ. ಈ ಹಾದಿಯಲ್ಲಿ ಅವರು ಯುವ ಆಟಗಾರರೊಂದಿಗೆ ಸ್ಪರ್ಧಿಸಿಯೂ ಭಾರತ ತಂಡಕ್ಕೆ ಮರಳಿದ ಉದಾಹರಣೆಗಳಿವೆ.

ಮುಂದಿನ ತಿಂಗಳು ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಗುರಿ ಹೊಂದಿದ್ದ ಅವರು ಈ ಬಾರಿ ಐಪಿಎಲ್‌ನ ಆರಂಭಿಕ ಪಂದ್ಯಗಳಲ್ಲಿ ಅಬ್ಬರಿಸಿದ್ದರು. ಆದರೆ ವಿಕೆಟ್‌ಕೀಪರ್ ಸ್ಥಾನಕ್ಕೆ ಆಯ್ಕೆ ಸಮಿತಿಯು ಯುವ ಆಟಗಾರರಿಗೆ ಮಣೆ ಹಾಕಿತು. ದಿನೇಶ್‌ಗೆ ಸ್ಥಾನ ಸಿಗಲಿಲ್ಲ.

ಹೋದ ಫೆಬ್ರುವರಿ–ಮಾರ್ಚ್‌ನಲ್ಲಿ ಭಾರತ –ಇಂಗ್ಲೆಂಡ್ ಟೆಸ್ಟ್ ಸರಣಿ ಸಂದರ್ಭದಲ್ಲಿ ದಿನೇಶ್ ಟಿ.ವಿ. ಕಾಮೆಂಟ್ರಿ ಕೂಡ ಮಾಡಿದ್ದರು. ಆಗಲೇ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಲು ಸಿದ್ಧರಾಗಿದ್ದರೆನ್ನಲಾಗಿದೆ.

2004ರಲ್ಲಿ ಅವರು ಲಾರ್ಡ್ಸ್‌ನಲ್ಲಿ ಇಂಗ್ಲೆಂಡ್ ಎದುರಿನ ಏಕದಿನ ಪಂದ್ಯದಲ್ಲಿ ಭಾರತದ ಪರ ಪದಾರ್ಪಣೆ ಮಾಡಿದ್ದರು. ಆಗ ಅವರಿಗೆ 19 ವರ್ಷವಾಗಿತ್ತು. ಇಂಗ್ಲೆಂಡ್ ತಂಡದ ನಾಯಕ ಮೈಕೆಲ್ ವಾನ್ ಅವರನ್ನು ಮಿಂಚಿನ ಸ್ಟಂಪಿಂಗ್ ಮಾಡುವ ಮೂಲಕ ತಮ್ಮ ಚೊಚ್ಚಲ ಪಂದ್ಯವನ್ನು ಅವಿಸ್ಮರಣೀಯಗೊಳಿಸಿಕೊಂಡಿದ್ದರು. 2019ರಲ್ಲಿ ಅವರು ಮ್ಯಾಂಚೆಸ್ಟರ್‌ನಲ್ಲಿ ನ್ಯೂಜಿಲೆಂಡ್ ಎದುರು ಕೊನೆಯ ಏಕದಿನ ಪಂದ್ಯವಾಡಿದ್ದರು. ಅದಾಗಿ ಮೂರು ತಿಂಗಳುಗಳ ನಂತರ ಮುಂಬೈನಲ್ಲಿ ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್‌ನಲ್ಲಿ ಪದಾರ್ಪಣೆ ಮಾಡಿದರು. 2018ರಲ್ಲಿ ಲಾರ್ಡ್ಸ್‌ನಲ್ಲಿ ಇಂಗ್ಲೆಂಡ್ ಎದುರು ಕೊನೆಯ ಬಾರಿಗೆ ಟೆಸ್ಟ್‌ನಲ್ಲಿ ಆಡಿದ್ದರು. ಟೆಸ್ಟ್‌ನಲ್ಲಿ ಒಂದು ಶತಕ ಗಳಿಸಿದ್ದಾರೆ.

2006ರಲ್ಲಿ ಜೋಹಾನ್ಸ್‌ಬರ್ಗ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ ಟಿ20 ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದರು.

ಪ್ಯಾರಿಸ್ ಒಲಿಂಪಿಕ್ಸ್ ಟಿಕೆಟ್ ವಿಶ್ವಾಸದಲ್ಲಿ ಬಾಕ್ಸರ್‌ಗಳು

ಬ್ಯಾಂಕಾಕ್ (ಪಿಟಿಐ): ಭಾರತದ ಬಾಕ್ಸರ್‌ಗಳು ಇಲ್ಲಿ ಶುಕ್ರವಾರ ಆರಂಭವಾಗುವ ಒಲಿಂಪಿಕ್ಸ್ ಎರಡನೇ ಕ್ವಾಲಿಫೈಯರ್ ಟೂರ್ನಿಯಲ್ಲಿ ಪ್ಯಾರಿಸ್ ಟಿಕೆಟ್ ಪಡೆಯುವ ವಿಶ್ವಾಸದಿಂದ ಕಣಕ್ಕೆ ಇಳಿಯಲಿದ್ದಾರೆ.

ಅಮಿತ್ ಪಂಗಲ್

ಈವರೆಗೆ ಭಾರತದ ನಾಲ್ಕು ಮಹಿಳಾ ಬಾಕ್ಸರ್‌ಗಳು ಪ್ಯಾರಿಸ್ ಟಿಕೆಟ್ ಹೊಂದಿದ್ದರು. ಆದರೆ, 57 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಪರ್ವೀನ್ ಹೂಡಾ ಅವರು ವಾಸ್ತವ್ಯದ ಮಾಹಿತಿ ನೀಡದ ಕಾರಣ ವಿಶ್ವ ಉದ್ದೀಪನ ಮದ್ದು ತಡೆ ಘಟಕ (ವಾಡಾ) ಅವರನ್ನು 22 ತಿಂಗಳು ಅಮಾನತು ಮಾಡಿದೆ. ಹೀಗಾಗಿ, ಅವರು ಒಲಿಂಪಿಕ್ಸ್ ಕೋಟಾ ಕಳೆದುಕೊಂಡಿದ್ದಾರೆ. ಮಾರ್ಚ್‌ನಲ್ಲಿ ನಡೆದ ಮೊದಲ ಕ್ವಾಲಿಫೈಯರ್ ಟೂರ್ನಿಯಲ್ಲಿ ಭಾರತದ ಸ್ಪರ್ಧಾಳುಗಳ ಪ್ರದರ್ಶನ ನೀರಸವಾಗಿತ್ತು.

‘ಥಾಯ್ಲೆಂಡ್‌ನಲ್ಲಿ ನಡೆಯುವ ಟೂರ್ನಿಯಲ್ಲಿ ನಾವು ಖಂಡಿತವಾಗಿಯೂ 4ರಿಂದ 5 ಕೋಟಾ ಗಳಿಸುವ ವಿಶ್ವಾಸ ಹೊಂದಿದ್ದೇವೆ. ಅಲ್ಲಿ ನಮಗೆ ಉತ್ತಮ ಅವಕಾಶವಿದೆ’ ಎಂದು ಭಾರತ ಬಾಕ್ಸಿಂಗ್ ಕೋಚ್ ಸಿ.ಎ. ಕುಟ್ಟಪ್ಪ ಹೇಳಿದ್ದಾರೆ.

ಬಾಕ್ಸಿಂಗ್ ಫೆಡರೇಷನ್ ಆಫ್ ಇಂಡಿಯಾ (ಬಿಎಫ್‌ಐ) ಭಾರತ ತಂಡದಲ್ಲಿ ಹಲವು ಬದಲಾವಣೆ ಮಾಡಿದೆ. ಮೊದಲ ಕ್ವಾಲಿಫೈಯರ್‌ನಲ್ಲಿ ಕೋಟಾ ಪಡೆಯಲು ವಿಫಲವಾದ ದೀಪಕ್ ಭೋರಿಯಾ (51 ಕೆಜಿ) ಅವರನ್ನು ಕೈಬಿಡಲಾಗಿದೆ. ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಅಮಿತ್ ಪಂಗಲ್ ತಂಡದಲ್ಲಿದ್ದಾರೆ. ಮಹಿಳೆಯರ 57 ಕೆಜಿ ವಿಭಾಗದಲ್ಲಿ ಜಾಸ್ಮಿನ್ ಲಂಬೋರಿಯಾ ಸ್ಪರ್ಧಿಸುವರು. ಕಳೆದ ವರ್ಷ ಏಷ್ಯನ್ ಕ್ರೀಡಾಕೂಟದ ಮೂಲಕ ನಿಖತ್ ಝರೀನ್ (50 ಕೆಜಿ), ಪ್ರೀತಿ ಪವಾರ್ (54 ಕೆಜಿ) ಮತ್ತು ಲವ್ಲಿನಾ ಬೋರ್ಗೊಹೈನ್ (75 ಕೆಜಿ) ಪ್ಯಾರಿಸ್ ಟಿಕೆಟ್ ಕಾಯ್ದಿರಿಸಿದ್ದರು.

ತಂಡ ಹೀಗಿದೆ: ಮಹಿಳೆಯರು: ಜಾಸ್ಮಿನ್ ಲಂಬೋರಿಯಾ (57 ಕೆಜಿ), ಅಂಕುಶಿತಾ ಬೊರೊ (60 ಕೆಜಿ), ಅರುಂಧತಿ ಚೌಧರಿ (66 ಕೆಜಿ).

ಪುರುಷರು: ಅಮಿತ್ ಪಂಗಲ್ (51 ಕೆಜಿ), ಸಚಿನ್ ಸಿವಾಚ್ (57 ಕೆಜಿ), ಅಭಿನಾಶ್ ಜಮ್ವಾಲ್ (63.5 ಕೆಜಿ), ನಿಶಾಂತ್ ದೇವ್ (71 ಕೆಜಿ), ಅಭಿಮನ್ಯು ಲೂರಾ (80 ಕೆಜಿ), ಸಂಜೀತ್ (92 ಕೆಜಿ), ನರೇಂದರ್ ಬರ್ವಾಲ್ (92 + ಕೆಜಿ).

ಟೆಕ್ಸಾಸ್‌ನಲ್ಲಿ ಎಲ್‌ಐಟಿ–20

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾದ ಮಾಜಿ ವೇಗಿ ಬ್ರೆಟ್ ಲೀ, ಇಂಗ್ಲೆಂಡ್‌ನ ಆಫ್‌ಸ್ಪಿನ್ನರ್ ಗ್ರೇಮ್ ಸ್ವಾನ್, ಶ್ರೀಲಂಕಾದ ತಿಲಕರತ್ನೆ ದಿಲ್ಶನ್ ಅವರು ಆಗಸ್ಟ್ 15 ರಿಂದ 29 ರವರೆಗೆ ಟೆಕ್ಸಾಸ್‌ನಲ್ಲಿ ನಡೆಯಲಿರುವ ಏಳು ತಂಡಗಳ ಲೆಜೆಂಡ್ಸ್ ಇಂಟರ್‌ಕಾಂಟಿನೆಂಟಲ್ (ಎಲ್‌ಐಟಿ) 20 ಲೀಗ್‌ನಲ್ಲಿ ಭಾಗವಹಿಸಲಿದ್ದಾರೆ.

ಅಮೆರಿಕ ಮೂಲದ ಬ್ರೋಸಿಡ್ ಸ್ಪೋರ್ಟ್ಸ್ ಎಲ್‌ಎಲ್‌ಸಿ ಗುರುವಾರ ಲೀ, ಸ್ವಾನ್, ದಿಲ್ಶನ್ ಮತ್ತು ಭಾರತದ ಮಾಜಿ ವಿಕೆಟ್ ಕೀಪರ್-ಬ್ಯಾಟರ್ ಪಾರ್ಥಿವ್ ಪಟೇಲ್ ಅವರ ಉಪಸ್ಥಿತಿಯಲ್ಲಿ ಚೊಚ್ಚಲ ಆವೃತ್ತಿ ಪ್ರಾರಂಭಿಸುವುದಾಗಿ ಘೋಷಿಸಿತು. ಟೂರ್ನಿಯಲ್ಲಿ ಏಳು ತಂಡಗಳು - ಇಂಡೋ ಕಿಂಗ್ಸ್, ಏಷ್ಯನ್ ಅವೆಂಜರ್ಸ್, ಯುರೋ ರೇಂಜರ್ಸ್, ಅಮೆರಿಕನ್ ಮೇವರಿಕ್ಸ್, ಟ್ರಾನ್ಸ್-ಟಾಸ್ಮನ್ ಟೈಟಾನ್ಸ್, ಆಫ್ರಿಕನ್ ಲಯನ್ಸ್ ಮತ್ತು ಕೆರಿಬಿಯನ್ ವೈಕಿಂಗ್ಸ್ ಚೊಚ್ಚಲ ಪ್ರಶಸ್ತಿಗಾಗಿ ಸ್ಪರ್ಧಿಸಲಿವೆ.

ಎಲ್‌ಐಟಿ–20 ರೌಂಡ್-ರಾಬಿನ್ ಮಾದರಿಯಲ್ಲಿ ನಡೆಯಲಿದೆ.

ವಿದಾಯದ ಫ್ರೆಂಚ್ ಓಪನ್: ನಡಾಲ್ ಎದುರಾಳಿ ಜ್ವರೇವ್

ಪ್ಯಾರಿಸ್: ಹಾಲಿ ಚಾಂಪಿಯನ್ ರಫೆಲ್ ನಡಾಲ್ ಅವರು ತಮ್ಮ ವಿದಾಯದ ಫ್ರೆಂಚ್ ಓಪನ್ ಟೆನಿಸ್ ಚಾಂಪಿಯನ್‌ಷಿಪ್‌ನ ಮೊದಲ ಸುತ್ತಿನಲ್ಲಿ ವಿಶ್ವದ ನಾಲ್ಕನೇ ಕ್ರಮಾಂಕದ ಆಟಗಾರ ಅಲೆಕ್ಸಾಂಡರ್ ಜ್ವರೇವ್ ಅವರನ್ನು ಎದುರಿಸಲಿದ್ದಾರೆ.

ರಫೆಲ್ ನಡಾಲ್

ಮಹಿಳೆಯರ ವಿಭಾಗದ ಹಾಲಿ ಚಾಂಪಿಯನ್ ಇಗಾ ಶ್ವಾಂಟೆಕ್ (ಪೋಲೆಂಡ್) ಅವರಿಗೆ ಎರಡನೇ ಸುತ್ತಿನ ಸಂಭಾವ್ಯ ಎದುರಾಳಿ ಜಪಾನ್‌ನ ನವೊಮಿ ಒಸಾಕ.

24 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಜಯಿಸಿರುವ ನೊವಾಕ್ ಜೊಕೊವಿಚ್ ಅವರು ಮೊದಲ ಪಂದ್ಯದಲ್ಲಿ ಫ್ರಾನ್ಸ್‌ನ ಪಿಯರೆ ಹ್ಯೂಸ್ ಹರ್ಬರ್ಟ್ ಅವರನ್ನು ಎದುರಿಸಲಿದ್ದಾರೆ. ಗುರುವಾರ ಮುಖಾ ಮುಖಿಯ ‘ಡ್ರಾ’ಗಳನ್ನು ಎತ್ತಲಾಯಿತು.

ರೋಲಂಡ್ ಗ್ಯಾರೋಸ್‌ನಲ್ಲಿ 14 ಬಾರಿ ಟ್ರೋಫಿ ಎತ್ತಿಹಿಡಿದಿರುವ ನಡಾಲ್ ಈ ಬಾರಿ ಇಲ್ಲಿ ಶ್ರೇಯಾಂಕರಹಿತ ಆಟಗಾರ. ಗಾಯಾಳಾಗಿ ಹಲವು ಟೂರ್ನಿಗಳನ್ನು ಕಳೆದುಕೊಂಡಿರುವ ಕಾರಣ ಅವರ ರ‍್ಯಾಂಕಿಂಗ್ ಈಗ 276ಕ್ಕೆ ಕುಸಿದಿದೆ. 2022ರ ಚಾಂಪಿಯನ್‌ಷಿಪ್ ಸೆಮಿ ಫೈನಲ್‌ನಲ್ಲಿ ನಡಾಲ್– ಜ್ವರೇವ್ ಮುಖಾಮುಖಿ ಆಗಿದ್ದರು.

ಆಗ ಪಾದದ ನೋವಿನಿಂದ ಜ್ವರೇವ್ ಅರ್ಧದಲ್ಲೇ ನಿವೃತ್ತರಾಗಿದ್ದರು. ನಡಾಲ್ ಒಟ್ಟಾರೆ ಮುಖಾಮುಖಿಯಲ್ಲಿ 27 ವರ್ಷದ ಜ್ವರೇವ್ ವಿರುದ್ಧ 7–3 ಗೆಲುವಿನ ದಾಖಲೆ ಹೊಂದಿದ್ದಾರೆ.

ನಡಾಲ್ ಮುಂದಿನ ವಾರ 38ನೇ ಜನ್ಮದಿನ ಆಚರಿಸಲಿದ್ದು, ಇದು ತಮ್ಮ ವೃತ್ತಿಜೀವನದ ಕೊನೆಯ ವರ್ಷ ಎಂದು ಹೇಳಿದ್ದಾರೆ. ಪ್ಯಾರಿಸ್‌ನಲ್ಲಿ ನಡಾಲ್ 112 ಗೆಲುವು, ಕೇವಲ ಮೂರು ಸೋಲು ಕಂಡಿದ್ದಾರೆ. ಇವುಗಳಲ್ಲಿ ಎರಡು ಜೊಕೊವಿಚ್ ವಿರುದ್ಧ ಬಂದಿತ್ತು.

ಬುಧವಾರ 37ನೇ ವರ್ಷಕ್ಕೆ ಕಾಲಿಟ್ಟ ಸರ್ಬಿಯಾದ ಜೊಕೊ ಇಲ್ಲಿ ನಾಲ್ಕನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ.

ಜಿನೇವಾ ಟೂರ್ನಿಯಲ್ಲಿ ಈಚೆಗೆ ಜೊಕೊ ವೃತ್ತಿ ಜೀವನದ 1,100ನೇ ಪಂದ್ಯ ಗೆದ್ದಿದ್ದರು.

BOOK YOURS NOW:
FLAGSHIP DEALER: BENGALURU: Tusker Harley-Davidson, Ph: 9164767676 AUTHORIZED DEALERS: BENGALURU: BANASHANKARI: Sai Bikes Hero Premia, Ph: 9821748054, SINGASANDRA: RT Krishna Autos Hero Premia, Ph: 9821742528, BYATARAYANAPURA: Bimal Hero, Ph: 9289922863, MARATHALLI: Vaayuratha Hero, Ph: 9289923811, MYSORE: NAZARBAD CITY: Shah Hero, Ph: 9289922518, B.M.HOSPITAL ROAD: Dyuthi Hero, Ph: 9289922475, MANGALORE: Tribhuvan Hero, Ph: 9289923203, West Coast Hero, Ph: 9289922606, BELGAUM: Nagshanti Hero, Ph: 9289922502, HUBLI: Chadha Hero, Ph: 9289922119